THE BOOK WAS DRENCHED

OSMANIA UNIVERSITY LIBRARY

Call No. K83 N65U

Nam[redacted]ook ఉదయశ్రీ

198983

Name of Author నాగేంద్ర

UNIVERSAL LIBRARY

OU_198983

UNIVERSAL LIBRARY

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ

# ಊರ್ಮಿಳೆ.

(ಐತಿಹಾಸಿಕ ಕಥೆ)

ಲೇ

ನಾಗೇಶ

ಪ್ರಕಾಶಕ:—ಭಿ. ಪ. ಕಾಳೆ,

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ.

ಸಪ್ಟೆಂಬರ ೧೯೩೬

೧೨ ಆಣೆ

# ಮುನ್ನುಡಿ.

ತತ್ಕಾಲಿನ ಪರಿಸ್ಥಿತಿಗನುಸಾರವಾಗಿಯೂ ಮನುಷ್ಯನ ಮನೋವೃತ್ತಿಯ ಮೇಲಿಂದಲೂ ಒಮ್ಮೊಮ್ಮೆ ಒಂದೊಂದು ವಿಧದ ಧರ್ಮಗಳಿಗೆ ಪ್ರಾಧಾನ್ಯತೆಯುಂಟಾಗುವದು ಮಾತೃಹತ್ಯೆಯಂತಹ ಮಹಾಪಾತಕವಿಲ್ಲದಿದ್ದರೂ, ಭಾರ್ಗವ ರಾಮನಿಗೆ ಮಾತೃ ಶಿರಚ್ಛೇದ ಮಾಡುವದೇ ಕರ್ತವ್ಯವೆಂದು ತಿಳಿದುಕೊಳ್ಳುವ ಪ್ರಸಂಗ ಒದಗಿತು. ಅತಿಥಿ ಸತ್ಕಾರವೇ ಪ್ರಾಮುಖ್ಯವೆಂದು ತಿಳಿದ ಶಿರಿಯಾಳನಿಗೆ ಪುತ್ರವಧೆಯೇ ಕರ್ತವ್ಯವೆನಿಸಿತು. ಸತ್ಯವೇ ಪ್ರಾಮುಖ್ಯವೆಂದು ತಿಳಿದ ಹರಿಶ್ಚಂದ್ರನಿಗೆ ಪತ್ನಿಪುತ್ರವಿಕ್ರಯವು ಕರ್ತವ್ಯವಾಗಿ ಹೋಯಿತು. ಈ ಚಿಕ್ಕ ಕಥೆಯ ನಾಯಕಿಯಾದ ರಾಣೀ ಊರ್ಮಿಳಾದೇವಿಯು ಶರಣಾಗತ ರಕ್ಷಣೆಗೆ ಪ್ರಾಧಾನ್ಯತೆಯನ್ನು ಕೊಟ್ಟಳು. ಅವಳು ಕರ್ತವ್ಯಪಾಲನೆ ಮಾಡುವಾಗ [illegible]ಗೆ ವಿರೋಧಿಯಾಗುವ ಪ್ರಸಂಗವೊದಗಿದರೂ ಹಿಂಜರಿಯಲಿಲ್ಲ. ಕೊನೆಗೆ ಅವಳು ತನ್ನ ಕರ್ತವ್ಯಪಾಲನೆಯಲ್ಲಿಯೆ ಆತ್ಮಬಲಿದಾನ ಮಾಡಿದಳು.

ಈ ಕಥೆಯೊಳಗಿನ ಇನ್ನೂ ಅನೇಕ ವ್ಯಕ್ತಿಗಳ ಸದ್ಗುಣಗಳು ಅನುಕರಣೀಯವಿರುವವು. ರಾಜಾ ಅಮರಪ್ರಸಾದ, ರಾಜಾ ತೋಡರಮಲ್ಲ, ವಂಗೇಶ್ವರ ದಾವುದಖಾನ, ಸ್ವಾಮಿನಿಷ್ಠ ದಿಲೀಪಸಿಂಹ, ಸತೀ ಶೋಭನೆ ಮೊದಲಾದ ನರ-ನಾರೀ ರತ್ನಗಳ ದಿವ್ಯ ಜ್ಯೋತಿಯು ಮಾರ್ಗದರ್ಶಕವಾಗದೆ ಇರಲಾರದು.

ಶ್ರೀಯುತ ಪ್ರಮಥನಾಥ ಚಟ್ಟೋಪಾಧ್ಯಾಯಪ್ರಣೀತ "ರಾಜಪುತೇರ ಮೇಯೆ" ಎಂಬ ವಂಗಕಥೆಯ ಹಿಂದೀ ಅನುವಾದ "ರಾಜಪುತಬಾಲಾ" ಎಂಬ ಕಥಾನಕವು ಈ ಕಥೆಯನ್ನು ಬರೆಯಲಿಕ್ಕೆ ಆಧಾರವಾದ್ದರಿಂದ ಮೂಲ ಕಥಾಲೇಖಕರಿಗೂ ಅನುವಾದಕರಾದ ಶ್ರೀಯುತ ಪಂಡಿತ ಧರ್ಮಾನಂದರಿಗೂ ಅತ್ಯಂತ ಋಣಿಯಾಗಿರುವೆನು ನನ್ನನ್ನು ಕರ್ನಾಟಕ ವಾಙ್ಮಯ ಕ್ಷೇತ್ರದಲ್ಲಿ ಸೇರಿಸಿ, ಸಾಹಿತ್ಯ ಸೇವೆ ಮಾಡ ಹಚ್ಚಿದ ಶ್ರೀಯುತ ಭಿ. ಪ. ಕಾಳೆ, ಮ್ಯಾನೇಜರ "ಶ್ರೀ ಶೇಷಾಚಲ ಗ್ರಂಥಮಾಲೆ" ಆನಂದವನ ಇವರು ಈ ಕಥೆಯನ್ನು ಅತ್ಯಾನಂದದಿಂದ ಸ್ವೀಕರಿಸಿ ತಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಕೃತಜ್ಞತೆಯುಳ್ಳವನಾಗಿರುವೆನು.

ಅಡರಕಟ್ಟಿ, ಕನ್ನಡಿಗರ ವಿಧೇಯ,

ತಾ|| ೧೨-೨-೧೯೩೬ **ನಾಗೇಶ**

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ

# ಊರ್ಮಿಳೆ.

## ೧ನೆಯ ಪರಿಚ್ಛೇದ.

ಭಾಗ್ಯಲಕ್ಷ್ಮಿಯು ಮೊಗಲರಿಗೆ ಪ್ರಸನ್ನಳಾಗಿದ್ದಳು. ದಿಲ್ಲಿಯ ಮುಖ್ಯ ಸೇನಾಪತಿಯಾದ ಮುನಾಯಿಮುಖಾನನು ಬಂಗಾಲ ಬಿಹಾರ ಪ್ರಾಂತಗಳನ್ನು ಕೈವಶ ಮಾಡಿಕೊಂಡಿದ್ದನು ವಂಗೇಶ್ವರನಾದ ನವಾಬ ದಾವುದಖಾನನು ರಾಜ್ಯ-ವೈಭವಗಳಿಗೆ ಹೊರತಾಗಿ ಜೀವವನ್ನುಳಿಸಿಕೊಳ್ಳಲಿಕ್ಕೆ ದೇಶದೇಶಗಳಲ್ಲಿ ಸಂಚರಿಸತೊಡಗಿದ್ದನು. ಈಗ ಅವನ ವಶದಲ್ಲಿ ಧನಕನಕಗಳಿದ್ದಿಲ್ಲ; ಸೈನ್ಯವಿದ್ದಿಲ್ಲ; ಸಹಾಯಕರೆಂಬುವರು ಅವನ ಪಾಲಿಗೆ ಉಳಿದಿರಲಿಲ್ಲ. ದೀನನೂ ನಿರಾಧಾರಿಯೂ ಆದ ನವಾಬನಿಗೆ ನೆರವಾಗಲಿಕ್ಕೆ ಅವನ ಸ್ನೇಹಿತರೂ ಮಾಂಡಲಿಕರೂ ಜಮೀನದಾರರೂ ಒಪ್ಪದಾಗಿದ್ದರು ನವಾಬನಿಗೆ ನೆರವಾಗುವದೆಂದರೆ, ಪ್ರಚಂಡ ಶಕ್ತಿಶಾಲಿಯಾದ ದಿಲ್ಲೀಶ್ವರನ ಕಡುತರವಾದ ವೈರವನ್ನು ಬೆಳೆಯಿಸಿಕೊಳ್ಳುವದಾಗಿತ್ತು. ಸ್ವಜನ ಬಂಧು ಜನರಿಂದ ವಂಚಿತನಾದ ದಾವುದಖಾನನು ಪ್ರಾಪ್ತಪರಿಸ್ಥಿತಿಗೆ ಅಳ್ಕೊಡೆಯದೆ, ದೀರ್ಘ ಪ್ರಯತ್ನ ಮಾಡಿ ಗತವೈಭವವನ್ನು ಸಂಪಾದಿಸಬೇಕೆಂದು ಹವಣಿಸತೊಡಗಿದ್ದನು. ದಿಲ್ಲಿಯ ಪ್ರಧಾನ ಸೇನಾಪತಿಯಾದ ಮುನಾಯಿಮುಖಾನನಿಂದಲೂ ಉಪಸೇನಾಪತಿಯಾದ ರಾಜಾ ತೋಡರಮಲ್ಲನಿಂದಲೂ ಪರಾಭೂತನಾದ ನವಾಬನು, ಜೀವವನ್ನುಳಿಸಿಕೊಳ್ಳುವದಕ್ಕಾಗಿ ರಾಜಮಹಾಲ ಪಟ್ಟಣವನ್ನು ಪ್ರವೇಶಿಸಿದನು.

ರಾಜಮಹಾಲಿನ ಜಮೀನದಾರರಲ್ಲಿ ರಜಪುತ ಜಮೀನದಾರನಾದ ಹರಿನಾರಾಯಣನು ಶ್ರೇಷ್ಠನಾಗಿದ್ದನು. ಹರಿನಾರಾಯಣನ ಜಮೀನದಾರಿಯು ವಿಶಾಲವಾದದ್ದಿದ್ದು, ಅವನು ಅತ್ಯಂತ ಪ್ರತಾಪಶಾಲಿಯಾಗಿದ್ದನು. ಮೊಗಲ ಸೇನಾಪತಿಯಾದ ಮುನಾಯಿಮುಖಾನನ ವಿನಂತಿಯ ಮೇರೆಗೆ

ಅವನು ತನ್ನ ಆಧೀನಸ್ಥರಾದ ಹತ್ತುಸಾವಿರ ಕಾಲಾಳುಗಳನ್ನೂ, ಎರಡು ಸಾವಿರ ಅಶ್ವದಳವನ್ನೂ ತೆಗೆದುಕೊಂಡು ಮುಂಗೇರದಲ್ಲಿಯ ಮೊಗಲ ಶಿಬಿರ ವನ್ನು ಸೇರಿದ್ದನು. ಹರಿನಾರಾಯಣನು ಧೂರ್ತನಿದ್ದನು. ಮೊಗಲರು ವರ್ಧಮಾನ ವಿಜಯಿಗಳಾಗುತ್ತಿರುವದನ್ನು ನೋಡಿ, ದಾವುದಖಾನನ ಪಕ್ಷವನ್ನು ತ್ಯಜಿಸಿ, ಮುನಾಯಿಮಖಾನನಿಗೆ ನೆರವಾಗಲಿಕ್ಕೆ ಸಿದ್ಧನಾದನು. ಕೊನೆಗೆ ಅವನ ತರ್ಕವು ನಿಜವಾಗಿ, ದಾವುದಖಾನನು ಪರಾಜಯ ಹೊಂದಿ, ರಣ ಭೂಮಿಯಿಂದ ಪಲಾಯನ ಮಾಡಿದನು.

ಸಶಸ್ತ್ರಕಾವಲುಗಾರರಿಂದ ಪರಿವೇಷ್ಟಿತವಾದ ರಾಜಾಹರಿನಾರಾಯಣನ ಅಟ್ಟಾಲಿಕೆಯು ಅತ್ಯಂತ ಮನೋಹರವೂ, ನಯನರಂಜನಕರವೂ ಆಗಿತ್ತು. ರಾಜಮಹಾಲಿನಲ್ಲಿ ಇಂತಹ ಸುಶೋಭಿತವಾದ ಮಂದಿರವು ಯಾವ ಜಮೀನ ದಾರನದೂ ಇದ್ದಿಲ್ಲ. ಈ ಮಂದಿರದ ದಕ್ಷಿಣದಲ್ಲಿ ಸ್ವಲ್ಪ ಅಂತರದ ಮೇಲೆ ಹರಿನಾರಾಯಣನ ಸರದಾರ-ಸೇನಾಪತಿಗಳ ಗೃಹಗಳಿದ್ದವು. ಅಲ್ಲಿಯೇ ಅವನ ಸ್ವಾಮಿನಿಷ್ಠ ಸರದಾರನಾದ ಯಾದವಲಾಲನ ಮನೆಯಿತ್ತು. ಇವುಗಳ ಹೊರತು ಅಲ್ಲಿ ಇತರ ಜನರ ಆವಾಸಗಳಿರಲಿಲ್ಲ. ಭೂಸ್ವಾಮಿಯಾದ ಹರಿ ನಾರಾಯಣನು ಎಷ್ಟು ಪ್ರತಾಪಶಾಲಿಯಾಗಿದ್ದನೋ, ಅಷ್ಟೇ ಅತ್ಯಾಚಾರಿ ಯಾಗಿದ್ದನು. ಅವನ ಹೃದಯದಲ್ಲಿ ದಯೆಯಿರಲಿಲ್ಲ; ನೇತ್ರಗಳಲ್ಲಿ ಕೋಮಲತೆಯಿರಲಿಲ್ಲ; ಮುಖದಲ್ಲಿ ಹಾಸ್ಯವಿದ್ದಿಲ್ಲ. ಅವನ ಹೃದಯವು ಪಾಷಾಣ ದಂತೆ ಕಠೋರವೂ, ಅಂಧಕಾರದಂತೆ ಕೃಷ್ಣವರ್ಣಪೂರ್ಣವೂ ಇದ್ದು, ಅವನು ಅತ್ಯಂತ ಭಯಂಕರನಾಗಿದ್ದನು!

ರಾಜಾಹರಿನಾರಾಯಣನಿಗೆ ಊರ್ಮಿಳಾದೇವಿಯೆಂಬ ಒಬ್ಬಳೇ ಮಗ ಳಿದ್ದಳು. ಊರ್ಮಿಳೆಯನ್ನು ಬಿಟ್ಟರೆ ಅವನಿಗೆ ತನ್ನವರೆಂಬವರು ಯಾರೂ ಇದ್ದಿಲ್ಲ. ಹರಿನಾರಾಯಣನಲ್ಲಿ ಏನಾದರೂ ದಯಾಮಾಯೆಗಳಿದ್ದರೆ ಅವು ಗಳನ್ನು ಅವನು ತನ್ನ ಪುತ್ರಿಗೆ ಸಮರ್ಪಿಸಿದ್ದನು. ಊರ್ಮಿಳಾದೇವಿಯು ಪುಷ್ಪದಂತೆ ಕೋಮಲಳೂ, ಚಂದ್ರನಂತೆ ಹಾಸ್ಯಮಯಿಯೂ, ನದಿಯಂತೆ ತರಂಗಯುತಳೂ, ನಿರ್ಜರಾಂಗನೆಯಂತೆ ಲಾವಣ್ಯವತಿಯೂ ಆಗಿದ್ದಳು. ಹರಿ ನಾರಾಯಣನು ಸದ್ಗುಣಮಂಡಿತಳಾದ ತನ್ನ ಈ ಮಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಅವನ ಗಂಭೀರತೆಯೂ, ಕಠೋರತನವೂ ಈ ಕ್ಷುದ್ರ ಬಾಲಿಕೆಯ ಮುಂದೆ ಪರಾಸ್ತ ಹೊಂದಿದ್ದವು.

ಊರ್ಮಿಳಾದೇವಿಯು ತನ್ನ ಅಟ್ಟಾಲಿಕೆಯಲ್ಲಿ ಕುಳಿತಿದ್ದಳು. ಆಗ ಒಬ್ಬ ಮುಸಲ್ಮಾನನು ಆಶಾಪೂರ್ಣದೃಷ್ಟಿಯಿಂದ ಹರಿನಾರಾಯಣನ ಮಂದಿರವನ್ನು ನೋಡುತ್ತ ಮುಂದೆ ಸಾಗಿದ್ದನು. ಆ ಮುಸಲ್ಮಾನನು ರಾಜ ಪದ್ಧತಿಯ ಉಡಿಗೆ-ತೊಡಿಗೆಗಳನು ಧರಿಸಿದ್ದನು. ಅವನು ತನ್ನ ಸಂಗಡ ಅನುಚರರನ್ನು ಕರೆದುಕೊಳ್ಳದೆ ಒಬ್ಬನೆ ಸಾಗಿದ್ದರಿಂದ, ಊರ್ಮಿಳಾದೇವಿಯ ಮನಸ್ಸಿನಲ್ಲಿ ಅನೇಕ ಬಗೆಯ ವಿಚಾರಗಳು ಬರತೊಡಗಿದವು. ಆಗ ಅವಳು ತನ್ನ ಸೇವಕನನ್ನು ಕರೆದು, ಆ ಮುಸಲ್ಮಾನ ಗೃಹಸ್ಥನನ್ನು ಉಪ್ಪರಿಗೆಗೆ ಬರಮಾಡಬೇಕೆಂದು ಆಜ್ಞಾಪಿಸಿದಳು ಸ್ವಲ್ಪ ವೇಳೆಯಲ್ಲಿ ಸೇವಕನು ಆ ಯವನನನ್ನು ತನ್ನ ಒಡತಿಯ ಬಳಿಗೆ ಕರೆತಂದನು ಆಗ ಊರ್ಮಿಳೆಯು ಯವನನನ್ನು ಕುರಿತು-"ನೀವು ಯಾರು? ನಿಮ್ಮ ವೇಷಭೂಷಣಗಳಿಂದ ನೋಡಲು, ನೀವು ಒಂದು ದೊಡ್ಡ ಮನೆತನದವರೆಂಬಂತೆ ಭಾಸವಾಗುವದು. ಯಾವದೋ ಒಂದು ಕಾರಣದಿಂದ ಮುಖವು ಮ್ಲಾನವಾಗಿರುವದು ನಿಮ್ಮ ಪರಿಚಯವನ್ನು ಮಾಡಿಕೊಟ್ಟು ನನ್ನ ಮನಸ್ಸನ್ನು ಶಾಂತಗೊಳಿಸುವಿರಾ?"

"ಕುಮಾರಿ, ನನ್ನ ಪರಿಚಯದಿಂದ ನಿಮಗೆ ಲಾಭವೇನು? ನಾನೊಬ್ಬ ಪ್ರವಾಹಪತಿತನು. ಭಯಂಕರವಾದ ಗಂಡಾಂತರದಲ್ಲಿ ಬಿದ್ದ ನನ್ನ ಪರಿಚಯ ಮಾಡಿಕೊಂಡರೆ ನಿಮಗೆ ದುಃಖವಾಗಬಹುದು. ನಾನು ಇಲ್ಲಿಗೆ ಆಶ್ರಯಾಪೇಕ್ಷಿಯಾಗಿ ಬಂದಿರುವೆನು."

"ಯವನಶ್ರೇಷ್ಠರೆ, ನೀವು ಗಂಡಾಂತರದಲ್ಲಿ ಸಿಲುಕಿರುವಿರಾ? ನಿಮಗೆ ಅಂತಹ ಸಂಕಟವೇನು ಬಂದಿದೆ? ನಿಮಗೆ ಬಂದ ಸಂಕಟವನ್ನು ನಿವಾರಿಸಲಿಕ್ಕೆ ನಾನು ಪ್ರಯತ್ನಿಸುವೆನು."

"ನೀವು ನನಗ ಆಶ್ರಯವೀಯುವದು ನಿಜವೆ?"

"ಖಂಡಿತವಾಗಿ ಆಶ್ರಯವೀಯುವೆನು."

"ನನಗೆ ಆಶ್ರಯವೀಯುವಂತಹ ಶಕ್ತಿಶಾಲಿಗಳು ನೀವು ಯಾರು?"

"ನಾನು ರಜಪುತ ಕನ್ಯೆಯಿರುವೆನು."

"ಇಷ್ಟರಿಂದಲೆ ಪರಿಚಯವಾಗಲೊಲ್ಲದು."

"ಯಾಕೆ, ಇಷ್ಟರಿಂದ ಯಥೇಷ್ಟವಾದ ಪರಿಚಯವಾಗಲೊಲ್ಲದೆ?"

"ನೀವು ರಜಪುತರಿರುವಿರೆಂಬದಿಷ್ಟು ತಿಳಿಯಿತು. ನಾನು ಯಾರೆಂಬಧನ್ನು ನೀವು ಅರಿತಿರುವಿರೇನು?"

"ನೀವು ಒಬ್ಬ ಯವನ ಶ್ರೇಷ್ಠರಿರುವಿರೆಂಬದನ್ನಷ್ಟು ತಿಳಿದಿರುವೆನು."

"ನನಗೆ ಆಶ್ರಯವಿತ್ತರೆ ನಿಮ್ಮ ಮೇಲೆ ಎಂತಹ ವಿಪತ್ತು ಬರುವದೆಂಬದರ ಕಲ್ಪನೆಯು ನಿಮಗಿಲ್ಲ."

"ನಾನು ಭಾವೀ ವಿಪತ್ತುಗಳನ್ನು ಮೊದಲೇ ಕಲ್ಪಿಸುತ್ತಿರುವದಿಲ್ಲ; ವಿಪತ್ತುಗಳಿಗೆ ಅಂಜುವ ಅಳ್ಳೆದೆಯವಳೂ ನಾನಲ್ಲ. ಆಶ್ರಯಾರ್ಥಿಗಳಿಗೆ ಆಶ್ರಯವೀಯುವದು ನನ್ನ ಕರ್ತವ್ಯವು. ನೀವು ನನ್ನ ಆಶ್ರಯವನ್ನು ಮನಃಪೂರ್ವಕವಾಗಿ ಬಯಸುತ್ತಿರುವಿರಷ್ಟೆ?"

"ಕುಮಾರಿ, ನಾನು ಈಗ ಬಹಳೇ ದೈನ್ಯಕ್ಕೀಡಾಗಿರುವೆನು. ನಿಮ್ಮಂತಹರ ನೆರವಿನಿಂದಲೇ ನಾನು ಗತವೈಭವವನ್ನು ಗಳಿಸಬೇಕಾಗಿದೆ ನಾನು ಆಶ್ರಯವೀಯುವವರನ್ನರಸುವದಕ್ಕಾಗಿಯೆ ಈ ರಾಜಮಹಾಲಿಗೆ ಬಂದಿರುವೆನು."

"ನಿಮಗೆ ಆಶ್ರಯವೀಯುವದರಿಂದ ಪರಮಾತ್ಮನು ಮುನಿದರೂ ನನಗೆ ಅದರ ಪರಿವೆಯಿಲ್ಲ. ರಜಪುತ ಕನ್ನಿಕೆಯಾಗಿ ದೀನರನ್ನೂ ಆಶ್ರಯಾರ್ಥಿಗಳನ್ನೂ ನಾನು ಹಾಗೆಯೆ ಹಿಂದಕ್ಕೆ ಕಳುಹಲಾರೆನು."

"ನೀವು ನಿಮ್ಮ ಕುಲೋಚಿತವಾಗಿ ಮಾತನಾಡಿದಿರಿ; ಆದರೆ ನೀವು ಸ್ತ್ರೀಯರು."

"ಯವನ ಶ್ರೇಷ್ಠರೆ, ಸ್ತ್ರೀಯೆಂಬ ಕಾರಣದಿಂದ ನೀವು ನನ್ನ ಶಕ್ತಿಯ ವಿಷಯವಾಗಿ ಸಂದೇಹಗೊಂಡಿರುವಿರೇನು? ಆರ್ಯಲಲನೆಯರ ಯೋಗ್ಯತೆಯು ಎಷ್ಟಿರುವದೆಂಬದು ನಿಮಗೆ ಗೊತ್ತಿಲ್ಲ; ಹಿಂದೂ ರಮಣಿಯರ ಚಾರಿತ್ರ್ಯವನ್ನು ನೀವು ಕೇಳಿಲ್ಲ ಆದ್ದರಿಂದ ಈ ರಜಪುತ ಬಾಲಿಕೆಯ ವಿಷಯವಾಗಿ ಸಂಶಯಗ್ರಸ್ತರಾಗಿರುವಿರಿ ಆರ್ಯನಾರಿಯ ಶಕ್ತಿಗಂಜಿ ಪ್ರತ್ಯಕ್ಷ ಕೃತಾಂತನು ಸಹ ಅವನತಮಸ್ತಕನಾಗಿ ಪಲಾಯನ ಮಾಡಿದ ಸಂಗತಿಯನ್ನು ನೀವು ಕೇಳಿಲ್ಲವೆ? ತ್ರಿಭುವನದಲ್ಲಿ ಅಪ್ರತಿ ದ್ವಂದ್ವಿಯಾದ ವೀರ ಭೀಷ್ಮನ ನಾಶಕ್ಕೆ ಹಿಂದು ರಮಣಿಯೇ ಕಾರಣೀಭೂತಳಾದಳೆಂಬದನ್ನು ನೀವು ಅರಿತಿಲ್ಲವೆ? ಸ್ವಲ್ಪ ದಿನಗಳ ಹಿಂದೆ ಮಹಾ ಪ್ರತಾಪಶಾಲಿ ಯವನಸಮ್ರಾಟನಾದ ಅಲ್ಲಾಉದ್ದೀನನು ಮಹಾರಾಣೀ ಪದ್ಮಿನಿಯ ರೂಪಕ್ಕೆ ಮರುಳಾಗಿ ಚಿತೋಡದ ಮೇಲೆ ದಾಳಿ ಮಾಡಿದನು; ಲಕ್ಷಾವಧಿ ಧನವನ್ನು ವ್ಯಯ ಮಾಡಿದನು; ಲಕ್ಷಾವಧಿ ಜನರ ಬಲಿದಾನ ಮಾಡಿದನು; ಲಕ್ಷಾವಧಿ ಜೀವನಗಳ ಗಾಢವಾದ ರಕ್ತದಿಂದ ಚಿತೋಡದ ಭೂಮಿಗೆ ಬಣ್ಣ

ಕೊಟ್ಟನು; ಆದರೆ ಅವನಿಗೆ ಏನು ದೊರಕಿತು? ಅವನಿಗೆ ದೊರೆಕಿದ್ದು ಶತಸಹಸ್ರ ಹಿಂದು ರಮಣಿಯರ ದೇಹಭಸ್ಮವು! ಒಂದು ನಭೂತಪೂರ್ವವಾದ ಅಲೌಕಿಕ ಉಪದೇಶವು! ಮೇವಾಡದ ಪವಿತ್ರ ಭೂಮಿಯೊಳಗಿನ ಒಬ್ಬ ಲಲನೆಯ ಮುಖವನ್ನು ಪ್ರತ್ಯಕ್ಷವಾಗಿ ನೋಡಲಿಕ್ಕೆ ಸಹ ಅವನು ಸಮರ್ಥನಾಗಲಿಲ್ಲ ಹಿಂದು ಮಹಿಳೆಯರು ಶಕ್ತಿಹೀನರಾಗಿರದೆ, ಶಕ್ತಿಪೂರ್ಣರಾಗಿರುವರೆಂಬದು ನಿಮಗೆ ಇಷ್ಟರಿಂದ ತಿಳಿಯಿತಷ್ಟೆ? ಭಾರತದ ಉಜ್ವಲವಾದ ಇತಿಹಾಸದ ಒಂದೊಂದೇ ಓಲೆಗಳನ್ನು ತೆರೆದು ನೋಡುತ್ತ ಹೋದರೆ, ಪ್ರತಿ ಪೃಷ್ಠಗಳಲ್ಲಿ ಪ್ರತಿಭಾಶಾಲಿನಿಯರಾದ ಆರ್ಯಾಂಗನೆಯರ ದೈದೀಪ್ಯಮಾನವಾದ ಮೂರ್ತಿಗಳು ದೃಗ್ಗೋಚರವಾಗುವವು. ಯವನ ವೀರರೇ, ಕೇಳಿರಿ! ವಿಪತ್ತು ಭೀಮಭೈರವ ಸ್ವರೂಪದಿಂದ ಗರ್ಜಿಸುತ್ತ ಸಮುದ್ರತರಂಗದಂತೆಯೂ ವಿಕರಾಳ ರಾಕ್ಷಸ ಸಮಾನವಾಗಿಯೂ ನನ್ನನ್ನು ನಾಶಗೊಳಿಸುವದಕ್ಕೆ ಸಾಗಿ ಬಂದರೂ, ಸಂಸಾರದಲ್ಲಿಯ ಸಮಸ್ತ ಶಕ್ತಿಗಳು ಏಕತ್ರವಾಗಿ ವಿರುದ್ಧವಾಗಿ ನಿಂತರೂ ನಾನು ಅಂಜದೆ ಅಳುಕದೆ ನಿಮಗೆ ಆಶ್ರಯ ಕೊಡುವೆನು. ಈ ಪ್ರಾಸಾದದಲ್ಲಿ ಮತ್ತು ನನ್ನ ತಂದೆಯ ಜಮೀನದಾರಿಯ ಸೀಮೆಯಲ್ಲಿ ನನ್ನ ಅಸ್ತಿತ್ವವಿರುವವರೆಗೆ ಯಾರೂ ನಿಮ್ಮ ಕೂದಲು ಸಹ ಕೊಂಕಿಸಲಿಕ್ಕೆ ಸಮರ್ಥರಾಗುವದಿಲ್ಲ.''

ಬಾಲಿಕೆಯ ಮುಖವು ಅಭಾವನೀಯವೂ, ಅಚಿಂತ್ಯನೀಯವೂ ಅತುಲನೀಯವೂ ಆದ ಪುಣ್ಯಪ್ರತಿಭೆಯಿಂದಲೂ ದೇವೀಪ್ರಕಾಶದಿಂದಲೂ ಪ್ರದೀಪ್ತವಾಗಿ, ಉಜ್ವಲಶ್ರೀಯಿಂದ ಹಾಗು ಪರಮೋಜ್ವಲ ತೇಜದಿಂದ ಉದ್ಭಾಸಿತವಾಗಿತ್ತು ಭಕ್ತಿಪ್ರದೀಪ್ತಳೂ ವಿಶ್ವಜನನಿಸ್ವರೂಪಿಣಿಯೂ ಶಾಂತಮೂರ್ತಿಯೂ ಶಕ್ತಿಶಾಲಿನಿಯೂ ಆದ ಊರ್ಮಿಳಾದೇವಿಯ ಮಾತುಗಳನ್ನು ಕೇಳಿ ಆ ಯವನವೀರನ ಹೃದಯವು ಭಕ್ತಿಶ್ರದ್ಧೆಗಳಿಂದ ತುಂಬಿಕೊಂಡಿತು ಅವನು ಮೈಯಲ್ಲ ರೋಮಾಂಚನಗಳುಳ್ಳವನಾಗಿ ಅಶ್ರುಪೂರ್ಣನೇತ್ರಗಳಿಂದ ಊರ್ಮಿಳಾದೇವಿಯ ಮುಖವನ್ನು ನೋಡುತ್ತ ತಟಸ್ಥನಾಗಿ ನಿಂತುಕೊಂಡಿದ್ದನು. ದಂಗುಬಡೆದು ತನ್ನನ್ನು ನೋಡುತ್ತ ನಿಂತ ಯವನನನ್ನು ಕುರಿತು ಊರ್ಮಿಳಾದೇವಿಯು ಕೋಮಲಸ್ವರದಿಂದ—''ಯವನವೀರರೆ, ಹೀಗೇಕೆ ವಿಸ್ಮಯಗೊಂಡು ನನ್ನ ಮುಖವನ್ನು ನೋಡುತ್ತಿರುವಿರಿ?''

ಯವನವೀರನು ಕಂಪಿತಧ್ವನಿಯಿಂದ—''ದೇವಿ, ಯಾವ ಭಾಷೆಯಿಂದ

ಮತ್ತು ಹೇಗೆ ನನ್ನ ಅಂತರಂಗವನ್ನು ತಿಳಿಸಲಿ? ನಾನು ಏನು ನೋಡುತ್ತಿರುವೆನೋ ಅದನ್ನು ನಾನು ಇದಕ್ಕಿಂತ ಮೊದಲು ಇಡೀ ಜೀವನದಲ್ಲಿ ಎಂದೂ ನೋಡಿಲ್ಲ; ಶೇಷಜೀವನದಲ್ಲಾದರೂ ನೋಡುವೆನೆಂಬ ಆಶೆ ಹಿಡಿದಿಲ್ಲ. ನಾನು ಏನು ಮಾಡುತ್ತಿರುವೆನೋ, ಅದನ್ನು ಈ ಜನ್ಮದಲ್ಲಿ ಎಂದೂ ಮರೆಯುವದಿಲ್ಲ ದೇವಿ, ದಂಗುಬಡೆದು ನೋಡಬಾರದೇಕೆ? ನಾನು ಸಾಮಾನ್ಯ ಮೂರ್ತಿಯನ್ನು ನೋಡುತ್ತಿರುವೆನೆ? ನೂರು ಚಂದ್ರಗಿರಿಗಿಂತಲೂ ಉಜ್ವಲವಾದ ದಿವ್ಯಸ್ವರೂಪದ ಮಾತೃಮೂರ್ತಿಯನ್ನು ನಾನು ನೋಡುತ್ತಿರುವೆನು; ಪವಿತ್ರಳೂ ಪುಣ್ಯಮಯಿಯೂ ಧರ್ಮಶೀಲಳೂ ಆದ ಕ್ಷತ್ರಿಯ ಕನ್ಯಾರತ್ನವನ್ನು ನೋಡುತ್ತಿರುವೆನು; ಶಾಂತಳೂ ಸ್ನೇಹಹೃದಯಿಯೂ ಆದ ದಿವ್ಯ ಆರ್ಯಾಂಗನೆಯನ್ನು ನೋಡುತ್ತಿರುವೆನು; ಅತುಲನೀಯ ಧೈರ್ಯಶಾಲಿನಿಯಾದ ದೈವೀಪ್ರತಿಮೆಯನ್ನು ನೋಡುತ್ತಿರುವೆನು! ಹಿಂದು ರಮಣಿಯರು ಮಾನವರಲ್ಲ; ದೇವತೆಗಳು. ತಾಯಿ, ಈ ವಂಗೇಶ್ವರನಾದ ದಾವುದಖಾನನು ನಿಮಗೆ ಶತಶಃ ಅಭಿವಾದನೆಗಳನ್ನರ್ಪಿಸುವನು. ಇವನನ್ನು ನೀವು ಮಗನ ಸ್ಥಾನದಲ್ಲಿ ತಿಳಿಯಿರಿ. ಮಾತೆ, ನೀವು ನಿಮ್ಮ ಮಂಗಲಕರವಾದ ಆಶೀರ್ವಾದದಿಂದ ಈ ಪ್ರವಾಹಪತಿತ ನವಾಬನನ್ನು ಶಕ್ತಿಶಾಲಿಯನ್ನಾಗ ಮಾಡಿರಿ ಶಾಂತಿರೂಪಿಯಾದ ಬಾಹುಗಳನ್ನೆತ್ತಿ ಅವನ ದುಷ್ಕರ್ಮಗಳ ಕಲಂಕವನ್ನು ಹೋಗಲಾಡಿಸಿರಿ" ನವಾಬನು ಮೊಳಕಾಲೂರಿ ಊರ್ಮಿಳೆಗೆ ನಮಸ್ಕರಿಸಿದನು.

"ಏನು? ನೀವು ನವಾಬ ದಾವುದಖಾನರೇನು?" ಊರ್ಮಿಳಾದೇವಿಯು ವಿಸ್ಮಯದಿಂದ ಕೇಳಿದಳು.

"ಹೌದು, ಮಾತೆ! ದುರ್ಭಾಗ್ಯನೂ ಅತ್ಯಾಚಾರಿಯೂ ಪಾತಕಿಯೂ ದುರ್ಗುಣಗಳ ಆದರ್ಶಕನೂ ಆದ ದಾವುದಖಾನನೆಂಬವನು ನಾನೇ!"

"ಹೇಗಿದ್ದರೂ ನೀವು ನನ್ನ ಮಕ್ಕಳಾಗಿರುವಿರಿ ನವಾಬರೆ, ಏಳಿರಿ; ಭಗವಂತನ ಚರಣಾರವಿಂದಗಳನ್ನು ಧ್ಯಾನಿಸುತ್ತ ಮನುಷ್ಯತ್ವ ಹೊಂದಿರಿ; ರಣಮೃತ್ಯು ಲಾಭ ಪಡೆಯಿರಿ; ಮೊಗಲವಿಜಯಿಗಳಾಗಿರಿ!"

ನವಾಬನು ಆಶ್ಚರ್ಯಚಕಿತನಾಗಿ:—"ಮಾತೆ, ನಾನು ಮೊಗಲ ವಿಜಯಿಯಾಗುವೆನೆ? ಅಸಂಭವವು. ಮೊಗಲವಿಜಯಿಯಾಗುವ ಆಶೆಯು ಮೃಗಜಲಕ್ಕೆ ಸಮಾನವಾಗಿ ಬಹುದೂರವಾಗಿರುವದು ನಾನು ಇಂದು ಮೊಗಲ

ಸೇನಾಪತಿಯೊಡನೆ ಕಾದಿ ಪರಾಜಿತನಾಗಿರುವೆನು. ನನ್ನ ಛತ್ರಭಂಗ ಸೇನೆಯು ಎತ್ತ ಹೋಗಿರುವದೆಂಬದು ಸಹ ನನಗೆ ಗೊತ್ತಿಲ್ಲ. ನಾನು ಶೃಗಾಲನಂತೆ ಜೀವರಕ್ಷಣೆ ಮಾಡಿಕೊಳ್ಳಬೇಕೆಂದು ಆಶ್ರಯಾರ್ಥಿಗಳನ್ನು ಹುಡುಕುತ್ತ ಈ ರಾಜಮಹಾಲನಗರದಲ್ಲಿ ತಿರುಗಾಡತೊಡಿಗಿದ್ದೆನು. ತಾಯಿ, ನನ್ನನ್ನು ಹುಡುಕುವದಕ್ಕಾಗಿ ದಿಲ್ಲಿಯ ಪ್ರಧಾನಸೇನಾಪತಿಯಾದ ಮನಾಯಿಮಖಾನನು ಸೈನ್ಯಸಮೇತನಾಗಿ ಬರತೊಡಗಿರುವನು. ಬಂಗಾಲದೊಳಗಿನ ಎಷ್ಟೋ ಜಮೀನದಾರರು ಮೊಗಲಪಕ್ಷಕ್ಕೆ ಒಡೆದಿರುವರು. ಸದ್ಯಕ್ಕೆ ಮೊಗಲ ಸಾಮ್ರಾಜ್ಯವು ಸಸ್ಸೀಮ ಶಕ್ತಿಶಾಲಿಯಾಗಿರುವದು. ನನ್ನ ಬಳಿಯಲ್ಲಿ ಸೈನ್ಯವಿಲ್ಲ; ಧನವಿಲ್ಲ; ದುರ್ಗಗಳಿಲ್ಲ ಅಡಗಿಕೊಳ್ಳುವದಕ್ಕಾಗಿ ಒಂದು ಸ್ಥಳವು ಸಹ ಇಲ್ಲ ಇಂತಹ ಸ್ಥಿತಿಯಲ್ಲಿ ನಾನು ಮೊಗಲವಿಜಯಿಯಾಗುವೆನೆ? ಅಸಂಭವ! ಅಸಂಭವ!!"

"ಅಸಂಭವ! ಅಸಂಭವವೆ? ಅದೇಕೆ ಅಸಂಭವವು? ಅಸಂಭವವೆಂಬ ಶಬ್ದವು ವೀರರ ಮುಖದಿಂದ ಹೊರಡಬಾರದು. ಪ್ರಬಲವಾದ ಆಕಾಂಕ್ಷೆಯಿಂದ ಕರ್ತವ್ಯರತನಾದ ಮನುಷ್ಯನು ಸುಫಲವನ್ನು ಹೊಂದುವನು. ನೀವು ಮಹತ್ವಾಕಾಂಕ್ಷೆಯಿಂದ ಸಾಹಸ ಮಾಡಿದರೆ ಖಂಡಿತವಾಗಿ ಗತವೈಭವವನ್ನು ಸಂಪಾದಿಸುವಿರಿ"

"ದೇವಿ, ನಿಮ್ಮ ಸ್ಫೂರ್ತಿದಾಯಕ ವಾಣಿಯಿಂದ ನನ್ನ ಹೃದಯದಲ್ಲಿ ಆಶಾಂಕುರವು ಉದಯಿಸಿತು. ವಂಗಸಿಂಹಾಸನವು ಕಣ್ಣಮುಂದೆ ಕಟ್ಟಿದಂತಾಯಿತು. ದೈವೀಪ್ರಭಾವವುಳ್ಳವರಾದ ನಿಮ್ಮ ವಾಣಿಯು ಎಂದೂ ನಿಷ್ಫಲವಾಗಲಾರದೆಂಬ ವಿಶ್ವಾಸವು ಹುಟ್ಟಿದೆ. ಪ್ರಯತ್ನ ಮಾಡಿ ನಾನು ಮೊಗಲವಿಜಯಿಯಾಗುವೆನು ನಾನು ಇಂದು ಮನಾಯಿಮಖಾನನ ಕೈಯೊಳಗಿಂದ ಪಾರಾದೆನು ಇನ್ನು ಮೇಲೆ ದೀರ್ಘಸಾಹಸ ಮಾಡಿ ಮೊಗಲರನ್ನು ಬಂಗಾಲದಿಂದ ಹೊರಗೆ ತಳ್ಳುವೆನು. ಪಠಾಣರ ಜಯನಾದದಿಂದ ವಂಗಭೂಮಿಯೂ ವಂಗಾಕಾಶವೂ ನಿನಾದಗೊಳ್ಳುವಂತೆ ಮಾಡುವೆನು"

"ನವಾಬರೆ, ನಿಮ್ಮ ಸಾಧನವು ಸಫಲವಾಗಲಿ!"

"ಮಾತೆ ನಿಮ್ಮ ವಾಣಿಯು ಸತ್ಯವಾಗಿ ಬಂಗಾಲದ ಸಿಂಹಾಸನವು ನನ್ನ ಅಧೀನವಾಯಿತೆಂದರೆ, ಕೃತಘ್ನರೂ ಸ್ವಾಮಿದ್ರೋಹಿಗಳೂ ಆದ ಜಮೀನದಾರರಿಗೆ ಚನ್ನಾಗಿ ಶಾಸನ ವಿಧಿಸುವೆನು."

ನವಾಬನ ವಾಕ್ಯದಿಂದ ಊರ್ಮಿಳಾದೇವಿಯು ಭಯಭೀತಳಾದಳು. ಆಗ ಅವಳು ಕಂಪಿತಸ್ವರದಿಂದ—"ನವಾಬರೆ, ನನ್ನದೊಂದು ಪ್ರಾರ್ಥನೆ ಯುಂಟು. ನನ್ನನ್ನು ನೀವು ತಾಯಿಯೆಂದು ತಿಳಿದಿರುವಿರಿ; ನಿಮ್ಮನ್ನು ನಾನು ಮಗನಂತೆ ಭಾವಿಸಿರುವೆನು. ನೀವು ನಿಮ್ಮ ತಾಯಿಗೆ ಒಂದು ಕ್ಷುದ್ರ ವಾದ ಭಿಕ್ಷೆಯನ್ನು ನೀಡಲಾರಿರಾ?"

"ಮಾತೆ, ಹೀಗೇಕೆ ಮಾತನಾಡುವಿರಿ? ಮಗನಿಗೆ ತಾಯಿಯು ಸಲು ವಾಗಿ ಅದೇಯವಾದದ್ದು ಯಾವದು? ಸಿಂಹಾಸನಚ್ಯುತನೂ, ಮುಕುಟ ಹೀನನೂ ಆದ ಈ ದೀನದರಿದ್ರ ನಿಮ್ಮ ಮಗನಲ್ಲಿ ನೀವು ಏನು ಯಾಚಿಸಬೇ-ಕೆಂದು ಮಾಡಿರುವಿರಿ? ಜೀವದಾನ ಮಾಡಿಯಾದರೂ ನಾನು ನಿಮ್ಮ ಇಚ್ಛೆ ಯನ್ನು ಪೂರೈಸುವೆನು."

"ನನ್ನ ತಂದೆಯವರಾದ ಹರಿನಾರಾಯಣರು ಮೊಗಲರ ಪಕ್ಷವನ್ನು ಹಿಡಿದು ಸಂಗ್ರಾಮಕ್ಕೆ ತೆರಳಿರುವರು. ನಿಮ್ಮ ದುಃಖನಿಶೆಯು ಅಂತವಾಗಿ, ಉಜ್ವಲ ಪ್ರಕಾಶಮಯ ಮಂಗಲಸುಪ್ರಭಾತವು ಉದಯಹೊಂದಿ ರಾಜ್ಯ ಪ್ರಾಪ್ತಿಯಾದ ಮೇಲೆ ಬಂಗಾಲವು ನಿಮ್ಮ ಚರಣಗಳಿಗೆ ಅಭಿವಾದನೆ ಮಾಡು ವದು. ಆಗ ಸ್ವಾಮಿದ್ರೋಹಿಗಳಾದ ಜಮೀನದಾರರಿಗೆ ನೀವು ಭಯಂಕರವಾದ ಶಾಸನವನ್ನು ವಿಧಿಸುವಿರಿ ನೀವು ಮೊಗಲ ಶಿಬಿರವನ್ನು ಸೇರಿದ ನನ್ನ........"

"ಮಾತೆ, ನಿಮ್ಮ ಒಲವು ತಿಳಿಯಿತು. ಈ ವಿಷಯದಲ್ಲಿ ಹೆಚ್ಚು ಹೇಳುವ ಅವಶ್ಯಕತೆಯಿಲ್ಲ. ದೇವಿ, ನಿಮ್ಮ ಮಗನಾದ ಈ ದಾವುದಖಾನನು ವಿಲಾಸಿ ಯೂ ಮದ್ಯಪಿಯೂ ಅತ್ಯಾಚಾರಿಯೂ ಆಗಿದ್ದರೂ, ಇವನು ಅಕೃತಜ್ಞನಲ್ಲ; ಪಶುವಲ್ಲ. ನಾನು ಪ್ರತಿಜ್ಞೆ ಮಾಡಿ ನಿಮಗೆ ಹೇಳುವದೇನಂದರೆ, ಎಂತಹ ಪ್ರಸಂಗಲ್ಲಾದರೂ ನಾನು ನಿಮ್ಮ ತಂದೆಯವರಾದ ಹರಿನಾರಾಯಣರ ಮೇಲೆ ಕೈ ಮಾಡುವದಿಲ್ಲ; ಅವರ ಕೂದಲಿಗೆ ಸಹ ದಕ್ಕೆ ಹತ್ತಗೊಡುವದಿಲ್ಲ."

"ನಾನಾದರೂ ನಿಮಗೆ ಪ್ರತಿಜ್ಞೆ ಮಾಡಿ ಹೇಳುವದೇನಂದರೆ" ಊರ್ಮಿಳಾ ದೇವಿಯು ಅತ್ಯಂತ ಗಂಭೀರ ವಾಣಿಯಿಂದ:—"ನಾನು ಆಜೀವವಾಗಿ ನಿಮ್ಮ ನ್ನು ಮಗನೆಂದು ಭಾವಿಸುವೆನು; ಆಜೀವವಾಗಿ ನಿಮಗೆ ಶುಭವಾಗಲೆಂದು ಚಿಂತಿಸುತ್ತಿರುವೆನು; ಆಜೀವವಾಗಿ ನಿಮ್ಮ ವಿಪದಾವಸ್ಥೆಯಲ್ಲಿ ಸಹಾಯಕಾರಿ ಯಾಗಿರುವೆನು ಪರಮಾತ್ಮನು ನಿಮಗೆ ಎಂದೂ ವಿಪತ್ತು ತರಬೇಡ; ಅವನು ಯಾವಾಗಲೂ ಒಳಿತು ಮಾಡುತ್ತಿರಲಿ. ಯಾವ ವೇಳೆಯಲ್ಲಿ ಈ ನಿಮ್ಮ ಜನ

ನಿಯ ಸಹಾಯದ ಆವಶ್ಯಕತೆಯುಂಟಾಗುವದೋ ಆ ವೇಳೆಯಲ್ಲಿ ತಿಳಿಸಿದರೆ, ಹೃದಯದ ಶೇಷರಕ್ತಬಿಂದುವನ್ನು ಕೊಟ್ಟಾದರೂ ನಿಮ್ಮನ್ನು ರಕ್ಷಿಸುವಳೆಂದು ಖಂಡಿತವಾಗಿ ತಿಳಿಯಿರಿ."

ಊರ್ಮಿಳಾದೇವಿಯ ಅಭಯವಾಣಿಯನ್ನು ಕೇಳಿ ದಾವುದಖಾನನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಆನಂದಾತಿರೇಕದಿಂದ ಅವನ ನೇತ್ರಗಳು ಅಶ್ರುಪೂರ್ಣವಾದವು; ಕಂಠವು ಬಿಗಿಯಿತು. ಆಗ ಅವನು ನತಮಸ್ತಕನಾಗಿ ಕೈಜೋಡಿಸಿ:—"ಮಾತೆ, ತಮ್ಮ ಅಭಯದಾನದಿಂದ ನಾನು ಧೈರ್ಯಗೊಂಡೆನು. ಚಿಕ್ಕವರಾದ ನಿಮ್ಮಲ್ಲಿ ಅತುಲನೀಯವಾದ ಧೈರ್ಯ-ಸಾಹಸಗಳು ನೆಲೆಗೊಂಡದ್ದನ್ನು ನೋಡಿ ವಿಸ್ಮಯವಾಗಿದೆ. ಮಾತೃಮೂರ್ತಿಯಂತಿರುವ ನಿಮ್ಮ ಆಶೀರ್ವಾದದಿಂದ ನನ್ನ ಆಶೆಯು ನಿಶ್ಚಯವಾಗಿ ಈಡೇರುವದು. ತಾಯಿಯೊ, ನಿಮಗೆ ಅನಂತ ಪ್ರಣಾಮಗಳಿರಲಿ. ಹೋಗಿ ಬರುವೆನು, ಆಜ್ಞೆ ಕೊಡಿರಿ."

"ನವಾಬರೆ, ಹೋಗಿ ಬನ್ನಿರಿ. ಕೆಲಸ ತೀರಿದೊಡನೆಯೆ ಮತ್ತೆ ಬನ್ರಿ."

ದಾವುದಖಾನನು ಊರ್ಮಿಳಾದೇವಿಯ ನಿರೋಪ ಹೊಂದಿ ಧೃತಗತಿಯಿಂದ ರಾಜಮಹಾಲನ್ನು ಬಿಟ್ಟು ತೆರಳಿದನು.

---

## ೨ನೆಯ ಪರಿಚ್ಛೇದ.

"ಸ್ವಾಮಿ!"

"ಮಾಯಾ!"

ಮಾಯಾದೇವಿಯು ಅತ್ಯಂತ ಕಷ್ಟದಿಂದ ರೋಗಶೀರ್ಣವೂ ಶುಷ್ಕವೂ ನಿಷ್ಪ್ರಭವೂ ಆದ ನೇತ್ರಗಳಿಂದ ಸ್ವಾಮಿಯಾದ ದಿಲೀಪಸಿಂಹನ ಕಡೆಗೆ ನೋಡಿ ಕ್ಷೀಣಸ್ವರದಿಂದ—"ಸ್ವಾಮಿ!"

"ಮಾಯಾ!"

"ಹೇಳುವೆನು."

"ಮಾಯಾ, ಏನು ಹೇಳುವೆ?"

"ನನ್ನ ಕುಮಾರನಾದ ಅಮರ ಪ್ರಸಾದನು—"

"ಅಮರನು ಬೇಗನೆ ಬರುವನು ಮಾಯಾ!"

"ಇನ್ನೂ ಯುದ್ಧದ ಪರಿಸಮಾಪ್ತಿಯಾಗಿಲ್ಲವೆ?"

"ಯುದ್ಧ ಸಮಾಪ್ತಿಯಾಗಿದೆ."

"ಯಾರು ವಿಜಯಿಗಳಾದರು?"

"ನಾವು!"

"ಹಾಗಾದರೆ ಅಮರನು ಬರಲಿಕ್ಕೆ ಏಕೆ ವಿಲಂಬವಾಗಿದೆ?"

ದಿಲೀಪಸಿಂಹನು ನಿರುತ್ತರನಾಗಿದ್ದನು.

ಉತ್ತರ ದೊರೆಯದ್ದರಿಂದ ಸ್ನೇಹಪರಾಯಣಳಾದ ಮಾಯಾದೇವಿಯ ಹೃದಯದಲ್ಲಿ ಸಂದೇಹವು ಉತ್ಪನ್ನವಾಯಿತು. ನೇತ್ರಗಳಲ್ಲಿ ಅಶ್ರುಬಿಂದುಗಳು ಕಾಣತೊಡಗಿದವು. ಆಗ ಅವಳು ಕಂಪಿತವೂ ಶಂಕಿತವೂ ಆದ ವಾಣಿಯಿಂದ—"ಏನು? ನನ್ನ ಅಮರನು-ನನ್ನ ಕಕ್ಕುಲತೆಯ ಪುತ್ರನು-ಈ ಸಂಸಾರದಲ್ಲಿ ಜೀವಿಸಿಲ್ಲವೆ?"

ಅವಳ ನೇತ್ರಗಳಿಂದ ಅಶ್ರುಗಳು ಧಾರೆಗಟ್ಟಿ ಹರಿಯುತೊಡಗಿದವು. ದುಃಖಿತ ಹೃದಯಿಯಾದ ಮಾಯಾದೇವಿಯನ್ನು ನೋಡಿ ಆಕಾಶಸ್ಥ ಚಂದ್ರನು ನಿಟ್ಟುಸಿರು ಬಿಟ್ಟನು; ತಾರಕೆಗಳು ಹಳಹಳಿಸತೊಡಗಿದವು.

ಮೃತ್ಯುಪಥಗಾಮಿನಿಯಾದ ಸಹಧರ್ಮಿಣಿಯ ನಯನಾಶ್ರುಗಳನ್ನು ನೋಡಿದೊಡನೆಯೆ ದಿಲೀಪಸಿಂಹನ ಹೃದಯವು ವ್ಯಥೆಗೊಂಡಿತು. ಆಗ ಅವನು ಕಾತರಧ್ವನಿಯಿಂದ—"ಮಾಯಾ, ಮಾಯಾ, ನೀನು ಚಿಂತಿಸಬೇಡ. ನಿನ್ನ ಕುಮಾರನಾದ ಅಮರಪ್ರಸಾದನು ಸುರಕ್ಷಿತವಾಗಿರುವನು."

ದೀರ್ಘವಾದ ಬಿಸಿಯುಸುರು ಬಿಟ್ಟು, ಮಾಯಾದೇವಿಯು—"ಸತ್ಯವನ್ನು ಹೇಳಿರಿ. ಪ್ರಭುಗಳೆ, ನನ್ನ ಅಮರನು ಸುರಕ್ಷಿತವಾಗಿದ್ದರೆ ಇಲ್ಲಿಗೆ ಬರಲಿಕ್ಕೆ ಇಷ್ಟು ವಿಲಂಬವೇಕೆ?"

"ನಿಷ್ಪಾಪವಾದ ನಿನ್ನ ದೇಹವನ್ನು ಮುಟ್ಟಿ ಸತ್ಯವಾಗಿ ಹೇಳುವೆನು; ನಿನ್ನ ಬಾಲಕನಾದ ಅಮರನು ಜೀವಂತನಾಗಿರುವನು. ಅವನು ಇಲ್ಲಿಗೆ ಇನ್ನೂ ಬಾರದಿರಲಿಕ್ಕೆ ಕಾರಣವುಂಟು."

"ಪ್ರಭೋ! ಯಾವ ಕಾರಣದಿಂದ ಅಮರನು ಇಲ್ಲಿಗೆ ಬಂದಿಲ್ಲ?"

ಅರ್ಧೋಚ್ಚಾರಿತ ಕಂಠದಿಂದ ದಿಲೀಪಸಿಂಹನು—"ಅವನು ಯವನರ ಕಾರಾಗೃಹದಲ್ಲಿರುವನು!"

ಮಾಯಾದೇವಿಗೆ ವಜ್ರಾಘಾತವಾದಂತಾಯಿತು. ಅವಳ ನೇತ್ರಗಳಲ್ಲಿ ದುಃಖಾಶ್ರುಗಳು ಮತ್ತಿಷ್ಟು ವೇಗದಿಂದ ಹರಿಯುತೊಡಗಿದವು. ದುಃಖಾ

ಘಾತದಿಂದ ಅವಳು ಕೆಲವು ವೇಳೆ ಮೂರ್ಛೆ ಹೊಂದಿದಳು. ಮಾಯಾದೇವಿಯು ಸಾವಧಗೊಂಡ ಮೇಲೆ ದಿಲೀಪಸಿಂಹನು ಕಾತರಧ್ವನಿಯಿಂದ:— "ಮಾಯಾ, ನಾನು ನಿನ್ನ ಸ್ವಾಮಿಯಿರುವೆನು ಸ್ವಾಮಿಯ ಮಾತಿನಲ್ಲಿ ನಿನ್ನ ಪೂರ್ಣವಾದ ವಿಶ್ವಾಸವಿದ್ದರೆ ನಾನು ಹೇಳುವದನ್ನು ಮನಸ್ಸುಗೊಟ್ಟು ಕೇಳು. ಅಮರಪ್ರಸಾದನು ಯವನರ ಕಾರಾಗೃಹದಲ್ಲಿದ್ದರೂ ಬೇಗನೆ ಮುಕ್ತನಾಗಿ ಬರುವನು ಮೊಗಲ ಸೇನಾಪತಿಯಾದ ರಥಿಶ್ರೇಷ್ಠ ಮನಾಯಿಮಖಾನನು ಸೆರೆಯಾಳುಗಳನ್ನು ಮುಕ್ತಮಾಡಲಿಕ್ಕೆ ಹೊರಟಿರುವನು. ಬಹಳ ಮಾಡಿ ಇಷ್ಟರಲ್ಲಿ ಅಮರಪ್ರಸಾದನ ಬಿಡುಗಡೆಯಾಗಿರಬಹುದು. ಪ್ರಿಯೆ, ಅವನು ಬೇಗನೆ ಇಲ್ಲಿಗೆ ಬರುವನು; ದುಃಖಿಸಬೇಡ."

ಸ್ವಲ್ಪ ಆಶಾಪೂರ್ಣ ಹೃದಯದಿಂದ ಮಾಯಾದೇವಿಯು—"ಅಮರನು ಯಥಾವಕಾಶವಾಗಿ ಬರಬಹುದು; ಆದರೆ—"

"ಯಾಕೆ ಮಾಯಾ, ಮತ್ತೇನು?"

"ನಾನು ನನ್ನ ಕುಮಾರನನ್ನು ಕಾಣಲಿಕ್ಕಿಲ್ಲೆಂದು ನನ್ನ ಮನೋದೇವತೆಯು ಹೇಳುತ್ತಿರುವದು" ಎಂದು ನುಡಿದು, ಮಾಯಾದೇವಿಯು ಹೃದಯಭೇದಿಯಾದ ದೀರ್ಘನಿಃಶ್ವಾಸ ಬಿಟ್ಟಳು.

"ಇದೇನು ಮಾಯಾ? ನೀನು ಅಭದ್ರವಾದ ಮಾತುಗಳನ್ನೇಕೆ ಆಡತೊಡಗಿರುವೆ?" ದಿಲೀಪಸಿಂಹನು ವ್ಯಥೆಯಿಂದ ನುಡಿದನು

"ಹೀಗೇಕೆ ಮಾತಾಡುವೆಯೆಂದು ಕೇಳುವಿರಾ? ಪ್ರಭುಗಳೆ, ಏಕೆ ಮಾತಾಡಬಾರದು? ನನ್ನ ಸ್ಥಿತಿಯು ನಿಮಗೆ ಕಾಣುವದಿಲ್ಲವೆ? ಕಾಲನ ಕೃಷ್ಣವರ್ಣದ ಕಠೋರ ಹಸ್ತಸ್ಪರ್ಶದಿಂದ ನನ್ನ ದೇಹವೆಲ್ಲ ಕೃಷ್ಣವರ್ಣರಂಜಿತವಾಗಿರುವದು. ದೇಹಜ್ಯೋತಿಯೂ ಲಾವಣ್ಯ ಮಾಧುರಿಯೂ ಆ ಅಂಧಕಾರದಲ್ಲಿ ಮುಳುಗಿ ಹೋಗಿರುವವು. ಅಗ್ನಿಯು ದೇಹವನ್ನು ವಿದಗ್ಧಗೊಳಿಸಿರುವದು. ಇನ್ನು ಕೇವಲ ಭಸ್ಮವು ಮಾತ್ರ ಉಳಿದಿದೆ. ನದೀಜಲವು ಬತ್ತಿಹೋಗಿ, ಕೇವಲ ಅದರ ರೇಖೆಯು ಮಾತ್ರ ಉಳಿದಿರುವದು. ಫಲಪುಷ್ಪಾದಿಗಳು ಉದುರಿ ಹೋಗಿರುವವು; ಇನ್ನು ಕೇವಲ ನೀರಸವಾದ ಪತ್ರಹೀನ ಶುಷ್ಕವೃಕ್ಷವು ನಿಂತುಹೋಗಿರುವದು. ಪ್ರಭೋ, ಇನ್ನು ನನ್ನಲ್ಲಿ ಉಳಿದಿರುವದೇನು? ನನ್ನ ರೂಪರಸಗಂಧಗಳು ಹೊರಟು ಹೋಗಿ, ನಿರ್ವಾಣೋನ್ಮುಖ ಜೀವನದೀಪವು ಮಾತ್ರ ಉಳಿದುಕೊಂಡಿದೆ. ನಾಥರೆ, ಆ ದೀಪನಿರ್ವಾಣಕ್ಕಾದರೂ

ಬಹಳ ವೇಳೆ ಹಿಡಿಯಲಿಕ್ಕಿಲ್ಲ. ಅಂದಮೇಲೆ ನನ್ನ ವಾತ್ಸಲ್ಯದ ಕುಮಾರನಾದ ಅಮರಸಿಂಹನನ್ನು ಹೇಗೆ ಕಣ್ಣುತುಂಬ ನೋಡುವೆನು? ತಾಯಿಯು ಮರಣೋನ್ಮುಖಳಾದಾಗ ಮಗನು ಬಳಿಯಲ್ಲಿರಬಾರದೆಂದರೆ ಇದೆಂತಹ ದೈವ ದುರ್ವಿಲಾಸವು!"

ಮಾಯಾದೇವಿಯ ಮುಖದಿಂದ ಮುಂದೆ ಮಾತುಗಳು ಹೊರಡದಾದವು. ಅವಳು ಕ್ಷೀಣ ದೃಷ್ಟಿಯಿಂದ ನಾಥನ ಮುಖವನ್ನು ನೋಡುತ್ತ ಮಲಗಿದಳು. ಪತ್ನಿಯ ಹೃದಯದ್ರಾವಕ ಮಾತುಗಳನ್ನು ಕೇಳಿ ದಿಲೀಪಸಿಂಹನು ಕ್ಲೇಶಗೊಂಡನು. ಆಗ ಅವನು:—"ಮಾಯಾ, ನೀನು ನನ್ನನ್ನು ಬಿಟ್ಟು ಪರಲೋಕಕ್ಕೆ ಹೇಗೆ ಹೋಗುವೆ? ನಾನು ನಿನ್ನೊಬ್ಬಳನ್ನೇ ಎಂದಿಗೂ ಹೋಗಗೊಡೆನು ಇಬ್ಬರ ಅಂತಃಕರಣಗಳೂ ಒಂದಾಗಿರುವದರಿಂದ ನನ್ನ ಸರ್ವಾಂಗದಲ್ಲಿ ನೀನು ವ್ಯಾಪಿಸಿರುವೆ. ನನ್ನ ಜೀವನದೀಪವು ನಿನ್ನ ಪ್ರೇಮದಿಂದ ಉರಿಯತೊಡಗಿದೆ. ನಿನ್ನ ಹೃದಯಜ್ಯೋತಿಯು ನೊಂದಿದ ಮೇಲೆ ನನ್ನ ಜೀವನವು ಹೇಗೆ ಉಳಿಯುವದು? ನಾಶವಾಗುವದಿದ್ದರೆ ಎರಡೂ ದೀಪಗಳು ಒಮ್ಮೆಲೆ ನಾಶವಾಗಲಿ!"

ಪತಿಯ ಅಕೃತ್ರಿಮವಾದ ಪ್ರೇಮವಾಣಿಯಿಂದ ಮೃತಪ್ರಾಯಳಾದ ಮಾಯಾದೇವಿಗೆ ಅಮೃತಸಿಂಚನ ಮಾಡಿದಂತಾಯಿತು. ಆನಂದೋದ್ರೇಕದಿಂದ ಅವಳ ಕಂಠವು ಬಿಗಿಯಿತು. ಹೃದಯವು ಅಪಾರವಾದ ಆನಂದವನ್ನು ತುಂಬಿಕೊಂಡಿರಲಿಕ್ಕೆ ಅಸಮರ್ಥವಾಯಿತು. ಹೆಚ್ಚಾದ ಆನಂದವು ನಯನಪಥದಿಂದ ಅಶ್ರುರೂಪವಾಗಿ ಹೊರಬೀಳತೊಡಗಿತು.

ಇಬ್ಬರೂ ಬಹಳ ವೇಳೆಯ ವರೆಗೆ ಮೌನವಾಗಿದ್ದರು. ಹೃದಯದಲ್ಲಿ ಕಲರವವು ನಡೆದಿತ್ತು; ಆದರೆ ಅದು ನೀರವವಾಗಿತ್ತು. ಹೃದಯಾಕಾಶದಲ್ಲಿ ಬಿರುಗಾಳಿಯು ಬಿಟ್ಟಿತ್ತು; ಆದರೆ ಅದು ಶಬ್ದಹೀನವಾಗಿತ್ತು.

ಅಷ್ಟರಲ್ಲಿ ಕುದುರೆಗಳ ಖುರಪುಟಧ್ವನಿಯು ಕೇಳತೊಡಗಿತು. ಆಗ ಮಾಯಾದೇವಿಯು ದಿಗಿಲುಗೊಂಡು:—"ಇದೇನು?..........."

"ಏನು ಮಾಯಾ?"

"ಕುದುರೆಗಳ ಖುರಪುಟ ಧ್ವನಿಯು ಕೇಳಬರತೊಡಗಿದೆ. ನನ್ನ ಅಮರನು ಬರುತ್ತಿರಬಹುದು. ಹೋಗಿರಿ, ಹೋಗಿರಿ. ಬೇಗನೆ ಹೋಗಿ ತಲೆಬಾಗಿಲ ತೆಗೆದು ಅಮರನನ್ನು ಅಪ್ಪಿಕೊಂಡು ಇಲ್ಲಿಗೆ ಕರೆತನ್ನಿರಿ."

ಕುದುರೆಗಳ ಖುರಪುಟ ಧ್ವನಿಯು ದಿಲೀಪಸಿಂಹನಿಗಾದರೂ ಕೇಳಿತು. ಕೂಡಲೆ ಅವನು ಎದ್ದು ಹೋಗಿ ಮಹಾದ್ವಾರವನ್ನು ತೆರೆದು ಅಮರನ ಆಗಮನವನ್ನು ನಿರೀಕ್ಷಿಸುತ್ತ ನಿಂತನು; ಆದರೆ ಅಮರಪ್ರಸಾದನು ಜನ ಸಮುದಾಯದಲ್ಲಿ ಎಲ್ಲಿಯೂ ಕಾಣಲಿಲ್ಲ. ದಿಲೀಪಸಿಂಹನು ನಾಲ್ಕೂ ಕಡೆಗೆ ನೋಡತೊಡಗಿದನು; ಆದರೆ ಅವನಿಗೆ ಬೇಕಾದ ವ್ಯಕ್ತಿಯು ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲ ಕೂಡಲೆ ದಿಲೀಪಸಿಂಹನು ನಿರಾಶೆಯಿಂದಲೂ ಕ್ರೋಧದಿಂದಲೂ ಕಾಲು ನೆಲಕ್ಕಪ್ಪಳಿಸಿದನು. ತನ್ನ ಎರಡೂ ಕೈಗಳಿಂದ ಎದೆ ಎದೆ ಬಡಿದು ಕೊಳ್ಳುತ್ತ ಕ್ರುದ್ಧವಾಣಿಯಿಂದ:—"ದೇವಾ! ನಿನ್ನ ಆಟವು ನನಗೆ ಗೊತ್ತುಂಟು. ನಿನ್ನಂತಹ ಕಠೋರನೂ, ನಿರ್ಮಮನೂ, ನಿರ್ದಯನೂ ಜಗತ್ತಿನಲ್ಲಿ ಮತ್ತಾರೂ ಇಲ್ಲ. ಇನ್ನು ಮೇಲೆ ನಿನ್ನ ಹೆಸರನ್ನೂ ಧರ್ಮದ ಹೆಸರನ್ನೂ ಎಂದೂ ಎತ್ತುವದಿಲ್ಲ. ಸಾಕು, ಸಾಕು. ಇನ್ನು ದೇವರು ಸಾಕು; ಧರ್ಮವು ಸಾಕು. ಈಗ ಕೇವಲ ನಿನ್ನ ಹೆಸರು ಉಳಿದಿರುವದು. ಕಾರ್ಯವು ಮಾತ್ರ ಏನೂ ಇಲ್ಲ. ನೀನು ಮಿಥ್ಯನಿರುವೆ!"

"ಇಂತಹ ನೈಘೃಣ್ಯವಾದ ಮಾತುಗಳನ್ನಾಡಬೇಡ ಮಗೂ!"

ದಿಲೀಪಸಿಂಹನು ತಿರುಗಿ ನೋಡಲು, ಬಳಿಯಲ್ಲಿಯೆ ವೃದ್ಧ ಯಾದವ ಲಾಲನು ಬಂದು ನಿಂತಿದ್ದನು.

ಯಾದವಲಾಲನು ರಾಜಮಹಾಲಿನೊಳಗಿನ ಸಣ್ಣವರಿಗೂ ದೊಡ್ಡವರಿಗೂ ಕೂಡಿಯೇ ಅಜ್ಜನಾಗಿದ್ದನು. ಎಲ್ಲರೂ ಅವನನ್ನು ಅಜ್ಜನೆಂದು ಸಂಬೋಧಿಸುತ್ತಿದ್ದರು. ಅವನು ಮಹಾನುಭಾವನಿದ್ದುದರಿಂದ ನಾಗರಿಕರು ಅವನಲ್ಲಿ ಭಕ್ತಿ-ಶ್ರದ್ಧೆಗಳನ್ನಿರಿಸಿದ್ದರು. ಯಾದವಲಾಲನು ದುಃಖಿತ ಹೃದಯಿಗಳನ್ನು ಸಂತೈಸುತ್ತಿದ್ದನು. ಜನರು ಸುಖದಲ್ಲಿರಬೇಕೆಂದು ಅವನು ಯಾವಾಗಲೂ ದೇವರನ್ನು ಭಜಿಸುತ್ತಿದ್ದನು. ಅವನ ಆಗಮನದಿಂದ ವಿಪದ್ಗ್ರಸ್ತರು ಸುಖಶಾಂತಿಗಳನ್ನು ಹೊಂದುತ್ತಿದ್ದರು. ಆದರಣೀಯನೂ ಸರ್ವಗುಣಾಲಂಕೃತನೂ ಆದ ಯಾದವಲಾಲನನ್ನು ನೋಡಿದ ಕೂಡಲೆ ಕ್ಷೋಭೆಗೊಂಡ ದಿಲೀಪಸಿಂಹನ ಹೃದಯವು ಸ್ವಲ್ಪ ಶಾಂತವಾಯಿತು. ಆಗ ಅವನು:— "ಅಜ್ಜಾ, ಮನುಷ್ಯನ ಧೈರ್ಯವು ಆಕಾಶದಂತೆ ವಿಸ್ತೃತವೂ ಸಮುದ್ರದಂತೆ ಅಸೀಮವೂ ಇರುವದಿಲ್ಲ. ಪೃಥ್ವಿಯು ನಿರೋಪಹೊಂದಲಿಚ್ಛಿಸುವ ಭಗ್ನ ಹೃದಯಿಯಾದ ನಾನು ಇನ್ನೂ ಎಷ್ಟೆಂದು ಸಹನ ಮಾಡಲಿ?"

"ಏನಾಗಿದೆ ದಿಲೀಪ? ಮನಸ್ಸು ಇಷ್ಟೇಕೆ ಉದ್ವಿಗ್ನವಾಗಿರುವದು? ನಿನ್ನ ಪತ್ನಿಯು ಚನ್ನಾಗಿರುವಳೆ?"

"ಇನ್ನೂ ಜೀವಿಸಿರುವಳು; ಆದರೆ ಇನ್ನು ಮೇಲೆ ಹೆಚ್ಚು ವೇಳೆ ಬದುಕುವಂತಿಲ್ಲ. ಅಮರನು ಬಂದಿದ್ದರೆ ಒಂದೆರಡು ದಿನ ಬದುಕುತ್ತಿದ್ದಳೋ-ಹೇಗೋ? ವಿಪದ್ಗ್ರಸ್ತ ವ್ಯಕ್ತಿಗಳು ಮೇಲಿಂದ ಮೇಲೆ ಪರಮಾತ್ಮನನ್ನು ಭಜಿಸುತ್ತಿರುವಂತೆ, ಮಾಯೆಯು ಯಾವಾಗಲೂ ಅಮರ-ಅಮರನೆಂದು ಬಡಬಡಿಸುತ್ತಿರುವಳು. ಅವಳ ನೇತ್ರಗಳಿಂದ ಅವಿಚಲವಾದ ಅಶ್ರುಧಾರೆಯು ಹರಿಯುತ್ತಿರುವದು. ನಡುನಡುವೆ ಮರ್ಮಭೇದಿಯಾದ ದೀರ್ಘನಿಶ್ವಾಸ ಪರಿತ್ಯಾಗ ಮಾಡುತ್ತಿರುವಳು. ಅವಳ ಮಲಿನವೂ ಕರುಣಾಪೂರ್ಣವೂ ಆದ ಸ್ಥಿತಿಯನ್ನು ನೋಡಿ ನನ್ನ ಎದೆಯೊಡೆದಿರುವದು. ಖುರಪುಟ ಧ್ವನಿಯನ್ನು ಕೇಳಿ ಅಮರನ ಆಗಮನವಾಗಬಹುದೆಂಬ ಆತುರತೆಯಿಂದ ಇಲ್ಲಿಗೆ ಬಂದೆನು; ಆದರೆ ಅವನು ಬರಲಿಲ್ಲ. ಪುತ್ರನ ಆಗಮನವಾಗುವದೆಂಬ ಸಂಭ್ರಮದಿಂದ ಜೀವಹಿಡಿದಿರುವ ನನ್ನ ಪತ್ನಿಯ ಬಳಿಗೆ ಹೋಗಿ ನಾನು ಏನೆಂದು ಹೇಳಲಿ? ಅಮರನು ಯಾಕೆ ಬರಲಿಲ್ಲವೆಂದು ಕೇಳಿದರೆ ಏನು ಉಸುರಲಿ? ದುಃಖಕಾತರಳಾದ ನನ್ನ ಪತ್ನಿಯನ್ನು ನೋಡಿ ಹೇಗೆ ಸಹಿಸಲಿ?"

"ಸಹಿಸಬೇಕು; ಮಗೂ, ಎಲ್ಲವನ್ನೂ ಸಹಿಸಬೇಕು. ಸಹನಶೀಲತೆಯಿಂದ ಮನುಷ್ಯನು ಮನುಷ್ಯತ್ವ ಹೊಂದುವನು. ವಿದ್ಯಾರ್ಥಿಯು ಶಿಕ್ಷಕನ ತಾಡನ ಮೊದಲಾದ ಅಪಮಾನಗಳನ್ನು ಸಹಿಸುತ್ತ, ಎಷ್ಟೋ ಸಾರೆ ವಿಫಲ ಹೊಂದಿ, ಮತ್ತೆ ಮತ್ತೆ ಪ್ರಯತ್ನ ಮಾಡುತ್ತ ವಿದ್ಯಾಲಾಭ ಹೊಂದುವನು. ಮನುಷ್ಯನು ನೂರಾರು ಶಸ್ತ್ರಗಳಿಂದ ದೇಹವನ್ನು ಕ್ಷತವಿಕ್ಷತಗೊಳಿಸಿ, ದೇಹದೊಳಗಿನ ರಕ್ತವನ್ನು ಹರಿಸಿ ಯೋಧನಾಗುವನು. ಪರಿಶ್ರಮದಿಂದಲೂ, ಸಾಧನದಿಂದಲೂ, ಸಮಾಲೋಚಕರ ತಪ್ತಲೋಹಸಮವಾದ ಟೀಕೆಗಳಿಂದಲೂ ಜರ್ಜರಿತನಾಗಿ ಕವಿಯಾಗುವನು. ಈ ಎಲ್ಲದರ ಮೂಲದಲ್ಲಿ ಧೈರ್ಯರೂಪವಾದ ಮಹಾಪರೀಕ್ಷೆಯುಂಟು. ಶಿಕ್ಷಕರು ಅಪಮಾನ ಮಾಡುವದರಿಂದ ವಿದ್ಯಾರ್ಥಿಯು ಅಧೀರನಾದರೆ, ಶಸ್ತ್ರಗಳ ಯಾತನೆಯನ್ನು ಯೋಧನು ಸಹಿಸದಿದ್ದರೆ, ಒಂದು ಸಾರೆ ವಿಫಲತೆ ಹೊಂದಿದ್ದಕ್ಕಾಗಿ ಕವಿಯು ಲೆಕ್ಕಣಿಕೆಯನ್ನು ಕೆಳಗಿಟ್ಟರೆ ಅವರು ಸಂಸಾರದಲ್ಲಿ ಮನುಷ್ಯರೆಂದೆನಿಸಿಕೊಳ್ಳಲಿಕ್ಕೆ ಅನರ್ಹರಾಗುವರು. ಮನುಷ್ಯನು ಧೈರ್ಯದಿಂದ ಕರ್ತವ್ಯದಕ್ಷನಾಗಬೇಕು.

ಎಂತಹ ಪ್ರಸಂಗದಲ್ಲಿಯೂ ಅಳ್ಕೊಡೆಯಬಾರದು. ಯಾವನು ವಜ್ರಸಮ ಕಠೋರವಾದ ವಿಪತ್ತಿಗೆ ಎದೆಗೊಡುವನೋ, ಯಾವನು ನೂರಾರು ಪ್ರಲೋಭನಗಳನ್ನು ಅವಿಚಲಿತ ಚಿತ್ತದಿಂದ ಪರಿಹಾರ ಮಾಡಿಕೊಳ್ಳಲಿಕ್ಕೆ ಸಮರ್ಥನಾಗುವನೋ, ಐಶ್ವರ್ಯವಿದ್ದ ಮಾತ್ರದಿಂದ ಕೈಲಾಗದವನಾಗದೆ, ಅದೇ ಐಶ್ವರ್ಯದಿಂದ ಯಾವನು ತನ್ನ ಸ್ವಾಮಿತ್ವವನ್ನು ನಡೆಯಿಸುವನೋ, ಎಷ್ಟೋ ದುಃಖ-ಕ್ಲೇಶಗಳನ್ನು ಪ್ರಸನ್ನತೆಯಿಂದ ಯಾವನು ಸಹಿಸುವನೋ ಅವನು ಮನುಷ್ಯನು; ಅವನು ಪರಮಾತ್ಮನ ಪ್ರೀತಿಯ ಮಗನು. ಅವನಿಗೆ ಸಿದ್ಧಿ-ಕೀರ್ತಿಗಳು ಬಂಧು-ಭಗಿನಿಯರಾಗುವರು."

ಯಾದವಲಾಲನು ಗಂಭೀರಭಾವದಿಂದ ದಿಲೀಪಸಿಂಹನಿಗೆ ಉಪದೇಶಿಸುತ್ತಿದ್ದನು. ದಿಲೀಪಸಿಂಹನಾದರೂ ಅವನ ಮಾತುಗಳನ್ನು ಲಕ್ಷ್ಯಗೊಟ್ಟು ಕೇಳತೊಡಗಿದ್ದನು. ಅಷ್ಟರಲ್ಲಿ ದಿಲೀಪಸಿಂಹನಿಗೆ ಕುದುರೆಗಳ ಖುರಪುಟಧ್ವನಿಯು ಕೇಳಬರಹತ್ತಿತು. ಆಗ ಅವನು ವಿಸ್ಮಯದಿಂದ;—"ಅಜ್ಜಾ, ಮತ್ತೆ ಕುದುರೆಗಳ ಖುರಪುಟಧ್ವನಿಯು ಕೇಳುತ್ತಿರುವದಲ್ಲವೆ?"

ಯಾದವಲಾಲನು ಸ್ವಲ್ಪ ಲಕ್ಷ್ಯಗೊಟ್ಟು-"ಹೌದು, ಕೇಳುತ್ತಿರುವದು"

'ರಮಣಿಯ ಕಂಠಸ್ವರದೊಡನೆ ಶಸ್ತ್ರಗಳ ಝಣತ್ಕಾರವು ಕೇಳುತ್ತಿದೆ!" ದಿಲೀಪಸಿಂಹನು ವಿಸ್ಮಿತಧ್ವನಿಯಿಂದ ನುಡಿದನು.

"ಈ ಶಬ್ದವು ಬಹಳ ಮಾಡಿ ನಮ್ಮ ಪ್ರಭುಗಳಾದ ರಾಜಾ ಹರಿನಾರಾಯಣರ ಅಟ್ಟಾಲಿಕೆಯಿಂದ ಕೇಳಬರುವಂತಿದೆ."

"ನನ್ನ ಅನುಮಾನವಾದರೂ ಹೀಗೆಯೇ ಇರುವದು."

"ರಮಣಿಯ ಕಂಠಸ್ವರವು ಪ್ರಭುಕನ್ಯೆಯಾದ ಊರ್ಮಿಳಾದೇವಿಯ ಸ್ವರದಂತಿರುವದು."

"ಒಮ್ಮೆಲೆ ಅಶ್ವಾರೋಹಿಗಳು ಎಲ್ಲಿಂದ ಬಂದಿರಬಹುದು? ಒಂದು ವೇಳೆ ಪ್ರಭುಗಳ ಆಗಮನವಾಗಿರಬಹುದೇ?"

"ಪ್ರಭುಗಳ ಆಗಮನದಿಂದ ಶಸ್ತ್ರಗಳ ಝಣತ್ಕಾರವಾಗುತ್ತಿರುವ ಕಾರಣವೇನು? ಪ್ರಭುಕುಮಾರಿಯ ಕಾತರ ಧ್ವನಿಯು ಕೇಳುವದೇಕೆ? ಪ್ರಭುಗಳ ಬರುವಿಕೆಯಿಂದ ಆನಂದ ಧ್ವನಿಯು ಕೇಳತಕ್ಕದ್ದು; ಆದರೆ ಈ ಕೋಲಾಹಲವೇಕೆ? ರಾಜಪ್ರಾಸಾದದಲ್ಲಿ ನಾಲ್ಕೆಂಟು ಜನ ಕಾವಲುಗಾರರ ಹೊರತು ಮತ್ತಾರೂ ಇಲ್ಲ. ಪ್ರಭುಗಳು ರಾಜಪ್ರಾಸಾದದ ಹಾಗು ಊರ್ಮಿಳಾ

ದೇವಿಯ ರಕ್ಷಣೆಯ ಭಾರವನ್ನು ನನ್ನ ಮೇಲೆ ಅರ್ಪಿಸಿ, ನಿಶ್ಚಿಂತರಾಗಿ ಯುದ್ಧಕ್ಷೇತ್ರಕ್ಕೆ ಹೋಗಿರುವರು; ಆದರೆ ಮೃತಪ್ರಾಯಳಾದ ಪತ್ನಿಯನ್ನು ತ್ಯಜಿಸಿ ರಾಜಕನ್ಯೆಯ ಯೋಗಕ್ಷೇಮಕ್ಕಾಗಿ ನನ್ನಿಂದ ಹೋಗುವದಾಗುವದಿಲ್ಲ. ಇಗೋ, ಕೇಳಿದಿರಾ? ಪ್ರಭುಕುಮಾರಿಯ ಕಾತರಧ್ವನಿಯಿಂದ ವಿಪತ್ತಿನ ಸಮಾಚಾರವು ವ್ಯಕ್ತವಾಗುತ್ತಲಿರುವದು. ನಾನು ರಜಪುತನಿರುವೆನು. ಪ್ರಭುವಿನ ಅನ್ನದಿಂದ ಈ ದೇಹವು ರಕ್ಷಿತವಾಗಿರುವದು. ಒಂದು ಕಡೆಗೆ ಪ್ರಭುಕನ್ಯೆಯ ರಕ್ಷಣೆ ಮಾಡಬೇಕೆಂದು ಧರ್ಮವು ಕೂಗುತ್ತಿರುವದು; ಒಂದು ಕಡೆಗೆ ಮೃತ್ಯುಪಥವನ್ನರಸುತ್ತಿರುವ ಪತ್ನಿಯಿರುವಳು. ಈ ಎರಡರಲ್ಲಿ ಯಾವದು ಪ್ರಾಪ್ತಕರ್ತವ್ಯವಾಗಿರುವದು? ಏನು ಮಾಡಲಿ? ಯಾವ ದಾರಿಯನ್ನು ಹಿಡಿಯಲಿ? ಈ ಸಂಕಟ ಪ್ರಸಂಗದಲ್ಲಿ ಈ ಪ್ರಶ್ನೆಯ ಮೀಮಾಂಸೆಯನ್ನು ಹೇಗೆ ಮಾಡಲಿ? ನೀವಾದರೂ ನನಗೆ ಮಾರ್ಗದರ್ಶಕರಾಗಿರಿ.''

ದಿಲೀಪಸಿಂಹನೂ ಯಾದವಲಾಲನೂ ಈ ವಿಷಯವನ್ನು ಮಾತಾಡುತ್ತ ರುಗ್ಣಶಯ್ಯಾಶಾಯಿಯಾಗಿದ್ದ ಮಾಯಾದೇವಿಯ ಬಳಿಗೆ ಬಂದರು. ಮಾಯಾದೇವಿಯು ಅವರ ಮಾತುಗಳನ್ನು ಕೇಳಿ, ಕ್ಷೀಣವೂ ಮೃದುವೂ ಆದ ವಾಣಿಯಿಂದ:—''ನಾನು ನಿಮಗೆ ಮಾರ್ಗದರ್ಶಕಳಾಗುವೆನು. ನೀವು ಯಾವಾಗಲೂ ಪರಮಾತ್ಮನ ನಿಗ್ರಹಕ್ಕೊಳಗಾಗದೆ ಅನುಗ್ರಹ ಹೊಂದಿರಿ. ನೀವು ಕ್ಷತ್ರಿಯ ಕುಲಸಂಭೂತರಾಗಿದ್ದರೆ, ಕ್ಷತ್ರಿಯರ ಉಜ್ವಲವಾದ ಇತಿಹಾಸವನ್ನು ಮರೆತಿರದಿದ್ದರೆ, ಕೃತಘ್ನತೆಯ ಘನಘೋರ ಕೃಷ್ಣವರ್ಣದಿಂದ ಪವಿತ್ರಾತ್ಮವನ್ನು ಕಲುಷಿತಗೊಳಿಸಲಿಕ್ಕೆ ಇಚ್ಛಿಸದಿದ್ದರೆ, ರಜಪುತರ ಹೆಸರಿಗೆ ಕುಂದು ತರಲಿಕ್ಕೆ ಯತ್ನಿಸದಿದ್ದರೆ ವಿಪದ್ಗ್ರಸ್ತಳಾದ ಪ್ರಭುಕನ್ಯೆಯ ಸಹಾಯಕ್ಕಾಗಿ ಇದೇ ಕ್ಷಣದಲ್ಲಿ ಹೊರಡಿರಿ. ಕೀರ್ತಿರೂಪಿಯಾದ ಮುಕುಟದಿಂದ ಮಸ್ತಕವೂ, ಯಶೋರೂಪಿಯಾದ ಅಲಂಕಾರದಿಂದ ದೇಹವೂ, ಧರ್ಮದ ಆ ಭೂಷಣಗಳಿಂದ ಆತ್ಮವೂ ಅಲಂಕೃತವಾದರೆ, ನಿಮ್ಮ ನಾಮಸ್ಮರಣೆಯಿಂದ ಮನುಷ್ಯನಲ್ಲ ನವಚೈತನ್ಯವು ಉದಯಿಸುವದು; ಧಾರ್ಮಿಕ ತೇಜದ ಆವಿರ್ಭಾವವಾಗುವದು. ಹೋಗಿರಿ; ಸ್ವಾಮಿ, ಹೋಗಿರಿ; ಈಗಿಂದೀಗಲೆ ಹೋಗಿರಿ. ಲಕ್ಷಾವಧಿ ಸ್ತ್ರೀಯರಿಗಿಂತಲೂ, ಲಕ್ಷಾವಧಿ ಸಾಮ್ರಾಜ್ಯಗಳಿಗಿಂತಲೂ, ಸ್ವರ್ಗಕ್ಕಿಂತಲೂ ವಿಪದ್ಗ್ರಸ್ತರನ್ನು ರಕ್ಷಿಸುವವರಲ್ಲಿ ಹೆಚ್ಚಿನ ಶ್ರೇಯಸ್ಸಿರುವದು. ಹೋಗಿರಿ; ಸ್ವಾಮಿ, ಹೋಗಿರಿ. ವಿದ್ಯುದ್ವೇಗದಿಂದ ಹೋಗಿರಿ!'.

ಮಾಯಾದೇವಿಯ ಸ್ಫೂರ್ತಿದಾಯಕವೂ ಜ್ಞಾನಪ್ರದವೂ ಆದ ಭಾಷಣವನ್ನು ಕೇಳಿ ದಿಲೀಪಸಿಂಹನ ಭ್ರಮನಿರಸನವಾಗಿ, ಆದ್ಯ ಕರ್ತವ್ಯವು ಯಾವದೆಂಬದು ಚನ್ನಾಗಿ ಮನವರಿಕೆಯಾಯಿತು. ಅವನು ಪತ್ನಿಯ ಉದಾತ್ತ ವಿಚಾರಗಳನ್ನು ಕೇಳಿ ಬೆರಗಾದನು. ಆಗ ಅವನು ಆನಂದಮಯನಾಗಿ: "ಆದರ್ಶರೂಪಿಣಿಯೆ, ಕರ್ತವ್ಯಧರ್ಮಜ್ಞಳಾದ ಸುಗೃಹಣಿಯೆ, ನಿನ್ನ ಗುಣಗಳ ಬಗ್ಗೆ ಎಷ್ಟು ಧನ್ಯವಾದನ ಮಾಡಿದರೂ ಕಡಿಮೆಯೇ ಸರಿ"

ಪತಿಯ ಧನ್ಯೋದ್ಗಾರಗಳನ್ನು ಕೇಳಿ ಮಾಯಾದೇವಿಗೆ ಸಂಭ್ರಮವಾಯಿತು. ಅವಳು ಏನೂ ಮಾತಾಡದೆ ಪತಿಯನ್ನು ಪ್ರೇಮಪೂರ್ಣ ದೃಷ್ಟಿಯಿಂದ ನೋಡತೊಡಗಿದಳು. ಆಗ ದಿಲೀಪಸಿಂಹನು ಯಾವವಲಾಲನನ್ನು ಕುರಿತು:—"ಅಜ್ಞಾ, ನಾನು ಹೋಗುವೆನು. ನಿಮ್ಮ ಕೈಯಲ್ಲಿ ನಾನು ನನ್ನ ಜೀವನದೀಪವನ್ನು ಸಮರ್ಪಿಸಿರುವೆನು. ಇದನ್ನು ನೀವು ನೊಂದಗೊಡಬಾರದು."

ಒಂದು ಉನ್ನತವಾದ ದಂಡವನ್ನು ಕೈಯಲ್ಲಿ ತೆಗೆದುಕೊಂಡು ದಿಲೀಪಸಿಂಹನು ವಾಯುವೇಗದಿಂದ ತೆರಳಿದನು.

---

## ೩ನೆಯ ಪರಿಚ್ಛೇದ.

"ನೀವು ಯಾರು?"

"ನಾನೊಬ್ಬ ಪಾಂಥಸ್ಥನು"

"ಇಂತಹ ನಿಶೀಥ ಸಮಯದಲ್ಲಿ ಇಲ್ಲಿಗೆ ಬಂದ ಕಾರಣವೇನು?"

"ಆಶ್ರಯಾಪೇಕ್ಷಿಯಾಗಿ"

"ಇಲ್ಲಿ ಆಶ್ರಯವು ದೊರೆಯಲಾರದು. ಹೋಗಿರಿ, ಬೇರೆ ಸ್ಥಳಕ್ಕೆ ಹೋಗಿರಿ."

ಕ್ರೋಧವುಳ್ಳವನಾದ ಪಾಂಥಸ್ಥನು ಕಾವಲುಗಾರನನ್ನು ಕುರಿತು:—"ನೀವು ಕ್ಷತ್ರಿಯರಿರುವಿರೇನು?"

"ಹೌದು, ನಾನು ಕ್ಷತ್ರಿಯನಿರುವೆನು."

"ನಿಮ್ಮ ಸ್ವಾಮಿಯು ಯಾರು?"

"ಹರಿನಾರಾಯಣರು."

"ನೀನು ನನ್ನದೊಂದು ಮಾತು ಕೇಳುವೆಯಾ?"

“ಕ್ಷತ್ರಿಯರು ಎಂದೂ ವಿಜಾತೀಯ ಜನರ ದಾಸ್ಯವನ್ನು ಸ್ವೀಕರಿಸುವದಿಲ್ಲ.”

“ಕ್ಷತ್ರಿಯರು ಅತಿಥಿಗಳನ್ನು ಎಂದೂ ವಿಮುಖರನ್ನು ಮಾಡುವದಿಲ್ಲ. ನಿಮ್ಮ ಒಡೆಯನು ಪರುಸಮಾನನಿರುವನು. ಅಂತೆಯೆ ಅವನು ತನ್ನ ಸೇವಕರನ್ನು ತನ್ನಂತೆ ಮಾಡಿಕೊಂಡಿರುವನು.”

“ಏನು? ಪಾಂಥಸ್ಥನೇ, ಇದೇನು ನುಡಿಯುತ್ತಿರುವೆ?” ಈ ಮಾತಿನೊಡನೆ ಕಾವಲುಗಾರನ ಖಡ್ಗವು ಒರೆಯಿಂದ ಹೊರಬಿದ್ದು ಚಂದ್ರಪ್ರಕಾಶದಲ್ಲಿ ಲಕಲಕಿಸಹತ್ತಿತು!

ಪಾಂಥಸ್ಥನು ಚಕಿತನಾಗಿ ನಾಲ್ಕು ಹೆಜ್ಜೆ ಹಿಂದೆ ಸರಿದನು.

ಉಕ್ಕುತ್ತಿರುವ ಕ್ರೋಧವನ್ನು ಬಿಗಿಹಿಡಿದು, ಕಾವಲುಗಾರನು:-“ನೀವು ಪಾಂಥಸ್ಥರಿರುವದರಿಂದ ಸಾವಧಾನದಿಂದ ಮಾತನಾಡಿರಿ. ಇನ್ನೊಮ್ಮೆ ನಿಮ್ಮ ಮುಖದಿಂದ ಇಂತಹ ಅನುಚಿತಭಾಷಣವು ಹೊರಬಿದ್ದರೆ ನಿಮ್ಮ ಶಿರಸ್ಸು ದೇಹದಲ್ಲಿರಲಾರದು. ನನ್ನ ಸ್ವಾಮಿಯು ಕ್ಷತ್ರಿಯನಿರುವನೋ-ಇಲ್ಲವೋ, ಅವನ ಸೇವಕರಲ್ಲಿ ಕ್ಷಾತ್ರತೇಜವು ಇರುವದೋ-ಇಲ್ಲವೋ ಎಂಬದನ್ನು ನಿಮ್ಮ ಶೋಣಿತವು ಭೂಮಿಯ ಮೇಲೆ ಬರೆದು ತಿಳಿಸೀತು!”

ಇದೇ ಸಮಯದಲ್ಲಿ ಉಪ್ಪರಿಗೆಯ ಕಿಟಕಿಯು ತೆರೆಯಲ್ಪಟ್ಟಿತು. ಪಾಂಥಸ್ಥನು ದೀಪಪ್ರಕಾಶದಲ್ಲಿ ಸೌಧಾಗ್ರದಲ್ಲಿರುವ ಒಬ್ಬ ಸುಂದರ ಬಾಲಿಕೆಯನ್ನು ಕಂಡನು; ಕನ್ನಿಕೆಯೂ ಪಾಂಥಸ್ಥನನ್ನು ನೋಡಿದಳು. ಆಗ ಕೋಗಿಲೆಗಿಂತಲೂ ಪ್ರತಿಮನೋಹರವಾದ ಕಂಠದಿಂದ ಬಾಲಿಕೆಯು:—“ಕಾವಲುಗಾರಾ”

“ತಾಯಿ!”

“ಇಷ್ಟು ರಾತ್ರಿಯಲ್ಲಿ ಯಾವರ ಗೊಂದಲವು ನಡೆದಿದೆ?”

“ಮಾತೆ, ಒಬ್ಬ ಪಾಂಥಸ್ಥನು ಪೀಡಿಸತೊಡಗಿರುವನು. ಹೊರಟು ಹೋಗಲಿಕ್ಕೆ ಹೇಳಿದರ ಹೋಗಲೊಲ್ಲನು.”

“ಪಾಂಥಸ್ಥರೇ, ನಿಮ್ಮ ಇಚ್ಛೆಯೇನಿರುವದು? ಆಶ್ರಯವು ಬೇಕೆ?” ಪಾಂತಸ್ಥನನ್ನು ಕೇಳಿದಳು

“ಆಶ್ರಯವು ಬೇಕಾಗಿಲ್ಲ.”

“ಮತ್ತೇನು ಬೇಕು?”

"ಒಂದು ವಿಷಯದಲ್ಲಿ ಶೋಧಿಸಬೇಕಾಗಿದೆ"

"ಯಾತರ ಶೋಧವು?"

"ಕೇಳಿದ ಮಾತಿಗೆ ಸತ್ಯವಾದ ಉತ್ತರವು ದೊರೆಯಬಹುದೇ? ಸುಳ್ಳು ಮಾತನ್ನು ಹೇಳಲಾಗದು"

"ರಜಪುತ ಕನ್ಯೆಯು ಎಂದೂ ಮಿಥ್ಯಾಭಾಷಣ ಮಾಡುವದಿಲ್ಲ. ನೀವು ಯುವನರಿರುವಿರಿ. ಅಂತೆಯೇ ಹೀಗೆ ಮಾತಾಡತೊಡಗಿರುವಿರಿ."

"ಹಾಗಾದರೆ ಸತ್ಯವನ್ನು ಹೇಳಿರಿ ಪಠಾಣಾಧಿಪತಿಯಾದ ದಾವುದಖಾನನಿಗೆ ನೀವು ಆಶ್ರಯವಿತ್ತಿರುವಿರಲ್ಲವೆ?"

"ಹೌದು"

ಅತಿಶಯವಾದ ವಿಸ್ಮಯವುಳ್ಳವನಾಗಿ ಪಾಂಥಸ್ಥನು:—"ಏನು? ನೀವು ಅವನಿಗೆ ಆಶ್ರಯಕೊಟ್ಟಿರುವಿರಾ?"

"ನಿಜವು. ಇದರಲ್ಲಿ ಸೋಜಿಗಗೊಳ್ಳುವಂತಹ ಸಂಗತಿಯೇನಿರುವದು? ರಜಪುತ ಪುರುಷರಾಗಲಿ ಸ್ತ್ರೀಯರಾಗಲಿ ಎಂದು ಶರಣಾಗತರನ್ನು ವಿಮುಖರನ್ನಾಗಿ ಮಾಡುವರೋ, ಅಂದಿನಿಂದ ಆಕಾಶದ ಗ್ರಹ-ನಕ್ಷತ್ರಗಳು ಎಂದೂ ಪ್ರಕಾಶಮಾನವಾಗಲಾರವು ಈ ಸಂಗತಿಯಿಂದ ನಿಮಗೆ ಪ್ರಯೋಜನವೇನು?"

"ಪ್ರಯೋಜನವುಂಟೆಂದೇ ತಿಳಿಯಿರಿ ನೀವು ಹಾಗಿಲ್ಲದಿದ್ದರೆ ಇಂತಹ ರಾತ್ರಿಯಲ್ಲಿ ನಿಮ್ಮೊಡನೆ ವಾದವಿವಾದ ಮಾಡುವದರ ಲಾಭವೇನು?"

"ಯಾವ ವಿಧದ ಪ್ರಯೋಜನವುಂಟು?"

"ನೀವು ನವಾಬ ದಾವುದಖಾನನನ್ನು ಬಿಡಲಿಕ್ಕೆ ಒಪ್ಪುವಿರೋ ಇಲ್ಲವೋ ಎಂಬದನ್ನು ತಿಳಿಯಲಿಚ್ಛಿಸಿರುವೆನು"

"ನೀವು ಪಾಂಥಸ್ಥರಿರುವಿರಿ ಹೀಗಿದ್ದು ಇಂತಹ ಪ್ರಶ್ನೆಯನ್ನು ವಿಚಾರಿಸಲಿಕ್ಕೆ ನಿಮಗೆ ಅಧಿಕಾರವೆಲ್ಲಿಂದ ಬಂತು? ನೀವು ಯಾರು?"

"ಮೊಗಲರ ಸಹಕಾರಿ ಸೇನಾಪತಿಯಾದ ರಾಜಾ ತೋಡರಮಲ್ಲನ ಅನುಚರನು."

"ಹಾಗಾದರೆ ನೀವು ನಿಮ್ಮ ಸ್ವಾಮಿಗಳಾದ ಮೊಗಲ ಸೇನಾಪತಿ ತೋಡರಮಲ್ಲರನ್ನು ಕಳುಹಿಸಿರಿ. ಈ ಮಾತಿನ ಉತ್ತರವನ್ನು ಅವರಿಗೇ ಕೊಡುವೆನು."

"ಹಾಗಾದರೆ ಉತ್ತರ ಕೊಡಿರಿ"

ಪಾಂಥಸ್ಥನು ಕೃತ್ರಿಮವಾದ ಶ್ವೇತವರ್ಣದ ಗಡ್ಡ-ಮೀಸೆಗಳನ್ನೂ ನೀಲವರ್ಣ ವಸ್ತ್ರದ ಆವರಣವನ್ನೂ ತೆಗೆದು ಚೆಲ್ಲಿದನು. ನೋಡನೋಡು ವಷ್ಟರಲ್ಲಿ ಪಾಂಥಸ್ಥನು ದೀಪ್ತಮಾರ್ತಂಡನಂತೆ ಪ್ರತಿಭಾಶಾಲಿಯೂ, ಶಸ್ತ್ರಾಸ್ತ್ರ ಸುಸಜ್ಜಿತ ಯುದ್ಧವೇಷಧಾರಿಯೂ, ವೀರಪುರುಷರಲ್ಲಿ ಪರಿಣತನೂ, ಬಲಿಷ್ಠನೂ ಆದನು. ಆಗ ಅವನು ಗಂಭೀರಸ್ವರದಿಂದ—"ನಾನೇ ರಾಜಾತೋಡರಮಲ್ಲನು! ಈಗ ಹೇಳಿರಿ, ನನ್ನ ಪ್ರಶ್ನೆಗೆ ಉತ್ತರವನ್ನು."

ಬಾಲಿಕೆಯು ನಿರ್ಭಯವಾಣಿಯಿಂದ:—"ನಾನು ಸ್ತ್ರೀಯಾದರೂ ನನ್ನಲ್ಲಿ ರಾಜಾತೋಡರಮಲ್ಲರಂತೆ ಹೀನಗುಣವು ಪ್ರವೇಶಿಸಲಾರದು, ಇದೇ ನನ್ನ ಉತ್ತರವು. ದೇಹದಲ್ಲಿ ಶೋಣಿತವು ವಾಸವಾಗಿರುವವರೆಗೆ ರಜಪುತರು ಶರಣಾಗತರನ್ನು ಪರಿತ್ಯಾಗ ಮಾಡುವದಿಲ್ಲ."

ಆ ಉತ್ತರವನ್ನು ಕೇಳಿ ತೋಡರಮಲ್ಲನು ಆಶ್ಚರ್ಯಚಕಿತನಾದನು. ಅಸಹಾಯ್ಯ ಸ್ಥಿತಿಯಲ್ಲಿದ್ದ ಒಬ್ಬ ಬಾಲಿಕೆಯ ಸಾಹಸವನ್ನು ನೋಡಿ, ತೇಜ ಗರ್ವಿತ ವಾಕ್ಯಗಳನ್ನು ಕೇಳಿ ಅವನ ಹೃದಯದಲ್ಲಿ ಅನಂತ ಧನ್ಯೋದ್ಗಾರಗಳು ಹೊರಡತೊಡಗಿದವು. ಅವನು ತನ್ನ ಮನೋವಿಕಾರವನ್ನು ವ್ಯಕ್ತಗೊಳಿಸದೆ, ಗಂಭೀರ ಸ್ವರದಿಂದ—"ಬಾಲಿಕೆ, ಹೀಗೆ ಗರ್ವಿಷ್ಠಳಾಗಬೇಡ. ಇನ್ನೂ ಚನ್ನಾಗಿ ಯೋಚಿಸಿ ಕೆಲಸ ಮಾಡು. ಮನಬಂಧಂತೆ ನಡೆದರೆ ವೃಥಾ ವಿಪತ್ತಿನಲ್ಲಿ ಬೀಳುವೆ."

"ಏನು? ನಾನು ವಿಚಾರಹೀನಳಾಗಿ ಮಾತಾಡತೊಡಗಿರುವೆನೆಂದು ತಿಳಿದಿರುವಿರಾ? ಧನಲೋಭದಿಂದ ನಾನು ನನ್ನ ವಿವೇಕವನ್ನು ಮೊಗಲರಿಗೆ ಮಾರಿಕೊಂಡಿಲ್ಲ. ವಿಪತ್ತು ನನ್ನ ಸಲುವಾಗಿ ಕಾಯ್ದುಕೊಂಡಿಲ್ಲ! ಅದು ನಿಮ್ಮ ಸಲುವಾಗಿ ಬಾಯಿತೆರೆದುಕೊಂಡು ಕುಳಿತಿದೆ. ನೀವು ದಾವುದಖಾನರನ್ನು ಸೆರೆಹಿಡಿದೊಯ್ಯದಿದ್ದರೆ ಬಾದಶಹನು ನನ್ನಮೇಲೆ ಕ್ರೋಧಗೊಳ್ಳುವದಿಲ್ಲ. ಕ್ರುದ್ಧನಾದ ಬಾದಶಹನು ನಿಮ್ಮ ಶಕ್ತಿಹೀನತೆಗಾಗಿ ನಿಮಗೆ ಬಾರುಕೋಲ ಹೊಡತವನ್ನು ಕೊಡುವನು; ವೇತನವನ್ನು ಮುಳುಗಿಸುವನು. ಮಹಾ ವೀರರೆ, ವಿಪತ್ತು ನನ್ನ ಸಲುವಾಗಿ ಇಲ್ಲ; ಅದು ನಿಮ್ಮ ಸಲುವಾಗಿ ಇರುವದೆಂದು ನಾನು ಹೇಳುತ್ತಿರುವ ಮಾತಿನ ಮರ್ಮವು ಇದೇ! ತಿಳಿಯಿತೆ?"

ನಿಶ್ಚಲವಾದ ಮೇರುವು ಚಲಿಸಹತ್ತಿತು. ರಾಜಾತೋಡರಮಲ್ಲನ ನೇತ್ರಗಳು ಕ್ರೋಧಾತಿರೇಕದಿಂದ ಆರಕ್ತವಾದವು. ಟೊಂಕದಲ್ಲಿ ಅಳಿದಾಡುತ್ತಿದ್ದ

ಖಡ್ಗವು ಧ್ವನಿಮಾಡತೊಡಗಿತು. ಅವನು ಒಳ್ಳೆಯ ಕಷ್ಟದಿಂದ ಸಂತಾಪವನ್ನು ತಡೆದು—"ಒಳ್ಳೆಯ ಮಾತಿನಿಂದ ದಾವುದಖಾನನನ್ನು ನನಗೆ ಸಮರ್ಪಿಸುವೆಯೋ, ಬಲಾತ್ಕಾರದಿಂದ ವಶಪಡಿಸಿಕೊಳ್ಳಬೇಕೋ?"

"ಸೇನಾಪತಿಗಳೇ, ಬಲಾತ್ಕಾರ ಮಾಡುವ ಶಕ್ತಿಯಿದ್ದರೆ ಇಷ್ಟು ವಿಲಂಬವೇಕೆ? ಛದ್ಮವೇಷವೇಕೆ? ಇಷ್ಟು ಕಂಠಶೋಷಣವೇಕೆ? ಬಲಪ್ರಯೋಗ ಮಾಡುವ ಇಚ್ಛೆಯಿದ್ದರೆ ಅವಶ್ಯವಾಗಿ ಮಾಡಬಹುದು. ನಿಮ್ಮ ಅಭಿರುಚಿಗೆ ನಾನು ಹೊರತಿಲ್ಲ; ಆದರೆ ಹೃದಯದಲ್ಲಿ ಪ್ರಾಣಸಂಚಾರವಾಗಿರುವವರೆಗೆ ದಾವುದಖಾನರನ್ನು ನಿಮ್ಮ ವಶದಲ್ಲಿ ಕೊಡುವದಿಲ್ಲವೆಂದು ಖಂಡಿತವಾಗಿ ತಿಳಿಯಿರಿ"

"ಒಳ್ಳೇದು!"

ತೋಡರಮಲ್ಲನು ತುತೂರಿಯನ್ನು ಊದಿದನು. ಅದೇ ಸಮಯದಲ್ಲಿ ಇಪ್ಪತ್ತೈದು ಜನ ಸಶಸ್ತ್ರರಾದ ರಜಪುತ ಅಶ್ವಾರೋಹಿಗಳು ಅವನ ಸಮೀಪಕ್ಕೆ ಬಂದು ಸನ್ಮಾನದಿಂದ ಅಭಿವಾದನಗಳನ್ನರ್ಪಿಸಿದರು. ತರುವಾಯ ಒಬ್ಬ ಯೋಧನು ಸುಸಜ್ಜಿತವಾದ ಕುದುರೆಯನ್ನು ತೆಗೆದುಕೊಂಡು ಸೇನಾಪತಿಯ ಬಳಿಗೆ ಬಂದನು. ಕೂಡಲೆ ಸೇನಾಪತಿಯು ಆ ಕುದುರೆಯನ್ನೇರಿದನು. ವೃಕ್ಷಗಳ ಅಂಧಕಾರದಿಂದ ಶುಭ್ರವಾದ ಚಂದ್ರಪ್ರಕಾಶದಲ್ಲಿ ಬಂದ ಕುದುರೆಗಳ ಹುಂಕಾರಕ್ಕೆ ನಾಲ್ಕೂ ದಿಕ್ಕುಗಳಲ್ಲಿ ಪ್ರತಿಧ್ವನಿಯು ಹೊರಟಿತು. ಅಶ್ವಾರೋಹಿಯಾದ ತೋಡರಮಲ್ಲನು ತನ್ನ ಸೈನಿಕರನ್ನು ಕುರಿತು:- "ಈ ಅಟ್ಟಾಲಿಕೆಯಲ್ಲಿ ನವಾಬ ದಾವುದಖಾನನು ಅಡಗಿಕೊಂಡು ಕುಳಿತಿರುವನು. ಅವನನ್ನು ಹುಡುಕಿ ತೆಗೆದುಕೊಂಡು ಬರ್ರಿ. ನಿಮಗೆ ಯಾರಾದರೂ ತೊಂದರೆಯನ್ನುಂಟು ಮಾಡಿದರೆ, ಶಸ್ತ್ರಪ್ರಯೋಗದಿಂದ ನಿಮ್ಮ ಹಾದಿಯನ್ನು ನಿರುಪಾಧಿಕ ಮಾಡಿಕೊಳ್ಳಿರಿ"

ಉಚ್ಚಕಂಠದಿಂದ ಅಟ್ಟಾಲಿಕೆಯಲ್ಲಿದ್ದ ಬಾಲಿಕೆಯು—"ವೇಣೂ!"

"ಮಾತೆ!"

"ನೀವು ಎಷ್ಟು ಜನ ಕಾವಲುಗಾರರಿರುವಿರಿ?"

"ತಾಯಿ, ಹತ್ತು ಜನರಿರುವೆವು."

"ಒಳ್ಳೇದು. ಈ ಜನರು ಒಳ್ಳೇ ಕೋಲಾಹಲವೆಬ್ಬಿಸುವಂತೆ ತೋರುವದು. ಇವರಿಗೆ ಚನ್ನಾಗಿ ಕೈ ತೋರಿಸಿರಿ. ರಜಪುತರ ಶೌರ್ಯದ ಗೋಡೆ

ಗಳಿಂದ ರಕ್ಷಿತವಾದ ಧರ್ಮಮಂದಿರವನ್ನು ಪ್ರವೇಶಿಸಲಿಕ್ಕೆ ಯಾವನ ಎದೆಯಿರುವದೋ ನೋಡೋಣ. ಖಡ್ಗಗಳನ್ನೊಗೆದು ದಂಡಗಳನ್ನು ತೆಗೆದುಕೊಳ್ಳಿರಿ. ನಿಮ್ಮಲ್ಲಿ ರಜಪುತ ರಕ್ತವಿದ್ದರೆ, ರಜಪುತರ ಶೌರ್ಯ-ಧೈರ್ಯಗಳು ವಾಸಿಸುತ್ತಿದ್ದರೆ ಒಬ್ಬನು ಹತ್ತು ಜನ ಮೊಗಲ ಸೈನಿಕರನ್ನು ಹೊಡೆಯುವಿರಿ. ವೇಣಾ, ನೀವೆಲ್ಲ ಕಾವಲುಗಾರರು ಬೇಗನೆ ಯುದ್ಧಕ್ಕೆ ಸಿದ್ಧರಾಗಿರಿ."

ವೇಣುವು ಒಂದು ದೊಡ್ಡ ದಂಡವನ್ನು ಕೈಯಲ್ಲಿ ತೆಗೆದುಕೊಂಡು—"ತಾಯಿ, ನೀವು ನಿಶ್ಚಿಂತರಾಗಿರಿ. ನಾವು ರಜಪುತ ಕುಲದವರಿರುವೆವು. ಪ್ರಾಣವು ದೇಹದಲ್ಲಿರುವವರೆಗೆ ನಾವು ಕಾದತಕ್ಕವರೇ." ಎಂದು ನುಡಿದು, ಉಳಿದ ಕಾವಲುಗಾರರಿಗೆ ಒಂದೊಂದು ದಂಡವನ್ನು ಕೊಟ್ಟು ಸಂಗ್ರಾಮಕ್ಕೆ ಅಣಿಮಾಡಿದನು. ಅನಂತರದಲ್ಲಿ ಅವನು ಮುಂದೆ ಬಂದು ತೋಡರಮಲ್ಲನ ಸೈನಿಕರೆದುರಿಗೆ ನಿಂತನು. ಅವನ ಅನುಚರರು ಬಳಿಯಲ್ಲಿಯೇ ಇದ್ದರು.

ರಾಜಾ ತೋಡರಮಲ್ಲನ ಆದೇಶಾನುಸಾರವಾಗಿ ಅವನ ಸೈನಿಕರು ವೇಣುವಿನ ಹಾಗು ಅವನ ಸಂಗಡಿಗರ ಮೇಲೆ ಆಕ್ರಮಣ ಮಾಡಿದರು. ದಂಡ-ಖಡ್ಗಗಳು ವೇಗದಿಂದ ಪ್ರಹರಿಸಲ್ಪಡತೊಡಗಿದವು. ದಂಡಗಳ ಭೀಷಣವಾದ ಹೊಡೆತದಿಂದ ಮೊಗಲ ಸೈನಿಕರ ಖಡ್ಗಗಳು ಭೂಮಿಗೆ ಬೀಳಹತ್ತಿದವು. ಈ ಪರಿಸ್ಥಿತಿಯನ್ನು ನೋಡಿ ತೋಡರಮಲ್ಲನ ಮುಖದಲ್ಲಿ ವಿಷಾದದ ಚಿಹ್ನವು ವ್ಯಕ್ತವಾಗಲಾರಂಭಿಸಿತು. ಮಹಾವೀರನೂ, ಮಹಾಧುರಂಧರನೂ, ಮಹಾ ಪರಾಕ್ರಮಿಯೂ, ಬಹು ಯುದ್ಧವಿಜಯಿಯೂ, ವೀರನೂ, ಪೂಜ್ಯನೂ ಆದ ತೋಡರಮಲ್ಲನು ಅತಿ ಸಾಮಾನ್ಯರಾದ ಹತ್ತು ಜನ ದಂಡಧಾರಿ ವೀರರ ಮಹಾ ವಿಕ್ರಮವನ್ನು ನೋಡಿ, ಆಶ್ಚರ್ಯಾನ್ವಿತನೂ ವಿಚಲಿತ ಹೃದಯಿಯೂ ಆದನು. ಇಷ್ಟಾದರೂ ಅವನು ತನ್ನ ಮನೋವಿಕಾರವನ್ನು ವ್ಯಕ್ತಪಡಿಸದೆ, ಆಕಾಶದಂತೆ ಗಂಭೀರತೆಯನ್ನು ಹೊಂದಿದನು ಉನ್ಮತ್ತ ಗಜದಂತೆಯೂ ಬಲಸಂಪನ್ನ ವ್ಯಾಗೇಂದ್ರನಂತೆಯೂ ನಿರ್ಭಯದಿಂದ ಕಾದತೊಡಗಿದ ಕಾವಲುಗಾರರು ಇನ್ನೂ ಬಹಳ ವೇಳೆಯವರೆಗೆ ತಮ್ಮ ಪ್ರಾಣಗಳನ್ನು ತುಚ್ಛೀಕರಿಸಿ ಯುದ್ಧಮಾಡಿದರೆ ನಿಶ್ಚಯವಾಗಿ ನಾನು ಪರಾಭೂತನಾಗುವೆನು; ಈ ಹತ್ತು ಜನ ಕಾವಲುಗಾರರಿಂದ ಪರಾಜಯ ಹೊಂದಿದರೆ ನನ್ನ ಅಪಕೀರ್ತಿಯು ದೇಶದಲ್ಲೆಲ್ಲ ವ್ಯಾಪಿಸಲ್ಪಟ್ಟು, ಜೀವನ ಸಫಲತೆಯ ಸೋಪಾನವು ಶತಚೂರ್ಣವಾಗಿ ಹೋಗುವದು, ಎಂದು ತೋಡರಮಲ್ಲನು

ಯೋಚಿಸತೊಡಗಿದನು. ಇನ್ನು ಮೇಲೆ ಸ್ವಸ್ಥವಾಗಿ ನಿಂತುಕೊಳ್ಳುವದರಲ್ಲಿ ಅರ್ಥವಿಲ್ಲೆಂದು ತಿಳಿದು, ಅವನು ಒಬ್ಬ ದಂಡಧಾರಿಯ ಮೇಲೆ ತನ್ನ ಕುದುರೆಯನ್ನು ಸಾಗಿಸಿದನು. ಕುದುರೆಯು ವಿದ್ಯುದ್ಗತಿಯಿಂದ ರಜಪುತ ವೀರನ ಮೇಲೆ ಸಾಗಿತು. ಹಾರಿತು. ಕುದುರೆಯ ಆಘಾತದಿಂದ ಆ ರಜಪುತನು ದೂರ ಸಿಡಿದು ಬಿದ್ದನು. ಮರಕ್ಷಣದಲ್ಲಿ ತೋಡರಮಲ್ಲನಿಂದ ಸಹಿತವಾಗಿ ಕುದುರೆಯೂ ನೆಲಕ್ಕೆ ಬಿತ್ತು. ತೋಡರಮಲ್ಲನು ಒಳ್ಳೆಯ ಚಪಲತೆಯಿಂದ ಜಿಗಿದು ನಿಂತುಕೊಂಡನು. ಈ ಘಟನೆಯನ್ನು ನೋಡಿ ಎರಡೂ ಪಕ್ಷದ ಜನರು ವಿಸ್ಮಯದಿಂದ ಕೆಲವು ಕ್ಷಣಗಳ ವರೆಗೆ ಕಿಂಕರ್ತವ್ಯಮೂಢರಾಗಿದ್ದರು. ತೋಡರಮಲ್ಲನು ಈ ಸಂಧಿಯನ್ನು ಸಾಧಿಸಿ, ಸ್ವಲ್ಪದರಲ್ಲಿ ಬಿದ್ದ ರಜಪುತ ವೀರನ ಕೈಯೊಳಗಿನ ದಂಡವನ್ನು ತೆಗೆದುಕೊಂಡು, ಎದುರಲ್ಲಿ ನಿಂತ ದಂಡ ಧಾರಿ ವೀರನ ಕೈಗೆ ಬಲವಾಗಿ ಹೊಡೆದನು. ಅದರ ಆಘಾತದಿಂದ ಆ ವೀ- ರನ ಕೈಯೊಳಗಿನ ದಂಡವೂ ಕೆಳಗೆ ಬಿತ್ತು. ತೋಡರಮಲ್ಲನು ಅದನ್ನು ತನ್ನ ಸೈನಿಕರ ಕಡೆಗೆ ಒಗೆದನು. ಇಷ್ಟಾಗುವಷ್ಟರಲ್ಲಿ ಎಲ್ಲರೂ ಸ್ವಲ್ಪ ಮಟ್ಟಿಗೆ ಚೆನ್ನಾಗಿ ಕಣ್ತೆರೆದರು. ರಜಪುತವೀರರು ತೋಡರಮಲ್ಲನ ಕೃತಿಯಿಂದ ದ್ವೇಷ ಗೊಂಡರು ಅವರ ಎಂಟು ದಂಡಗಳೂ ಒಮ್ಮೆಲೆ ಅವನ ಮೇಲೆ ಎತ್ತಲ್ಪಟ್ಟವು.

ತೋಡರಮಲ್ಲನಾದರೂ ದಂಡ ನಡೆಯಿಸುವುದರಲ್ಲಿ ಅನಭ್ಯಸ್ತನಿರಲಿಲ್ಲ. ಅವನು ಒಳ್ಳೆಯ ಚಪಲತೆಯಿಂದಲೂ ಸಾಹಸದಿಂದಲೂ ಪ್ರತ್ಯಾಕ್ರಮಣ ಮಾಡಿದನು. ಮೊಗಲಸೈನಿಕರು ತ್ರಿಕೋಣಾಕಾರವಾಗಿ ರಾಜನನ್ನು ಸುತ್ತುಗಟ್ಟಿ ರಜಪುತರ ಮೇಲೆ ಆಕ್ರಮಣ ಮಾಡಿದರು. ಕೆಲವು ವೇಳೆಯವರೆಗೆ ಯುದ್ಧವು ನಡೆದ ಮೇಲೆ ರಜಪುತ ಕಾವಲುಗಾರರಲ್ಲಿಯ ಮತ್ತೆ ಇಬ್ಬರು ಗಾಯ ಹೊಂದಿದರು. ಎರಡು ದಂಡಗಳು ಮತ್ತೆ ತೋಡರಮಲ್ಲನ ವಶವಾದವು. ಖಡ್ಗಗಳನ್ನೊಗೆದು ದಂಡಗಳನ್ನು ತೆಗೆದುಕೊಳ್ಳಬೇಕೆಂದು ಅವನು ತನ್ನ ಸೈನಿಕರಿಗೆ ಆಜ್ಞೆ ಮಾಡಿದನು; ಮತ್ತೆ ಒಳ್ಳೆಯ ನಿಕರದ ಕಾಳಗವು ಪ್ರಾರಂಭವಾಯಿತು. ದಂಡಧಾರಿಗಳಾದ ರಜಪುತವೀರರು ಬರಬರುತ್ತ ದಣಿಯತೊಡಗಿದರು. ಅವರ ದಂಡ ನಡೆಯಿಸುವ ಗತಿಯು ಕುಂಠಿತವಾಗಲಾರಂಭಿಸಿತು. ಅಲ್ಪ ಸಂಖ್ಯಾಕರು ಬಹು ಜನರೊಡನೆ ಎಷ್ಟೆಂದು ಕಾದುವರು? ಆದರೂ ಆ ಕೆಚ್ಚೆದೆಯ ವೀರರು ಒಬ್ಬರೂ ಹಿಂಜರಿಯಲಿಲ್ಲ. ಭೂ- ಮಿಗೆ ಬೀಳುವ ವರೆಗೆ ಯುದ್ಧ ಮಾಡಬೇಕೆಂಬ ಅವರು ಕೃತಸಂಕಲ್ಪರಾಗ

ದ್ದರು. ಮತ್ತೆ ಕೆಲವು ವೇಳೆಯ ವರೆಗೆ ಯುದ್ಧವು ನಡೆಯಿತು. ದಂಡಧಾರಿಗಳೂ ಖಡ್ಗಧಾರಿಗಳೂ ಆದ ಮೊಗಲರ ಆಘಾತದಿಂದ ರಜಪುತರು ಭೂಮಿಗೆ ಬೀಳತೊಡಗಿದರು. ಕಡೆಗೆ ಅವರು ಎಲ್ಲರೂ ಧರಾಶಾಯಿಗಳಾದರು. ವಿಜಯಿಯಾದ ರಾಜಾ ತೋಡರಮಲ್ಲನೂ ಅವನ ಸೈನಿಕರೂ ವಿಜಯಧ್ವನಿಗೈಯುತ್ತ ಅಟ್ಟಾಲಿಕೆಯ ಮಹಾದ್ವಾರದ ಬಳಿಗೆ ಬಂದರು.

ಇದೇ ಸಮಯದಲ್ಲಿ ಅಟ್ಟಾಲಿಕೆಯೊಳಗಿದ್ದ ಬಾಲಿಕೆಯು ತಾರಸ್ವರದಿಂದ:—"ಶರಣಾಗತರನ್ನು ರಕ್ಷಿಸುವದಕ್ಕಾಗಿಯೂ, ರಜಪುತ ಬಾಲಿಕೆಯ ಸತ್ಯದ ರಕ್ಷಣೆ ಮಾಡುವದಕ್ಕಾಗಿಯೂ ಇಲ್ಲಿ ಒಬ್ಬ ಮನುಷ್ಯನಾದರೂ ಉಳಿಯಲಿಲ್ಲವೆ!"

"ಮಾತೇ! ಚಿಂತಿಸಬೇಡಿರಿ. ಸತ್ಯ-ಧರ್ಮಗಳನ್ನು ಕಾಪಾಡುವದು ಪ್ರತಿಯೊಬ್ಬ ರಜಪುತನ ಶೀಲವಾಗಿರುವದು. ಅದಕ್ಕಾಗಿಯೇ ನಾನು ಧಾವಿಸಿ ಬಂದಿರುವೆನು!"

ಬಾಲಿಕೆಯು ಬಾಗಿಲ ಬಳಿಗೆ ಬಂದು ನೋಡಲು, ವೃದ್ಧ ದಿಲೀಪಸಿಂಹನು ಖಡ್ಗವನ್ನು ಕೈಯಲ್ಲಿ ಹಿಡಿದುಕೊಂಡು ಕಾಲಸ್ವರೂಪಿಯಾಗಿ ನಿಂತಿದ್ದನು.

ಸ್ವಾಮಿನಿಷ್ಠ ಸರದಾರನಾದ ದಿಲೀಪಸಿಂಹನು ಅಭಿಮಾನಪೂರ್ವಕವಾಗಿ—"ತಾಯಿ, ಆಜ್ಞೆಯಾಗಬೇಕು."

"ಏಕನಿಷ್ಠ ಸೇನಾಪತಿಗಳೆ, ಇದು ಆಜ್ಞೆಯಲ್ಲ; ಮೃತ್ಯುವಾಗಿರುವದು. ಇಪ್ಪತ್ತು ಜನ ಮೊಗಲ ಸೈನಿಕರೊಡನೆ ಕಾದುವದೆಂದರೆ ಮೃತ್ಯುವಿಗೆ ನಿಮಂತ್ರಣ ಕೊಟ್ಟಂತೆಯೇ ಸರಿ."

"ತಾಯಿ!" ವೃದ್ಧ ಸರದಾರನಾದ ದಿಲೀಪಸಿಂಹನು ಭಕ್ತಿಯಿಂದಲೂ ಗಂಭೀರತೆಯಿಂದಲೂ—"ಈ ದೇಹವು ನಿಮ್ಮ ಅನ್ನದಿಂದ ಪರಿಪುಷ್ಟವಾಗಿರುವದು; ಸ್ನೇಹದಿಂದ ಪರಿವರ್ಧಿತವಾಗಿರುವದು. ಈ ದೇಹವು ಸ್ವಾಮಿಕಾರ್ಯಕ್ಕಾಗಿ ಉಪಯೋಗವಾಗದಿದ್ದರೆ ಹೇಗೆ? ನೀವು ಅನುಮಾನಿಸದೆ ಆಜ್ಞೆ ಮಾಡಿರಿ. ನಿಮ್ಮ ಆದೇಶದಿಂದ ಆತ್ಮಬಲಿದಾನ ಮಾಡಿ, ಪ್ರಾಣದಲ್ಲಿ ಪ್ರಾಣಪ್ರತಿಷ್ಠಾಪನ ಮಾಡುವೆನು."

ದಿಲೀಪಸಿಂಹನ ಮಾತುಗಳನ್ನು ಕೇಳಿ ಬಾಲಿಕೆಯು ಆನಂದಪಟ್ಟಳು. ಆಗ ಅವಳು:—"ಕ್ಷಾತ್ರತೇಜದಿಂದ ಬೆಳಗುವ ಕರ್ತವ್ಯಪರಾಯಣರಾದ ಸರ

ದಾರರೇ, ನೀವು ಈ ಅಟ್ಟಾಲಿಕೆಯ ದ್ವಾರರಕ್ಷಣೆ ಮಾಡಿರಿ. ತಂದೆಯವರಾದ ಹರಿನಾರಾಯಣರು ಸಸೈನ್ಯರಾಗಿ ಬೇಗನೆ ಬರಬಹುದಾಗಿದೆ ನೀವು ಅಳ್ಳೊಡೆಯದೆ ಮೊಗಲಸೈನ್ಯಕ್ಕೆ ಕ್ಷಾತ್ರತೇಜದ ಪ್ರಖರತೆಯನ್ನು ಚೆನ್ನಾಗಿ ತೋರಿಸಿರಿ."

"ಊರ್ಮಿಳಾದೇವಿಯವರೆ, ನಿಮ್ಮ ಆಜ್ಞೆಯು ಶಿರಸಾವಮಾನ್ಯವಿರುವದು. ನೀವು ನಿಶ್ಚಿಂತೆಯಿಂದ ಈ ಸೇವಕನ ಯುದ್ಧಕೌಶಲ್ಯವನ್ನು ನೋಡುತ್ತ ಕುಳಿತುಕೊಳ್ಳಿರಿ"

ದಿಲೀಪಸಿಂಹನು ಹೀಗೆ ನುಡಿದು, ಪ್ರಭುಕನ್ಯೆಯಾದ ಊರ್ಮಿಳಾದೇವಿಗೆ ಅಭಿವಂದಿಸಿ, ಮೊಗಲ ಸೈನ್ಯದ ಮೇಲೆ ಆಕ್ರಮಣ ಮಾಡಿದನು.

---

೪ನೆಯ ಪರಿಚ್ಛೇದ.

ವಿಸ್ಮಯಜನಕವಾದ ದೃಶ್ಯವು. ಒಂದು ಕಡೆಯಲ್ಲಿ ಸಶಸ್ತ್ರರಾದ ಇಪ್ಪತ್ತು ಜನ ತರುಣ ಸೈನಿಕರು; ಮತ್ತೊಂದು ನಿಟ್ಟಿಗೆ ಒಬ್ಬನೇ ಒಬ್ಬನಾದ ಪಲಿತಕೇಶದ ವೃದ್ಧ ಸರದಾರನು! ಸರದಾರ ದಿಲೀಪಸಿಂಹನ ಮುಖದಲ್ಲಿ ಚಿಂತೆ-ನಿರಾಶೆಗಳ ಚಿಹ್ನವಿರಲಿಲ್ಲ. ಬಹುಜನರೊಡನೆ ಒಬ್ಬನೇ ಹೇಗೆ ಕಾದಬೇಕೆಂಬ ಯೋಚನೆಯು ಅವನಲ್ಲಿ ಹುಟ್ಟಿದ್ದಿಲ್ಲ. ಅವನು ಅಸುರಸಮಾನನಾಗಿ ಭಯ ಹುಟ್ಟುವಂತೆ ನಿಂತುಬಿಟ್ಟಿದ್ದನು. ರಾಜಾತೋಡರಮಲ್ಲನು ಆ ವೃದ್ಧ ಸರದಾರನ ಧೈರ್ಯ-ಸಾಹಸಗಳನ್ನು ನೋಡಿ ಆಶ್ಚರ್ಯಚಕಿತನಾಗಿ- "ವೃದ್ಧ ಸರದಾರರೆ, ಸಾವಧಾನಗೊಳ್ಳಿರಿ; ಶಾಂತರಾಗಿರಿ. ಕ್ರೋಧಾವೇಶದಿಂದ ವ್ಯೈ ಮರೆತು ಮುಂದೆ ಬೀಳಬೇಡಿರಿ. ನೀವು ಅತುಲನೀಯ ಕ್ಷಾತ್ರತೇಜವುಳ್ಳವರೂ, ಅನುಪಮ ಸ್ವಾಮಿನಿಷ್ಠರೂ ಇರುವಿರೆಂಬದನ್ನು ನಾನು ಬಲ್ಲೆನು; ಆದರೆ ನೀವು ಒಬ್ಬರೇ ಇರುವಿರಿ. ಈ ಇಪ್ಪತ್ತು ಜನರಿಗೆ ನೀವು ಹೇಗೆ ಈಡಾಗುವಿರಿ? ವೃಥಾ ಪ್ರಾಣ ಕಳೆದುಕೊಳ್ಳದೆ ಹಿಂದೆ ಸರಿಯಿರಿ."

"ದೇಹದಲ್ಲಿ ಪ್ರಾಣವಿರುವವರೆಗೆ ಈ ದಂಡವು ತನ್ನ ಕಾರ್ಯವನ್ನು ಮಾಡತಕ್ಕದ್ದೇ. ನಿಮ್ಮ ಸೈನ್ಯವು ದೊಡ್ಡದು; ನಾನು ಒಬ್ಬನು. ಇದೆಲ್ಲವೂ ನಿಜವು; ಆದರೆ ನಾನು ನನ್ನ ಕರ್ತವ್ಯ ಮಾಡದಿದ್ದರೆ ಸ್ವಾಮಿದ್ರೋಹಿಯೂ ಕರ್ತವ್ಯಹೀನನೂ ಆಗಲಿಕ್ಕಿಲ್ಲವೆ? ಸುಲಿಗೆಗಾರರಂತೆ ಸಾಗಿಬಂದಿರುವ ನಿಮ್ಮನ್ನು ನಾನು ಅಟ್ಟಾಲಿಕೆಯ ಮೇಲೆ ಹೋಗಗೊಡಬೇಕೆ? ರಜಪುತರ ಕೀರ್ತಿ-ಸ್ಮೃತಿಗಳ ಪ್ರತಿಷ್ಠೆಯು ಇಂತಹ ಘಟನೆಗಳಲ್ಲಿಯೇ ಇರುವದು. ರಾಜಾ,

ನಿಮ್ಮ ಆಕ್ರಮಣಕ್ಕೆ ನನ್ನ ಪ್ರಬಲವಾದ ಅಡ್ಡಿಯಿರುವದು. ಯಾರೂ ಮುಂದೆ ಹೆಜ್ಜೆಯನ್ನಿಡಬಾರದು.”

ತೋಡರಮಲ್ಲನು ಅತ್ಯಧಿಕವಾಗಿ ವಿಸ್ಮಿತನಾದನು. ಇಪ್ಪತ್ತು ಜನ ರೊಡನೆ ಯುದ್ಧಮಾಡುವ ಆ ಸರದಾರನ ಭೀಷ್ಮ ಪರಾಕ್ರಮವು ಎಂತಹ ದಿರುವದೆಂಬದನ್ನು ನೋಡುವ ಕುತೂಹಲವು ಅವನಲ್ಲಿ ಹುಟ್ಟಿತು. ಆಗ ಅವನು ಯುದ್ಧ ಮಾಡುವದಕ್ಕಾಗಿ ತನ್ನ ಸೈನ್ಯಕ್ಕೆ ಆಜ್ಞೆ ಮಾಡಿದನು. ವಿಷಮ ಯುದ್ಧವು ಪ್ರಾರಂಭವಾಯಿತು ದಿಲೀಪಸಿಂಹನು ದಂಡವನ್ನು ಒಳ್ಳೆಯ ವೇಗದಿಂದ ತಿರುವುತ್ತ ಮೊಗಲ ಸೈನ್ಯದ ಮೇಲೆ ಆಕ್ರಮಣ ಮಾಡಿದನು. ಅವನ ಅದ್ವಿತೀಯವಾದ ಸಮರ-ಚಾಪಲ್ಯವನ್ನೂ ಶಕ್ತಿಯನ್ನೂ ಸಾಹಸವನ್ನೂ ನೋಡಿ ರಾಜಾ ತೋಡರಮಲ್ಲನೂ ಅವನ ಸೈನಿಕರೂ ಬೆರಳು ಕಚ್ಚಿದರು! ಸುಮಾರು ಒಂದು ಗಳಿಗೆಯವರೆಗೆ ಕಾಳಗವು ನಡೆಯಿತು. ಮೊಗಲ ಸೈನ್ಯದೊಳಗಿನ ನಾಲ್ಕೈದು ಜನರು ಭೂಮಿಗೆ ಬಿದ್ದರು. ಅಷ್ಟರಲ್ಲಿ ದಿಲೀಪಸಿಂಹನ ಕೈಯೊಳಗಿನ ದಂಡವು ತೋಡರಮಲ್ಲನ ದಂಡದ ಆಘಾತ ದಿಂದ ಮುರಿಯಿತು. ಅವನು ಮತ್ತೊಂದು ದಂಡವನ್ನು ತೆಗೆದುಕೊಳ್ಳುವ ಪ್ರಯತ್ನದಲ್ಲಿರಲು, ಮೊಗಲ ಸೈನಿಕರು ಮುಗಿಬಿದ್ದು ಅವನನ್ನು ಸೆರೆ ಹಿಡಿದರು. ಅನಂತರದಲ್ಲಿ ತೋಡರಮಲ್ಲನು ತನ್ನ ಉಳಿದ ಸೈನಿಕರೊಡನೆ ಅಟ್ಟಾಲಿಕೆಯನ್ನು ಪ್ರವೇಶಿಸುವದಕ್ಕಾಗಿ ಮುಂದುವರಿದನು. ಅಷ್ಟರಲ್ಲಿ ಒಂದು ಅಪೂರ್ವವಾದ ದೃಶ್ಯವು ಅಗ್ರಗಾಮಿ ರಾಜನ ಅಗ್ರೇಸರತ್ವವನ್ನು ಕುಂಠಿತ ಗೊಳಿಸಿತು. ರಾಜನು ವಿಸ್ಮಯದೊಡನೆ ಆ ದೃಶ್ಯವನ್ನು ನೋಡುತ್ತ ವಿಸ್ಮಿತ ನಾಗಿ ನಿಂತನು.

ಅಟ್ಟಾಲಿಕೆಯ ಬಾಗಿಲ ಬಳಿಯಲ್ಲಿ ನಿಂತ ಲಂಬಕೇಶಿನಿಯೂ, ಸ್ವರ್ಣಾಲಂಕಾರವಿಭೂಷಿತಳೂ, ನೂರಾರು ಚಂದ್ರರಿಗಿಂತ ಹೆಚ್ಚಾಗಿ ಪ್ರಭೆಯುಳ್ಳವಳೂ, ಉಜ್ವಲ ವೇಷಧಾರಿಣಿಯೂ, ತೀಕ್ಷ್ಣಖಡ್ಗಪಾಣಿಯೂ ಆದ ಒಬ್ಬ ಅಪೂರ್ವ ರಮಣಿಯು ತನ್ನ ಆಕ್ರಮಣಕ್ಕೆ ಅಡ್ಡಿಮಾಡಲಿಕ್ಕೆ ಸಿದ್ಧಳಾಗಿ ನಿಂತದ್ದನ್ನು ನೋಡಿ ರಾಜನು ಬೆರಗಾದನು. ಆ ಸ್ತ್ರೀಯ ಕಣ್ಣುಗಳು ಆರಕ್ತವಾಗಿದ್ದವು; ಮುಖವು ಗಂಭಿರವಾಗಿತ್ತು; ಸರ್ವಾಂಗದಲ್ಲಿ ಅಪೂರ್ವವಾದ ದೈವೀ ಜ್ಯೋತಿಯು ಬೆಳಗುತ್ತಿತ್ತು. ಈ ನೋಟದಿಂದ ರಾಜಾ ತೋಡರಮಲ್ಲನು ರೋಮಾಂಚಿತನಾದನು. ಜಗದ್ಧಾತ್ರಿಯೂ ಜಗಜ್ಜನನಿಯೂ ಆದ ಆದಿಶಕ್ತಿ

ಯೋ ಆಶ್ರಿತನ ರಕ್ಷಣೆಗಾಗಿ ಕೈಯಲ್ಲಿ ಶಸ್ತ್ರವನ್ನು ಹಿಡಿದು, ಮಾನವೀ ರೂಪವನ್ನು ಹೊಂದಿ ಅವತೀರ್ಣಳಾಗಿರುವಳೋ ಏನೋ ಎಂದು ಅವನು ದಿಗಿಲುಗೊಂಡು ಯೋಚಿಸಲಾರಂಭಿಸಿದನು. ಅವನ ಸೈನಿಕರು ಆ ಮೂರ್ತಿಯ ಎದುರಿಗೆ ನಿಲ್ಲಲಿಕ್ಕೆ ಅಸಮರ್ಥರಾದರು. ಆಗ ಆ ದೇವೀಸ್ವರೂಪವಾದ ಪ್ರತಿಮೆಯು ವೀಣಾನಾದಸಮವಾದ ಧ್ವನಿಯಿಂದ:—ರಾಜಾ, ಈಗ ನಾನೇ ಬಂದಿರುವೆನು. ನನ್ನನ್ನು ಪರಾಭವಗೊಳಿಸದೆ ಅಟ್ಟಾಲಿಕೆಯನ್ನು ಪ್ರವೇಶಿಸಲಿಕ್ಕೆ ಸಮರ್ಥರಾಗಲಾರಿರಿ.

ರಾಜನು ಗಂಭೀರತೆಯಿಂದ:-"ನಾನು ಕರ್ತವ್ಯದಲ್ಲಿ ತೊಡಗಿರುವೆನು; ಸ್ವಾಮಿಕಾರ್ಯ ಸಂಪಾದನೆ ಮಾಡಲಿಕ್ಕೆ ಬಾಧ್ಯನಿರುವೆನು. ನೀವು ದಾರಿಯನ್ನು ಬಿಟ್ಟು ಹಿಂದೆ ಸರಿಯಿರಿ. ವಿವೇಕವು ಒಬ್ಬ ರಮಣಿಯ ಮೇಲೆ ಆಕ್ರಮಣ ಮಾಡಲಿಕ್ಕೆ ಅನುಮತಿಯನ್ನೀಯಲೊಲ್ಲದು."

"ರಾಜಾ! ನಾನು ರಮಣಿಯು; ನೀವು ಮಾತ್ರ ದೇಹಧಾರಿಗಳಾದ ಪುರುಷರು! ಒಬ್ಬ ಅಭಾಗಿಯಾದ ನಿರಾಶ್ರಿತ ಮನುಷ್ಯನನ್ನು ಹಿಡಿಯಲಿಕ್ಕೆ ಇಷ್ಟು ಜನರನ್ನು ತೆಗೆದುಕೊಂಡು ಬರುವವನು ಅವನೆಂತಹ ಪುರುಷನು? ಮೇಲೆ ವಿವೇಕಶಾಲಿತ್ವದ ಆಡಂಬರವನ್ನು ಮೆರೆಯಿಸತೊಡಗಿರುವಿರಿ. ರಾಜಾ, ವಿವೇಕದ ಹೆಸರು ನಿಮ್ಮಂತಹರ ಬಾಯಿಂದ ಹೊರಡಬಾರದು. ಧನಲೋಭದಿಂದ ಯಾರು ತಮ್ಮ ಸ್ವಾತಂತ್ರ್ಯವನ್ನೂ, ಸ್ವರಾಜ್ಯ-ಸಿಂಹಾಸನವನ್ನೂ, ಸ್ವರ್ಗಾದಪಿಗರೀಯಸೀ ಜನ್ಮಭೂಮಿಯನ್ನೂ ಯವನರ ಸ್ವಾಧೀನ ಮಾಡಿರುವರೋ, ಯಾರು ತಮ್ಮ ಧರ್ಮ-ಅರ್ಥಾದಿ ಚತುರ್ವಿಧ ಪುರುಷಾರ್ಥಗಳನ್ನು ಲೋಭಸಾಗರದಲ್ಲಿ ಮುಳುಗಿಸಿರುವರೋ, ಯಾರು ವೀರತ್ವ-ಗೌರವಮಯವಾದ ರಾಜಸ್ಥಾನವನ್ನು ಧನಲೋಭದಿಂದ ಹಾಗು ಅಧಿಕಾರಲಾಲಸೆಯಿಂದ ಯವನರ ಚರಣಗಳಿಗೆ ಅರ್ಪಿಸಲಿಕ್ಕೆ ಸಿದ್ಧರಾಗಿರುವಿರೋ, ಸ್ವಾತಂತ್ರ್ಯ ಭಾರತದ ವಿಶುದ್ಧ ವಾಯುಮಂಡಲವನ್ನು ಪಾರತಂತ್ರ್ಯದ ಬಿರುಗಾಳಿಯಿಂದ ಕಲಂಕಿತ ಮಾಡಲಿಕ್ಕೆ ಯಾರು ದೀರ್ಘಪ್ರಯತ್ನ ನಡೆಸಿರುವರೊ, ಸ್ವಾತಂತ್ರ್ಯದ ಅತ್ಯುಚ್ಚ ಶಿಖರದ ಮೇಲೆ ಕುಳಿತ ಜನಾಂಗವನ್ನು ಪತಿತರನ್ನಾಗಿ ಮಾಡುವದಕ್ಕೆ ಯಾರು ದೀರ್ಘಸಾಹಸ ನಡೆಸಿರುವರೊ, ಯವನರ ಚರಣಗಳ ಮೇಲೆ ಮಸ್ತಕವಿರಿಸಿ ಆತ್ಮವಿಕ್ರಮ ಮಾಡಲಿಕ್ಕೆ ಯಾರು ಸಿದ್ಧರಾಗಿರುವರೋ ಅಂತಹರ ಮುಖದಿಂದ ಹೊರಟ ವಿವೇಕಶಬ್ದೋಚ್ಚಾರಣೆಯು ಶೋಭೆ

ಹೊಂದುವದಿಲ್ಲ. ರಾಜಾ, ಈಗ ನೀವು ಮಾತಿನ ಆಡಂಬರ ತೋರಿಸುವ ಆವಶ್ಯಕತೆಯಿಲ್ಲ. ಮೌಖಿಕ ಮಹತ್ವವನ್ನು ವ್ಯಕ್ತಪಡಿಸುವದರಿಂದ ಲಾಭ ವೇನು? ಬನ್ನಿರಿ; ಯವನಸೇನಾಪತಿಗಳೇ, ಸಂಗ್ರಾಮಕ್ಕಾಗಿ ಸಾಗಿ ಬನ್ನಿರಿ. ಈ ರಜಪುತ ಕನ್ನಿಕೆಯ ಶಕ್ತಿಸಂಪನ್ನತೆಯನ್ನು ನೋಡಿ ಹೋಗಿರಿ."

ಊರ್ಮಿಳಾದೇವಿಯು ಅತ್ಯಂತ ಗಂಭೀರತೆಯಿಂದ ಹೀಗೆ ನುಡಿದು ಥಳಥಳಿಸುವ ಖಡ್ಗವನ್ನು ಝಳಪಿಸತೊಡಗಿದಳು. ರಾಜನು ಈ ದೃಶ್ಯವನ್ನು ನೋಡಿ ಮತ್ತಿಷ್ಟು ಬೆರಗಾದನು. ಮುಂದೆ ಏನು ಮಾತಾಡಬೇಕೆಂಬದು ಕೂಡ ಅವನಿಗೆ ಹೊಳೆಯದಾಗಿತ್ತು. ಆಗ ಅವನು ಪ್ರವಾಹಪತಿತನ ಅವಸ್ಥೆ ಯನ್ನು ಹೊಂದಿ ಮುಂದುಗಾಣದೆ ಶಿಲಾಪ್ರತಿಮೆಯಂತೆ ನಿಂತುಕೊಂಡನು.

"ರಾಜಾ, ಹೆತ್ತವನ ಹಾಗು ಒಡಹುಟ್ಟಿದವರ ಪರಿವೆಯಿಲ್ಲದವರಾದ ನೀವು, ಈಗ ಮೋಹಾಂಧರಾದದ್ದು ವಿಸ್ಮಯಜನಕವಲ್ಲವೆ?"

ಊರ್ಮಿಳಾದೇವಿಯ ಮಾತಿಗೆ ಏನು ಉತ್ತರ ಕೊಡಬೇಕೆಂಬದು ಸಹ ರಾಜಾತೋಡರಮಲ್ಲನಿಗೆ ತೋಚದಾಯಿತು.

"ಮಾತೆ, ಇಲ್ಲಿ ಇದೇನು ಕೋಲಾಹಲವು ನಡೆದಿದೆ?" ಎಂಬ ಮಾತು ಗಳು ಊರ್ಮಿಳಾದೇವಿಗೆ ಕೇಳಿಸಿದವು. ಕೂಡಲೆ ಅವಳು ತಿರುಗಿ ನೋಡು ತ್ತಾಳೆ, ವಂಗೇಶ್ವರನಾದ ದಾವುದಖಾನನು ಶಸ್ತ್ರಧಾರಿಯಾಗಿ ನಿಂತಿದ್ದನು.

ದಾವುದಖಾನನು ವಿನಯದಿಂದಲೂ ಗಂಭೀರತೆಯಿಂದಲೂ-"ತಾಯಿ, ಜನನಿಯ ಪ್ರಾಣವಿನಿಮಯದಿಂದ ತನ್ನ ಪ್ರಾಣರಕ್ಷಣೆ ಮಾಡಿಕೊಳ್ಳುವಂತಹ ಹೀನನು ನಿಮ್ಮ ಮಗನಲ್ಲ. ಹೇಡಿಯಾಗಿ ಓಡಿ ಬಂದು ರಮಣಿಯ ಆಶ್ರಯ ವನ್ನು ಹೊಂದಿದ್ದರೂ, ಈ ದಾವುದಖಾನನು ಕಾಪುರುಷನಲ್ಲ. ಇಂದು ನಾನು ಬದುಕಿದರೆ ಈ ಅಪಮಾನದ ಕಲಂಕವನ್ನು ಮೊಗಲರ ಶೋಣಿತದಿಂದ ತೊಳೆ ಯುವೆನು; ಪಠಾಣ ಸಾಮ್ರಾಜ್ಯದ ಪ್ರಾಣಪ್ರತಿಷ್ಠಾಪನೆ ಮಾಡಿ ಅದರ ಗೌರವವು ಬೆಳೆಯುವಂತೆ ಮಾಡಬೇಕೆಂಬ ಮಹತ್ವಾಕಾಂಕ್ಷೆ ತಾಳಿರುವೆನು; ಚದರಿಸಲ್ಪಟ್ಟ ಪಠಾಣ ಸೈನ್ಯವನ್ನು ಕೂಡಿಸಿ ಅದರಲ್ಲಿ ನವ್ಯಸ್ಫೂರ್ತಿಯು ಸಂಚಾರವಾಗುವಂತೆ ಸಾಹಸ ಮಾಡಿ, ಸಾಮ್ರಾಜ್ಯವು ಸುವಿಶಾಲವಾಗುವಂತೆ ಮಾಡಬೇಕೆಂದು ಯೋಚಿಸಿರುವೆನು. ನನ್ನ ಈ ಪ್ರಬಲವಾದ ಆಕಾಂಕ್ಷೆ ಗಳು ಈಡೇರಬೇಕೆಂಬ ಉದ್ದೇಶದಿಂದ ಓಡಿ ಬಂದು ನಿಮ್ಮ ಆಶ್ರಯ ಹೊಂದಿ ದೆನು; ಆದರೆ ನಿಮ್ಮ ಅಟ್ಟಾಲಿಕೆಯಲ್ಲಿ-ನಿಮ್ಮ ರಾಜ್ಯದಲ್ಲಿ ಅಗ್ನಿಯನ್ನು ಪ್ರಜ್ವ

ಲಿಸಿ, ನನ್ನ ಜೀವ ರಕ್ಷಣೆ ಮಾಡಿಕೊಳ್ಳಬೇಕೆಂಬ ನೀಚತನ ಮಾಡಲಾರೆನು. ವಂಗೇಶ್ವರನಾದ ದಾವುದಖಾನನು ಅಂತಹ ನೀಚ ಮನೋವೃತ್ತಿಯುವನಲ್ಲವೆಂದು ಖಂಡಿತವಾಗಿ ತಿಳಿಯಿರಿ. ಬನ್ನಿರಿ; ರಾಜಾ, ಆಕ್ರಮಣ ಮಾಡಿರಿ. ನಾನು ನಿಮ್ಮ ಸೆರೆಯಾಳಾಗುವೆನು; ಆದರೆ ಖಡ್ಗವು ಕೈಯಲ್ಲಿರುವವರೆಗೆ ಮಾತ್ರ ಪರವಶತೆ ಹೊಂದುವದನ್ನು ಪಠಾಣರು ಅರಿಯರು."

ರಾಜಾತೋಡರಮಲ್ಲನು ಆವೇಶದಿಂದ ದಾವುದಖಾನನ ಮೇಲೆ ಏರಿ ಬಂದನು. ಭೀಷಣವಾದ ಯುದ್ಧವು ಪ್ರಾರಂಭವಾಯಿತು. ಇಬ್ಬರೂ ಅಸ್ತ್ರ ಕುಶಲರು; ರಣನೀತಿ ವಿಶಾರದರು; ಮಹಾ ತೇಜಸ್ವಿಗಳು; ಆದರೆ ರಣ ಕ್ಷೇತ್ರದಲ್ಲಿ ಓಡಿ ಬಂದ ನವಾಬನು ಅತ್ಯಧಿಕ ಪರಿಶ್ರಮ ಹೊಂದಿದವನೂ ಮನೋವ್ಯಥೆಯಿಂದ ದುರ್ಬಲನೂ ಆಗಿದ್ದನು. ಕೇಸರೀ ಸಮಾನವಾಗಿ ಒಳ್ಳೇ ವಿಕ್ರಮದಿಂದ ಕಾದತೊಡಗಿದ ವೀರರ ಖಡ್ಗಗಳ ಪ್ರಚಂಡ ಸಂಘರ್ಷಣದಿಂದ ಅಗ್ನಿಕಣಗಳು ಹೊರಡುತ್ತಿದ್ದುದರಿಂದ ರಣದ ಭೀಷಣತೆಯು ದ್ವಿಗುಣಿತ ವಾಗಿತ್ತು. ಕೆಲವು ವೇಳೆಯವರೆಗೆ ಯುದ್ಧವು ಸಮಭಾವದಿಂದ ನಡೆದಿತ್ತು. ಜಯಪರಾಜಯಗಳ ನಿರ್ಣಯ ಮಾಡಲಿಕ್ಕೆ ಸಾಧನವು ದೊರೆತಿರಲಿಲ್ಲ. ಯುದ್ಧವು ಒಳ್ಳೆಯ ನಿಕರದಿಂದ ನಡೆದಾಗ ತೋಡರಮಲ್ಲನ ಖಡ್ಗದ ಪ್ರಬಲ ವಾದ ಆಘಾತದಿಂದ ಯುದ್ಧಶ್ರಾಂತನಾದ ನವಾಬನ ಕೈಯೊಳಗಿನ ಖಡ್ಗವು ಸಿಡಿದು ಭೂಮಿಗೆ ಬಿತ್ತು. ಕೂಡಲೆ ಉಚ್ಚಸ್ವರದಿಂದ ತೋಡರಮಲ್ಲನು ತನ್ನ ಸೈನಿಕರನ್ನು ಕುರಿತು—"ನವಾಬನನ್ನು ಸೆರೆ ಹಿಡಿಯಿರಿ!"

"ನವಾಬರನ್ನು ಸೆರೆಹಿಡಿಯುವ ಸಾಮರ್ಥ್ಯವು ಯಾರಲ್ಲಿರುವದು?" ಎಂದು ಊರ್ಮಿಳಾದೇವಿಯು ಗಂಭೀರವಾಣಿಯಿಂದ ನುಡಿದು, ಖಡ್ಗಪಾಣಿ ಯಾಗಿ ನವಾಬನ ಮುಂದೆ ಬಂದು ನಿಂತುಕೊಂಡಳು. ಆಗ ವ್ಯಥಿತಾಂತಃಕರಣೆ ಯಾದ ನವಾಬನು ಕಾತರ ಧ್ವನಿಯಿಂದ:-ಮಾತೆ, ಕಾಲದ ವಿರುದ್ಧಗತಿಯಲ್ಲಿ ಸಿಲುಕಿ ಪೀಡಿತನಾದ ಈ ಹತಭಾಗ್ಯ ಪುತ್ರನಿಗಾಗಿ ನೀವು ನಿಮ್ಮ ಅಮೌಲ್ಯ ವಾದ ಪ್ರಾಣವನ್ನು ಗಂಡಾಂತರದಲ್ಲಿ ಕೆಡಹುವದೇಕೆ? ನಿಮ್ಮ ಜೀವವು ವ್ಯರ್ಥವಾಗಿ ಹೋದರೂ ನನ್ನ ರಕ್ಷಣೆಯಾಗುವ ಸಂಭವವಿಲ್ಲ. ಪರಮಾತ್ಮನು ನನ್ನ ಕ್ಷೇಮಚಿಂತನೆ ಮಾಡುವದಿಲ್ಲವೆಂಬದು ಮನವರಿಕೆಯಾಯಿತು. ಅವನು ನನ್ನ ಮೇಲೆ ಕ್ಷೋಭೆಗೊಂಡಿರುವದರಿಂದ ನಿಮ್ಮ ಶೌರ್ಯ-ಸಾಹಸ ಗಳು ವ್ಯರ್ಥವಾಗತೊಡಗುವವು. ಮಾತೆ, ನೀವು ನನ್ನನ್ನು ಬಿಟ್ಟು ಬೇರೆ

ಕಡೆಗೆ ಹೊರಟು ಹೋಗಿರಿ. ಮೊಗಲರು ನನ್ನನ್ನು ಇಚ್ಛಿಸುತ್ತಿರುವರು. ನನ್ನನ್ನು ಸೆರೆ ಹಿಡಿದುಕೊಂಡು ಅವರು ಸಂತುಷ್ಟರಾಗಿ ಹೊರಟು ಹೋದರೆ, ನಿಮ್ಮ ಶಾಂತಿಪೂರ್ಣವಾದ ಅಟ್ಟಾಲಿಕೆಯಲ್ಲಿಯೂ ರಾಜ್ಯದಲ್ಲಿಯೂ ಅಗ್ನಿಯು ಪ್ರಜ್ವಲಿತವಾಗುವದಿಲ್ಲ.

ನವಾಬನ ಮಾತುಗಳು ಸತ್ವಶಾಲಿನಿಯೂ ತೇಜಸ್ವಿನಿಯೂ ಆದ ಊರ್ಮಿಳಾದೇವಿಯ ಮನಸ್ಸನ್ನು ಶಾಂತಗೊಳಿಸಲಿಕ್ಕೆ ಸಮರ್ಥವಾಗಲಿಲ್ಲ. ಆಗ ಅವಳು ಉಚ್ಚಸ್ವರದಿಂದ-"ಜ್ವಾಲಾಮುಖಿ ಸಮವಾಗಿ ಅಗ್ನಿ ಜಾಲೆಯು ಪ್ರದೀಪ್ತವಾಗಿ ಆಕಾಶವನ್ನು ವ್ಯಾಪಿಸಿ ವಾಯುವನ್ನು ಉತ್ತಪ್ತಗೊಳಿಸಿದರೂ, ತಾವ್ರ ಜ್ವಾಲೆಗಳಿಂದ ಅಗ್ನಿಯು ಪ್ರಜ್ವಲಿತವಾಗಿ ತನ್ನ ಭೀಷಣ ತಪ್ತತೆಯಿಂದ ಸಾಗರಗಳನ್ನು ಒಣಗಿಸಿದರೂ, ವಿಶ್ವದ ಪ್ರಳಯ ಮಾಡುವ ಮೂರ್ತಿಯು ಪ್ರಳಯಾಗ್ನಿಯನ್ನು ಹಬ್ಬಿಸಿದರೂ ಶರಣಾಗತನನ್ನು ನಿಃಶಸ್ತ್ರಸ್ಥಿತಿಯಲ್ಲಿ ಪರಸ್ವಾಧೀನ ಮಾಡಲಿಕ್ಕೆ ಈ ರಜಪುತ ಕುಮಾರಿಯು ಸಿದ್ಧಳಾಗಲಾರಳು. ರಾಜ್ಯ-ಐಶ್ವರ್ಯ-ಸುಖ-ಶಾಂತಿ ಮೊದಲಾದವುಗಳು ಹೊರಟು ಹೋದರೆ ನನಗೆ ಅಲ್ಪವಾದರೂ ದುಃಖವಾಗುವದಿಲ್ಲ. ಮಸ್ತಕದ ಮೇಲೆ ಮುಕುಟಕ್ಕೆ ಸರಿಯಾದ ಧರ್ಮದ ಎರಡೂ ಚರಣಗಳು ಉಳಿದರೆ ನನಗೆ ಎಲ್ಲ ವಿಧದ ಪುರುಷಾರ್ಥಗಳೂ ದೊರಕಿದವೆಂದು ಭಾವಿಸುವೆನು. ಯಾವ ದೇಶವು ಪುಣ್ಯಜ್ಯೋತ್ಸ್ನೆಯ ಕೆಳಗೆ ಧರ್ಮದ ವ್ಯಾಪ್ತಿಕೆಯಿಂದ ಕಟ್ಟಲ್ಪಟ್ಟಿರುವದೋ, ಯಾವ ದೇಶದ ಪ್ರತಿಯೊಂದು ಪರ್ವತದಲ್ಲಿ ಸಾಮವೇದದ ಧ್ವನಿಯು ಹೊರಡುತ್ತಿರುವದೋ, ಯಾವ ದೇಶದ ಪ್ರತಿಯೊಂದು ಶಿಲೆಗಳು ಪೂಜ್ಯವಾಗಿರುವವೋ, ಯಾವ ದೇಶದ ಜಲಸ್ಪರ್ಶದಿಂದ ಮುಕ್ತಿಲಾಭವಾಗುವದೋ, ಆತಿಥ್ಯ-ಆಶ್ರಯಾರ್ಥಿಗಳ ರಕ್ಷಣೆ ಮಾಡಬೇಕೆಂದು ಯಾವ ದೇಶವು ಶಿಕ್ಷಣ ಕೊಡುತ್ತಿರುವದೋ, ಆತ್ಮೋತ್ಸರ್ಗ ಸ್ವಾರ್ಥ ಬಲಿದಾನಗಳಿಗಾಗಿ ಯಾವ ದೇಶವು ದೀಕ್ಷಾಬದ್ಧವಾಗಿರುವದೋ, ಯಾವ ದೇಶದಲ್ಲಿ ದೇವತೆಗಳು ಜನ್ಮಗ್ರಹಣ ಮಾಡಿ ಧನ್ಯರಾಗುತ್ತಿರುವರೋ ಆ ಪುಣ್ಯಮಯ ಮಹಿಮಾನ್ವಿತ ಆರ್ಯಾವರ್ತದಲ್ಲಿ ನಾನು ಜನ್ಮ ತೆಗೆದುಕೊಂಡಿರುವೆನು. ಯಾವ ದೇಶದ ರಮಣಿಯರು ಧರ್ಮರಕ್ಷಣಾರ್ಥವಾಗಿ ಪ್ರಸನ್ನಮುಖದಿಂದ ಭೀಷಣವಾದ ಅಗ್ನಿಯನ್ನು ಪ್ರಿಯಜನಸಮಾನವಾಗಿ ಸಾದರದಿಂದ ಆಲಿಂಗಿಸಿ ಜೀವನ ವಿಸರ್ಜನ ಮಾಡುವರೋ, ಯಾವ ದೇಶದ ಆರ್ಯಾಂಗನೆಯರು ತಮ್ಮ ಪತಿಗಳನ್ನೂ

ಪುತ್ರರನ್ನೂ ಸ್ವಹಸ್ತದಿಂದ ಸುಸಜ್ಜಿತಗೊಳಿಸಿ ರಣಕ್ಷೇತ್ರಗಳಿಗೆ ಕಳಿಸುವರೋ, ಯಾವ ದೇಶದ ಸ್ತ್ರೀಯರ ಧಾರ್ಮಿಕಪ್ರಭಾವದಿಂದ ಪರಮಾತ್ಮನ ನಿಯಮವು ಸಹ ಪರಿವರ್ತನವಾಗುವದೋ, ದೈವೀಶಕ್ತಿಯು ತೇಜವಿಹೀನವಾಗುವದೋ ಆ ದೇಶದ ರಮಣೀಮಣಿಯು ನಾನಾಗಿರುವೆನು. ವೀರತ್ವವು ಯಾವ ರಜಪುತನ ಜೀವನದೊಳಗಿನ ಏಕಮಾತ್ರವಾದ ಉಪಾಸನೆಯಾಗಿರುವದೋ, ಸ್ವಾತಂತ್ರ್ಯಪ್ರಾಪ್ತಿ ಮಾಡಿಕೊಳ್ಳುವದು ಯಾವ ರಜಪುತನ ಮೂಲಮಂತ್ರವಾಗಿರುವದೋ, ಅಸಂಖ್ಯ ಕೀರ್ತಿರೇಷೆಗಳು ಯಾವ ರಜಪುತನ ಲಲಾಟದಲ್ಲಿ ಅಂಕಿತವಾಗಿರುವವೋ ಅಂತಹ ರಜಪುತನ ವೀರಪುತ್ರಿಯು ನಾನಿರುವೆನು. ಮೊಗಲರ ಕ್ರೋಧಕ್ಕೆ ಅಂಜಿ, ಅತಿ ಪ್ರಾಚೀನ ನಿಯಮಗಳ ಪರಿವರ್ತನಮಾಡಿ, ಆಶ್ರಯಾರ್ಥಿಗಳ ಪರಿತ್ಯಾಗ ಮಾಡಲಾ? ಈ ಮಾತು ಕಾಲತ್ರಯದಲ್ಲಿಯೂ ಆಗದು ರಾಜಾ, ನನ್ನನ್ನು ವಧಿಸಿದ ಹೊರತು ನವಾಬರ ದೇಹಸ್ಪರ್ಶ ಮಾಡಲಿಕ್ಕೆ ಯಾರು ಸಮರ್ಥರಾಗುವರು?"

ಊರ್ಮಿಳಾದೇವಿಯ ನೇತ್ರಗಳಿಂದ ಅಗ್ನಿಕಣಗಳು ಹೊರಬೀಳುತ್ತಿರುವಂತೆ ಭಾಸವಾಗಹತ್ತಿತು. ಶಶಾಂಕಸಮಾನವಾದ ಉಜ್ವಲಮುಖಮಂಡಲವು ಮತ್ತಿಷ್ಟು ಉಜ್ವಲವಾಯಿತು. ಈ ದೃಶ್ಯವನ್ನು ನೋಡಿ ತೋಡರಮಲ್ಲನು ಪರಮಾವಧಿಯಾಗಿ ವಿಸ್ಮಯಹೊಂದಿದನು. ಅವನು ತನ್ನ ಹೃದಯದ ಆವೇಗವನ್ನು ತಡೆದುಕೊಳ್ಳಲಿಕ್ಕೆ ಸಮರ್ಥನಾಗಲಿಲ್ಲ. ಆಗ ಅವನು ಕಂಪಿತ ಸ್ವರದಿಂದ:— "ರಜಪುತಕುಮಾರಿ, ನೀವು ಧನ್ಯರು; ಪರಮಧನ್ಯರು! ಇಂತಹ ಮೂರ್ತಿಯನ್ನು ಇಡಿ ಆಯುಷ್ಯದಲ್ಲಿ ಎಂದೂ ನೋಡಿಲ್ಲ. ಈ ದೃಶ್ಯವು ಆಜೀವವಾಗಿ ಹೃತ್ಪಟಲದಲ್ಲಿ ಅಂಕಿತವಾಗಿರುವದು. ಯಾವ ರಾಜಾ ತೋಡರಮಲ್ಲನ ಬಾಹುಬಲಕ್ಕೆ ನೂರಾರು ಅರಸರು ಅಂಜುತ್ತಿರುವರೋ, ಯಾವನ ಪ್ರತಾಪದಿಂದ ನೂರಾರು ಮುಕುಟವರ್ಧನರ ಮಸ್ತಕಗಳು ಭೂಮಿಗೆ ಬೀಳುವವೋ, ಯಾವನ ಶಕ್ತಿಯನ್ನು ನೋಡಿ ಭಾರತವರ್ಷವು ಸ್ತಂಭಿತವಾಗುವದೋ, ಆ ರಾಜಾ ತೋಡರಮಲ್ಲನು ನಿಮ್ಮನ್ನು ಜನನಿಯೆಂದು ಭಾವಿಸಿ ನಿಮ್ಮ ಪ್ರಭಾವದ ಮುಂದೆ ಪರಾಭವವನ್ನು ಸ್ವೀಕರಿಸುತ್ತಿರುವನು!"

ತೋಡರಮಲ್ಲನ ಮಹಾನುಭಾವತೆಯನ್ನು ನೋಡಿ, ಊರ್ಮಿಳಾದೇವಿಯು ಅವನನ್ನು ಮನಸಾ ಕೊಂಡಾಡತೊಡಗಿದಳು.

"ನವಾಬ!" ತೋಡರಮಲ್ಲನು ಉಚ್ಚಸ್ವರದಿಂದ ಸಂಬೋಧಿಸಿದನು:

"ರಾಜಾ!" ಬಳಿಯಲ್ಲಿಯೇ ಇದ್ದ ನವಾಬನು ನುಡಿದನು.

"ನವಾಬ!" ತೋಡರಮಲ್ಲನು ಗಂಭೀರವಾಣಿಯಿಂದ:—"ನಿಮ್ಮ ಹೃದಯದಲ್ಲಿ ಪಠಾಣಸಾಮ್ರಾಜ್ಯ ಸಿಂಹಾಸನವನ್ನು ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯಿರುವದು. ನೀವು ನಿಮ್ಮ ಶಕ್ತಿಯಿಂದ ಪ್ರಬಲವಾದ ಧನುಸ್ಸು ನಿರ್ಮಾಣ ಮಾಡಿರಿ. ಸಾಧ್ಯವಾದರೆ ನಾನು ಆ ಧನುಸ್ಸು ಮುರಿದು ನಿಮ್ಮ ಮಹತ್ವಾಕಾಂಕ್ಷೆಯನ್ನು ಮಣ್ಣುಪಾಲು ಮಾಡುವೆನು; ಅದಾಗದಿದ್ದರೆ ನಿಮ್ಮ ವೀರತ್ವವನ್ನು ಪೂಜಿಸುವೆನು. ಹೋಗಿರಿ, ನೀವು ಸ್ವತಂತ್ರರಾಗಿರಿ. ಈಗ ನೀವು ಒಬ್ಬರೇ ಇರುವಿರಿ; ಅಸಹಾಯ್ಯ ಸ್ಥಿತಿಯಲ್ಲಿರುವಿರಿ. ಸಸೈನ್ಯನಾಗಿ ಬಂದು ನಿರಾಶ್ರಿತನಾದವನನ್ನು ಸೆರೆಹಿಡಿದನೆಂಬ ಕಲಂಕವನ್ನು ತಂದುಕೊಳ್ಳಲಾರೆನು. ಹೋಗಿರಿ, ನೀವು ಮುಕ್ತರಾದಿರಿ; ಸ್ವತಂತ್ರರಾದಿರಿ!"

"ಹಾ! ತಡೆದು ನಿಲ್ಲಿರಿ!" ಹಿಂದೆ ಭೀಷಣವೂ ಗಂಭೀರವೂ ಆದ ಧ್ವನಿಯು ಕೇಳಿಸಿತು.

ಎಲ್ಲರೂ ವಿಸ್ಮಯದೊಡನೆ ನೋಡತೊಡಗಿದರು. ಮೊಗಲರ ಪ್ರಧಾನ ಸೇನಾಪತಿಯಾದ ಮುನಾಯಿಮುಖಾನನು ರಾಜಾತೋಡರಮಲ್ಲನ ಸಮ್ಮುಖದಲ್ಲಿ ಬಂದು, ಅಧಿಕಾರವಾಣಿಯಿಂದ:—"ರಾಜಾ, ಯಾರಿಗೆ ಸ್ವಾತಂತ್ರ್ಯವನ್ನು ಕೊಡತೊಡಗಿರುವಿರಿ? ಮೊಗಲ ಸಾಮ್ರಾಜ್ಯದ ರಾಜಕಾರಣವೆಂದರೆ ಹುಡುಗಾಟಿಕೆಯೆಂದು ತಿಳಿದಿರುವಿರೇನು? ಇವರು ಯಾರೆಂಬದು ನಿಮಗೆ ಗೊತ್ತಿರುವದೋ?"

"ಗೊತ್ತಿರುವದು; ಇವರು ನವಾಬ ದಾವುದಖಾನರೆಂಬದನ್ನು ನಾನು ಬಲ್ಲೆನು. ಮೊಗಲ ಸಾಮ್ರಾಜ್ಯದ ರಾಜಕಾರಣವನ್ನು ಹುಡುಗಾಟಿಕೆಯೆಂದು ತಿಳಿಯುವಂತಹ ಅದೂರದರ್ಶಿಯು ನಾನಲ್ಲ."

"ಮೊಗಲರ ಪರಮ ಶತ್ರುವಿಗೆ ಯಾವ ಅಧಿಕಾರದಿಂದ ಸ್ವಾಧೀನತೆಯನ್ನು ಕೊಡಲಿಕ್ಕೆ ಸಿದ್ಧರಾದಿರೆಂಬದರ ಬಗ್ಗೆ ನೀವು ಜಬಾನಿಯನ್ನು ಕೊಡಿರಿ."

"ಆವಶ್ಯಕವೆನಿಸಿದರೆ ಈ ವಿಷಯದ ಬಗ್ಗೆ ಜಬಾನಿಯನ್ನು ದಿಲ್ಲೀಶ್ವರನೆದುರಿಗೆ ಕೊಡುವೆನು."

"ರಾಜಾ, ನೀವು ನನ್ನ ಅಧೀನಸ್ಥ ಸೇನಾಧ್ಯಕ್ಷರಿರುವಿರೆಂಬದನ್ನು ಬಲ್ಲಿರಷ್ಟೇ?"

"ಅದರೊಡನೆ ನಾನು ರಜಪುತನಿರುವೆನೆಂಬದನ್ನಾದರೂ ಬಲ್ಲೆನು."

"ರಜಪುತರಾಗಿದ್ದರೂ ಮೊಗಲರ ದಾಸರಿರುವಿರಿ."

"ನಾನು ಈ ಮಾತಿಗೆ ಒಪ್ಪದಿರಲಾರೆನು; ಆದರೆ ನಿಮ್ಮಂತೆ ಮನುಷ್ಯತ್ವವನ್ನೂ ಸ್ವಾತಂತ್ರ್ಯವನ್ನೂ ಮಾರಿಕೊಂಡು ದಾಸ್ಯತ್ವ ಮಾಡುವದನ್ನು ನಾನು ಇದುವರೆಗೂ ಕಲಿತಿಲ್ಲ. ಆ ದಾಸ್ಯತ್ವದಲ್ಲಿಯಾದರೂ ನಾನು ಸ್ವಾತಂತ್ರ್ಯವನ್ನು ಇಚ್ಛಿಸುತ್ತಿರುವೆನು."

ಕ್ರೋಧಾತಿರೇಕದಿಂದ ಮುನಾಯಿಮುಖಾನನ ನೇತ್ರಗಳು ಆರಕ್ತವಾದವು. ಆಗ ಅವನು ರಾಜಾ ತೋಡರಮಲ್ಲನನ್ನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತ:—"ಎಚ್ಚರಿಕೆ! ರಾಜಾ, ಬಾಯಿ ಬಿಗಿಹಿಡಿದು ಮಾತನಾಡಿರಿ!"

"ಸೇನಾಪತಿ! ರಾಜಾ ತೋಡರಮಲ್ಲನು ಭಿಕ್ಷುಕನಲ್ಲ. ಅವನು ಯಾರ ಕಂಗೆಣ್ಣಿಗೂ ಅಂಜುವದಿಲ್ಲ; ತಿಳಿಯಿತೆ?"

"ನಿಮ್ಮ ದುರಭಿಮಾನವು ಘನತೆಗೇರಿರುವದನ್ನು ನಾನು ತಿಳಿದಿರುವೆನು. ಒಂದು ದಿನ ನಿಮ್ಮ ಗರ್ವವನ್ನು ನಾಶಮಾಡಿ ನಿಮ್ಮ ಮಾತಿಗೆ ಉತ್ತರಕೊಡುವೆನು. ಸೈನಿಕರೆ, ನವಾಬ ದಾವುದಖಾನನನ್ನು ಸೆರೆಹಿಡಿಯಿರಿ."

"ಸೈನಿಕರೇ, ಎಚ್ಚರಿಕೆ! ಮುಂದೆ ಹೆಜ್ಜೆಯಿಟ್ಟರೆ ಪ್ರಾಣಕಳೆದುಕೊಳ್ಳುವಿರಿ." ಎಂದು ತೋಡರಮಲ್ಲನು ಸೈನಿಕರಿಗೆ ಹೇಳಿ ಮುನಾಯಿಮುಖಾನನನ್ನು ಕುರಿತು:—"ಸೇನಾಪತಿಗಳೇ, ರಾಜಾ ತೋಡರಮಲ್ಲನ ವಾಕ್ಯವೆಂದರೆ ಬಾಲಕರ ಅಥವಾ ಹುಚ್ಚನ ಪ್ರಲಾಪವಲ್ಲ. ಯಾರನ್ನು ನಾನು ಮುಕ್ತಗೊಳಿಸಿರುವೆನೋ, ಅವರನ್ನು ಎಂತಹ ಗಂಡಾಂತರಗಳಿಗೆ ಎದೆಗೊಟ್ಟಾದರೂ ರಕ್ಷಿಸುವೆನು. ನೀವು ನಿಮ್ಮ ಆಜ್ಞೆಯನ್ನು ಒಳ್ಳೇ ಮಾತಿನಿಂದ ಹಿಂದೆ ತೆಗೆದುಕೊಳ್ಳಿರಿ."

"ಮೊಗಲ ಸಾಮ್ರಾಜ್ಯದ ಒಬ್ಬ ಪ್ರಬಲ ವೈರಿಯನ್ನು ನೀವು ಬಿಟ್ಟಿರುವಿರಿ. ನಿಮ್ಮಿಂದ ಅನುಚಿತ ಕಾರ್ಯವು ಘಟಿಸಿರುವದೆಂದು ನಾನೂ ಹಾಗೆ ಮಾಡಲಾರೆನು. ಸೈನಿಕರೆ, ನನ್ನ ಆಜ್ಞೆಯಂತೆ ಈಗಲೆ ದಾವುದಖಾನನನ್ನು ಸೆರೆಹಿಡಿಯಿರಿ."

ಮೊಗಲ ಸೈನಿಕರು ದಾವುದಖಾನನನ್ನು ಹಿಡಿಯುವದಕ್ಕೆ ಮುಂದೆ ಬಂದರು. ಆಗ ತೋಡರಮಲ್ಲನು ತನ್ನ ಕೈಯೊಳಗಿನ ರಜಪುತ ಸೈನಿಕರನ್ನು ಕುರಿತು:—"ಮೊಗಲ ಸೈನ್ಯದ ಮೇಲೆ ಆಕ್ರಮಣ ಮಾಡಿರಿ!"

ಎರಡೂ ದಳಗಳ ನಡುವೆ ನಿಕರದ ಯುದ್ಧವು ಪ್ರಾರಂಭವಾಗುವ

ಲಕ್ಷಣ ತೋರಲಾರಂಭಿಸಿತು. ಮುನಾಯಿಮುಖಾನನು ಭೀರುಪ್ರಕೃತಿಯುವ ನಿದ್ದನು. ಅವನು ನಾಮಮಾತ್ರವಾಗಿ ಪ್ರಧಾನಸೇನಾಪತಿಯಾಗಿದ್ದನು; ಆದರೆ ಎಲ್ಲ ಕಾರ್ಯಗಳನ್ನು ತೋಡರಮಲ್ಲನೇ ಮಾಡುತ್ತಿದ್ದನು. ತೋಡರಮಲ್ಲನ ಬಾಹುಬಲದಿಂದಲೇ ಮೊಗಲರು ಪಠಾಣವಿಜಯಿಗಳಾಗಿದ್ದರು. ತಾನು ಪ್ರಧಾನಸೇನಾಪತಿಯಿರುವದರಿಂದಲೂ, ತೋಡರಮಲ್ಲನನ್ನು ತನ್ನ ಕೈಕೆಳಗಿನ ದಳಪತಿಯೆಂದು ದಿಲ್ಲೀಶ್ವರನು ನಿಯಮಿಸಿ ಕಳುಹಿಸಿದ್ದರಿಂದಲೂ, ಮುನಾಯಿಮುಖಾನನು ತನ್ನ ಆಜ್ಞೆಯು ಸರ್ವಮಾನ್ಯವಾಗುವದೆಂದು ತಿಳಿದಿದ್ದನು. ತೋಡರಮಲ್ಲನು ತನ್ನ ವಿರುದ್ಧವಾಗಿ ನಿಲ್ಲುವ ಸಾಹಸ ಮಾಡಿದ್ದರಿಂದ ಅವನು ಅಂಜಿದನು. ರಜಪುತ ಜಾತಿಯ ಮೇಲೆ ಮುನಾಯಿಮುಖಾನನು ಒಳ್ಳೆಯ ಈರ್ಷೆಯುಳ್ಳವನಾಗಿದ್ದನು. ರಾಜಾ ತೋಡರಮಲ್ಲನ ವಿಷಯದಲ್ಲಂತೂ ಅವನು ಹೆಚ್ಚು ಮತ್ಸರಗ್ರಸ್ತನಾಗಿದ್ದನು. ಅವನಿಗೆ ತೋಡರಮಲ್ಲನ ಸಹಕಾರಿತ್ವವು ಬೇಕಾಗಿದ್ದಿಲ್ಲ; ಆದರೆ ಬಾದಶಹನ ಆಜ್ಞೆಯೇ ಹಾಗಾದ್ದರಿಂದ ಅವನು ನಿರುಪಾಯನಾದನು.

ಎರಡೂ ದಳಗಳು ಯುದ್ಧಕ್ಕೆ ಸಿದ್ಧವಾದದ್ದನ್ನು ನೋಡಿ ಮುನಾಯಿಮುಖಾನನು ತನ್ನ ಸೈನಿಕರನ್ನು ಕುರಿತು:—"ಎಲ್ಲರೂ ಶಾಂತರಾಗಿರಿ" ಎಂದು ಹೇಳಿ, ತೋಡರಮಲ್ಲನಿಗೆ-"ತೋಡರಮಲ್ಲ, ಇಂತಹ ಕುಸಮಯದಲ್ಲಿ,-ಶತ್ರುಪೂರ್ಣವಾದ ಬಂಗಾಲದಲ್ಲಿ ಸೈನ್ಯದ ನಾಶ ಮಾಡಿ ಮೊಗಲರ ಶಕ್ತಿಯನ್ನು ಕಡಿಮೆ ಮಾಡಬೇಕೆಂದು ನಾನು ಇಚ್ಛಿಸುವದಿಲ್ಲ. ನಿಮ್ಮ ಈ ಅಪಮಾನದ ಸೇಡನ್ನು ದಿಲ್ಲಿಯಲ್ಲಿ ತೀರಿಸಿಕೊಳ್ಳುವೆನು."

"ಅವಶ್ಯ, ಅವಶ್ಯ! ಮುನಾಯಿಮುಖಾನ, ನಾನು ಭಯಭೀತನಲ್ಲ. ನೀವು ನನ್ನ ಮೇಲಿನ ಸೇಡನ್ನು ಯಥಾಶಕ್ತಿಯಾಗಿ ತೀರಿಸಿಕೊಳ್ಳಿರಿ!"

ತೋಡರಮಲ್ಲನ ದರ್ಪಯುಕ್ತವಾದ ಮಾತುಗಳನ್ನು ಕೇಳಿ ಮುನಾಯಿಮುಖಾನನು ಉರಿಯುತ್ತ ಅಲ್ಲಿಂದ ಹೊರಟು ಹೋದನು.

---

### ೫ನೆಯ ಪರಿಚ್ಛೇದ.

"ಊರ್ಮಿಳೆ, ಕೇಳಿರುವೆಯಾ?"

"ಅಪ್ಪಾ, ಅದೇನು?"

"ಪಠಾಣರು ಪರಾಜಿತರಾದರು; ನಮಗೆ ವಿಜಯಪ್ರಾಪ್ತಿಯಾಯಿತು"

"ಕೇಳಿರುವೆನು."

"ಪಠಾಣರಾಜನಾದ ದಾವುದಖಾನನು ಛದ್ಮವೇಷಧಾರಿಯಾಗಿ ಓಡಿ ಹೋದದ್ದನ್ನೂ, ಮೊಗಲ ಸೇನಾಪತಿಗಳು ಅವನನ್ನು ಹುಡುಕುವದಕ್ಕಾಗಿ ಸಸೈನ್ಯರಾಗಿ ಹೊರಟದ್ದನ್ನೂ ಕೇಳಿರುವೆಯಾ?"

"ಇದನ್ನಾದರೂ ತಿಳಿದಿರುವೆನು."

"ಪುತ್ರೀ, ನಿನಗೆ ಈ ಸಂಗತಿಯೂ ತಿಳಿದಿರುವದೆ? ಹೇಗೆ ಗೊತ್ತಾಯಿತು?"

"ಯುದ್ಧಕ್ಷೇತ್ರದಿಂದ ಓಡಿ ಬಂದ ದಾವುದಖಾನನು ನನ್ನ ಆಶ್ರಯವನ್ನಪೇಕ್ಷಿಸಿದನು."

"ಏನು? ದಾವುದಖಾನನು ನಿನ್ನಲ್ಲಿ ಆಶ್ರಯವನ್ನು ಯಾಚಿಸಿದನೆ?"

"ಅಹುದು."

"ನೀನು ಅವನನ್ನು ಸೆರೆ ಹಿಡಿದೆಯೇನು?"

"ಇಲ್ಲ."

"ಹಾಗಾದರೆ ಏನು ಮಾಡಿದೆ?"

"ಅವನಿಗೆ ಆಶ್ರಯವಿತ್ತೆನು."

"ಅನಲರೂಪಿಯಾದ ವೈರಿಗೆ ಆಶ್ರಯವಿತ್ತೆಯಾ? ಕುಮಾರೀ, ಇದನ್ನೇನು ಹೇಳುತ್ತಿರುವೆ?"

"ಅಪ್ಪಾ, ನಾನು ಹೇಳುವದೆಲ್ಲವೂ ನಿಜವು."

"ಮುಂದೇನಾಯಿತು?"

ಊರ್ಮಿಳಾದೇವಿಯು ತನ್ನ ತಂದೆಯಾದ ಹರಿನಾರಾಯಣನಿಗೆ ಲೋಮಹರ್ಷಣವಾದ ಸಂಗತಿಯನ್ನು ಗಂಭೀರವಾಣಿಯಿಂದ ಹೇಳತೊಡಗಿದಳು:—"ಅಪ್ಪಾ, ನವಾಬ ದಾವುದಖಾನನು ನನ್ನ ಆಶ್ರಯಕ್ಕೊಳಗಾದ ಮೇಲೆ ಮೊಗಲ ಸೇನಾಪತಿಯಾದ ರಾಜಾತೋಡರಮಲ್ಲನು ಅವನನ್ನು ಸೆರೆ ಹಿಡಿದೊಯ್ಯಲಿಕ್ಕೆ ಸಾಗಿಬಂದನು. ಅವನು ಅಟ್ಟಾಲಿಕೆಯನ್ನು ಪ್ರವೇಶಿಸಲಿಕ್ಕೆ ತನ್ನ ಸೈನಿಕರಿಗೆ ಆಜ್ಞಾಪಿಸಿದನು. ನನ್ನ ಆದೇಶಾನುಸಾರವಾಗಿ ಕಾವಲುಗಾರರು ಮೊಗಲ ಸೈನಿಕರ ಆಕ್ರಮಣಕ್ಕೆ ಪ್ರತಿಬಂಧ ಮಾಡಿ ಯುದ್ಧವನ್ನು ಪ್ರಾರಂಭಿಸಿದರು. ಎಲ್ಲ ಕಾವಲುಗಾರರು ತಮ್ಮ ಶೋಣಿತವನ್ನೂ ಪ್ರಾಣಗಳನ್ನೂ ಸಮರ್ಪಿಸಿ ನನ್ನ ಆಜ್ಞೆಯನ್ನು ಪರಿಪಾಲಿಸಿದರು. ಅಪ್ಪಾ,

ನಮ್ಮ ಏಕನಿಷ್ಠ ರಜಪುತ ಕಾವಲುಗಾರರನ್ನು ಎಷ್ಟು ಹೊಗಳಿದರೂ ತೀರದು. ಅವರು ಅಲ್ಪಸಂಖ್ಯಾಕರಾದರೂ ಬಹುಸಂಖ್ಯಾಕ ಶತ್ರುಗಳೊಡನೆ ಕೆಚ್ಚಿದೆಯಿಂದ ಕಾದಿ, ಕಡೆಗೆ ಧರಾಶಾಯಿಗಳಾಗಿ ವೀರಸ್ವರ್ಗವನ್ನು ಹೊಂದಿದರಲ್ಲದೆ, ನನ್ನ ಆಜ್ಞೆಯನ್ನು ಉಲ್ಲಂಘಿಸಲಿಲ್ಲ. ರಜಪುತ ಸೈನಿಕರೆಲ್ಲರೂ ರಣಕ್ಷೇತ್ರಕ್ಕೆ ಮೈಗೊಟ್ಟ ಮೇಲೆ ಶತ್ರುಗಳ ಆಕ್ರಮಣಕ್ಕೆ ವ್ಯಾಹತಿಯನ್ನುಂಟುಮಾಡುವವರು ಯಾರೂ ಉಳಿಯಲಿಲ್ಲೆಂದು ಚೀತ್ಕಾರ ಧ್ವನಿಮಾಡಿದೆನು; ರಜಪುತ ಕುಮಾರಿಯ ಸತ್ಯರಕ್ಷಣೆ ಮಾಡಲಿಕ್ಕೆ ಯಾರೂ ಉಳಿಯಲಿಲ್ಲೆಂದು ಕೂಗಿಕೊಂಡೆನು. ಅಷ್ಟರಲ್ಲಿ ವೃದ್ಧ ಸರದಾರರಾದ ದಿಲೀಪಸಿಂಹರು ನನ್ನ ಗೌರವವನ್ನು ಕಾಯುವದಕ್ಕಾಗಿ ಸಾಗಿ ಬಂದರು. ಅವರ ಸ್ವಾಮಿಭಕ್ತಿಯು ಅವರ್ಣನೀಯವಿರುವದು. ಪ್ರಭುಕನ್ಯೆಯ ಸತ್ಯಪಾಲನೆಗಾಗಿ ಆ ವೃದ್ಧಸರದಾರರು ತರುಣರಿಗಿಂತಲೂ ಹೆಚ್ಚಿನ ಉತ್ಸಾಹದಿಂದಲೂ ವಿಕ್ರಮದಿಂದಲೂ ಕಾದತೊಡಗಿದರು. ಅವರ ದಂಡಚಾಲನೆಯ ಚಪಲತೆಯನ್ನು ನೋಡಿ ನಾನು ಬೆರಗಾದೆನು. ವಿಪಕ್ಷಿಗಳಾದರೂ ಅವರನ್ನು ಮನಸ್ವೀಯಾಗಿ ಕೊಂಡಾಡಿದರು. ಕಡೆಗೆ ದಿಲೀಪಸಿಂಹರ ಕೈಯೊಳಗಿನ ದಂಡವು ಜಾರಿ ಭೂಮಿಗೆ ಬಿತ್ತು. ರಾಜಾತೋಡರಮಲ್ಲನು ಅವರನ್ನು ಸೆರೆ ಹಿಡಿದನು. ಅನಂತರದಲ್ಲಿ............"

"ಕುಮಾರಿ!" ರಾಜಾ ಹರಿನಾರಾಯಣನು ಕ್ರೋಧವಿಸ್ಮಯಪೂರ್ಣನಾಗಿ—"ನೀನು ಆಟವಾಡುವ ಇಚ್ಛೆಯಿಂದ ಪ್ರಬಲ ಪ್ರತಾಪಿಯಾದ ನರೇಂದ್ರರು ಸಹ ಮಾಡಲಿಕ್ಕೆ ಸಮರ್ಥರಾಗದಂತಹ ಮನಸ್ಸಾಹಸವನ್ನು ಮಾಡಿರುವೆ. ನೀನು ಬಾಲಿಕೆಯು. ನಿನಗೆ ತಿಳಿಯದಿದ್ದರೂ ಆ ವೃದ್ಧ ದಿಲೀಪನಿಗಾದರೂ ತಿಳಿಯಬಾರದೇನು? ಅವನು ತನ್ನ ಹಾಗು ತನ್ನ ಸ್ವಾಮಿಯ ಗ್ರಹಗಳನ್ನು ಕೆಣಕಿಸುವದಕ್ಕೆ ಪ್ರಚಂಡವಾದ ಶಕ್ತಿಗೆ ನಿಮಂತ್ರಣವಿತ್ತನೆ? ಅವನ ಕೃತಿಯು ಸ್ವಾಮಿಭಕ್ತಿದ್ಯೋತಕವಲ್ಲ; ದಿಲೀಪನು ನಿಜವಾಗಿ ಸ್ವಾಮಿದ್ರೋಹ ಮಾಡಿರುವನು. ಒಳ್ಳೇದು; ಮುಂದೆ ಏನಾಯಿತು?"

ರಾಜನ ಮಾತುಗಳನ್ನು ಕೇಳಿ ಉರ್ಮಿಳಾದೇವಿಯು ಬೆಚ್ಚಿಬಿದ್ದಳು. ತನ್ನ ತಂದೆಯು ಏಕನಿಷ್ಠ ಸೇವಕನಾದ ದಿಲೀಪಸಿಂಹನ ಗುಣಗಾನ ಮಾಡಮಾಡಹುದೆಂದು ಅವಳ ಭಾವನೆಯಿತ್ತು; ಆದರೆ ಅವನ ವರ್ತನವು ವಿಪರೀತವಾಗಿ ಕಂಡದ್ದರಿಂದ ಊರ್ಮಿಳಾದೇವಿಗೆ ಅಂಜಿಕೆಯಾಯಿತು; ಆದರೂ ಅವಳು

ತನ್ನ ಮನೋವಿಕಾರವನ್ನು ವ್ಯಕ್ತಪಡಿಸದೆ, ಮೊದಲಿನಷ್ಟೇ ಗಾಂಭೀರ್ಯ ದಿಂದ:—"ದಿಲೀಪಸಿಂಹರು ಸೆರೆಯಲ್ಲಿ ಸಿಲುಕಿದ ಬಳಿಕ ರಾಜಾ ತೋಡರ ಮಲ್ಲನು ಅರಮನೆಯನ್ನು ಪ್ರವೇಶಿಸಲಿಕ್ಕೆ ಸಿದ್ಧನಾದನು; ಆದರೆ ಅವನಿಗೆ ನಿರೋಧವನ್ನುಂಟು ಮಾಡುವವರು ಯಾರೂ ಇಲ್ಲದ್ದರಿಂದ, ನಾನೇ ಶಸ್ತ್ರ ಪಾಣಿಯಾಗಿ ಅಟ್ಟಾಲಿಕೆಯ ಬಾಗಿಲ ಬಳಿಯಲ್ಲಿ ನಿಂತೆನು. ಆಗ ನವಾಬನು ಅಲ್ಲಿಗೆ ಬಂದು ರಾಜಾ ತೋಡರಮಲ್ಲನ ಮೇಲೆ ಆಕ್ರಮಣ ಮಾಡಿದನು. ನವಾಬನ ಸರ್ವಾಂಗವು ಶಸ್ತ್ರಾಘಾತದಿಂದ ಗಾಯಹೊಂದಿತು. ಉಡುಗೆ-ತೊಡಿಗೆಗಳು ರಕ್ತಮಯವಾದವು. ಅವನು ಎಷ್ಟೇ ದಣಿದಿದ್ದರೂ ತನ್ನ ಶೌರ್ಯ ವನ್ನು ಯಥಾಸ್ಥಿತವಾಗಿ ವ್ಯಕ್ತಮಾಡತೊಡಗಿದ್ದನು. ತನ್ನ ಪ್ರಾಣರಕ್ಷಣೆ ಗಾಗಿ ಅನ್ಯರನ್ನು ಬಲಿಯೊಪ್ಪಿಸಲಿಕ್ಕೆ ಅವನು ಸಮ್ಮತಿಸಲಿಲ್ಲ. ನವಾಬನು ಪ್ರಾಪ್ತಪರಿಸ್ಥಿತಿಗಾಗಿ ಯುದ್ಧಭೂಮಿಯಿಂದ ಓಡಿ ಬಂದಿದ್ದರೂ, ಅವನು ಅಪ್ರ ತಿಮ ಯೋಧನು ಮಹಾಪರಾಕ್ರಮಿಯಾದ ತೋಡರಮಲ್ಲನೊಡನೆ ಬಹಳ ವೇಳೆಯ ವರೆಗೆ ಯುದ್ಧ ಮಾಡಿದ ಮೇಲೆ ಅವನು ನಿಃಶಸ್ತ್ರನಾದನು. ಕೂಡಲೆ ರಾಜನು ಅವನನ್ನು ಸೆರೆಹಿಡಿಯುವದಕ್ಕೆ ತನ್ನ ಸೈನಿಕರಿಗೆ ಸೂಚಿಸಿದನು. ಕೂಡಲೆ ನವಾಬನನ್ನು ಹಿಂದೆ ಸರಿಸಿ ನಾನು ಅವನ ಸಮ್ಮುಖದಲ್ಲಿ ನಿಂತೆನು. ತೋಡರಮಲ್ಲನು ಮೊಗಲರ ದಾಸನಾಗಿದ್ದರೂ ಅತ್ಯಂತ ಉದಾರನಿರುವನು. ಆ ಘನವಂತನು ನನ್ನನ್ನು ಮಾತೆಯ ಸ್ಥಾನದಲ್ಲಿ ಕಲ್ಪಿಸಿ, ಪರಾಜಯವನ್ನು ಸ್ವೀಕಾರ ಮಾಡಿದನು; ಹಾಗು ಮೊಗಲರ ಪ್ರಬಲ ವೈರಿಯಾದ ದಾವುದಖಾನ ನನ್ನು ಮುಕ್ತಗೊಳಿಸಿದನು."

"ಮುಕ್ತಗೊಳಿಸಿದನೆ? ತೋಡರಮಲ್ಲ ಸೇನಾಪತಿಯು ಮೊಗಲ ಸಾಮ್ರಾಜ್ಯಸಿಂಹಾಸನಕ್ಕೆ ಕಂಟಕಪ್ರಾಯನಾದ ದಾವುದಖಾನನನ್ನು ಬಿಟ್ಟು ಬಿಟ್ಟನೆ? ಒಳ್ಳೇದು; ಮುಂದೆ ಏನಾಯಿತು?"

"ಆ ಮೇಲೆ ಮೊಗಲರ ಪ್ರಧಾನ ಸೇನಾಪತಿಯಾದ ಮನಾಯಿಮ ಖಾನನು ಅಲ್ಲಿಗೆ ಬಂದನು."

"ಅವನು ಏನು ಮಾಡಿದನು?" ಹರಿನಾರಾಯಣನು ಉತ್ಕಂಠೆಯಿಂದ ಕೇಳಿದನು.

"ಅವನು ದಾವುದಖಾನನನ್ನು ಸೆರೆಹಿಡಿಯಬೇಕೆಂದು ಆಜ್ಞೆ ಮಾಡಿ ದನು. ತೋಡರಮಲ್ಲನು ಅವನಿಗೆ ವಿರೋಧವನ್ನುಂಟುಮಾಡಿದನು. ಕಡೆಗೆ

ಯುಂದ್ಧವು ಪ್ರಾರಂಭವಾಗುವ ಪ್ರಸಂಗವೊದಗಿತು. ಅನಂತರದಲ್ಲಿ ಮನಾಯಿಮಖಾನನು ಯುದ್ಧದ ಪ್ರಸಂಗವನ್ನು ತಂದುಕೊಳ್ಳದೆ ಅಲ್ಲಿಂದ ತೆರಳಿದನು; ತೋಡರಮಲ್ಲನೂ ಹೊರಟು ಹೋದನು. ವಂಗೇಶ್ವರನಾದ ದಾವುದಖಾನನು ಕಟಕದ ಕಡೆಗೆ ಪಯಣ ಮಾಡಿದನು."

ರಾಜಾ ಹರಿನಾರಾಯಣನು ಮಗಳ ಕೃತಿಯಿಂದ ಕ್ರೋಧಗೊಂಡನು. ಅಚ್ಚೆಯಿಂದ ಬೆಳೆಯಿಸಿದ ಮಗಳು ಅಡ್ಡದಾರೀ ಹಿಡಿದು, ಸರ್ವನಾಶ ಮಾಡಲುದ್ಯುಕ್ತಳಾದಳೆಂದು ಅವನ ಭಾವನೆಯಾಯಿತು. ಅಪ್ರಬುದ್ಧಳಾದ ಊರ್ಮಿಳೆಯಂತೆಯೆ ದಿಲೀಪಸಿಂಹನು ಅದೂರದರ್ಶಿಯೂ ಸಾಮ್ರಾಜ್ಯದ್ರೋಹಿಯೂ ಆದದ್ದರಿಂದ ಅವನ ತಲೆಯೇ ತಿರುಗಿದಂತಾಗಿತ್ತು. ಮೊದಲು ಮಗಳಿಗೆ ಚೆನ್ನಾಗಿ ಸಿಟ್ಟುಮಾಡಿ, ಹಿಂದಿನಿಂದ ದಿಲೀಪಸಿಂಹನ ಸಮಾಚಾರ ತೆಗೆದುಕೊಳ್ಳಬೇಕೆಂದು ಅವನು ನಿರ್ಧರಿಸಿದನು. ಆಗ ಅವನು ಮಗಳನ್ನು ಕುರಿತು: "ಊರ್ಮಿಳೆ, ನೀನು ಮಾತೃಹೀನಳೆಂದು ವಾತ್ಸಲ್ಯದಿಂದ ಬೆಳೆಯಿಸಿದೆನು. ಅತ್ಯಧಿಕವಾದ ಆದರದಿಂದ ನಿನ್ನೊಡನೆ ವರ್ತಿಸತೊಡಗಿರುವೆನು. ನನ್ನ ಈ ಅತಿರೇಕವಾದ ಕಕ್ಕುಲತೆಯ ದುರುಪಯೋಗ ಮಾಡತೊಡಗಿದ್ದನ್ನು ನೋಡಿ ಮನಸ್ಸು ಕ್ಷೇಷಗೊಂಡಿದೆ. ನನ್ನ ಅತಿಯಾದ ಪ್ರೇಮವೇ ನಿನ್ನಲ್ಲಿ ದುರಭಿಮಾನವನ್ನು ಹೆಚ್ಚುಮಾಡಿದೆ. ನಿನ್ನ ಕೃತಿಯಿಂದ ಯಾವ ಪರಿಣಾಮವಾಗುವದೆಂಬ ಯೋಚನೆಯನ್ನು ನೀನು ಮಾಡಿರುವೆಯೇನು? ನೀನು ಧಗಧಗಿಸುತ್ತಿರುವ ಅಗ್ನಿಪ್ರವಾಹವನ್ನು ಮನೆಯಲ್ಲಿ ಬರಮಾಡಿಕೊಂಡೆ. ಮೊಗಲರ ಕ್ರೋಧಾಗ್ನಿಯಿಂದ ನಮ್ಮ ರಾಜ್ಯವೂ ಸಂಪತ್ತೂ ಪ್ರಾಣ-ಮಾನಗಳೂ ನಾಶವಾಗುವವು. ನೀನು ರಾಜಾ ತೋಡರಮಲ್ಲನ ಅನುಗ್ರಹ ಸಂಪಾದಿಸಿರಬಹುದು; ಆದರೆ ಮಹಾ ಸಂತಾಪಿಯಾದ ಮನಾಯಿಮಖಾನನ ಕ್ರೋಧಾಗ್ನಿಯನ್ನು ಯಾರು ನಿಸ್ತರಿಸುವರು? ನಿನ್ನ ದುಷ್ಕೃತಿಗಾಗಿ ನನ್ನ ಮೇಲೆಯೂ ನನ್ನ ಜಮೀನದಾರಿಯ ಮೇಲೆಯೂ ಗಂಡಾಂತರವು ಪ್ರಾಪ್ತವಾಯಿತು. ಊರ್ಮಿಳೆ, ನೀನಾದರೂ ಭಯಂಕರವಾದ ಸಂಕಟದಲ್ಲಿ ಬೀಳುವೆ. ನಮ್ಮನ್ನು ಸೆರೆಹಿಡಿದುಕೊಂಡು ಹೋಗುವದಕ್ಕಾಗಿ ಮೊಗಲ ಸೈನ್ಯವು ರಾಜಧಾನಿಯಿಂದ ಹೊರಟಿರಬಹುದು. ಅಯ್ಯೋ! ನೀನು ಇದೇನು ಮಾಡಿದೆ? ನಿನ್ನ ಬುದ್ಧಿಗೇಡಿತನಕ್ಕಾಗಿ ನನ್ನ ಸರ್ವನಾಶವಾಗುವ ಪ್ರಸಂಗ ಬಂದಿತಲ್ಲ!"

ಹರಿನಾರಾಯಣನ ಭಯಯುಕ್ತವಾದ ಭಾಷಣದಿಂದ ಊರ್ಮಿಳೆ

ಸ್ವಲ್ಪಾದರೂ ಅಳ್ಕೊಡೆಯಲಿಲ್ಲ. ಅವಳು ತಂದೆಯ ಭೀರು ಸ್ವಭಾವವನ್ನು ನೋಡಿ ಕ್ಲೇಶಗೊಂಡಳು. ಆಗ ಅವಳು ಶಾಂತಸ್ವರದಿಂದ—“ಅಪ್ಪಾ, ನನ್ನಿಂದ ಯಾವ ಅನ್ಯಾಯವು ಘಟಿಸಿರುವದೆಂದು ನೀವು ಈ ಬಗೆಯಾಗಿ ಆಕಾಶ-ಪಾತಾಳಗಳನ್ನೊಂದು ಮಾಡತೊಡಗಿರುವಿರಿ? ವಂಗೇಶ್ವರನನ್ನು-ಶರಣಾಗತನಾದ ದಾವುದಖಾನನನ್ನು-ಬೆನ್ನಿಗೆ ಹಾಕಿಕೊಂಡರೆ ಅದರಿಂದ ಮೊಗಲರಿಗೇನು ಕೇಡುಮಾಡಿದಂತಾಯಿತು? ನಾವು ಮೊಗಲ ಸಾರ್ವಭೌಮನ ಮಾಂಡಲಿಕರಲ್ಲವಷ್ಟೆ? ನೀವು ಅವರಿಗೆ ಸಹಾಯ ಮಾಡುವ ಕಾರಣವೇನು? ತಿರುಗಿ ಕೇಳಿದರೆ, ದಾವುದಖಾನನು ನಮ್ಮ ಅರಸನಿರುವದರಿಂದ ಅವನಿಗೆ ಸಹಾಯ ಮಾಡುವದೇ ನಮ್ಮ ಧರ್ಮವಾಗಿರುವದು. ಯಾವದೊಂದು ನಿಮಿತ್ತ ಹುಡುಕಿ ಜಮೀನದಾರಿಯನ್ನು ನುಂಗಬೇಕೆಂದು ಮೊಗಲರು ಸಂಕಲ್ಪ ಮಾಡಿಕೊಂಡಿದ್ದರೆ, ಅವರಿಗೆ ಇಂತಹ ಅನೇಕ ಕಾರಣಗಳು ಮುಂದೆ ದೊರೆಯಬಹುದು. ಭಾಗ್ಯಲಕ್ಷ್ಮಿಯು ಮೊಗಲರ ಮೇಲೆ ಪ್ರಸನ್ನಳಾಗಿರುವಳೆಂದು ನೀವು ನಿಮ್ಮ ಅರಸರ ಪಕ್ಷವನ್ನು ಬಿಟ್ಟಿರುವಿರಿ. ಈ ನಿಮ್ಮ ವರ್ತನವು ಯೋಗ್ಯವಲ್ಲ. ಕ್ಷತ್ರಿಯರು ತಮ್ಮ ಶೀಲವನ್ನು ಎಂದೂ ಬಿಡಬಾರದು. ಗೆದ್ದ ಎತ್ತಿನ ಬಾಲವನ್ನು ಹಿಡಿಯುವ ಕೃತಿಯು ಕೀಳು ಜನರದು. ನಿಮ್ಮಂತಹರು ಆ ಮಾರ್ಗವನ್ನು ಅನುಸರಿಸಬಾರದು. ಸಾಧ್ಯವಿದ್ದಮಟ್ಟಿಗೆ ವಂಗೇಶ್ವರನಿಗೆ ನೆರವಾಗುವದೇ ಧರ್ಮವಾಗಿರುವದು.”

“ಊರ್ಮಿಳೆ! ನೀನು ನನಗೆ ಧರ್ಮೋಪದೇಶ ಮಾಡುವೆಯಾ? ನಿನಗೆ ರಾಜಕಾರಣದಲ್ಲಿ ಏನು ತಿಳಿಯುವದು? ಇನ್ನು ಮೇಲೆ ನೀನು ರಾಜಕೀಯ ಗೊಂದಲದಲ್ಲಿ ಬಿದ್ದರೆ ನನಗೆ ಸಹಿಸದು. ಯಾವ ದಾರಿಯಿಂದ ನಡೆದರೆ ಹಿತವಾಗುವದೆಂಬ ಸಂಗತಿಯು ನಿನಗೆ ತಿಳಿಯದು. ಸ್ತ್ರೀಯಾದ, ಅದರಲ್ಲಿ ಬಾಲಿಕೆಯಾದ ನೀನು ರಾಜಕಾರಸ್ಥಾನವನ್ನು ತಿಳಿಯಲಾರೆ. ಇನ್ನು ಮೇಲೆ ನೀನು ಇಂಥ ಕೈಸಾಗದ ಕೆಲಸ ಮಾಡಬೇಡ.”

ಹರಿನಾರಾಯಣನು ದರ್ಪೋಕ್ತಿಯಿಂದ ಹೀಗೆ ನುಡಿದು, ಊರ್ಮಿಳೆಯ ಕೋಣೆಯಿಂದ ಹೊರಬಿದ್ದು ಮಂತ್ರಣಾಗಾರಕ್ಕೆ ಬಂದನು. ಆಗ ಅವನು ತನ್ನ ದೂತನನ್ನು ಕುರಿತು—“ಬೂಧನ!”

ಬೂಧನನು ಅಲ್ಲಿಗೆ ಬಂದು ಹರಿನಾರಾಯಣನಿಗೆ ನಮಸ್ಕಾರ ಮಾಡಿ ನಿಂತನು.

"ಬೂಧನ," ಹರಿನಾರಾಯಣನು ಅಧಿಕಾರವಾಣಿಯಿಂದ—"ನೀನು ನಾಲ್ಕು ಜನ ಕಾವಲುಗಾರರನ್ನು ತೆಗೆದುಕೊಂಡು ಹೋಗಿ, ದಿಲೀಪಸಿಂಹ ನನ್ನು ಸೆರೆ ಹಿಡಿದುಕೊಂಡು ಬಾ ಅವನನ್ನು ಸದ್ಯಕ್ಕೆ ಸೆರೆಮನೆಯಲ್ಲಿ ಹಾಕು. ನನ್ನ ಆಜ್ಞೆಯಾಗುವವರೆಗೆ ಅವನನ್ನು ಬಂಧಮುಕ್ತಗೊಳಿಸಬಾರದು."

"ಆಜ್ಞಾ ಮಹಾನ್!" ಬೂಧನನು ಅಲ್ಲಿಂದ ಹೊರಡಲುದ್ಯುಕ್ತನಾದ ನು. ಆಗ ಹರಿನಾರಾಯಣನು-"ನಾಳೆ ಅಥವಾ ನಾಡದು ಇಲ್ಲಿಂದ ಹೊರಡ ಬೇಕಾಗಿದೆ. ಆದ್ದರಿಂದ ಗರಡಿಯೊಳಗೆ ಸಿದ್ಧರಾದ ಕೆಲವು ನಾಮಾಂಕಿತ ಸೈನಿ ಕರನ್ನು ನನ್ನ ಕಡೆಗೆ ನಾಳೆಗೆ ಕಳುಹಿಸಬೇಕೆಂದು ಸೇನಾಪತಿಗೆ ತಿಳಿಸು. ಈ ಎರಡೂ ಕೆಲಸಗಳನ್ನು ಚನ್ನಾಗಿ ಲಕ್ಷ್ಯಗೊಟ್ಟು ಪೂರೈಸು. ಮೊದಲು ದಿಲೀಪ ಸಿಂಹನನ್ನು ಸೆರೆಯಲ್ಲಿ ಹಾಕು."

ಬೂಧನನು ರಾಜನಿಗೆ ಅಭಿವಾದನ ಮಾಡಿ ಹೊರಟುಹೋದನು.

---

೬ನೆಯ ಪರಿಚ್ಛೇದ.

"ಎಲೋ, ಮುಂದೆ ಹೋಗಬೇಡಿರಿ! ಇದೇ ಸ್ಥಳದಲ್ಲಿ ಪಲ್ಲಕ್ಕಿಗಳ ನ್ನಿಳಿಸಿರಿ! ಮುಂದೆ ಹೆಜ್ಜೆಯಿಟ್ಟರೆ ಪ್ರಾಣಕ್ಕೆ ಎರವಾಗುವಿರಿ."

ಬೋವಿಗಳು ಈ ಕ್ರೂರವಾಣಿಯನ್ನು ಕೇಳಿ ಬೆದರಿ, ಮೂರೂ ಪಲ್ಲ ಕ್ಕಿಗಳನ್ನು ಅರಣ್ಯದಲ್ಲಿ ಇಳಿಸಿದರು.

ಪಲ್ಲಕ್ಕಿಗಳನ್ನಿಳಿಸಲಿಕ್ಕೆ ಆಜ್ಞೆ ಮಾಡಿದವನು ಒಬ್ಬ ಸಶಸ್ತ್ರ ಅಶ್ವಾ ರೋಹಿಯಾಗಿದ್ದನು. ಅವನೊಡನೆ ಕೆಲವು ಜನ ಸಶಸ್ತ್ರ ಸೈನಿಕರಿದ್ದರು. ಅಶ್ವಾ ರೋಹಿಯ ಆಜ್ಞೆಯ ಮೇರೆಗೆ ಬೋವಿಗಳು ಪಲ್ಲಕ್ಕಿಗಳನ್ನು ಕೆಳಗಿಳಿಸಿದರು. ಅಶ್ವಾರೋಹಿಯೂ ಅವನ ಅನುಚರರೂ ಪಲ್ಲಕ್ಕಿಗಳನ್ನು ಸುತ್ತುಗಟ್ಟಿ ನಿಂತರು.

ಮೊದಲನೆಯ ಪಲ್ಲಕ್ಕಿಯಲ್ಲಿ ವಿಶ್ವಲಾವಣ್ಯಮಯಿಯೂ ಸೌಂದರ್ಯ ಮಾಧುರ್ಯಪೂರ್ಣಳೂ ಕುಸುಮಕೋಮಲಳೂ ನಾನಾಲಂಕಾರ ವಿಭೂಷಿತ ಳೂ ಆದ ಒಬ್ಬ ಕಿಶೋರಿಯಿದ್ದಳು. ಎರಡನೆಯ ಪಲ್ಲಕ್ಕಿಯಲ್ಲಿ ಮಧ್ಯಮ ವಯಸ್ಕಳೂ, ರೂಪವತಿಯೂ, ಮಾತೃಮೂರ್ತಿರೂಪಿಣಿಯೂ ಆದ ರಮ ಣಿಯಿದ್ದಳು. ಮೂರನೆಯದರಲ್ಲಿ ಬಹು ಮೂಲ್ಯ ವೇಷಧಾರಿಯಾದ ಒಬ್ಬ ಶಾಂತಮೂರ್ತಿ ಪುರುಷನಿದ್ದನು.

ಅಶ್ವಾರೋಹಿಯಾದ ಪುರುಷನು ಕಿಶೋರಿಯ ಪಲ್ಲಕ್ಕಿಯ ಬಳಿಯಲ್ಲಿ

ಬಂದು—"ಸುಂದರಿ! ಪಲ್ಲಕ್ಕಿಯಿಂದ ಹೊರಬೀಳು ನೋಡುವಾ?"

ಕಿಶೋರಿಯು ಸುಮ್ಮನೆ ಪಲ್ಲಕ್ಕಿಯಿಂದ ಹೊರಗೆ ಬಂದಳು. ಆಗ ಅಶ್ವಾರೋಹಿಯು ಶಿಬಿರಾರೋಹಿಯಾದ ಪುರುಷನನ್ನು ಕುರಿತು:—"ನಿಮ್ಮ ಹಾಗು ನಿಮ್ಮ ಸ್ತ್ರೀಯ ಬಳಿಯಲ್ಲಿ ನನ್ನ ಕೆಲಸವೇನೂ ಇಲ್ಲ. ಈಗ ನನ್ನ ಮುಖ್ಯ ಕೆಲಸವಾಯಿತು. ನಿಮ್ಮ ಪತ್ನಿಯ ಮೈಮೇಲಿನ ಅಲಂಕಾರಗಳನ್ನು ಕೊಡಿಸಿರಿ. ಅಪಮಾನಿತರಾಗಬಾರದೆಂದು ನಿಮ್ಮ ಇಚ್ಛೆಯಿದ್ದರೆ ನನ್ನ ಆಜ್ಞೆಯಂತೆ ನಡೆಯಿರಿ."

ಶಿಬಿರಾರೋಹಿಯ ಹೆಸರು ರುದ್ರಪತಿಯೆಂದಿತ್ತು. ರುದ್ರಪತಿಯು ತನ್ನ ಪತ್ನಿಗೆ ಅಲಂಕಾರ ಕೊಡಲಿಕ್ಕೆ ಸನ್ನೆ ಮಾಡಿದನು. ಅವಳು ತನ್ನ ಆಭೂಷಣಗಳನ್ನೆಲ್ಲ ಅಶ್ವಾರೋಹಿಯ ಕಡೆಗೆ ಕೊಟ್ಟಳು. ಅಶ್ವಾರೋಹಿಯು ಅವುಗಳನ್ನು ಒಂದು ವಸ್ತ್ರದಲ್ಲಿ ಕಟ್ಟಿ ಬಳಿಯಲ್ಲಿರಿಸಿಕೊಂಡು ಕಿಶೋರಿಯನ್ನು ಕುರಿತು:—"ಲಾವಣ್ಯಮಯಿ, ಈಗ ನೀನು ನನ್ನ ಸ್ವಾಧೀನಳಾದೆ."

"ಏನು? ನನ್ನ ಕುಮಾರಿಯೆ?" ಎಂದು ವ್ಯಗ್ರಕಂಠದಿಂದ ರುದ್ರಪತಿಯು ಅಶ್ವಾರೋಹಿಯನ್ನು ಕೇಳಿದನು.

"ಹೌದು. ನಿಮ್ಮ ಕನ್ಯೆಯು ನನ್ನ ಸ್ವಾಧೀನಳಾಗಿರುವಳು. ಈ ಮಾತಿನಲ್ಲಿ ನಿಮಗೆ ಹೇಗೆ ಸಂಶಯವುಂಟಾಯಿತು? ನಾನು ನಿಮ್ಮ ಕುಮಾರಿಯ ಪರಿತ್ಯಾಗ ಮಾಡಲಿಕ್ಕೆ ಅಸಮರ್ಥನಾಗಿರುವೆನು" ಎಂದು ಅಶ್ವಾರೋಹಿಯು ಗಂಭೀರತೆಯಿಂದ ರುದ್ರಪತಿಗೆ ಹೇಳಿ, ಅವನ ಉತ್ತರದ ಪ್ರತೀಕ್ಷೆ ಮಾಡದೆ ಅವನನ್ನು ಬಂಧಿಸಿ, ಆ ಕಿಶೋರಿಯನ್ನು ಕುರಿತು:—"ಸುಂದರಿ, ಹೀಗೇಕೆ ಬೆದರಿದ ಜಿಂಕೆಯಂತೆ ನಿಂತೆ? ಬಾ, ನನ್ನ ಹಿಂದೆ ಬಾ."

"ಎಲ್ಲಿಗೆ?" ಕೋಗಿಲೆಗಿಂತಲೂ ಮಧುರವಾದ ಧ್ವನಿಯಿಂದ ಕಿಶೋರಿಯು ಕೇಳಿದಳು.

"ನನ್ನ ನಿವಾಸಸ್ಥಾನಕ್ಕೆ."

"ಯಾತಕ್ಕೆ?"

"ಯಾತಕ್ಕೆ? ಇದೇನು ಯಾತಕ್ಕೆಂದು ಕೇಳುವೆ? ಯಾತಕ್ಕೆಂಬುದನ್ನು ನೀನು ಅರಿಯೆಯಾ? ಪ್ರಣಯಿನಿಯು ಪ್ರಣಯಾಪೇಕ್ಷೆಯನ್ನು ಅನುಸರಿಸಬೇಕೆಂಬ ಶಾಸ್ತ್ರವನ್ನು ನೀನು ತಿಳಿದಿಲ್ಲವೇನು? ರಮಣಿ, ನನ್ನನ್ನು ಯಾರೆಂದು ತಿಳಿದಿರುವೆ? ನಾನು ಸುಲಿಗೆಗಾರರ ನಾಯಕನಾದ ಜಾಲಿಮಸಿಂಹನು! ನನ್ನ

ಕೋಶವು ಧನೈಶ್ವರ್ಯಪರಿಪೂರ್ಣವಿರುವದು; ಆದರೆ ನನ್ನ ಭಾಂಡಾರದಲ್ಲಿ ನಿನ್ನಂತಹ ರಮಣೀರತ್ನದ ಕೊರತೆಯಿತ್ತು. ಇಂದು ಪರಮಾತ್ಮನ ಅನುಗ್ರಹ ದಿಂದ ಆ ಕೊರತೆಯು ದೂರಾಯಿತು. ಇಂತಹ ರತ್ನವು ನನಗೆ ಹಿಂದೆ ಎಂದೂ ದೊರೆತಿದ್ದಿಲ್ಲ; ಮುಂದೆಯಾದರೂ ದೊರೆಯುವದಿಲ್ಲ."

"ಈ ರಮಣೀರತ್ನವು ನಿನ್ನ ಕೋಶವನ್ನು ವಿಭೂಷಿತಗೊಳಿಸುವದ ಕ್ಕಾಗಿ ಇರುವದಿಲ್ಲ. ದಸ್ಯುವೆ! ವೃಥಾ ಕಲಹ ಬೇಡ ನನ್ನ ಮೈಮೇಲಿನ ಬಹು ಮೌಲ್ಯವಾದ ಮಣಿಮಯ ಆಭೂಷಣಗಳನ್ನು ಇಚ್ಛಿಸುತ್ತಿದ್ದರೆ, ಸಂತೋಷ ದಿಂದ ಕೊಡುವೆನು; ಹೇರಳವಾದ ಧನವನ್ನು ಕೊಡುವೆನು. ಸರದಾರರೇ, ಇವುಗಳನ್ನು ತೆಗೆದುಕೊಂಡು ನನಗೆ ಮುಕ್ತಿಪ್ರದಾನ ಮಾಡಿರಿ."

"ಸುಂದರೀ, ಹೀಗೇಕೆ ನುಡಿಯುತ್ತಿರುವೆ? ನಿನ್ನ ತಂದೆಯ ಅತುಲೈಶ್ವ ರ್ಯವು ನನ್ನ ಸಂಪತ್ತಿನ ಒಂದು ಅಂಶದಷ್ಟಾದರೂ ಆಗದು. ಒಂದು ರಾಜ್ಯವನ್ನು ಕೊಳ್ಳುವಷ್ಟು ಐಶ್ವರ್ಯವು ನನ್ನಲ್ಲಿರುವದು. ನಾನು ನಿನ್ನ ತುಚ್ಛವಾದ ಐಶ್ವ ರ್ಯಕ್ಕೆ ಮೋಹಿತನಾಗಿಲ್ಲ. ನಾನು ಮೋಹಿತನಾದದ್ದು ನಿನ್ನ ಸಲುವಾಗಿ. ತಡ ಮಾಡದೆ ನೀನು ನನ್ನ ಹಿಂದೆ ಹೊರಡು. ಈ ನಿಬಿಡವಾದ ಕಾನನದಲ್ಲಿ ಶಿಬಿರಾ ರೋಹಿಯಾಗಿ ಹೊರಡುವದು ಸಾಧ್ಯವಿಲ್ಲ. ಅದಕ್ಕಾಗಿ ನೀನು ಪಾದಚಾರಿ ಯಾಗಿಯೇ ಬರಬೇಕಾಗುವದು. ನಿನ್ನಂತಹ ಸುಕೋಮಲ ತನುಧಾರಿ ಯನ್ನು ಪಾದಚಾರಿಯಾಗಿ ಕರೆದುಕೊಂಡು ಹೋಗಬೇಕಾಯಿತೆಂದು ನನಗೆ ಪರಮಾವಧಿ ದುಃಖವಾಗುವದು. ಅದಕ್ಕೆ ಉಪಾಯವಿಲ್ಲ. ಇಚ್ಛೆಯಿದ್ದರೆ ನಿನ್ನನ್ನು ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಹೋಗಲಿಕ್ಕೆ ಈ ಸೇವಕನು ಸಿದ್ಧನಿರುವನು. ನನ್ನೊಡನೆ ಕುದುರೆಯ ಮೇಲೆ ಕುಳಿತುಕೊಳ್ಳಲಿಕ್ಕೆ ನೀನು ಆನಂದದಿಂದ ಒಪ್ಪುವೆಯಾ? ಸ್ತ್ರೀಯರಲ್ಲಿ ಸಹಜಸಿದ್ಧವಾದ ಲಜ್ಜೆಯು ಅಡ್ಡ ಬರಲಿಕ್ಕಿಲ್ಲವೆ?"

ಜಾಲಿಮಸಿಂಹನ ಕಟುಭಾಷಣಗಳನ್ನು ಕೇಳಿ ಕಿಶೋರಿಯು ಎದೆಯೊ ಡೆದಳು. ತನ್ನ ಮೇಲೆ ಭಯಂಕರವಾದ ಗಂಡಾಂತರವು ಬಂದಿತೆಂದು ತಿಳಿದು, ಹೇಗೆ ಪಾರಾದೇನೆಂದು ಚಿಂತಿಸತೊಡಗಿದಳು. ಅವಳು ಸುಲಿಗೆಗಾರರ ನಾಯಕ ನಿಗೆ ಅಂತಃಕರಣವು ಹುಟ್ಟುವಂತೆ ಬೇಡಿಕೊಳ್ಳಬೇಕೆಂದು ಯೋಚಿಸಿ, ಮೊಳ ಕಾಲೂರಿ ಕೈಜೋಡಿಸಿ ಕಾತರಕಂಠದಿಂದ:-"ನಾನು ದೀನಳೂ ನಿರಾಶ್ರಿತಳೂ ಆದ ಅಬಲೆಯಿರುವೆನು. ನನಗೆ ದಯಮಾಡಿ ಮುಕ್ತಿದಾನ ಮಾಡಿರಿ. ಪರ

ಮಾತ್ಮನು ಅನೇಕ ಧಾರೆಗಳಿಂದ ನಿಮ್ಮ ಮಸ್ತಕದ ಮೇಲೆ ಶುಭಾಶೀರ್ವಾದ ವೃಷ್ಟಿಗರೆಯಲಿ. ದಯಮಾಡಿ ನನಗೆ ಮುಕ್ತಿಭಿಕ್ಷೆ ಹಾಕಿರಿ."

"ಸುಂದರಿ, ಈ ಭಿಕ್ಷೆಯ ಹೊರತು ಪಡಿಸಿ ಮತ್ತೇನನ್ನಾದರೂ ಇಚ್ಛಿಸಿದರೆ ಅವಶ್ಯವಾಗಿ ಕೊಡುವೆನು. ನನ್ನ ಸಮಸ್ತೈಶ್ವರ್ಯಗಳನ್ನು ನಿನ್ನ ಚರಣಕಮಲಗಳಿಗೆ ಸಮರ್ಪಿಸುವೆನು; ಆದರೆ ನಾನು ನಿನ್ನ ಪರಿತ್ಯಾಗ ಮಾಡುವದಿಲ್ಲ"

ಕಿಶೋರಿಯು ಎದ್ದು ನಿಂತಳು. ನೇತ್ರಗಳಿಂದ ಹರಿಯತೊಡಗಿದ ಅಶ್ರುಧಾರೆಗಳು ಒಮ್ಮೆಲೆ ಬತ್ತಿಹೋದವು. ದುಃಖಾಶ್ರುಗಳಿಗೆ ಪ್ರತಿಯಾಗಿ ನೇತ್ರಗಳಿಂದ ಅಗ್ನಿಕಣಗಳು ಹೊರಡುತ್ತಿರುವಂತೆ ಭಾಸಮಾನವಾಗಹತ್ತಿತು. ಮುಖವು ಆರಕ್ತವಾಯಿತು. ವಿಷಾದ ಚಿಹ್ನಗಳಿಂದೊಡಗೂಡಿದ ಮುಖಚರ್ಯೆಯು ಗಂಭೀರತೆಯನ್ನು ಹೊಂದಿತು. ಅವಳಲ್ಲಿಯ ದುಃಖ-ಔದಾಸೀನ್ಯಗಳೆಲ್ಲ ತೊಲಗಿ ಹೋಗಿ ವಿದ್ಯುತ್ತಿನಂತೆ ತೇಜಸ್ವಿಯಾದಳು. ಕಂಠದಲ್ಲಿಯ ಕಾತರತೆಯು ನಾಶವಾಗಿ, ಆ ಸ್ಥಳದಲ್ಲಿ ಕಠೋರತೆಯು ವ್ಯಾಪಿಸಿತು. ಅವಳು ಗಾಂಭೀರ್ಯದಿಂದ:—"ನೀವು ನನ್ನನ್ನು ಬಿಡುವದಿಲ್ಲವೆ?"

"ಇಲ್ಲ, ಬಿಡುವದಿಲ್ಲ."

"ಮುಕ್ತಿದಾನ ಮಾಡುವದಿಲ್ಲವೆ?"

"ಇಲ್ಲ."

"ಕಡೆಯ ಬಾರಿ ವಿಚಾರಿಸುವೆನು. ನೀವು ನನಗೆ ಮುಕ್ತಿದಾನ ಮಾಡುವದಿಲ್ಲವೆ?"

"ನಾನಾದರೂ ಕಡೆಯ ಬಾರಿ ಹೇಳುವೆನು. ನಾನು ನಿನ್ನನ್ನು ಖಂಡಿತವಾಗಿ ಬಿಡುವದಿಲ್ಲ."

"ನಾನಾದರೂ ಖಂಡಿತವಾಗಿ ಹೇಳುವೆನು. ನೀವು ನನ್ನನ್ನು ದೊರಕಿಸಬೇಕೆಂಬ ಹವ್ಯಾಸಕ್ಕೆ ಬೀಳಬೇಡಿರಿ. ನನ್ನ ಅಂಗಸ್ಪರ್ಶ ಮಾಡಲಿಕ್ಕೆ ನೀವು ಸಮರ್ಥರಾಗಲಾರಿರಿ!"

"ರಮಿಣಿ, ನಾನು ಸಮರ್ಥನೋ ಅಸಮರ್ಥನೋ ಎಂಬದು ನಿನ್ನ ಪ್ರತ್ಯಯಕ್ಕೆ ಬೇಗನೆ ಬರುವದು."

"ದಸ್ಯುವೆ! ನಾನು ಹೇಗೆ ಅಲಭ್ಯಳೆಂಬದು ನಿನ್ನ ಪ್ರತ್ಯಯಕ್ಕಾದರೂ ಬರುವದು."

ಆ ಬಾಲಿಕೆಯು ಹೀಗೆ ಗರ್ಜಿಸಿ ಉಡಿಯಲ್ಲಿ ಬಚ್ಚಿಟ್ಟ ಕೈಗತ್ತಿಯನ್ನು ಹಿರಿದು ನಿಂತಳು. ಅವಳ ಈ ವೃತ್ತಿಯನ್ನು ನೋಡಿ ಜಾಲಿಮಸಿಂಹನು ವಿಸ್ಮಿತನಾಗಿ ನಿಂತನು. ಆಗ ಆ ಸ್ತ್ರೀಯು ಗಂಭೀರಭಾವದಿಂದ: —"ಸರದಾರರೇ, ನೋಡಿರಿ; ನಿಮ್ಮ ಆಶೆಯು ಹೇಗೆ ವ್ಯರ್ಥವಾಗುವದೆಂಬದನ್ನು ಕಣ್ಣಾರೆ ನೋಡಿರಿ."

"ಸುಂದರಿ, ಆತ್ಮಹತ್ಯೆ ಮಾಡಿಕೊಳ್ಳುವೆಯಾ?"

"ಇದನ್ನು ಹೊರತು ಪಡಿಸಿ ಮತ್ತಾವ ಉಪಾಯದಿಂದ ನನ್ನ ಶೀಲ-ಮಾನ ರಕ್ಷಣೆಯಾಗುವದು?"

"ಉಪಾಯವುಂಟು."

"ಯಾವ ಉಪಾಯವು?"

"ಲಾವಣ್ಯಲತಿಕೆ!..............."

"ವಿಷಯವನ್ನು ಪ್ರಾರಂಭಿಸಿದಿರಿ. ನಿಮ್ಮ ನಾಟಕೀಯ ಸಂಬೋಧನೆಯ ವೈಚಿತ್ರ್ಯವನ್ನು ನಾನು ಬಯಸುವದಿಲ್ಲ."

"ಕಮಲಮುಖಿ, ನೀನು ನಿನ್ನ ತಂದೆಗೆ ಹೇಳಿ ಮೊಗಲ ಪ್ರಧಾನ ಕರ್ಮಚಾರಿಗಳ ಹಾಗು ಜಮೀನದಾರ ಸಮುದ್ರಾಯದ ಪರಿಚಯ ಮಾಡಿಕೊಡು."

"ಅವರ ಪರಿಚಯದಿಂದ ನಿಮಗೆ ಲಾಭವೇನು?"

"ಯಾರ ಯಾರ ಬಳಿಯಲ್ಲಿ ಎಷ್ಟೆಷ್ಟು ಧನವಿರುವದೆಂಬದು ತಿಳಿದರೆ ನನ್ನ ಸುಲಿಗೆಯ ಕೆಲಸಕ್ಕೆ ವಿಶೇಷವಾದ ಅನುಕೂಲವಾಗುವದು."

"ಒಳ್ಳೇದು. ನಾನು ಈ ವಿಷಯವನ್ನು ನನ್ನ ತಂದೆಯವರಿಗೆ ತಿಳಿಸುವೆನು."

ಕಿಶೋರಿಯು ಹೀಗೆ ನುಡಿದು ಕೈಗತ್ತಿಯನ್ನು ಮೊದಲಿನ ಸ್ಥಳದಲ್ಲಿರಿಸಿ ತಂದೆಯ ಬಳಿಗೆ ಹೊರಡಲುದ್ಯುಕ್ತಳಾದಳು. ಸುಲಿಗೆಗಾರರ ಸರದಾರನಾದ ಜಾಲಿಮಸಿಂಹನು ಕುದುರೆಯಿಂದಿಳಿದು ಅವಳ ಬಳಿಗೆ ಹೋಗಿ ಒಮ್ಮೆಲೆ ಅವಳ ಕೈಗಳನ್ನು ಗಟ್ಟಿಯಾಗಿ ಹಿಡಿದು:—"ರಮಣಿ, ಈ ಸಮಯದಲ್ಲಿ ನಿನ್ನ ರಕ್ಷಣೆ ಮಾಡಲಿಕ್ಕೆ ನನ್ನ ಹೊರತು ಯಾರು ಸಮರ್ಥರಿರುವರು?"

"ಧರ್ಮವು! ಧರ್ಮವು ನನ್ನನ್ನು ರಕ್ಷಿಸುವದು!"

"ಧರ್ಮವೇ? ಶಾಬಾಸ! ಒಳ್ಳೇ ಸುರಕ್ಷಿತವಾದ ಸ್ಥಾನವನ್ನು ಆಶ್ರಯಿಸಲಿಚ್ಛಿಸಿದೆ. ಧರ್ಮವು ಈ ಕಲಿಯುಗದಲ್ಲಿ ಯಾರನ್ನು ರಕ್ಷಿಸಿರುವದು? ಧರ್ಮ

ವನ್ನು ನಂಬಿ ಕೆಟ್ಟವರ ಉದಾಹರಣೆಗಳನ್ನು ಎಷ್ಟಾದರೂ ತೋರಿಸುವೆನು. ಅಧರ್ಮದಿಂದ ನಡೆದು ಉದ್ಧಾರಹೊಂದಿದ ದೃಷ್ಟಾಂತಗಳು ಹೇರಳವಾಗಿ ರುವವು."

"ಮೂರ್ಖ, ನನ್ನ ಸಹನಶೀಲತೆಯ ಹಾಗು ವಿನಯದ ಅಂತವನ್ನು ಪರೀಕ್ಷಿಸಲುದ್ಯುಕ್ತನಾದಂತೆ ತೋರುವದು. ಕೈಗಳನ್ನು ಬಿಡುವೆಯೋ ಇಲ್ಲವೋ? ಧರ್ಮವು ಪ್ರತಿಯೊಬ್ಬ ಮನುಷ್ಯನನ್ನು ರಕ್ಷಿಸುತ್ತ ಬಂದಿರುವದು. ಧರ್ಮನಿರತರು ಯಾವ ಯುಗದಲ್ಲಿಯೂ ಕೆಟ್ಟಿಲ್ಲ. ನಿನ್ನಂತಹ ನೀಚ ಕರ್ಮಿ ಗಳು ದುರಾಚರಣೆಯಿಂದ ಮೊದಲು ಸುಖಹೊಂದಿದಂತೆ ಕಾಣುತ್ತಿದ್ದರೂ ಹಿಂದಿನಿಂದ ಕೃತಕರ್ಮಪ್ರಾಯಶ್ಚಿತ್ತ ಹೊಂದುವರು."

"ಧರ್ಮದಲ್ಲಿ ಎಷ್ಟು ಶಕ್ತಿಯಿರುವದೆಂಬದನ್ನು ನಾನು ತಿಳಿದುಕೊಳ್ಳ ಲಿಚ್ಛಿಸುತ್ತಿರುವೆನು. ಅದರಲ್ಲಿ ನಿಜವಾದ ಶಕ್ತಿಯಿದ್ದರೆ ನಿನ್ನನ್ನು ನನ್ನ ಕೈ-, ಯಿಂದ ಪಾರುಮಾಡಲಿ."

ಜಾಲಿಮಸಿಂಹನು ಬಾಲಿಕೆಯ ಕೈಗಳನ್ನು ಹಿಡಿದೆಳೆದನು. ದೇಹದೊಳ ಗಿನ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಸುಲಿಗೆಗಾರನ ಕೈಯೊಳಗಿಂದ ಪಾರಾ ಗುವದಕ್ಕಾಗಿ ಆ ಬಾಲಿಕೆಯು ಬಹುಪರಿಯಾಗಿ ಯತ್ನಿಸತೊಡಗಿದಳು; ಆದರೆ ಎಲ್ಲವೂ ವ್ಯರ್ಥವಾಯಿತು. ಅವಳು ನಿರುಪಾಯಳಾಗಿ ಆಕಾಶದ ಕಡೆಗೆ ಮುಖಮಾಡಿ ಪರಮಾತ್ಮನಿಗೆ ಮೊರೆಯಿಟ್ಟಳು. ಕೊನೆಗೆ ಅವಳು ದೀನವಾಣಿ ಯಿಂದ:—"ಅಯ್ಯೋ! ಯಾರಾದರೂ ಬನ್ನಿರಿ. ಬೇಗನೆ ಬನ್ನಿರಿ, ವಿದ್ಯುದ್ಗತಿ ಯಿಂದ ಬನ್ನಿರಿ. ಸುಲಿಗೆಗಾರನ ಕೈಯಿಂದ ಒಬ್ಬ ಕುಲಯುವತಿಯ ಸರ್ವ ಸ್ವವು. ಹಾಳಾಗತೊಡಗಿದೆ. ದೇವಾ, ನನ್ನನ್ನು ರಕ್ಷಿಸು, ರಕ್ಷಿಸು!"

"ಅಂಜಬೇಡ! ಅಂಜಬೇಡ!"

ದೂರದಿಂದ ಗಂಭೀರವಾದ ಅಭಯವಾಣಿಯು ಕೇಳತೊಡಗಿತು. ಎಲ್ಲರೂ ಆಶ್ಚರ್ಯಚಕಿತರಾಗಿ ಧ್ವನಿಯು ಕೇಳಬರುತ್ತಿರುವ ನಿಟ್ಟಿಗೆ ನೋಡ ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿಯೆ ವಾಯುವೇಗದಿಂದ ಒಬ್ಬ ಅಶ್ವಾ ರೋಹಿಯಾದ ರಜಪುತ ತರುಣನು ಬರುತ್ತಿರುವದನ್ನು ಅವರು ನೋಡಿ ದರು. ಕೂಡಲೆ ಜಾಲಿಮಸಿಂಹನು ಬಾಲಿಕೆಯ ಬಳಿಯಲ್ಲಿದ್ದ ಕೈಗತ್ತಿಯನ್ನು ಕಿತ್ತಿದು ತನ್ನ ಬಳಿಯಲ್ಲಿರಿಸಿಕೊಂಡು ಕುದುರೆಯನ್ನೇರಿ ತನ್ನ ಖಡ್ಗವನ್ನು ಒರೆಯಿಂದ ಹಿರಿದು ರಜಪುತ ತರುಣನ ಆಕ್ರಮಣವನ್ನು ನಿರೋಧಿಸಲಿಕ್ಕೆ

ಸಿದ್ಧನಾದನು. ಅವನ ಅನುಚರರಾದರೂ ಕಾಳಗಕ್ಕೆ ಅಣಿಯಾದರು.

ನೋಡನೋಡುವಷ್ಟರಲ್ಲಿ ರಜಪುತ ತರುಣನು ಅಲ್ಲಿಗೆ ಬಂದು ಸಂತಾಪದಿಂದ:—"ರಮಣೀಪೀಡಕ ನರಘಾತಕ ದಸ್ಯುವೇ! ಜೀವನದ ವಿಷಯವಾಗಿ ಮಮತೆಯಿದ್ದರೆ ಶಸ್ತ್ರತ್ಯಾಗ ಮಾಡಿ ಇದೇ ಕ್ಷಣದಲ್ಲಿ ಹೊರಟು ಹೋಗು!"

ರಜಪುತ ತರುಣನ ಮಾತುಗಳನ್ನು ಕೇಳಿ ಜಾಲಿಮಸಿಂಹನು ಗಹಗಹಿಸಿ ನಗತೊಡಗಿದನು. ಅನಂತರದಲ್ಲಿ ಅವನು ಗಂಭೀರವಾಣಿಯಿಂದ:—"ನೀನು ಸ್ವೇಚ್ಛೆಯಿಂದ ಆತ್ಮಬಲಿಯೊಪ್ಪಿಸಲು ಬಂದಿರುವೆಯಾ? ಎಲೋ, ಹೊರಟು ಹೋಗು. ನಿನ್ನ ತಾಯಿ-ತಂದೆಗಳು ಜೀವದಿಂದಿದ್ದರೆ ಕಡೆತನಕ ಅವರ ಕಣ್ಣುಗಳಲ್ಲಿಯ ಅಶ್ರುಧಾರೆಯು ತಪ್ಪಲಿಕ್ಕಿಲ್ಲ."

"ಸಾವನ್ನು ಬಯಸುವ ಪಿಶಾಚಿಯೇ, ನೀನು ಬೇಗನೆ ಮೃತ್ಯುಪಥವನ್ನು ಹಿಡಿಯುವೆ." ಎಂದು ರಜಪುತ ತರುಣನು ಕ್ಷುದ್ರನಾಗಿ ನುಡಿದು, ಜಾಲಿಮಸಿಂಹನ ಮೇಲೆ ಏರಿ ಹೋದನು. ಜಾಲಿಮಸಿಂಹನಾದರೂ ತನ್ನ ಸಂಗಡಿಗರೊಡನೆ ಆಗಂತುಕ ತರುಣನ ಮೇಲೆ ಆಕ್ರಮಣ ಮಾಡಿದನು. ಮೊದಲನೆಯ ಆವೇಶದಲ್ಲಿಯೇ ಜಾಲಿಮಸಿಂಹನು ರಜಪುತ ತರುಣನ ಯೋಗ್ಯತೆಯನ್ನು ತಿಳಿದನು. ಒಬ್ಬನೇ ಒಬ್ಬನಾದ ತರುಣನು ಸುಶಿಕ್ಷಿತರಾದ ನಾಲ್ಕಾರು ಜನ ಶಸ್ತ್ರಕುಶಲ ಯೋಧರೊಡನೆ ತಡೆಯಿಲ್ಲದೆ ಕಾದತೊಡಗಿದ್ದನ್ನು ನೋಡಿ ಅವನು ಸಾಮಾನ್ಯನಲ್ಲವೆಂದು ಜಾಲಿಮಸಿಂಹನು ಮನವರಿಕೆ ಮಾಡಿಕೊಂಡನು. ಅವನು ತನ್ನ ಸೈನಿಕರನ್ನು ಹುರುಪುಗೊಳಿಸುತ್ತ ತುಮುಲುವಾದ ಯುದ್ಧವನ್ನು ನಡೆಯಿಸಿದನು. ನಾಲ್ಕೆಂಟು ಜನರೊಡನೆ ಕಾದಿ ವಿಜಯಸಂಪಾದನೆ ಮಾಡಿಕೊಳ್ಳುವದು ಅಸಂಭವವೆಂದು ರಜಪುತ ತರುಣನು ತಿಳಿದಿದ್ದನು; ಆದರೆ ಒಬ್ಬ ಕಲೀನ ಸತಿಯು ಪಾವಿತ್ರ್ಯರಕ್ಷಣೆ ಮಾಡುವಾಗ ತನಗೆ ಮರಣವೊದಗಿದರೂ ಅಡ್ಡಿಯಿಲ್ಲವೆಂದು ಅವನು ಒಳ್ಳೆಯ ಸ್ಫೂರ್ತಿಯಿಂದ ಕಾದತೊಡಗಿದನು ಅವನ ಬಾಹುಗಳಲ್ಲಿ ರಾಕ್ಷಸೀ ಶಕ್ತಿಯು ಪ್ರಾದುರ್ಭವಿಸಿತು. ಅವನು ವಾಯುವೇಗದಿಂದ ಸಾಗಿಹೋಗಿ ಜಾಲಿಮಸಿಂಹನ ಖಡ್ಗಕ್ಕೆ ತನ್ನ ಖಡ್ಗದಿಂದ ಹೊಡೆದನು. ರಜಪುತ ತರುಣನ ಖಡ್ಗಾಘಾತದಿಂದ ಜಾಲಿಮಸಿಂಹನ ಖಡ್ಗವು ಮುರಿದು ಹೋಯಿತು. ಕೂಡಲೆ ರಜಪುತ ತರುಣನು ಅವನನ್ನು ಕುದುರೆಯಿಂದ ನೆಲಕ್ಕೆ ಕೆಡಹಿದನು. ಭೂಮಿಗೆ ಬೀಳುವಾಗ ಅವನ ತಲೆಯು ಕಲ್ಲಿಗೆ ಬಡೆದದ್ದರಿಂದ ಅವನು ಮೂರ್ಛಿತ

ನಾದನು ಅವನ ಸಂಗಡಿಗರು ಒಡೆಯನ ದುರ್ದೆಶೆಯನ್ನು ನೋಡಿ ಬೆದರಿ, ಅಲ್ಲಿಂದ ಪಲಾಯನ ಮಾಡಿದರು. ಅಸಾವಧ ಸ್ಥಿತಿಯಲ್ಲಿ ಬಿದ್ದ ಜಾಲಿಮ ಸಿಂಹನು ಸಾವಧಗೊಳ್ಳಲಿಲ್ಲ. ಅವನು ಚಿರವಿಶ್ರಾಂತಿಯನ್ನು ಹೊಂದುವದಕ್ಕೆ ಪರಲೋಕ ಪಥವನ್ನು ಹಿಡಿದನು!

ವಿಜಯಿಯಾದ ರಜಪುತ ತರುಣನು ಆನಂದದಿಂದ ಬಾಲಿಕೆಯ ಬಳಿಗೆ ಬಂದು ವಿನಯದಿಂದಲೂ ಸಹಾನುಭೂತಿಯಿಂದಲೂ:—"ಕುಮಾರಿ, ನೀವು ಯಾರಿರುವಿರೆಂಬದನ್ನು ತಿಳಿದುಕೊಳ್ಳುವ ಆವಶ್ಯಕತೆಯಿಲ್ಲದಿದ್ದರೂ, ಮಹಾ ಪಾತಕಿಯಾದ ಸುಲಿಗೆಗಾರನ ಕೈಯೊಳಗಿಂದ ಪಾರಾದ್ದರಿಂದ ನಾನು ಸಂತುಷ್ಟ ನಾಗಿರುವೆನು. ಈ ಪಲ್ಲಕ್ಕಿಗಳು ನಿಮ್ಮವೇನು?"

"ಅಹುದು, ಮಹಾನುಭಾವರೇ!"

"ಇನ್ನು ನೀವು ನಿರಾಪದರಾದಿರಿ. ಈಗಲೆ ನಿಮ್ಮ ನಿರ್ಧಿಷ್ಟವಾದ ಸ್ಥಳಕ್ಕೆ ಹೋಗಬಹದು. ಕಳ್ಳರ ಕೈಯಲ್ಲಿ ಸಿಲುಕಿದ ನೀವು ಮಾರ್ಗಕ್ರಮಣ ಮಾಡ ಲಿಕ್ಕೆ ಅಂಜುತ್ತಿದ್ದರೆ, ನಿಮ್ಮ ಬಳಿಯಲ್ಲಿ ಬರಲಿಕ್ಕೆ ನಾನು ಸಿದ್ಧನಿರುವೆನು."

"ಮಹೋದಯರೆ, ಕಳ್ಳರ ಕೈಯಲ್ಲಿ ಸಿಲುಕಿ ಭಯಗೊಂಡವಳಾದ ನಾನು ನಿಮ್ಮ ಮಾತಿನ ಉತ್ತರ ಕೊಡಲಿಕ್ಕೆ ಅಸಮರ್ಥಳಾಗಿರುವೆನು. ಈ ಪಲ್ಲಕ್ಕಿಯಲ್ಲಿ ನನ್ನ ತಂದೆಯವರುಂಟು. ಅವರು ನಿಮ್ಮ ಮಾತಿಗೆ ಉತ್ತರ ಕೊಡುವರು."

ರಜಪುತ ತರುಣನು ಬಾಲಿಕೆಯೊಡನೆ ರುದ್ರಪತಿಯ ಪಲ್ಲಕ್ಕಿಯ ಬಳಿಗೆ ಬಂದನು. ಸುಲಿಗೆಗಾರರು ರುದ್ರಪತಿಯನ್ನು ಬಂಧಿಸಿದ್ದರು. ರಜಪುತ ತರುಣನು ಅವನ ಕೈಕಾಲುಗಳಿಗೆ ಕಟ್ಟಿದ್ದ ಹಗ್ಗವನ್ನು ತನ್ನ ಖಡ್ಗದಿಂದ ಕೊಯ್ದನು. ತನ್ನನ್ನೂ ತನ್ನ ಕುಮಾರಿಯನ್ನೂ ಭೀಷಣವಾದ ದುಃಖಸಾಗರ ದಿಂದ ಪಾರು ಮಾಡಿದ ತರುಣನನ್ನು ನೋಡಿ ರುದ್ರಪತಿಗೆ ಹೇಳಕೂಡದಷ್ಟು ಸಂಭ್ರಮವಾಯಿತು. ಆಗ ಅವನು ಗದ್ಗದ ಸ್ವರದಿಂದ:—"ನೀವು ಯಾರು? ಈ ಭಯಂಕರವಾದ ವಿಪತ್ತಿನಿಂದ ರಕ್ಷಿಸಲಿಕ್ಕೆ ನೀವು ದೇವರಂತೆ ಒದಗಿದಿರಿ. ಪ್ರತಿಭಾಶಾಲಿಗಳಾದ ನಿಮ್ಮ ಪರಿಚಯ ಮಾಡಿಕೊಳ್ಳಲಿಕ್ಕೆ ಮನಸ್ಸು ಹಾ-ತೊರೆಯುತ್ತಿರುವದು."

"ನಾನೊಬ್ಬ ಸಾಮಾನ್ಯ ಮನುಷ್ಯನು. ನನ್ನ ಪರಿಚಯವನ್ನೇನು ಮಾಡಿಕೊಡಲಿ? ನಾನು ರಾಜಮಹಲಿನ ಜಮೀನದಾರನಾದ ರಾಜಾ ಹರಿ ನಾರಾಯಣರ ಒಬ್ಬ ಸಾಮಾನ್ಯ ಸರದಾರನಿರುವೆನು. ನನಗೆ ಅಮರಪ್ರಸಾದ

ನೆಂದೆನ್ನುವರು."

"ಮಹಾಶಯರೇ, ನೀವು ಸಾಮಾನ್ಯರಲ್ಲ, ಸಾಮಾನ್ಯರಲ್ಲ. ಅತಿಶಯವಾದ ಉಚ್ಚಕೋಟಿಯವರಿರುವಿರಿ; ಘನವಂತರಿರುವಿರಿ. ನಿಮ್ಮ ದೊಡ್ಡಸ್ತಿಕೆಯನ್ನು ವರ್ಣಿಸಲಿಕ್ಕೆ ಭಾಷೆಯಲ್ಲಿ ಶಬ್ದಗಳು ದೊರೆಯದಾಗಿವೆ. ನಿಮ್ಮ ಉಪಕಾರಕ್ಕಾಗಿ ನಾನು ಎಷ್ಟು ಕೃತಜ್ಞತೆಯನ್ನು ವ್ಯಕ್ತಪಡಿಸಿದರೂ ಕಡಿಮೆಯಿರುವದು. ಎಷ್ಟು ಜನ್ಮಗಳನ್ನು ಹೊತ್ತು ತೀರಿಸಿದರೂ ನಿಮ್ಮ ಉಪಕಾರವು ತೀರದು. ರಂಗಮಹಾಲಿನ ಶ್ರೇಷ್ಠ ಜಮೀನದಾರನಾದ ಈ ರುದ್ರಪತಿಯ ಮನೆಯಲ್ಲಿ ನಿಮ್ಮ ಪಾದರೇಣುವನ್ನು ಕೆಡಹಿ ಯಥಾಶಕ್ತಿಯಿಂದೀಯುವ ಕಾಣಿಕೆಯನ್ನು ಪರಿಗ್ರಹಿಸಬೇಕೆಂದು ಪ್ರಾರ್ಥಿಸುವೆನು."

"ಏನು? ವಿಖ್ಯಾತ ಧನಕುಬೇರರಾದ ರುದ್ರಪತಿಗಳು ನೀವೇ ಏನು?"

"ಹೌದು."

"ನಿಮಗೆ ಪ್ರಣಾಮಗಳಿರಲಿ. ರುದ್ರಪತಿಗಳೇ, ನಾನು ನಿಮ್ಮ ಆಜ್ಞೆಯನ್ನು ಉಲ್ಲಂಘಿಸಲಾರೆನು. ನಿಮ್ಮ ಇಚ್ಛೆಯಂತೆ ನಾನು ನಿಮ್ಮ ಅಟ್ಟಾಲಿಕೆಗೆ ಬರುವೆನು; ಆದರೆ ಉಪಕಾರದ ಪುರಸ್ಕಾರ ಲೋಭದಿಂದ ನಾನು ಬರುವದಿಲ್ಲ; ಕೇವಲ ಸ್ನೇಹಸಂಪಾದನೆಗಾಗಿ ನಿಮ್ಮಲ್ಲಿಗೆ ಬರಬೇಕೆಂದು ಮನಸ್ಸು ಮಾಡಿರುವೆನು. ರಜಪುತರು ಪ್ರತ್ಯುಪಕಾರವನ್ನು ಬಯಸುವವರಲ್ಲ."

ಅಮರಪ್ರಸಾದನ ಮಾತುಗಳನ್ನು ಕೇಳಿ ಎಲ್ಲರೂ ವಿಸ್ಮಿತರಾದರು. ಅತ್ಯಂತ ಉದಾರಿಯೂ ಸ್ವಾರ್ಥತ್ಯಾಗಿಯೂ ನಿರ್ಲೋಭಿಯೂ ಆದ ಅಮರಪ್ರಸಾದನು ಮನುಷ್ಯನಾಗಿರದೆ, ನರರೂಪಿಯಾದ ನಾರಾಯಣನಿರುವನೆಂದು ಅವರು ಭಾವಿಸಿದರು.

"ಶೋಭನೆ!" ರುದ್ರಪತಿಯು ತನ್ನ ಕುಮಾರಿಯನ್ನು ಕುರಿತು:-ನಿನ್ನ ಮಾನರಕ್ಷಣೆ ಮಾಡಿದ ಮಹಾತ್ಮನ ಘನವಂತಿಕೆಯನ್ನು ನೋಡಿದೆಯಾ?"

"ಅಪ್ಪಾ," ಶೋಭನೆಯು ಆನಂದೋದ್ರೇಕದಿಂದ: —"ಕಾಯಾವಾಚಾ ಮನಸ್ಸಿನಿಂದ ಈ ಮಹೋದಯರಿಗೆ ಶುಭಾಶೀರ್ವಾದ ಕೊಡಿರಿ. ಇವರು ರಾಜಸ್ಥಾನದ ಆದರ್ಶಪುರುಷರಾಗಲಿ; ಆರೋಗ್ಯಸಂಪದಭಿವೃದ್ಧಿ ಹೊಂದಲಿ; ಈಶ್ವರನ ಕೃಪಾಪ್ರಸಾದದಿಂದ ಆಪತ್ತು-ಶೋಕ-ಸಂತಾಪಗಳಿಗೆ ಎಂದೂ ಈಡಾಗಬಾರದು. ಇವರು ರಾಜರಾಗಿ ರಾಜ್ಯೈಶ್ವರ್ಯಗಳನ್ನು ಯಥೇಷ್ಟವಾಗಿ ಭೋಗಿಸಲಿ."

"ಪರಮಾತ್ಮನ ಅನುಗ್ರಹದಿಂದ ನಿನ್ನ ಇಚ್ಛೆಯಂತೆ ಇವರಿಗೆ ಫಲವು ಲಭಿಸುವದು" ರುದ್ರಪತಿಯು ಆನಂದದಿಂದ ನುಡಿದನು.

"ಇವರ ಕೀರ್ತಿಯು ಆಚಂದ್ರಾರ್ಕವಾಗಿ ಉಳಿಯಲೆಂದು ನಾನು ಆಶೀರ್ವದಿಸುವೆನು" ಶೋಭನೆಯು ಪ್ರಸನ್ನತೆಯಿಂದ ಆಶೀರ್ವದಿಸಿದಳು.

"ತಾಯಿ, ನಿಮ್ಮ ಶುಭಾಶೀರ್ವಾದವನ್ನು ಶಿರಸಾವಹಿಸಿರುವೆನು." ಅಮರಪ್ರಸಾದನು ಕೈಜೋಡಿಸಿ ನುಡಿದು ರುದ್ರಪತಿಯನ್ನು ಕುರಿತು:— "ನೀವು ಎಲ್ಲಿಗೆ ಹೋಗುವವರಿರುವಿರಿ?"

"ಮುಂಗೇರಕ್ಕೆ ಹೋಗಬೇಕೆಂದು ಹೊರಟಿದ್ದೆವು; ಆದರೆ ಮಧ್ಯದಲ್ಲಿ ಗಂಡಾಂತರವೊದಗಿದ್ದರಿಂದ ನನ್ನ ಅನುಚರರೆಲ್ಲರೂ ಓಡಿಹೋದರೂ ಇನ್ನು ಮುಂಗೇರಕ್ಕೆ ಹೋಗುವದು ಸಾಧ್ಯವಿಲ್ಲ; ಭಾಗಲಪುರಕ್ಕೆ ಹೋಗುವದನ್ನು ನಾನು ನಿರ್ಧರಿಸಿರುವೆನು. ರಾಜಮಹಾಲಿನವರೆಗಾದರೂ ನೀವು ನಮ್ಮ ಜೊತೆಯಲ್ಲಿ ಬರುವಿರಷ್ಟೆ?"

"ಅವಶ್ಯ, ಅವಶ್ಯ. ಆನಂದದಿಂದ ಬರುವೆನು."

"ಕುಮಾರಿ, ಶೋಭನಾ, ನಿನ್ನ ರಕ್ಷಣಕರ್ತರನ್ನು ವಂದಿಸು."

ಶೋಭನೆಯು ಪಿತ್ರಾಜ್ಞೆಯಂತೆ ಅಮರಪ್ರಸಾದನ ಚರಣರಜವನ್ನು ಮಸ್ತಕದ ಮೇಲಿರಿಸಿಕೊಂಡಳು.

ರುದ್ರಪತಿಯೂ ಅವನ ಪತ್ನಿಯೂ ಪುತ್ರಿಯಾದ ಶೋಭನೆಯೂ ಅಮರಪ್ರಸಾದನ ಶೌರ್ಯ-ಧೈರ್ಯ-ಸಾಹಸಗಳನ್ನೂ ಧರ್ಮಬುದ್ಧಿಯನ್ನೂ ಮನಸ್ವಿಯಾಗಿ ಕೊಂಡಾಡಿದರು. ಅಷ್ಟರಲ್ಲಿ ಓಡಿಹೋದ ಬೋವಿಗಳು ಅಲ್ಲಿಗೆ ಬಂದರು. ಕೂಡಲೆ ಅಮರಪ್ರಸಾದನು ಪಲ್ಲಕ್ಕಿಗಳನ್ನು ಹೊರುವದಕ್ಕೆ ಅವರಿಗೆ ಆಜ್ಞಾಪಿಸಿ ತನ್ನ ಕುದುರೆಯನ್ನೇರಿದನು. ಅನಂತರದಲ್ಲಿ ಅವನು ರಾಜಮಹಾಲಿನ ಮಾರ್ಗವನ್ನು ಹಿಡಿದು ನಡೆದನು. ಮೂರೂ ಪಲ್ಲಕ್ಕಿಗಳು ಅವನ ಹಿಂದೆ ಸಾಗಿದವು.

ಸುಲಿಗೆಗಾರರ ಕೈಯಲ್ಲಿ ಸಿಲುಕಿದವರಾದ ರುದ್ರಪತಿಯ ಪರಿವಾರಕ್ಕೆ ಅರಣ್ಯವನ್ನು ದಾಟಿ ಬೈಲುಸೀಮೆಯನ್ನು ತಲುಪುವವರೆಗೆ ಜೀವದಲ್ಲಿ ಜೀವವಿದ್ದಿಲ್ಲ.

ಶೋಭನೆಯು ಪಲ್ಲಕ್ಕಿಯಲ್ಲಿ ಕುಳಿತುಕೊಂಡೇ ತನ್ನ ರಕ್ಷಣಕರ್ತನನ್ನು ಕೃತಜ್ಞತೆಯಿಂದ ಕಣ್ತುಂಬ ನೋಡತೊಡಗಿದ್ದಳು.

೭ನೆಯ ಪರಿಚ್ಛೇದ.

ಇಂದು ಸರದಾರ ದಿಲೀಪಸಿಂಹನ ಅಪರಾಧದ ವಿಚಾರಣೆಯಾಗುವದಿತ್ತು. ರಾಜಾ ಹರಿನಾರಾಯಣನು ನ್ಯಾಯ ವಿಚಾರಣೆಯಲ್ಲಿ ನಿಯುಕ್ತನಾಗಿದ್ದನು. ಹರಿನಾರಾಯಣನು ದಿಲೀಪಸಿಂಹನನ್ನು ಕುರಿತು:—"ದಿಲೀಪಸಿಂಹರೇ, ಪ್ರಬಲಪ್ರತಾಪಿಯಾದ ಮೊಗಲಸಾಮ್ರಾಜ್ಯದಳ್ಳುರಿಯಲ್ಲಿ ರಾಜಮಹಾಲಿನ ಜಮೀನದಾರಿಕೆಯು ಭಸ್ಮೀಭೂತವಾಗಬೇಕೆಂದು ನಿಮ್ಮ ಕಾರಸ್ಥಾನವಿದ್ದಂತೆ ಭಾಸವಾಗುವದು ನೀವು ನನ್ನ ಏಕನಿಷ್ಠ ಸರದಾರರಿದ್ದು, ಇಂತಹ ಕೃತಿಯನ್ನು ಮಾಡಿದ್ದನ್ನು ನೋಡಿ ವಿಸ್ಮಯವಾಗುವದು."

"ಮಹಾರಾಜರೆ," ದಿಲೀಪಸಿಂಹನು ಗಂಭೀರತೆಯಿಂದ:—"ತಮ್ಮ ಜಮೀನದಾರಿಕೆಯು ನಾಶವಾಗಬೇಕೆಂಬ ಯೋಚನೆಯು ಈ ದೇಹದಲ್ಲಿ ಪ್ರಾಣವಿರುವವರೆಗೆ ಹುಟ್ಟಲಾರದು."

"ನಾನಾದರೂ ನಿಮ್ಮ ಮೇಲೆ ಇಷ್ಟು ದಿನಗಳವರೆಗೆ ವಿಶ್ವಾಸವುಳ್ಳವನಾಗಿದ್ದೆನು; ಆದರೆ ನಿಮ್ಮ ಕೃತಿಯಿಂದ ನಿಮ್ಮ ಏಕನಿಷ್ಠತೆಯ ಸಲುವಾಗಿ ಸಂಸಯವುಂಟಾಗಿದೆ; ಇಷ್ಟಲ್ಲದೆ, ನೀವು ಸ್ವಾಮಿನಿಷ್ಠತೆಯ ಆಡಂಬರ ತೋರಿಸುತ್ತ ನನ್ನ ಸರ್ವಸ್ವವನ್ನು ಬುಡಮೇಲು ಮಾಡತೊಡಗಿರುವಿರೆಂಬ ಭಯವು ಉತ್ಪನ್ನವಾಗಿದೆ."

"ನೀವು ಇಲ್ಲದ ಸಂಶಯ ತಳೆಯಲಿಕ್ಕೆ ಹಾಗು ಭಯಹೊಂದಲಿಕ್ಕೆ ಯಾವ ಕಾರಣವು ಘಟಿಸಿರುವದು?"

"ಹೀಗೆ ನಿರ್ಭಯದಿಂದ ಮಾತನಾಡತೊಡಗಿದ್ದು ನೋಡಿ ನನಗೆ ಸೋಜಿಗವಾಗಿದೆ. ತಪ್ಪು ಮಾಡಿಯೂ ಮಾಡದವರಂತೆ ನಟಿಸುವ ಕಲೆಯಲ್ಲಿ ನೀವು ಒಳ್ಳೇ ನಿಷ್ಣಾತರಿರುವಿರೆಂದು ಇಂದು ಮನವರಿಕೆ ಮಾಡಿಕೊಂಡೆನು."

"ನಾನು ಯಾವ ತಪ್ಪು ಮಾಡಿರುವೆನು?"

"ಹೀಗೆ ಮಾತಾಡಲಿಕ್ಕೆ ನಿಮಗೆ ನಾಚಿಗೆ ಬರಬೇಕಾಗಿತ್ತು. ರಾಜಾ ತೋಡರಮಲ್ಲರ ಮೇಲೆ ಶಸ್ತ್ರವೆತ್ತಲಿಕ್ಕೆ ನಿಮಗೆ ಹೇಗೆ ಧೈರ್ಯವುಂಟಾಯಿತು?"

"ಪ್ರಸಂಗವೊದಗಿದ ಹಾಗೆ ಧೈರ್ಯವು ಹುಟ್ಟುವದು. ನಾನು ಕರ್ತವ್ಯವೆಂದು ಮೊಗಲಸೇನಾಪತಿಯೊಡನೆ ಯುದ್ಧಕ್ಕೆ ನಿಂತೆನು."

"ಒಳ್ಳೆಯ ಕರ್ತವ್ಯದ ಪ್ರತಿಷ್ಠೆ ಮೆರೆಯಿಸುವಿರಿ. ನಿಮಗೆ ಅಂತಹ ಪ್ರಸಂಗವೇನು ಬಂದಿತ್ತು?"

"ರಾಜಕುಮಾರಿಯರ ಸತ್ಯಪಾಲನೆಗಾಗಿ ಶಸ್ತ್ರವನ್ನು ಹಿಡಿದೆನು. ಊರ್ಮಿಳಾದೇವಿಯವರು ನವಾಬ ದಾವುದಖಾನರನ್ನು ಬೆನ್ನಿಗೆ ಹಾಕಿ ಕೊಂಡಿದ್ದರು. ಸ್ವಾಮಿಕರ್ತವ್ಯವೇ ಸೇವಕನ ಕರ್ತವ್ಯವಲ್ಲವೆ?"

"ಮೊಗಲರ ಕಟ್ಟಾವೈರಿಯಾದ ದಾವುದಖಾನನು ನಮಗೂ ವೈರಿಯು. ಅನಭಿಜ್ಞ ಬಾಲಕಿಯ ಲಹರಿಗೆ ಉತ್ತೇಜನವಿತ್ತು ನೀವು ಬಹು ದೊಡ್ಡ ಪ್ರಮಾದ ಮಾಡಿದಿರಿ. ನಿಮಗೆ ತಕ್ಕ ಶಾಸನವನ್ನು ವಿಧಿಸಿ ಬಾದಶಾಹೀ ಓಲಗಕ್ಕೆ ಈ ಸಂಗತಿಯನ್ನು ತಿಳಿಸದಿದ್ದರೆ ನನ್ನ ಪಾಡು ಒಳಿತಾಗಲಿಕ್ಕಿಲ್ಲ."

"ನ್ಯಾಯಬುದ್ಧಿಗೆ ತೋಚಿದಂತೆ ಮಾಡಿರಿ."

"ಮೊಗಲರಿಗೆ ಸರಿಕಾಣುವಂತೆ ವರ್ತಿಸುವದೇ ನ್ಯಾಯವು"

"ನಿಮ್ಮ ನ್ಯಾಯಶಾಸ್ತ್ರದ ಪಡಿಕಟ್ಟೇ ಬೇರೆ ವಿಧವಾದದ್ದಿರುವದು."

"ದಿಲೀಪಸಿಂಹ, ನೀವು ಮಾಡಿದ ತಪ್ಪಿಗಾಗಿ ಬಾರಕೋಲಹೊಡತಗಳನ್ನು ಕೊಡುವದಲ್ಲದೆ ಎರಡು ತಿಂಗಳ ಸಶ್ರಮ ಕಾರಾಗೃಹದ ಶಿಕ್ಷೆಯನ್ನು ಕೊಟ್ಟಿರುವೆನು!"

"ವಿಸ್ಮಯಜನಕವಾದ ತೀರ್ಪು!"

ರಾಜಾಜ್ಞೆಯ ಮೇರೆಗೆ ಒಬ್ಬ ಕಠೋರ ಹೃದಯದ ಸೇವಕನು ದಿಲೀಪಸಿಂಹನಿಗೆ ಬಾರಕೋಲ ಹೊಡತ ಹಾಕತೊಡಗಿದನು. ಭೀಷಣವಾದ ಆಘಾತದಿಂದ ಅವನ ಮೈಯೊಳಗಿಂದ ರಕ್ತವು ಧಾರೆಗಟ್ಟಿ ಹರಿಯತೊಡಗಿತು ಅಷ್ಟರಲ್ಲಿ ಒಬ್ಬ ರಜಪುತ ಯುವಕನು ಅಲ್ಲಿಗೆ ಬಂದು ಬಾರಕೋಲ ಹೊಡತ ಹಾಕುವ ದೂತನಿಗೆ ಬಲವಾದ ಪೆಟ್ಟು ಹಾಕಿದನು. ಕೂಡಲೆ ಆ ದೂತನು ರಾಜನ ಬಳಿಗೆ ಹೋಗಿ ಬಿದ್ದನು. ಈ ದೃಶ್ಯದಿಂದ ಹರಿನಾರಾಯಣನು ಸಂತಪ್ತನಾದನು. ಕೂಡಲೆ ಅವನು ಸೇವಕನನ್ನು ಕುರಿತು:—"ಈ ಅವಿಧೇಯನನ್ನು ಬಂಧಿಸಿರಿ."

ದೂತರು ರಜಪುತ ತರುಣನನ್ನು ಹಿಡಿದು ಅವನ ಕೈಕಾಲುಗಳಿಗೆ ಶೃಂಖಲೆಗಳನ್ನು ತೊಡಿಸಿದರು. ರಜಪುತ ತರುಣನು ಉಚ್ಚಕಂಠದಿಂದ:— "ಪ್ರಭೋ, ನೀವು ನನ್ನ ಸ್ವಾಮಿಗಳು. ಧರ್ಮದ ಮೂರ್ತಿಗಳು. ಈ ಭಾವನೆಯು ನನ್ನಲ್ಲಿ ಇದುವರೆಗೆ ಜಾಗೃತವಿದ್ದುದರಿಂದಲೆ ಈ ಆಯುಷ್ಯದಲ್ಲಿ ಮೊದಲನೆಯ ಸಾರೆ ಬಂಧನೆಗೊಳಗಾಗಿರುವೆನು. ಈ ದೇಹದಲ್ಲಿ ಪ್ರಾಣವೂ ತೇಜಸ್ವಿಯಾದ ರಕ್ತವೂ ಇರುವ ವರೆಗೆ, ಕೈಯಲ್ಲಿ ಕರಾಲ ಖಡ್ಗವು ಝಳಪಿ

ಸುತ್ತಿರುವವರೆಗೆ ನನ್ನನ್ನು ಪ್ರತಿಬಂಧದಲ್ಲಿರಿಸುವ ಎದೆಯು ಯಾವನದಿರುವದು? ಏನು ಮಾಡಲಿ? ಸ್ವಾಮಿನಿಷ್ಠೆಯು ನನ್ನಲ್ಲಿ ತುಂಬಿರುವದರಿಂದ ಆಕ್ರಮಣ ಮಾಡುವವರನ್ನು ನಿರೋಧಿಸುವ ಮನಸ್ಸಾಗಲಿಲ್ಲ.''

''ನಾನು ತಂದೆ-ಮಕ್ಕಳ ಸ್ವಾಮಿಬಕ್ತಿಯನ್ನು ಅಳೆದಿರುವೆನು. ವೃಥಾ ಆಡಂಬರದ ಮಾತುಗಳನ್ನು ಆಡಬೇಡ; ನಾನು ಕೇಳುವದಿಲ್ಲ. ಅಮರ ಪ್ರಸಾದ, ಶತ್ರುಗಳಿಗೆ ಆಶ್ರವಿತ್ತು ಜಮೀನದಾರಿಕೆಯನ್ನು ಹಾಳುಮಾಡುವ ಕಾರಸ್ಥಾನಕ್ಕೂ ಸ್ವಾಮಿಭಕ್ತಿಯೆಂದು ವ್ಯಾಖ್ಯೆಯಿದ್ದರೆ ಅದಕ್ಕೆ ನನ್ನ ಉತ್ತರವಿಲ್ಲ. ಈ ಬಗೆಯಾಗಿ ಹೊಸ ವ್ಯಾಖ್ಯೆಯನ್ನು ಕಟ್ಟಿಕೊಂಡು ವರ್ತಿಸುವವರೊಡನೆ ಸಹಕಾರ-ಸಹಾನುಭೂತಿಗಳಿಂದ ನಡೆಯಲಿಕ್ಕೆ ನಾನು ಸಿದ್ಧನಿಲ್ಲ''

''ಪ್ರಭುಗಳೆ, ನಿಮ್ಮ ಅಭಿಪ್ರಾಯವು ಹೇಗಾದರೂ ಇರಲೊಲ್ಲದೇಕೆ. ನಾನು ನಿಮ್ಮನ್ನು ಧರ್ಮದ ಪ್ರತಿನಿಧಿಗಳೆಂದು ತಿಳಿದು ಭಕ್ತಿ-ವಿಶ್ವಾಸಗಳಿಂದ ವರ್ತಿಸುತ್ತಿರುವೆನು; ಆದರೆ ದೇವತಾ ಸಮಾನರಾದ ನನ್ನ ತಂದೆಯುವರು. ಬಾರಕೋಲ ಹೊಡತದಿಂದ ಜರ್ಜರಿತರಾಗಿರುವರು. ಅಂಗಾಂಗಗಳಿಂದ ರುಧಿರಪ್ರವಾಹವು ಹೊರಟಿರುವದು. ಕಲ್ಪನಾತೀತವಾದ ವೇದನೆಯಿಂದ ಅವರ ಕಣ್ಣುಗಳು ಜಲಪೂರ್ಣವಾಗಿರುವವು. ಇಂಥ ಪೈಶಾಚಿಕ ಅತ್ಯಾಚಾರದ ದೃಶ್ಯವನ್ನು ಯಾವ ಪುತ್ರನು ಸ್ಥಿರಭಾವದಿಂದ ಸಹನ ಮಾಡಿಕೊಳ್ಳುವನು? ಇಂತಹ ಕಠೋರ ಕರ್ಮವನ್ನು ನೀವು ಆಚರಿಸುತ್ತಿರುವದನ್ನು ನೋಡಿ ನನ್ನ ಮನಸ್ಸು ದುಃಖ-ಸಂತಾಪಗಳಿಗೊಳಗಾಗಿದೆ ನನ್ನ ತಂದೆಯುವರಿಂದ ಯಾವ ಅಪರಾಧವು ಘಟಿಸಿರುವದೆಂದು ಈ ಬಗೆಯ ಶಾಸನ ವಿಧಿಸುತ್ತಿರುವಿರಿ? ನಿಮ್ಮ ದೃಷ್ಟಿಯಿಂದ ಅವರು ಅಪರಾಧಿಗಳಾಗಿ ಕಾಣುತ್ತಿದ್ದರೂ ನಿಸ್ಪೃಹತೆಯಿಂದ ವಿಚಾರಿಸಿದರೆ ಅವರು ನಿರಪರಾಧಿಗಳಾಗಿಯೇ ತೋರುವರು. ಒಂದು ವೇಳೆ ಅವರು ಅಪರಾಧಿಗಳೆಂದು ಸಿದ್ಧವಾದರೂ ನಾನು ಅವರ ವಿಟಂಬನೆಯನ್ನು ನೋಡಲಾರೆನು. ಈಗಂತು ಅವರು ನಿಷ್ಕಲಂಕಿಗಳಿರುವರು. ನನ್ನ ತಂದೆಯುವರಾದ ದಿಲೀಪಸಿಂಹರು ನಿರಪರಾಧಿಗಳಿರುವರೆಂಬದನ್ನು ನಾನು ಸಿದ್ಧಮಾಡಿ ತೋರಿಸುವೆನು. ಈ ವಿಷಯದಲ್ಲಿ ತ್ರಿಭುವನವು ನನ್ನ ವಿರುದ್ಧವಾಗಿ ನಿಂತರೂ ನನಗೆ ಅದರ ಪರಿವೆಯಿಲ್ಲ; ನಾನು ತಂದೆಯುವರ ಛಲನೆಯನ್ನು ಎಂದೂ ಸಹಿಸಲಾರೆನು.''

''ಸುಂದರಲಾಲ!'' ಹರಿನಾರಾಯಣನು ಬಾರಕೋಲ ಹೊಡತ ಹಾಕ

ತೊಡಗಿದ ದೂತನನ್ನು ಕುರಿತು:—"ದಿಲೀಪಸಿಂಹನಿಗೆ ಪ್ರತಿಯಾಗಿ ಈ ವಾಚಾಲತನದ ಅಮರಪ್ರಸಾದನಿಗೆ ಚೆನ್ನಾಗಿ ಹೊಡತ ಹಾಕು." ಇವನ ಬಡಬಡಿಕೆಯು ಬಹಳವಾಗಿದೆ"

ಕಂಪಿತಸ್ವರದಿಂದ ಅಮರಪ್ರಸಾದನು:—"ರಾಜಾ, ನೀವು ನನಗೆ ಬೇಕಾದಹಾಗೆ ಶಾಸನವಿಧಿಸಿರಿ. ಹೊಡೆಯಿರಿ; ಬಡೆಯಿರಿ; ಕಡೆಯಿರಿ; ಆದರೆ ನನ್ನ ತಂದೆಯುವರ ಬಿಡುಗಡೆ ಮಾಡಿರಿ."

"ಸುಂದರಲಾಲ, ಅಮರಪ್ರಸಾದನಿಗೆ ಬಾರಕೋಲ ಬಡತ ಹಾಕು."

ಸುಂದರಲಾಲನು ಅಮರಪ್ರಸಾದನ ಬೆನ್ನ ಮೇಲೆ ಬಾರಕೋಲ ಹೊಡತ ಹಾಕತೊಡಗಿದನು. ಮೈಯು ರಕ್ತಮಯವಾದರೂ ಆ ವೀರಾಧಿ ವೀರನ ಮುಖದಿಂದ ದುಃಖೋದ್ಗಾರವು ಹೊರಡಲಿಲ್ಲ ಓಲಗದೊಳಗಿನ ಜನರು ಈ ಅನನ್ವಿತ ಕೃತ್ಯವನ್ನು ನೋಡಲಾರದೆ ಕಣ್ಣು ಮುಚ್ಚಿಕೊಂಡು ಹೊರಟು ಹೋದರು ಅಲ್ಲಿ ಪಾಪದ ಮಾನಸ ಪುತ್ರನಾದ ಹರಿನಾರಾಯಣನ ಹಾಗು ಅವನ ಪಾಷಾಣ ಹೃದಯದ ಚಾಂಡಾಲ ಸಮಾನರಾದ ದೂತರ ಹೊರತು ಮತ್ತಾರೂ ಉಳಿಯಲಿಲ್ಲ. ಓಲಗದೊಳಗಿನ ಜನರು ಹೊರಟು ಹೋದ ಮೇಲೆ ಹರಿನಾರಾಯಣನೂ ಹಾಗು ಅವನ ಸೇವಕರೂ ಮತ್ತಿಷ್ಟು ಆವೇಶಗೊಂಡರು. ಬಾರಕೋಲ ಪೆಟ್ಟುಗಳು ಒಳ್ಳೆಯ ಬಲವಾಗಿ ಬೀಳ ತೊಡಗಿದವು ಇಷ್ಟು ವೇಳೆಯವರೆಗೆ ಶಿಲಾಪ್ರತಿಮೆಯಂತೆ ನಿಂತಿದ್ದ ಅಮರ ಪ್ರಸಾದನು ದುಸ್ಸಹವಾದ ಪೆಟ್ಟುಗಳಿಂದ ತಳಮಳಿಸತೊಡಗಿದನು. ಜ್ವಾಲಾ ಜರ್ಜರಿತ ಹೃದಯದವನಾದ ಅವನ ಮುಖದಿಂದ ಹಠಾತ್ತಾಗಿ ಚೀತ್ಕಾರ ಧ್ವನಿಯು ಹೊರಬಿತ್ತು. ಕೂಡಲೆ ಹರಿನಾರಾಯಣನೂ ಅವನ ಸೇವಕರೂ ಗಹಗಹಿಸಿ ನಗತೊಡಗಿದರು. ಎಷ್ಟು ವೇಳೆಯಾದರೂ ಕೊಟ್ಟ ಆಜ್ಞೆಯು ಪರಿವರ್ತನವಾಗಲಿಲ್ಲ. ದೇಹದಿಂದ ಧಾರೆಗಟ್ಟಿ ರಕ್ತವು ಹರಿಯುತ್ತಿದ್ದರೂ ಬಾರಕೋಲ ಹೊಡತಗಳು ಒಂದೇ ಸವನೆ ಬೀಳುತ್ತಿದ್ದವು. ಸರದಾರ ದಿಲೀಪ ಸಿಂಹನು ಕಣ್ಣು ಮುಚ್ಚಿಕೊಂಡು ನಿಂತಿದ್ದನು. ಮಗನಿಗೆ ಹೊಡತಬಿದ್ದ ಸರತಿ ಗೊಮ್ಮೆ ಅವನ ಮುಖದಿಂದ "ಹಾಯ! ಹಾಯ!" ಎಂಬ ದುಃಖೋದ್ಗಾರವು ಹೊರಬೀಳತೊಡಗಿತ್ತು.

ಆಗ ಅಲ್ಲಿಗೆ ಅಕಸ್ಮಾತ್ತಾಗಿ ಒಬ್ಬ ಅನುಪಮ ಸುಂದರಿಯು ಬಂದು, ಸಂದರಲಾಲನ ಕೈಯೊಳಗಿನ ಬಾರಕೋಲನ್ನು ಕಸಿದುಕೊಂಡಳು. ಎಲ್ಲರೂ

ವಿಸ್ಮಿತರಾಗಿ ಆ ಯುವತಿಯನ್ನು ನೋಡಹತ್ತಿದರು.

"ಕುಮಾರಿ, ನೀನು ಇಲ್ಲಿಗೇಕೆ ಬಂದೆ?" ರಾಜಾ ಹರಿನಾರಾಯಣನು ತನ್ನ ಮಗಳಾದ ಊರ್ಮಿಳಾದೇವಿಯನ್ನು ಕೇಳಿದನು.

"ತಂದೆಯವರೇ, ಇದೆಂತಹ ಪೈಶಾಚಿಕ ಕಾಂಡವನ್ನು ನಡೆಸಿರುವಿರಿ?"

"ಊರ್ಮಿಳೆ, ಪೈಶಾಚಿಕ ಕಾಂಡವಲ್ಲ; ಇದು ನ್ಯಾಯವಿಚಾರಣೆಯ ತರುವಾಯದ ತೀರ್ಪು!"

"ಏನು! ಇದು ವಿಚಾರವೆ? ಹಾಯ! ಹಾಯ! ಭೀಷಣವಾದ ಅತ್ಯಾಚಾರಕ್ಕೆ ವಿಚಾರವೆಂದರೆ ಶೋಭಿಸುವದೆ? ಮೇಲುಪ್ಪರಿಗೆಯ ಗವಾಕ್ಷದಿಂದ ನಾನು ಎಲ್ಲವನ್ನೂ ನೋಡಿರುವೆನು; ಕೇಳಿರುವೆನು. ತಂದೆಯ ರಕ್ಷಣೆ ಮಾಡುವದು ಪಿತೃಭಕ್ತ ಪುತ್ರನ ಕರ್ತವ್ಯವಾಗಿರುವದು. ತಂದೆಯ ರಕ್ಷಣ ಮಾಡದಂತಹನು ಮಗನಲ್ಲ. ನೀವು ಈ ಅಮರಪ್ರಸಾದರಿಗೆ ದಂಡನೆ ವಿಧಿಸುವ ಕಾರಣವೇನು?"

ಊರ್ಮಿಳೆಯ ಮುಖವು ಸ್ವರ್ಗೀಯ ಪ್ರಭೆಯಿಂದ ಯುಕ್ತವಾಗಿತ್ತು. ಅವಳು ತನ್ನ ಅಸ್ಖಲಿತವಾದ ವಾಣಿಯಿಂದಲೂ ಉದಾತ್ತ ವಿಚಾರಯುಕ್ತವಾದ ಅಭಿಪ್ರಾಯದಿಂದಲೂ ಹರಿನಾರಾಯಣನ ಮೇಲೆ ವರ್ಚಸ್ಸವನ್ನು ಕೆಡಹಿದಳು.

ಕನ್ಯಾಸ್ನೇಹಪರಾಯಣನಾದ ಹರಿನಾರಾಯಣನು ಪುತ್ರಿಯ ಮಾತುಗಳನ್ನು ಅಲ್ಲಗಳೆಯಲಿಕ್ಕೆ ಸಮರ್ಥನಾಗಲಿಲ್ಲ. "ಕುಮಾರಿ, ನಾನು ಅಮರಪ್ರಸಾದನನ್ನು ಬಂಧಮುಕ್ತಗೊಳಿಸುವೆನು; ಆದರೆ ಅವನನ್ನು ಸೇನಾಪತಿಯ ಅಧಿಕಾರದಿಂದ ತಳ್ಳುವೆನು."

ರಾಜಾಜ್ಞೆಯಿಂದ ಅಮರಪ್ರಸಾದನು ಬಿಡುಗಡೆ ಹೊಂದಿದನು. ಅವನು ತನಗೆ ಜೀವದಾನ ಮಾಡಿದ ದಿವ್ಯರೂಪವತಿಯಾದ ಪವಿತ್ರಮೂರ್ತಿಯ ಮುಖವನ್ನು ಕೃತಜ್ಞತಾಪೂರ್ಣ ದೃಷ್ಟಿಯಿಂದ ನೋಡತೊಡಗಿದನು ಇಂದಿನಂತಹ ಅತುಲನೀಯ ಸೌಂದರ್ಯವನ್ನೂ ತೇಜಸ್ವಿತೆಯನ್ನೂ ಗಂಭೀರತೆಯನ್ನೂ ಮಾಧುರ್ಯವನ್ನೂ ಊರ್ಮಿಳಾದೇವಿಯ ಮುಖಚರ್ಯೆಯಲ್ಲಿ ಎಂದೂ ಕಂಡಿದ್ದಿಲ್ಲ. ಇವಳು ಸುವರ್ಣದ ವರ್ಣವನ್ನು ಹೊಂದಿ ಚಂದ್ರಕಿರಣಗಳಿಂದ ಸ್ನಾನಮಾಡಿ ಬಂದಿರುವಳು. ಇವಳು ಸ್ವರ್ಗದಿಂದ ಭೂಮಿಗವತರಿಸಿದ ಶಾಪಭ್ರಷ್ಟ ದೇವತೆಯಿರಬಹುದೇನು? ಎಂದು ಅಮರ ಪ್ರಸಾದನು ನಾನಾ ವಿಧವಾಗಿ ವಿಚಾರಿಸತೊಡಗಿದನು. ' ಆಗ ಅವನು ಆನಂದದಿಂದ:—

"ರಾಜನಂದಿನಿ, ಅಯಾಚಿತವಾಗಿ ನೀವು ಇಲ್ಲಿ ಬಂದು ನನ್ನನ್ನು ಉದ್ಧರಿಸಿದಿರಿ. ಅಪಾರ ಕಾರುಣ್ಯನಿಧಿಗಳಾದ ನಿಮ್ಮ ಧನ್ಯವಾದನೆಯನ್ನು ಎಷ್ಟು ಸಾರೆ ಮಾಡಿ ದರೂ ತೀರದು. ದೇವಿ, ನಾನು ಮುಕ್ತಿಭಿಕ್ಷೆಯ ಯಾಚನೆ ಮಾಡುವದಿಲ್ಲ. ಕಾರುಣ್ಯಮಯಿೞ, ನೀವು ನನ್ನಲ್ಲಿ ಕೃಪೆಯುಳ್ಳವರಾಗಿದ್ದರೆ ನನ್ನ ತಂದೆಯವ ರಿಗೆ ಮುಕ್ತಿದಾನ ಮಾಡಿಸಿರಿ."

ಅಮರಪ್ರಸಾದನ ಪಿತೃಭಕ್ತಿಯನ್ನು ನೋಡಿ ಉರ್ವಿಳಾದೇವಿಯು ಮಂತ್ರಮುಗ್ಧಳಾದಂತಾದಳು. ಅವಳು ಎವೆಯಿಕ್ಕದೆ ಅಮರಪ್ರಸಾದನ ಮುಖವನ್ನು ನೋಡಹತ್ತಿದಳು. ಉದ್ಯಾನದಲ್ಲಿಯೂ ಕ್ರೀಡಾಂಗಣದಲ್ಲಿಯೂ ಸಂಭ್ರಮದಿಂದ ಆಡುತ್ತಿದ್ದ ಬಾಲ್ಯಾವಸ್ಥೆಯೊಳಗಿನ ಅಮರಪ್ರಸಾದನ ನೆನ ಪಾಗಿ ಅವಳ ಮನಸ್ಸು ಒಂದು ಬಗೆಯ ವಿಭ್ರಮೆಯನ್ನು ಹೊಂದಿತು.

ಅಮರಪ್ರಸಾದನ ಗೌರವ ವೀರತ್ವಮಂಡಿತನಾದ ವೃತ್ತಿಯನ್ನೂ ತೇಜಸ್ವಿಯಾದ ಮುಖಚರ್ಯೆಯನ್ನೂ ನೋಡಿ ಉರ್ವಿಳಾದೇವಿಯು ವಿಸ್ಮಿತಳಾದಳು. ಕೂಡಲೆ ಅವಳ ನಿರ್ವಿಕಾರವೂ ಶೂನ್ಯವೂ ಆದ ಹೃದಯ ದಲ್ಲಿ ಒಂದು ಮೂರ್ತಿಯು ನೆಲೆಗೊಂಡಿತು. ಆ ಮೂರ್ತಿಯು ಪ್ರೇಮದ್ದೋ ಪ್ರಣಯದ್ದೋ ಪ್ರೀತಿಯದೋ ಅಥವಾ ಮತ್ತಾಂತರದೋ ಎಂಬದು ಅವಳಿಗೆ ತಿಳಿಯಲ್ಲಿಲ್ಲ. ಅವಳು ಆ ವಿಷಯವನ್ನು ತಿಳಿದುಕೊಳ್ಳುವಷ್ಟು ಯೋಗ್ಯತೆ ಯವಳೂ ಇರಲಿಲ್ಲ. ನಿರ್ವಿಕಾರವೂ ವಿರುದ್ಧವೂ ಅಚಲವೂ ಆದ ಹೃದಯ- ಅಂತಹ ಹೃದಯವು ಹಠಾತ್ತಾಗಿ ಅಮರಪ್ರಸಾದನ ಪ್ರತಿಭಾಶಾಲಿಯಾದ ಮೂರ್ತಿಯನ್ನು ನೆಲೆಗೊಳಿಸಿಕೊಂಡದ್ದು ವಿಚಿತ್ರವು. ಪರಕ್ಷಣದಲ್ಲಿ ಮೈಯಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಅವಳು ಅಮರಪ್ರಸಾದನ ಮೂರ್ತಿ ಯನ್ನು ಎವೆಯಿಕ್ಕದೆ ನೋಡತೊಡಗಿದಳು. ಇದೇ ಸಂಧಿಯಲ್ಲಿ ಅಮರಪ್ರ ಸಾದನ ದೃಷ್ಟಿಯು ಉರ್ವಿಳಾದೇವಿಯ ದೃಷ್ಟಿಗೆ ಕೂಡಿತು. ಉರ್ವಿಳಾ ದೇವಿಯ ಮೈಮೇಲೆ ರೋಮಾಂಚನಗಳೆದ್ದವು. ಆಹಾ! ಇದೇನು ವಿಚಿತ್ರ ವಾದ ಅವಸ್ಥೆಯನ್ನು ಹೊಂದಿದೆನು! ಮೈಯಲ್ಲಿ ಭೂತಸಂಚಾರವಾಗಿರುವದೇ? ಎಂದೂ ಹೊಂದದ ಅವಸ್ಥೆಯನ್ನು ಇಂದು ಹೊಂದಿದ ಕಾರಣವೇನಿರಬ ಹುದು? ದಿವ್ಯಪುರುಷನಾದ ಅಮರಪ್ರಸಾದನಿಗೆ ಯಕ್ಷಿಣೀವಿದ್ಯೆಯಲ್ಲಿ ಪರಿ ಣತಿಯಿರಬಹುದೇನು? ಅವನ ವಿದ್ಯಾಪ್ರಭಾವವು ನನ್ನ ಮೇಲೆ ವರ್ಚಸ್ವ ಕೆಡಹಿರಬಹುದೇನು? ಎಂದು ಅವಳು ವಿಚಾರಮಾಡತೊಡಗಿದಳು. ಕೆಲವು

ವೇಳೆಯ ಮೇಲೆ ಅವಳು ತನ್ನ ತಂದೆಯನ್ನು ಕುರಿತು —"ಅಮರಪ್ರಸಾದರಿಗೆ, ಮುಕ್ತಿದಾನಮಾಡಿ ನನಗೆ ಆನಂದವನ್ನುಂಟುಮಾಡಿರಿ. ದಿಲೀಪಸಿಂಹರನ್ನು ಸಹ ಬಿಡುಗಡೆ ಮಾಡಿ ಘನವಂತಿಕೆಯನ್ನು ಹೊಂದಬೇಕೆಂದು ಪ್ರಾರ್ಥಿಸುವೆನು."

"ಕುಮಾರಿ, ಈ ಮಾತು ಸಾಧ್ಯವಿಲ್ಲ ನಿನ್ನ ಕಾತರಪ್ರಾರ್ಥನೆಯನ್ನು ಮನ್ನಿಸಿ ಅಮರಪ್ರಸಾದನನ್ನು ಬಿಟ್ಟಿರುವೆನು; ಆದರೆ ಕೃತಘ್ನನೂ ಸ್ವಾಮಿದ್ರೋಹಿಯೂ ಆದ ದಿಲೀಪಸಿಂಹನ ಬಿಡುಗಡೆಯಾಗುವದು ಅಸಂಭವವು. ಕಕ್ಕುಲತೆಯುಳ್ಳವಳಾದ ನಿನ್ನ ಒಂದು ಬೇಡಿಕೆಯನ್ನು ಪೂರೈಸಿರುವೆನು. ದಿಲೀಪಸಿಂಹನನ್ನು ಮುಕ್ತಗೊಳಿಸಬೇಕೆಂಬ ಹವ್ಯಾಸಕ್ಕೆ ನೀನು ಬೀಳಬೇಡ.

"ತಂದೆಯವರೆ!" ಊರ್ಮಿಳಾದೇವಿಯು ದೀನವಾಣಿಯಿಂದ-"ನೀವು ನನ್ನ ಇದೊಂದು ಪ್ರಾರ್ಥನೆಯನ್ನು ಕೇಳಿರಿ. ದಿಲೀಪಸಿಂಹರು ಕತಘ್ನರಲ್ಲ; ಸ್ವಾಮಿದ್ರೋಹಿಗಳಲ್ಲ. ಅವರಂತಹ ನಿಸ್ಪೃಹವೃತ್ತಿಯುಳ್ಳವರು ದೊರೆಯುವದು ಅಪರೂಪ."

"ಊರ್ಮಿಳೆ, ನೀನು ಬಾಲಿಕೆಯು. ನಿನಗೆ ಈ ವಿಷಯದಲ್ಲಿ ತಿಳಿಯದು. ನಿನ್ನ ಬುದ್ಧಿಯು ಇನ್ನೂ ಅಷ್ಟೊಂದು ಕುಶಾಗ್ರವಾಗಿಲ್ಲ. ಅಂತೆಯೆ ನಿನ್ನಿಂದ ನವಾಬ ದಾವುದಖಾನನಿಗೆ ಆಶ್ರಯವೀಯುವಂತಹ ಅಪರಾಧವು ಘಟಿಸಿತು. ರಾಜಕಾರಣದಲ್ಲಿ ನಿನಗೆ ಹೇಗೆ ಗೊತ್ತಾಗಬೇಕು? ದಿಲೀಪಸಿಂಹನಿಗೆ ಶಾಸನ ವಿಧಿಸದಿದ್ದರೆ ನಾನು ಮೊಗಲ ಸಾಮ್ರಾಜ್ಯದ ದ್ರೋಹಚಿಂತನೆ ಮಾಡಿದಂತಾಗುವದು."

"ಅಪ್ಪಾ, ನೀವು ಹೀಗೇಕೆ ಮಾತಾಡುವಿರಿ? ದಿಲೀಪಸಿಂಹರ ಮೇಲೆ ಅನುಗ್ರಹ ಮಾಡಿದರೆ ನಿಮ್ಮಿಂದ ಯಾವ ಅಪರಾಧವು ಘಟಿಸಿದಂತಾಗುವದು? ರಾಜಾತೋಡರಮಲ್ಲ ಸೇನಾಪತಿಗಳು ದೊಡ್ಡಿಸ್ತಿಕೆ ತೋರಿಸಿ ದಿಲೀಪಸಿಂಹರನ್ನು ಬಿಟ್ಟು ಹೋದರು. ಹೀಗಿರಲು, ನೀವು ಅವರಿಗೆ ದಂಡನೆ ವಿಧಿಸುವದು ಎಲ್ಲಿಯ ನ್ಯಾಯವು?"

"ನೀನು ಈ ವಿಷಯದಲ್ಲಿ ನನಗೆ ಸಲಹೆ ಹೇಳಲವಶ್ಯವಿಲ್ಲ. ನಾನು ನನಗೆ ಯೋಗ್ಯವಾಗಿ ತೋಚಿದಂತೆ ಮಾಡುವೆನು. ಅಮರಪ್ರಸಾದನಿಗೆ ಮುಕ್ತಿದಾನ ಮಾಡಿರುವೆನು; ದೀಲೀಪಸಿಂಹನ ಬಿಡುಗಡೆಯಾಗುವದು ಅಸಂಭವವು!"

"ರಾಜಾ, ನೀವು ನನಗೆ ಮುಕ್ತಿದಾನ ಮಾಡುವ ಆವಶ್ಯಕತೆಯಿಲ್ಲ." ಅಮರಪ್ರಸಾದನು ಉಚ್ಚಸ್ವರದಿಂದ ಹೇಳಿದನು.

"ನಿನ್ನ ಅಭಿರುಚಿ" ಹರಿನಾರಾಯಣನು ಕಠೋರತೆಯಿಂದ ನುಡಿದು, ತನ್ನ ಸೇವಕನನ್ನು ಕುರಿತು:—"ಕಿಶಾನ,"

ಕಿಶಾನನು ಮುಂದೆ ಬಂದು:—"ಜೀ ಹೂಜೂರ!" ಎಂದು ಕೈ ಜೋಡಿಸಿ ನಿಂತನು.

"ಈ ವೃದ್ಧ ದಿಲೀಪನನ್ನು ಸೆರೆಮನೆಯಲ್ಲಿ ಹಾಕು. ಅಮರಪ್ರಸಾದನನ್ನಾದರೂ ಬಂಧನೆಯಲ್ಲಿರಿಸು ಯಾವಾಗ ಅವನು ಮುಕ್ತಿಭಿಕ್ಷೆಯನ್ನು ಯಾಚಿಸುವನೋ ಆಗ ಬಿಟ್ಟುಗೊಡು. ಒಂದೇ ಕಾರಾಗೃಹದಲ್ಲಿ ಇಬ್ಬರನ್ನೂ ಇರಿಸು."

ಕಿಶಾನನು ದಿಲೀಪಸಿಂಹನನ್ನೂ ಅಮರಪ್ರಸಾದನನ್ನೂ ಕರೆದೊಯ್ದನು. ಅನಂತರದಲ್ಲಿ ಹರಿನಾರಾಯಣನು:—"ಬೂಧನ!" ಎಂದು ತನ್ನ ಅಂಗರಕ್ಷಕ ಸೇವಕನನ್ನು ಕೂಗಿದನು!

ಬೂಧನನು ಬಂದು ರಾಜನಿಗೆ ಅಭಿವಾದನೆ ಮಾಡಿದನು.

"ಎಲ್ಲ ಸಿದ್ಧತೆಯಾಗಿರುವದೆ?"

"ಹೌದು ಪ್ರಭೊ!"

"ಎಲ್ಲ ಭಟರು ಪ್ರಯಾಣಸಿದ್ಧರಾಗಿರುವರೆ?"

"ಹೌದು ಸ್ವಾಮಿ!"

"ಬಹಳೇ ಉತ್ತಮವಾಯಿತು" ಎಂದು ಹರಿನಾರಾಯಣನು ನುಡಿದು, ಮಗಳನ್ನು ಕುರಿತು:—"ಊರ್ಮಿಳೆ, ಅಂತಃಪುರಕ್ಕೆ ಹೋಗು. ನಾನು ಇಂದು ಜಲಮಾರ್ಗವಾಗಿ ಪ್ರಯಾಣ ಮಾಡುವೆನು"

"ತಂದೆಯೆ, ಎಲ್ಲಿಗೆ ಹೋಗುವಿರಿ?"

"ಮುಂಗೇರಕ್ಕೆ"

---

೮ನೆಯ ಪರಿಚ್ಛೇದ.

"ಅಮರಪ್ರಸಾದ"

"ತಂದೆಯವರೆ, ಏಕೆ?"

"ಮನೆಗೆ ಹೋಗು."

"ನಿಮ್ಮನ್ನು ಈ ಸಂಕಟಾಪನ್ನ ಅವಸ್ಥೆಯಲ್ಲಿ ಬಿಟ್ಟು ಹೋಗಬೇಕೆ?"

"ಹೋಗಬೇಕು. ನನ್ನನ್ನು ಬಿಟ್ಟು ಅವಶ್ಯವಾಗಿ ಹೋಗಬೇಕು. ನಿನ್ನ ತಾಯಿಯು ವ್ಯಥ್ಯತ್ಯಶಯ್ಯಾಶಾಯಿಯಾಗಿರುವಳು. ಅವಳು ತನ್ನ ಅಂತ್ಯಕಾಲದಲ್ಲಿ ನಿನ್ನನ್ನು ಕಾಣಬೇಕೆಂದು ಕಾತರ ದೃಷ್ಟಿಯಿಂದ ಮಾರ್ಗ ನಿರೀಕ್ಷಣೆ ಮಾಡುತ್ತಲಿರುವಳು. ನಿನ್ನ ಕಾಣುವಿಕೆಯಿಂದ ಅವಳ ಬೇನೆಯು ಅಲ್ಪಮಟ್ಟಿಗಾದರೂ ಕಡಿಮೆಯಾಗಬಹದು. ನೀನು ಇಲ್ಲಿಯೇ ಇದ್ದ ಸಂಗತಿಯನ್ನು ಅವಳು ಕೇಳಿದೊಡನೆಯೆ ಪ್ರಾಣಬಿಡುವಳು. ಅಮರ, ಮಾತೃಹತ್ಯಾಪಾತಕವನ್ನು ಕಟ್ಟಿಕೊಳ್ಳಬೇಡ. ನಿನ್ನ ತಾಯಿಯು ಇನ್ನೂ ಬದುಕಬೇಕೆಂದು ನೀನು ಇಚ್ಛಿಸುತ್ತಿದ್ದರೆ ಈಗಲೆ ಮನೆಗೆ ಹೋಗು."

ದಿಲೀಪಸಿಂಹನು ಅಂತಃಕರಣಪೂರ್ವಕವಾಗಿ ಹೇಳಿದ ಮಾತುಗಳು ಅಮರಪ್ರಸಾದನಿಗೆ ಯೋಗ್ಯವಾಗಿ ತೋರಿದವು. ತನ್ನ ಭೆಟ್ಟಿಗಾಗಿ ಆತುರಗೊಂಡ ತಾಯಿಯ ಮನಸ್ಸನ್ನಾದರೂ ಸಮಾಧಾನಗೊಳಿಸಬೇಕೆಂದು ಅವನು ನಿಶ್ಚಯಿಸಿಕೊಂಡು:—"ಅಪ್ಪಾ, ನಾನು ನಿಮ್ಮ ಆಜ್ಞೆಯ ಮೇರೆಗೆ ಮನೆಗೆ ಹೋಗುವೆನು; ಆದರೆ ನಿಮ್ಮ ಬಿಡುಗಡೆಯಾಗದಿದ್ದರೆ, ನಿಮ್ಮ ದರ್ಶನವಿಲ್ಲದೆ ನನ್ನ ತಾಯಿಯು ಪ್ರಾಣಬಿಟ್ಟರೆ ರಾಜಾ ಹರಿನಾರಾಯಣನ ಅವಿಚಾರದ ಹಾಗು ಅತ್ಯಾಚಾರದ ಸೇಡನ್ನು ಭಯಂಕರವಾದ ರೀತಿಯಿಂದ ತೀರಿಸಿಕೊಳ್ಳುವೆನು."

ಅಮರಪ್ರಸಾದನ ನೇತ್ರಗಳು ಆರಕ್ತವಾದವು. ಆಗ ಅವನು ಕ್ರೋಧಯುಕ್ತವಾದ ಧ್ವನಿಯಿಂದ:—"ಕಿಶಾನ!"

"ಯಾಕೆ, ಅಮರ ಪ್ರಸಾದ?"

"ನಾನು ಮುಕ್ತತೆಯನ್ನು ಇಚ್ಛಿಸುತ್ತಿರುವೆನು. ಬಿಡುಗಡೆ ಮಾಡು."

ಕಿಶಾನನು ಸೆರೆಮನೆಯ ಬಾಗಿಲ ತೆಗೆದನು. ಅಮರಪ್ರಸಾದನು ತಂದೆಯ ಚರಣರಜವನ್ನು ಮಸ್ತಕದಲ್ಲಿ ಧರಿಸಿ ಅಶ್ರುಪೂರ್ಣನಯನನಾಗಿ ಕಾರಾಗೃಹದಿಂದ ಹೊರಬಿದ್ದನು. ವೃದ್ಧದಿಲೀಪಸಿಂಹನ ಹೃದಯವು ದುಃಖಾಶ್ರುಗಳಿಂದ ತೊಯ್ದಿತು.

ದುಃಖಭಾರಾವನತ ಹೃದಯದಿಂದ ಅಮರಪ್ರಸಾದನು ಮನೆಗೆ ಬಂದನು. ಮನೆಯಲ್ಲಿ ಹೆಜ್ಜೆ ಇಟ್ಟ ಕೂಡಲೆ ಅವನಿಗೆ ಅಪಶಕುನಗಳು ತೋರಲಾರಂಭಿಸಿದವು. ಅಲ್ಲಿ ಯಾರ ಸದ್ದೂ ಇರಲಿಲ್ಲ. ಹಾಸಿಗೆಯು ಬರಿಯದಾಗಿತ್ತು.

ಅಮರಪ್ರಸಾದನು ಅತ್ತಿಂದಿತ್ತ ಇತ್ತಿಂದತ್ತ ತಿರುಗಾಡಿದನು; ಆದರೆ ಎಲ್ಲಿಯೂ ಅವನಿಗೆ ತಾಯಿಯಾದ ಮಾಯಾದೇವಿಯು ಕಾಣಲಿಲ್ಲ. ಆಗ ಅವನು 'ಅವ್ವಾ, ಅವ್ವಾ!' ಎಂದು ಗದ್ಗದ ವಾಣಿಯಿಂದ ಕೂಗತೊಡಗಿದನು. ಎಲ್ಲಿಯೂ ಶಬ್ದವು ಕೇಳಬರಲಿಲ್ಲ. ಸದ್ದಡಗಿದ ಮನೆಯನ್ನು ನೋಡಿದೊಡನೆಯೆ ಅವನ ತಲೆಯ ಮೇಲೆ ವಜ್ರಾಘಾತವಾದಂತಾಯಿತು. ಪ್ರಳಯ ಕಲ್ಲೋಲವು ಅವನ ಕಿವಿಯಲ್ಲಿ ಧ್ವನಿಮಾಡತೊಡಗಿತು. ಜ್ವಾಲಾಮುಖಿಯ ತಪ್ತಪ್ರವಾಹವು ಎದೆಯಲ್ಲಿ ಬೀಳಹತ್ತಿತು. ಅವನು ಮತ್ತೆ "ಅವ್ವಾ, ಅವ್ವಾ!" ಎಂದು ಒದರತೊಡಗಿದನು.

ಅದೇ ಸಮಯದಲ್ಲಿ—"ನಿಮ್ಮ ತಾಯಿಯು ಸ್ಮಶಾನದಲ್ಲಿರುವಳು!" ಎಂದು ಉತ್ತರವು ದೊರೆಯಿತು.

ಎಲ್ಲಿಂದ-ಯಾರಿಂದ ಉತ್ತರ ದೊರೆಯಿತೆಂಬದನ್ನು ಅಮರಪ್ರಸಾದನು ವಿಚಾರಿಸಲಿಲ್ಲ. ಅವನು ಉನ್ಮತ್ತನಂತೆ ಸ್ಮಶಾನಭೂಮಿಯ ಕಡೆಗೆ ನಡೆದನು. ರಾತ್ರಿಯ ಸಮಯವು. ಕಾರ್ಗತ್ತಲೆಯು ವ್ಯಾಪಿಸಿತ್ತು. ಸ್ಮಶಾನಭೂಮಿಯು ನಗರದಿಂದ ದೂರದಲ್ಲಿ ನದೀತಟಾಕದ ಹತ್ತರ ಇತ್ತು. ಹಾದಿಯು ಚನ್ನಾಗಿ ಕಾಣುತ್ತಿರಲಿಲ್ಲ ಇಂತಹ ಪರಿಸ್ಥಿತಿಯಲ್ಲಿ ಹುಚ್ಚನಂತೆ ಓಡತೊಡಗಿದ ಅಮರಪ್ರಸಾದನ ಕಾಲುಗಳಿಗೆ ಕಲ್ಲುಗಳು ತಾಕಿ ಕ್ಷತವಿಕ್ಷತವಾಗಿದ್ದವು; ಆದರೂ ಅವನಿಗೆ ಅದರ ಪರಿವೆಯಿದ್ದಿಲ್ಲ. ಅವನು "ಅವ್ವಾ, ಅವ್ವಾ" ಎಂದು ರೋದಿಸುತ್ತ ವೇಗದಿಂದ ಸಾಗಿದ್ದನು. ಅವನ ಭೀಷಣ ಚೀತ್ಕಾರಧ್ವನಿಯು ಪ್ರತಿಧ್ವನಿಗೊಂಡು ಪುರವಾಸಿಗಳಿಗೆ ಅಂಜಿಕೆಯನ್ನುಂಟುಮಾಡಿತು. ಪಕ್ಷಿಗಳು ತಮ್ಮ ಗೂಡಿನಲ್ಲಿ ಹುದುಗಿಕೊಂಡು ಕುಳಿತವು; ಬಾಲ-ಬಾಲಿಕೆಯರು ಅಂಜಿ ತಮ್ಮ ತಾಯಂದಿರ ಮಗ್ಗಲನ್ನು ಸೇರಿದರು. ಅಮರಪ್ರಸಾದನು ಭ್ರಮಿಷ್ಠನಾಗಿದ್ದನು. ಅವನಿಗೆ ತನ್ನ ತಾಯಿಯ ಧ್ಯಾನದ ಹೊರತು ಮಿಕ್ಕ ವಿಷಯಗಳ ಪರಿವೆಯಿದ್ದಿಲ್ಲ. ಅವನು ವಿದ್ಯುದ್ವೇಗದಿಂದ ಸಾಗಿದ್ದನು. ಅವನ ಮುಖದಿಂದ "ಅವ್ವಾ, ಅವ್ವಾ" ಎಂಬ ಧ್ವನಿಯು ಅವಕಾಶವಿಲ್ಲದೆ ಹೊರಬೀಳತೊಡಗಿತ್ತು. ಅವನು ಎಷ್ಟೋ ಸಾರೆ ಎಡವಿ ಭೂಮಿಗೆ ಬಿದ್ದನು. ಅವನ ಮೈತುಂಬ ಎಷ್ಟೋ ಸಣ್ಣ ದೊಡ್ಡ ಗಾಯಗಳಾಗಿದ್ದವು. ಅವನು ಬೀಳುತ್ತ ಏಳುತ್ತ ಸ್ಮಶಾನ ಭೂಮಿಯ ಕಡೆಗೆ ಸಾಗಿದ್ದನು.

ಸ್ಮಶಾನದ ಸಮೀಪದಲ್ಲಿ ಬಂದ ಕೂಡಲೆ ಅಮರಪ್ರಸಾದನಿಗೆ ಭೀಷಣ

ವಾದ ದೃಶ್ಯವು ಕಂಡಿತು. ಅಲ್ಲಿ ಚಿತೆಯು ಧಗಧಗಿಸುತ್ತಿತ್ತು. ಅದನ್ನು ನೋಡಿ ಅವನ ರೋದನವು ಹೆಚ್ಚಾಯಿತು. ಅವನು ಚಿತೆಯ ಸಮೀಪಕ್ಕೆ ಹೋಗುವಷ್ಟರಲ್ಲಿ ವಾಯುಗತಿಯಿಂದ ಒಬ್ಬ ಮನುಷ್ಯನು ಅಲ್ಲಿಗೆ ಬಂದನು. ಅಮರಪ್ರಸಾದನು ಆಕಸ್ಮಿಕವಾಗಿ ಬಂದ ಮನುಷ್ಯನನ್ನು ಗುರುತಿಸಿದನು. ಅವನು ಆಗಂತುಕ ಗೃಹಸ್ಥನಾದ ಯಾದವಲಾಲನನ್ನು ಕುರಿತು:—"ಅಜ್ಜಾ, ನನ್ನ ತಾಯಿಯು ಎಲ್ಲಿರುವಳು?"

"ಈ ಚಿತೆಯಲ್ಲಿ."

"ಚಿತೆಯಲ್ಲಿಯೆ? ಇದೇ ಚಿತೆಯಲ್ಲಿಯೆ? ನಿರೋಪಪಡೆಯದೆ, ಶುಭಾಶೀರ್ವಾದವೀಯದೆ, ವಾತ್ಸಲ್ಯದ ಕುವರನಾದ ಈ ದೀನ ಅಮರಪ್ರಸಾದನಿಗೆ ಅಂತಿಮ ಉಪದೇಶ ಹೇಳದೆ ನನ್ನ ಪೂಜ್ಯ ಮಾತೃಮೂರ್ತಿಯು ಈ ಚಿತೆಯಲ್ಲಿ ಪ್ರವೇಶಿಸಿದಳೆ? ತನ್ನ ಪುತ್ರನಿಗೆ ಚರಣರೇಣುವನ್ನೀಯದೆ ಅವಳು ಎಂದೂ ಚಿತಾಪ್ರವೇಶ ಮಾಡಲಾರಳು. ತಾಯೆ, ಚರಣರಜವನ್ನು ಕೊಡು, ಅಮ್ಮಾ!"

ಅಮರಪ್ರಸಾದನು ಪ್ರಲಾಪಿಸುತ್ತ ಹೀಗೆ ನುಡಿದು ಅಗ್ನಿಯಲ್ಲಿ ದುಮುಕಬೇಕೆಂದು ಮುಂದುವರಿದನು. ಚತುರನಾದ ಯಾದವಲಾಲನು ಅವನ ಪ್ರಯತ್ನವನ್ನು ಕಂಡು ಹಿಡಿದು, ಒಳ್ಳೆಯ ಚಪಲತೆಯಿಂದ ಅವನನ್ನು ಹಿಂದೆ ಎಳೆದುಕೊಂಡು:-"ಅಮರಪ್ರಸಾದ! ಇದೇನು ಅನರ್ಥವನ್ನು ನಡೆಯಿಸಿರುವೆ!"

ದುಃಖಾತಿರೇಕದಿಂದ ಅಮರಪ್ರಸಾದನು ಮೂರ್ಛೆಗೊಂಡು ಭೂಮಿಗೆ ಬಿದ್ದನು. ಯಾದವಲಾಲನು ಶೀತೋಪಚಾರದಿಂದ ಅವನನ್ನು ಎಚ್ಚರಗೊಳಿಸಲಿಕ್ಕೆ ಪ್ರಯತ್ನಿಸಹತ್ತಿದನು. ಅಸಾವಧ ಸ್ಥಿತಿಯಲ್ಲಿದ್ದ ಅಮರಪ್ರಸಾದನು ಕೆಲವು ವೇಳೆಯ ಮೇಲೆ ಚೇತರಿಸಿಕೊಂಡು ಎದ್ದು ಕುಳಿತನು. ಆಗ ಅವನಿಗೆ ಹಿಂದಿನ ಸಂಗತಿಗಳೆಲ್ಲ ನೆನಪಾಗಿ ನಿಟ್ಟುಸಿರು ಬಿಟ್ಟನು. ಅವನ ನೇತ್ರಗಳಿಂದ ದುಃಖಾಶ್ರುಗಳು ಹರಿಯತೊಡಗಿದವು. ಯಾದವಲಾಲನು ಸಾಂತ್ವನಪರ ಶಬ್ದಗಳಿಂದ ದುಃಖಕಾತರಗೊಂಡ ಅಮರಪ್ರಸಾದನನ್ನು ಸಂತೈಸತೊಡಗಿದ್ದನು.

ಚಿತೆಯು ಆರಿತು. ಅಗ್ನಿದೇವನು ಹೊರಟು ಹೋದನು. ಅಮರಪ್ರಸಾದನು ಚಿತೆಯಿದ್ದ ಸ್ಥಳಕ್ಕೆ ಬಂದು ತಾಯಿಯ ದೇಹಭಸ್ಮಕ್ಕೆ ಪ್ರಣಾಮ ಮಾಡಿದನು. ಪರಕ್ಷಣದಲ್ಲಿ ಅವನ ಮುಖಚರ್ಯೆಯು ಕಲ್ಪನಾತೀತವಾದ

ಅಭ್ಯಂತರ ಹೊಂದಿತು. ಅವನ ಕಣ್ಣುಗಳೊಳಗಿನ ದುಃಖಾಶ್ರುಗಳು ಒಣಗಿದವು. ಮುಖಚಿಹ್ನದೊಳಗಿನ ಕಾತರತೆಯು ನಷ್ಟವಾಯಿತು. ಅವನ ಹೃದಯದಲ್ಲಿಯ ದೈನ್ಯಭಾವವು ನಾಶವಾಗಿ ಕ್ರೋಧವು ನೆಲೆಗೊಂಡಿತು. ಅವನ ಕೈಗಳು ಮುಷ್ಟಿಬದ್ಧವಾದವು. ನೇತ್ರಗಳು ವಿಶಾಲವಾಗಿ ಆರಕ್ತತೆ ಹೊಂದಿದವು. ಅಮರಪ್ರಸಾದನ ಉಗ್ರಮೂರ್ತಿಯನ್ನು ನೋಡಿ ಯಾದವಲಾಲನು ಭಯಭೀತನಾಗಿ:—"ಅಮರಪ್ರಸಾದ!" ಎಂದು ಕೂಗಿದನು.

ಅಮರಪ್ರಸಾದನ ಮುಖದಿಂದ ಉತ್ತರವು ಹೊರಡಲಿಲ್ಲ. ಯಾದವಲಾಲನು ಮತ್ತೊಮ್ಮೆ ತಾರಸ್ವರದಿಂದ:—"ಅಮರಪ್ರಸಾದ! ಇದೇನು ವಿಚಿತ್ರವು! ಇಷ್ಟೇಕೆ ಸಂತಾಪಗೊಂಡೆ? ಮನೆಗೆ ಹೋಗೋಣ ನಡೆ."

"ಮನೆಗೆ ನಡೆಯಬೇಕೆ? ಮನೆಯು ಎಲ್ಲಿರುವದು?"

"ನೀನು ಎಲ್ಲಿ ವಾಸವಾಗಿರುವೆಯೋ ಅದು ನಿನ್ನ ಮನೆಯಲ್ಲವೆ?"

"ಅಲ್ಲ, ಅದು ಮನೆಯಲ್ಲ; ಇಳಿದುಕೊಳ್ಳುವ ಸ್ಥಳವು. ನನ್ನ ತಾಯಿಯು ಎಲ್ಲಿ ಇರುವಳೋ ಅದು ಮನೆಯು."

"ಆ ಮನೆಯನ್ನು ತೆಗೆದುಕೊಂಡು ಈಗ ಮಾಡುವದೇನು? ಕೊನೆಗೆ ಎಲ್ಲರೂ ಅದೇ ಮನೆಗೆ ಹೋಗುವದು ನಿಶ್ಚಿತವಿರುವದರಿಂದ ಈಗಲೆ ಅದರ ಯೋಚನೆ ಮಾಡಲವಶ್ಯವಿಲ್ಲ. ಇಳಿದುಕೊಳ್ಳುವ ಸ್ಥಳವೆಂದು ನೀನು ಯಾವದಕ್ಕೆ ಅನ್ನುವೆಯೋ ಅಲ್ಲಿಗೆ ಹೋಗೋಣ ನಡೆ."

"ಇಲ್ಲ; ಬರುವದಿಲ್ಲ."

"ಯಾಕೆ?"

"ಸೇಡು ತೀರಿಸಿಕೊಳ್ಳುವೆನು."

"ಯಾರದು?" ವಿಸ್ಮಿತನಾಗಿ ಯಾದವಲಾಲನು ವಿಚಾರಿಸಿದನು.

"ರಾಜಾ ಹರಿನಾರಾಯಣನ ಮೇಲಿನದು."

ಭೀಷಣಸ್ವರದಿಂದ ಮೇಘವು ಗರ್ಜಿಸತೊಡಗಿತು. ಪ್ರಬಲವಾಯುವು ಭರದಿಂದ ಸುಳಿಯಹತ್ತಿತು. ಕಲಕಲ ಶಬ್ದದಿಂದ ಭೀಷಣ ತರಂಗಗಳೊಡನೆ ಗಂಗಾನದಿಯ ಜಲವು ಆಂದೋಲನ ಹೊಂದಲಾರಂಭಿಸಿತು. ಅಮರಪ್ರಸಾದನ ಹೃದಯುವಾದರೂ ಇದೇ ರೀತಿಯ ಭಾವನೆಗಳನ್ನು ಹೊಂದಿ ಹೊಯ್ದಾಡತೊಡಗಿತು. ಆಗ ಯಾದವಲಾಲನು ಭಯದಿಂದಲೂ ಶಂಕೆ-ಕುಶಂಕೆಗಳಿಂದಲೂ ಯುಕ್ತನಾಗಿ:—"ಅವನ ಅಪರಾಧವೇನು?"

"ಅವನ ಅಪರಾಧವು ಗುರುತರವಾದದ್ದಿರುವದು. ನನ್ನ ತಾಯಿಯು ತನ್ನ ಮೃತ್ಯುಸಮಯದಲ್ಲಿ ಪತಿ-ಪುತ್ರರನ್ನು ನೋಡದೆ ಶಾಂತಿಧಾಮಕ್ಕೆ ಹೊರಟು ಹೋದಳು. ಹರಿನಾರಾಯಣನ ಅತ್ಯಾಚಾರದಿಂದ ನಾನೂ ನನ್ನ ತಂದೆಯೂ ಸೆರೆಯಾಳುಗಳಾಗದಿದ್ದರೆ, ನನ್ನ ಮಾತೆಯ ಅಂತ್ಯಕಾಲದಲ್ಲಿ ಅವಳ ಬಳಿಯಲ್ಲಿರುತ್ತಿದ್ದೆವು. ನಾವು ಅವಳ ಬಳಿಯಲ್ಲಿದ್ದರೆ, ಒಂದು ವೇಳೆ ಅವಳು ಇಷ್ಟು ಬೇಗನೆ ಇಹಲೋಕತ್ಯಾಗ ಮಾಡುತ್ತಿದ್ದಿಲ್ಲವೆಂದು ಅನುಮಾನಿಸುವೆನು. ರೋಗಪೀಡಿತಳಾದ ಅವಳು ನಮ್ಮ ಮೇಲೊದಗಿದ ದುರ್ಧರ ಪ್ರಸಂಗವನ್ನು ಕೇಳಿ, ಎದೆಯೊಡೆದು ಬೇಗನೆ ಮರಣ ಹೊಂದಿದಳು. ಹರಿನಾರಾಯಣನ ಅತ್ಯಾಚಾರದಿಂದಲೆ ನಾನು ನನ್ನ ತಾಯಿಯನ್ನು ಕಳೆದು ಕೊಂಡೆನು."

"ಇದು ನಿನ್ನ ತಪ್ಪುತಿಳುವಳಿಕೆಯು. ಕೇವಲ ಅನುಮಾನದಿಂದ ನೀನು ಹೀಗೆ ಮಾತಾಡುತ್ತಿರುವೆ. ವಿಧಿಲಿಖಿತದಂತೆ ಇಂತಹ ಕಾರ್ಯಗಳು ಆಗುತ್ತಿರುತ್ತವೆ."

"ನಿಮ್ಮ ಮಾತುಗಳೇ ನಿಜವೆಂದು ತಿಳಿದರೂ, ಹರಿನಾರಾಯಣನು ನನ್ನ ಹಾಗು ನನ್ನ ತಂದೆಯ ಮೇಲೆ ಅತ್ಯಾಚಾರ ನಡೆಯಿಸದಿದ್ದರೆ ಇಂತಹ ಅಸಂತೋಷವು ಮನಸ್ಸಿನಲ್ಲಿ ಹುಟ್ಟುತ್ತಿದ್ದಿಲ್ಲ. ಮಾತೆಯ ಚರಣರಜಕ್ಕೂ ಅವಳ ಆಶೀರ್ವಾದಕ್ಕೂ ನಾನು ಹೊರತಾಗುತ್ತಿದ್ದಿಲ್ಲ. ಹರಿನಾರಾಯಣನ ರಾಕ್ಷಸೀ ಅತ್ಯಾಚಾರವನ್ನು ಎಷ್ಟೆಂದು ವರ್ಣಿಸಲಿ? ಬಾರಕೋಲ ಹೊಡತದಿಂದ ನನ್ನ ತಂದೆಯ ಮೈಯೊಳಗಿನ ರಕ್ತವು ಭೂಮಿಗೆ ಬಿದ್ದು ಹರಿಯುತ್ತಿರುವಾಗ ನನ್ನ ಮನಸ್ಥಿತಿಯು ಹೇಗಾಗಿರಬಹುದು? ನನ್ನ ತಂದೆಯಿಂದ ಅಂತಹ ಅಪರಾಧವೇನು ಘಟಿಸಿತ್ತೆಂದು ಹರಿನಾರಾಯಣನು ಕ್ರೂರಾಚರಣೆ ಮಾಡಿದನು? ಆ ನರಾಧಮನ ಮೇಲಿನ ಸೇಡು ತೀರಿಸಿಕೊಳ್ಳುವದೇ ನನ್ನ ಹೆಗ್ಗುರಿಯಾಗಿರುವದು. ಅವನ ಆರ್ತಧ್ವನಿಯು ದಶದಿಶೆಗಳಲ್ಲಿ ನಿನಾದಗೊಳ್ಳುವಂತೆ ಮಾಡುವೆನು. ಹರಿನಾರಾಯಣನ ಹೃದಯದಲ್ಲಿ ಹುಟ್ಟಿದ ದುಃಖಾಗ್ನಿಯಿಂದಲೆ ಅವನ ಸರ್ವಾಂಗವು ಭಸ್ಮೀಭೂತವಾಗುವಂತೆ ಮಾಡುವೆನು. ನನ್ನ ವೀರ ಬೊಬ್ಬೆಯು ಪೃಥ್ವಿ-ಆಕಾಶಗಳನ್ನು ನಡುಗಿಸಿ ಬಿಡುವದು. ಪ್ರತಿಶೋಧವೇ ನನ್ನ ಮೂಲಮಂತ್ರವಾಗಿರುವದರಿಂದ ನಿಮ್ಮ ವಾಕ್ಯಗಳೂ ಉಪದೇಶವೂ ನನ್ನ ಪ್ರತಿಜ್ಞೆಯನ್ನು ವ್ಯರ್ಥಗೊಳಿಸಲಾರವು."

"ಅಮರಪ್ರಸಾದ," ಯಾದವಲಾಲನು ಗಂಭೀರವಾಣಿಯಿಂದ— "ಈ ಸಂಸಾರದಲ್ಲಿ ಕ್ಷಮೆಗೆ ಸಮಾನವಾದ ಪ್ರತಿಶೋಧವು ಮತ್ತಾವದೂ ಇಲ್ಲ."

"ಕ್ಷಮೆಯೆ? ಅತ್ಯಾಚಾರಿಯಾದ ರಾಜನನ್ನು ಕ್ಷಮಿಸಬೇಕೆ? ಯಾವನು ನ್ಯಾಯ-ನೀತಿಗಳನ್ನು ಅರಿತಿಲ್ಲವೊ, ಯಾವನು ಸದಸದ್ವಿವೇಕ ಬುದ್ಧಿಯುಳ್ಳವನಿರುವದಿಲ್ಲವೊ, ಯಾವನು ಪ್ರಜಾಜನರನ್ನು ಪಶುಸಮಾನರೆಂದು ತಿಳಿದು ಪೀಡಿಸುವನೋ ಅಂತಹ ರಾಜನನ್ನು ಕ್ಷಮಿಸುವದೆಂದರೆ ಪರಮಾತ್ಮನ ದೃಷ್ಟಿಯಿಂದ ಪಾತಕ ಮಾಡಿದಂತೆಯೆ ಸರಿ. ನಾನು ಹರಿನಾರಾಯಣನ ಮೇಲಿನ ಸೇಡನ್ನು ಭಯಂಕರವಾವ ರೀತಿಯಿಂದ ತೀರಿಸಿಕೊಳ್ಳಬೇಕೆಂದೇ ಸಂಕಲ್ಪಸಿರುವೆನು. ಇದರಲ್ಲಿ ಅಭ್ಯಂತರ ಮಾಡಲಿಕ್ಕಿಲ್ಲ."

"ತಾಳ್ಮೆಯಿಂದ ಕೆಲಸ ಮಾಡು, ದುಡುಕಬೇಡ ಅವಸರದಿಂದ ಮಾಡಿದ ಕೆಲಸಗಳು ಕೆಡುವ ಸಂಭವ ಬಹಳ. ಅಮರಪ್ರಸಾದ, ಸಂತಾಪ ಪರವಶನಾದ ನಿನ್ನಲ್ಲಿ ಇನ್ನೂ ಕರ್ತವ್ಯಾಕರ್ತವ್ಯಗಳ ಯೋಗ್ಯವಾದ ತಿಳುವಳಿಕೆ ಹುಟ್ಟಿಲ್ಲ. ಸಾವಧಾನದಿಂದ ಕೆಲಸ ಮಾಡು" ಎಂದು ಯಾದವಲಾಲನು ಅಮರಪ್ರಸಾದನನ್ನು ಸಂತೈಸತೊಡಗಿದ್ದನು.

ಅಷ್ಟರಲ್ಲಿ ಬಿರುಗಾಳಿಯಿಂದ ನದಿಯು ಚಂಚಲವಾಗತೊಡಗಿತು. ತರಂಗಗಳು ಆಳತೆಮೀರಿ ಅಲೆದಾಡಹತ್ತಿದವು. ದೂರದಲ್ಲಿ ನಾಲ್ಕು ಸಣ್ಣ ನೌಕೆಗಳೂ, ಒಂದು ದೊಡ್ಡ ನೌಕೆಯೂ ದಂಡೆಗೆ ತಲುಪುವದಕ್ಕಾಗಿ ವೇಗದಿಂದ ಹೊರಟಿದ್ದವು. ಅಂಬಿಗರು ಚೀತ್ಕಾರ ಧ್ವನಿಗೈಯುತ್ತ ಅವುಗಳನ್ನು ದಂಡೆಗೆ ತರಬೇಕೆಂದು ಬಹಳೇ ಯತ್ನಿಸಹತ್ತಿದ್ದರು. ಭಯಂಕರವಾದ ಬಿರುಗಾಳಿಯ ಸಲುವಾಗಿ ನೌಕೆಗಳು ದಂಡೆಯನ್ನು ತಲುಪದಾಗಿದ್ದವು. ಎಷ್ಟೋ ವೇಳೆಯ ಮೇಲೆ ಸಣ್ಣ ನೌಕೆಗಳು ದಂಡೆಗೆ ಬಂದವು. ದೊಡ್ಡ ನೌಕೆಯು ಮಾತ್ರ ದಂಡೆಗೆ ಬರಲಿಲ್ಲ. ದೊಡ್ಡ ತರಂಗಗಳ ಆಘಾತದಿಂದ ಅದು ಆಂದೋಲನ ಹೊಂದತೊಡಗಿತು. ಅಮರಪ್ರಸಾದನು ಹೊಯ್ದಾಡತೊಡಗಿದ ದೊಡ್ಡ ನೌಕೆಯ ಕಡೆಗೆ ನೋಡಿ:—"ಇದೇನು? ನೌಕೆಯು ಮುಳುಗುವ ಹಂಚಿಕೆಯಲ್ಲಿದ್ದಂತೆ ತೋರುವದು!"

ಯಾದವಲಾಲನು ವಿಸ್ಮಿತನಾಗಿ ನೌಕೆಯನ್ನು ನೋಡತೊಡಗಿದನು.

ಅಂಬಿಗರು ಬಹಳೇ ಕಷ್ಟದಿಂದ ನೌಕೆಯನ್ನು ದಂಡೆಯ ಸಮೀಪಕ್ಕೆ ತಂದರು. ಅಷ್ಟರಲ್ಲಿ ಪ್ರಬಲವಾದ ಆಘಾತದಿಂದ ಆ ನೌಕೆಯು ಬಹಳವಾಗಿ

ಹೊರಳಿತು. ಅದು ಮುಳುಗತಕ್ಕದ್ದೇ; ಆದರೆ ಉತ್ಸಾಹಿಗಳೂ ನಿಪುಣರೂ ಆದ ಅಂಬಿಗರ ಹಂಚಿಕೆಯಿಂದ ಅದು ಉಳಿಯಿತು. ಈ ಹೊಯ್ದಾಟದ ಆಘಾತದಿಂದ ಒಬ್ಬ ರಮಣಿಯು ಜೋಲಿ ಹೋಗಿ ಭೀಷಣತರಂಗಮಯಿ ಯಾದ ನದಿಯಲ್ಲಿ ಬಿದ್ದು ಮುಳುಗಿ ಹೋದಳು. ಕೂಡಲೆ ನೌಕೆಯೊಳಗಿನ ಜನರಲ್ಲಿ ದೊಡ್ಡ ಹಾಹಾಕಾರವೆದ್ದಿತು. ಆಗ ಒಬ್ಬ ಪ್ರೌಢ ಮನುಷ್ಯನು ತನ್ನ ಅಂಬಿಗರನ್ನು ಕರಿತು:—"ಯಾರು ನನ್ನ ಜಲಮಗ್ನ ಕನ್ಯೆಯ ಉದ್ಧಾರ ಮಾಡುವರೋ ಅವರಿಗೆ ಲಕ್ಷ ಮುದ್ರೆಗಳನ್ನು ಪಾರಿತೋಷಕ ಕೊಡುವೆನು; ಜಮೀನದಾರಿಯನ್ನು ಕೊಡುವೆನು."

ಪಾರಿತೋಷಕದ ಆಶೆಗಾಗಿ ಸಾಕ್ಷಾತ್ ಮೃತ್ಯುರೂಪಿಯಾದ ನದಿ ಯಲ್ಲಿ ಬೀಳಲಿಕ್ಕೆ ಯಾರೂ ಅಗ್ರೇಸರರಾಗಲಿಲ್ಲ. ಆಗ ಆ ಮನುಷ್ಯನು ವಿನಯದಿಂದಲೂ ದೈನ್ಯದಿಂದಲೂ ಅಂಬಿಗರನ್ನು ಪ್ರಾರ್ಥಿಸತೊಡಗಿದನು; ಆದರೆ ಅವನ ಪ್ರಯತ್ನವು ನಿಷ್ಫಲವಾಯಿತು. ಅಂಬಿಗರು ಅವನ ಮಾತಿಗೆ ಉತ್ತರವನ್ನು ಸಹ ಕೊಡದೆ ಸ್ತಬ್ಧರಾಗಿ ನಿಂತರು.

ಈ ಕೋಲಾಹಲದಿಂದ ಅಮರಪ್ರಸಾದನ ಶಾಂತತೆಯು ಭಂಗವಾ ಯಿತು. ಅವನಿಗೆ ನದಿಯಲ್ಲಿ ನಡೆದ ಸಂಗತಿಯು ತಿಳಿದಿತ್ತು. ಅಂಬಿಗರು ನದಿಯಲ್ಲಿ ಬಿದ್ದ ಸ್ತ್ರೀಯನ್ನು ತೆಗೆಯಲಿಕ್ಕೆ ಸಿದ್ಧರಾಗದ್ದನ್ನು ನೋಡಿ, ಅವರ ಭೀರುತನವನ್ನು ಮನಸಾ ತಿರಸ್ಕರಿಸಿ ನದಿಯಲ್ಲಿ ಬಿದ್ದನು. ಈಸುವದರಲ್ಲಿ ಚತುರನಾದ ಅಮರಪ್ರಸಾದನು ವಾಯುವೇಗದಿಂದ ಘಟನಾಸ್ಥಳವನ್ನು ತಲುಪಿದನು. ಅವನು ದೃಷ್ಟಿ ಹರಿಯುವ ವರೆಗೆ ನದೀಪಾತ್ರವನ್ನು ನೋಡ ತೊಡಗಿದನು; ಆದರೆ ಅಲ್ಲಿ ಅವನಿಗೆ ಏನೂ ಕಾಣಲಿಲ್ಲ. ಕೆಲವು ವೇಳೆಯ ಮೇಲೆ ಬಹು ದೂರದಲ್ಲ ಕಪ್ಪು ಬಣ್ಣದ ಒಂದು ಪದಾರ್ಥವು ತೇಲುತ್ತ ಹೋಗುತ್ತಿರುವಂತೆ ಭಾಸವಾಯಿತು. ಕೂಡಲೆ ಅವನು ದ್ರುತಗತಿಯಿಂದ ಆ ಪದಾರ್ಥದ ಬಳಿಗೆ ಬಂದನು. ತರುವಾಯ ಅವನು ಆ ಪದಾರ್ಥವನ್ನು ಹಿಡಿದನು. ಕಪ್ಪು ಬಣ್ಣದ ಒಡವೆಯು ಮತ್ತೇನೂ ಆಗಿರದೆ ಆ ರಮಣಿಯ ಕೇಶಗುಚ್ಛವಾಗಿತ್ತು. ಅಮರಪ್ರಸಾದನು ಕೇಶಗುಚ್ಛವನ್ನು ಹಿಡಿದು ಎಳೆದು ಆ ಸ್ತ್ರೀಯನ್ನು ನದೀತಟಾಕಕ್ಕೆ ತಂದನು. ಅಷ್ಟು ಹೊತ್ತಿಗೆ ದೊಡ್ಡ ನೌಕೆ ಯಾವರೂ ದಂಡೆಗೆ ಬಂತು. ಅಮರಪ್ರಸಾದನು ಸ್ತ್ರೀಯನ್ನು ದಂಡೆಗೆ ತಂದ ದ್ದರಿಂದ ಎಲ್ಲ ಜನರು ಆನಂದಾತಿಶಯದಿಂದ ಚಪ್ಪಾಳೆ ಹೊಡೆಯತೊಡಗಿದರು.

ಅಮರಪ್ರಸಾದನು ದೊಡ್ಡ ನೌಕೆಯ ಬಳಿಗೆ ಹೋಗಿ ಸಂತಪ್ತವಾಣಿಯಿಂದ-"ಪಿತೃಲಾಂಛನಕಾರಿ, ಅತ್ಯಾಚಾರಿ, ಪಿಶಾಚಿರಾಜಾ ಹರಿನಾರಾಯಣ! ಇದು ನನ್ನ ಪ್ರತಿಶೋಧವಿರುವದು!" ಎಂದು ನುಡಿದು, ಅವನು ಆ ಸ್ತ್ರೀಯನ್ನು ಹರಿನಾರಾಯಣನ ಪಾದಗಳ ಮೇಲೆ ಹಾಕಿದನು.

ತನ್ನ ಕನ್ನಿಕೆಯಾದ ಊರ್ಮಿಳಾದೇವಿಗೆ ಪ್ರಾಣದಾನ ಮಾಡಿದವನು ಮತ್ತಾರೂ ಆಗಿರದೆ, ತನ್ನಿಂದ ಭಯಂಕರವಾದ ಯಾತನೆ ಹೊಂದಿದ ಸ್ವಾಮಿನಿಷ್ಠ ಸರದಾರನಾದ ದಿಲೀಪಸಿಂಹನ ಮಗ ಅಮರಪ್ರಸಾದನಿರುವನೆಂದು ತಿಳಿದು ಹರಿನಾರಾಯಣನು ಆಶ್ಚರ್ಯಾನ್ವಿತನಾಗಿ ಅವನ ಮುಖವನ್ನು ನೋಡತೊಡಗಿದನು. ಆಗ ರಾಜನ ಹೃದಯವು ಉಕ್ಕಿ ಬಂದಿತ್ತು. ಅವನು ಅಮರಪ್ರಸಾದನ ವಿಷಯವಾಗಿ ಒಳ್ಳೆಯ ಕೃತಜ್ಞತೆ ಹೊಂದಿದ್ದನು. ಅವನು ಆನಂದಾತಿಶಯದಿಂದ:—"ಅಮರಪ್ರಸಾದ! ನೀನು ಪರಮ ಧನ್ಯನು! ನಿನ್ನ ಕೃತಿಯನ್ನು ಎಷ್ಟು ಹೊಗಳಿದರೂ ತೀರದು. ಇಷ್ಟು ದಿನಗಳ ವರೆಗೆ ನಿನ್ನ ಘನವಾದ ಯೋಗ್ಯತೆಯನ್ನು ನಾನು ತಿಳಿದಿರಲಿಲ್ಲ. ನೀನು ಪರಮಾತ್ಮನ ಪ್ರತಿನಿಧಿಯಿರುವೆ. ದೇವಾಂಶ ಸಂಭೂತನಿರುವೆ; ಧರ್ಮದ ಮೂರ್ತಿಯಿರುವೆ! ನಿನ್ನ ಉಜ್ವಲವಾದ ಪ್ರತಿಭೆಯಿಂದ ನನ್ನ ಅಂಧಕಾರಪೂರ್ಣ ಹೃದಯವು ಪ್ರಕಾಶಗೊಂಡಿತು. ನಿನ್ನ ಧನ್ಯವಾದನೆಯನ್ನು ಎಷ್ಟು ಮಾಡಿದರೂ ತೀರದು."

ಹರಿನಾರಾಯಣನ ಧನ್ಯೋದ್ಗಾರಗಳ ಕಡೆಗೆ ಅಮರಪ್ರಸಾದನ ಲಕ್ಷ್ಯವು ಅಷ್ಟೊಂದಿರಲಿಲ್ಲ. ಅವನು ಅಸಾವಧಳಾಗಿದ್ದ ಊರ್ಮಿಳಾದೇವಿಯನ್ನು ನಿರೀಕ್ಷಿಸುತ್ತಲಿದ್ದನು; ಅವಳು ಬೇಗನೆ ಚೇತರಿಸಬೇಕೆಂದು ಪ್ರಬಲವಾದ ಇಚ್ಛೆಯು ಅಮರಪ್ರಸಾದನಲ್ಲಿ ನೆಲೆಗೊಂಡಿತ್ತು. ಇಂತಹ ಅಸ್ಥಿರಮನಸ್ಥಿತಿಯಲ್ಲಿಯೂ "ಕ್ಷಮೆಗೆ ಸಮಾನವಾದ ಪ್ರತಿಶೋಧವು ಮತ್ತೊಂದಿಲ್ಲ." ಎಂಬ ಯಾದವಲಾಲನ ಮಹಾ ವಾಕ್ಯವು ಅವನ ಕಿವಿಯಲ್ಲಿ ಧ್ವನಿಗೊಂಡಿತ್ತು. ಅವನು ಹರಿನಾರಾಯಣನನ್ನೊಮ್ಮೆ, ಊರ್ಮಿಳಾದೇವಿಯನ್ನೊಮ್ಮೆ ನೋಡುತ್ತ, ವಿಮನಸ್ಕನಾಗಿ ನಿಂತಿದ್ದನು. ಮುಂದೆ ಕೆಲವು ವೇಳೆಯ ಮೇಲೆ ಜನರ ಉಪಚಾರದಿಂದ ಊರ್ಮಿಳಾದೇವಿಯು ಎಚ್ಚತ್ತು ಎದ್ದು ಕುಳಿತಳು. ಎಲ್ಲ ಜನರಿಗೂ ಪರಮಾನಂದವಾಯಿತು. ಹರಿನಾರಾಯಣನ ಆನಂದ ಶರಧಿಯಂತು ಮೇರೆದಪ್ಪಿತ್ತು. ಜೀವದ ಪರಿವೆಯಿಲ್ಲದೆ ತುಂಬಿ ಹರಿಯುವ ನದಿಯಲ್ಲಿ ಬಿದ್ದು ತನ್ನ ವಾತ್ಸಲ್ಯದ ಪುತ್ರಿಯನ್ನು ಬದುಕಿಸಿದ ಅಮರಪ್ರಸಾದನ

ವಿಷಯವಾಗಿ ಅವನ ಮನಸ್ಸು ಎಷ್ಟು ಪ್ರಸನ್ನವಾಗಿರಬಹುದೆಂಬದನ್ನು ವರ್ಣಿಸಲಸದಳವೇ ಸರಿ.

ಕೆಲವು ವೇಳೆಯ ವರೆಗೆ ಹರಿನಾರಾಯಣನು ಪ್ರಸ್ತುತ ಘಟನೆಯಿಂದ ದೇಹಭಾನವಿಲ್ಲದವನಾಗಿದ್ದನು. ಅನಂತರದಲ್ಲಿ ಅವನು ಅಮರಪ್ರಸಾದನನ್ನು ಕುರಿತು:—"ಪವಿತ್ರವೂ ಪುಣ್ಯತಮವೂ ಆದ ಈ ಸುಮುಹೂರ್ತದಲ್ಲಿ ಎಲ್ಲರ ಸಮ್ಮುಖವಾಗಿ ಪರಮಾತ್ಮನ ಪಾವನ ನಾಮಸ್ಮರಣೆ ಮಾಡಿ, ನನ್ನ ರಾಜ್ಯ ದೊಳಗಿನ ಅರ್ಧ ರಾಜ್ಯವನ್ನೂ ನನ್ನ ವಾತ್ಸಲ್ಯದ ಸುಂದರ ಕನ್ಯೆಯಾದ ಊರ್ಮಿಳೆಯನ್ನೂ ನಿನಗೆ ಕೊಡುವೆನು. ನನ್ನ ತರುವಾಯ ನನ್ನ ಎಲ್ಲ ಜಮೀನದಾರಿಗೆ ನೀನೇ ಒಡೆಯನು!"

ಹರಿನಾರಾಯಣನು ಮನಃಪೂರ್ವಕವಾಗಿ ಆಡಿದ ಮಾತುಗಳನ್ನು ಕೇಳಿ ಎಲ್ಲ ಜನರಿಗೂ ಸಂಭ್ರಮವಾಯಿತು. ಊರ್ಮಿಳಾದೇವಿಯೂ ಅಮರ ಪ್ರಸಾದನೂ ಆನಂದಸಾಗರದಲ್ಲಿ ಲೋಲಾಡತೊಡಗಿದರು. ಅವರು ಪರಸ್ಪರ ರನ್ನು ಪ್ರೇಮಳ ದೃಷ್ಟಿಯಿಂದ ನೋಡಹತ್ತಿದ್ದರು. ಹರಿನಾರಾಯಣನು ಕುಳಿತ ಸ್ಥಳದಿಂದೆದ್ದು, ಊರ್ಮಿಳೆಯ ಕೈಯನ್ನು ಅಮರಪ್ರಸಾದನ ಕೈಯಲ್ಲಿ ಕೊಟ್ಟು:—"ಪುತ್ರಿ, ನೀನು ಇಂದು ಧನ್ಯಳಾದೆ; ನಾನೂ ಧನ್ಯನಾದೆನು!"

ಊರ್ಮಿಳಾದೇವಿಯ ಮುಖವು ಲಜ್ಜೆಯ ಭಾರದಿಂದ ಬಾಗಿತು. ಅವಳ ಸರ್ವಾಂಗವು ಒಂದು ಬಗೆಯ ವಿಕಾರದಿಂದ ಕಂಪಾಯಮಾನವಾಯಿತು. ಅಮರಪ್ರಸಾದನ ಶಾಂತಿಯು ಭಂಗವಾಗಿ ಅವನ ಹೃದಯವು ಒಮ್ಮೆಲೆ ಸಂತಾಪಪೂರ್ವಕವಾಯಿತು. ಆಗ ಅವನು:—"ರಾಜಾ, ನಿನ್ನ ಅನುಗ್ರಹ ವನ್ನು ನಾನು ಬಯಸುವದಿಲ್ಲ. ನನ್ನ ಹೃದಯದಿಂದ 'ಸೇಡು-ಸೇಡು' ಎಂಬ ಧ್ವನಿಯು ಹೊರಬೀಳುತ್ತಲಿದೆ. ನನಗೆ ನಿನ್ನ ಕುಮಾರಿಯ ಹಾಗು ರಾಜ ಸಿಂಹಾಸನದ ಆವಶ್ಯಕತೆಯಿಲ್ಲ ನಿನ್ನ ಅತ್ಯಾಚಾರದ ಸೇಡು ತೀರಿಸಿಕೊಳ್ಳದೆ ನನ್ನ ಪರಿತಾಪಯುಕ್ತ ಹೃದಯಕ್ಕೆ ಸುಖ-ಶಾಂತಿಗಳು ಲಭಿಸುವಂತಿಲ್ಲ"

"ಅಮರಪ್ರಸಾದ, ನನ್ನಿಂದ ಅವಿಚಾರದ ಕೃತಿಯು ಘಟಿಸಿದ್ದು ನಿಜ ವು. ಕೃತಕರ್ಮಕ್ಕಾಗಿ ಕ್ಷಮಾಯಾಚನೆ ಮಾಡುತ್ತಿರುವೆನು. ಇಷ್ಟರಿಂದ ನಿನ್ನ ಸೇಡು ತೀರಿಸಿಕೊಳ್ಳುವ ಭಾವನೆಯು ನಾಶವಾಗದಿದ್ದರೆ ಮತ್ತೇನು ಮಾಡಲಿ? ಸೌಭಾಗ್ಯಲಕ್ಷ್ಮಿಯಂತಿರುವ ನನ್ನ ಈ ನಯನರಂಜನಿಯಾದ ಕನ್ನಿಕೆಯನ್ನೂ ರಾಜ್ಯಲಕ್ಷ್ಮಿಯನ್ನೂ ತ್ಯಜಿಸುವ ವಿಚಾರ ಮಾಡಬೇಡ.

ಊರ್ಮಿಳೆಯು ತನ್ನ ಕೈಯನ್ನು ನಿನ್ನ ಕೈಯಲ್ಲಿ ಕೊಟ್ಟಿರುವಳು. ಇವಳನ್ನು ನಿರಾಕರಿಸಬೇಡ. ಕೃತಕರ್ಮಕ್ಕಾಗಿ ನನಗೆ ಪಶ್ಚಾತ್ತಾಪವಾಗಿದೆ. ಹಿಂದಿನ ಘಟನೆಗಳನ್ನು ನೀನು ಪೂರಾ ಮರೆತು ಬಿಡು."

ಹರಿನಾರಾಯಣನ ಅನುತಾಪಪೂರ್ಣವಾದ ಮಾತುಗಳಿಂದ ಅಮರಪ್ರಸಾದನ ಸಂತಾಪವು ನಾಶವಾಯಿತು. ಅವನು ಹಿಂದಿನ ಎಲ್ಲ ವಿಷಯಗಳನ್ನು ಮರೆತು:—"ನಿಮ್ಮ ಕನ್ಯೆಯಾದ ಊರ್ಮಿಳೆಯನ್ನು ಅತ್ಯಾನಂದದಿಂದ ಸ್ವೀಕರಿಸಿರುವೆನು."

ಊರ್ಮಿಳಾದೇವಿಯ ಸರ್ವಾಂಗವು ಬೆವರೊಡೆಯಿತು. ಅಕಲ್ಪಿತವಾದ ಈ ಘಟನೆಯಿಂದ ಅವಳಿಗೆ ಹೇಳಕೂಡದಷ್ಟು ವಿಸ್ಮಯವಾಯಿತು. ಆನಂದ ವಿಸ್ಮಯಗಳ ಅತಿರೇಕದಿಂದ ತಾನೇನು ಸ್ವಪ್ನದಲ್ಲಿರುವೆನೋ ಜಾಗ್ರತೆಯಲ್ಲಿರುವೆನೋ ಎಂಬದರ ಪರಿವೆಯು ಅವಳಿಗಿರಲಿಲ್ಲ. ಅಮರಪ್ರಸಾದನ ಅವಸ್ಥೆಯಾದರೂ ಹೀಗೆಯೇ ಆಗಿತ್ತು. ತಾನು ಎಲ್ಲಿ ಯಾವ ಸ್ಥಿತಿಯಲ್ಲಿರುವೆನೆಂಬದರ ಎಚ್ಚರವು ಸಹ ಉಳಿಯದೆ, ಅವನು ತನ್ನ ಪ್ರಣಯಿನಿಯ ಪರಿಷ್ವಂಜನಕ್ಕೆ ಕೈಗಳನ್ನು ಮುಂದೆ ನೀಡಿದನು. ಊರ್ಮಿಳಾದೇವಿಗೆ ಅವನ ಪ್ರಯತ್ನವು ಹೊಳೆದು ಎರಡು ಹೆಜ್ಜೆ ಹಿಂದೆ ಸರಿದು ನಿಂತಳು.

ಕೆಲವು ವೇಳೆಯ ವರೆಗೆ ಆ ಪ್ರಣಯಿಗಳು ಸ್ವಾನಂದ ಸಾಮ್ರಾಜ್ಯದಲ್ಲಿ ಮುಳುಗಿದ್ದರು. ಅವರ ತಂದ್ರಿಯನ್ನೂ ಎಲ್ಲರ ಆನಂದವನ್ನೂ ಮಥಿಸಿ, ಒಂದು ಭೀಷಣವಾದ ಆರ್ತನಾದವು ಆಗಹತ್ತಿತು. ಎಲ್ಲರೂ ವಿಸ್ಮಯದಿಂದ ನೋಡುತ್ತಿರುವಷ್ಟರಲ್ಲಿ ಹರಿನಾರಾಯಣನು ರಕ್ತ ಮುಳುಗಿದ ದೇಹ ಉಳ್ಳವನಾಗಿ ಭೂಮಿಗೆ ಬಿದ್ದು ವಿಕಟಆರ್ತಧ್ವನಿಗೈಯತೊಡಗಿದ್ದನು; ಅವನ ಬಳಿಯಲ್ಲಿ ಮುಕ್ತಕೇಶಿಯಾದ ರಮಣಿಯು ಕೈಯಲ್ಲಿ ತೀಕ್ಷ್ಣವಾದ ಖಡ್ಗವನ್ನು ಹಿಡಿದು ನಿಂತುಕೊಂಡಿದ್ದಳು! ಅವಳು ಭೀಷಣವಾದ ಗಾಯಹೊಂದಿ ಬಿದ್ದ ಹರಿನಾರಾಯಣನನ್ನು ನೋಡಿ ಗಹಗಹಿಸಿ ನಗುತ್ತ:—"ನೋಡಿರಿ; ಹೇಗಿದೆ ದೃಶ್ಯವು! ಈ ಯುವತಿಯ ಮೇಲೆ ಅತ್ಯಾಚಾರ ನಡೆಯಿಸಿರಿ." ಎಂದು ನುಡಿದು, ಅವಳು ಹರಿನಾರಾಯಣನನ್ನು ಕುರಿತು:-"ರಾಜಾ, ಯಾವ ದಿವಸ ನೀನು ಸುಲಿಗೆಗಾರರಂತೆ ನನ್ನನ್ನು ಮಾತಾಪಿತೃ ಸ್ನೇಹಕ್ಕೆ ಎರವು ಮಾಡಿ, ಸಮಾಜದ ಕೋಮಲ ಛಾಯೆಯಿಂದ ವಂಚಿತಳನ್ನಾಗಿ ಮಾಡಿದೆಯೋ, ಯಾವ ದಿವಸ ಕೌಸ್ತುಭಮಣಿಗಿಂತ ಬೆಲೆಯುಳ್ಳ ನನ್ನ ಅಮೌಲ್ಯವಾದ

ಶೀಲವನ್ನು ಅಪಹರಿಸಿದೆಯೋ ಅಂದೇ ನಾನು ನಿನ್ನನ್ನು ಸಂಹರಿಸುವ ಸಂಕಲ್ಪ ಮಾಡಿದೆನು; ಅದೇ ದಿವಸ ನಿನ್ನ ಹೃದಯರಕ್ತದಿಂದ ನನ್ನ ಕೈಗೆ ಬಣ್ಣಕೊಡುವ ಪಣ ತೊಟ್ಟೆನು. ಅಂದಿನಿಂದ ನಾನು ನನ್ನ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವದಕ್ಕಾಗಿ ನಿನ್ನ ಹಿಂದೆ ಹಿಂದೆ ತಿರುಗತೊಡಗಿದೆನು. ರಾಜಾ, ಇಂದು ನನ್ನ ಪ್ರತಿಜ್ಞೆಯು ಪೂರೈಸಿತು!"

ಮೃತ್ಯುಪಥಗಾಮಿಯಾದ ಹರಿನಾರಾಯಣನ ಹೃದಯವು ನಡುಗಿತು. ತನ್ನ ಸಾವಿಗೆ ಕಾರಣಳಾದವಳಾರೆಂಬದು ಅವನಿಗೆ ಆ ಕ್ಷಣದಲ್ಲಿಯೆ ಗೊತ್ತಾಯಿತು. ತನ್ನ ಆಸುರೀ ವಿಷಯಲಾಲಸೆಗೆ ಯಾವಳ ಧರ್ಮವು ನಾಶವಾಗಿತ್ತೋ, ಆ ಗೃಹಸ್ಥ ಲಲನೆಯಾದ ಕಮಲಸುಂದರಿಯು ಅವಳೆಂಬದು ಹರಿನಾರಾಯಣನಿಗೆ ಗೊತ್ತಾದೊಡನೆಯೆ ಅವನ ಹೃದಯಕ್ಕೆ ಬರೆಕೊಟ್ಟಂತಾಯಿತು ಅಂತರಂಗ ಬಾಹ್ಯಾಂಗಗಳ ಗುರುತರವಾದ ವೇದನೆಯಿಂದ ಜರ್ಜರಿತನಾದ ಅವನು ಮುಂದೆ ಸ್ವಲ್ಪ ವೇಳೆಯಲ್ಲಿಯೆ ಅನಂತ ಪಥದ ಯಾತ್ರೆ ಮಾಡಿದನು.

"ನನ್ನ ಪ್ರತಿಜ್ಞೆಯು ಪೂರ್ಣವಾಯಿತು. ಸೇಡು ತೀರಿತು. ಪಾತಕದ ಪರಿಶೋಧವಾಯಿತು!" ಎಂದು ಕಮಲಸುಂದರಿಯು ಉನ್ಮತ್ತಳಂತೆ ಉದ್ಗಾರ ತೆಗೆದು ನದಿಯಲ್ಲಿ ಜಿಗಿದಳು! ಎಲ್ಲರೂ ದಿಗಿಲುಗೊಂಡು ನಿಂತರು.

"ಹಾ-ಹಾ-ಹಾ- ನನ್ನ ಪ್ರತಿಜ್ಞೆಯು ಸಿದ್ಧಿಸಿತು; ಸೇಡು ತೀರಿಸಿಕೊಳ್ಳುವ ಆಕಾಂಕ್ಷೆಯು ಪೂರ್ಣವಾಯಿತು; ಪಾತಕದ ಪರಿಶೋಧವಾಯಿತು!" ಎಂಬ ಧ್ವನಿಯು ನದೀಮಧ್ಯದಿಂದ ಹೊರಟಂತೆ ಎಲ್ಲರಿಗೂ ಭಾಸವಾಯಿತು.

---

## ೯ನೆಯ ಪರಿಚ್ಛೇದ.

ಮಣಿಮಯ ಸಿಂಹಾಸನದಲ್ಲಿ ಮಣಿಮಯ ಆಭೂಷಣಗಳಿಂದ ಯುಕ್ತನಾಗಿ, ಮಣಿಮಯ ರಾಜದಂಡವನ್ನು ಧರಿಸಿ, ಮಹಿಮಾನ್ವಿತನೂ, ಮಹಾವೀರತ್ವಪೂರ್ಣನೂ, ಮಧ್ಯಾಹ್ನ ಭಾಸ್ಕರಸಮಾನ ಪ್ರತಿಭಾಶಾಲಿಯೂ, ಜಗದೀಶ್ವರ ನಾಮದಿಂದ ವಿಖ್ಯಾತನೂ, ಪ್ರಶಾಂತಮೂರ್ತಿಯೂ, ಭಾರತೇಶ್ವರನೂ ಆದ ಸಾಮ್ರಾಟ ಅಕಬರಬಾದಶಹನು ವಿರಾಜಮಾನನಾಗಿದ್ದನು.

ದಿಲ್ಲೀಶ್ವರನ ಓಲಗವು ಅಪೂರ್ವ ಶೋಭೆಯುಳ್ಳದ್ದಿತ್ತು. ನೇತ್ರಗಳನ್ನು ಚಕಿತಮಾಡುವ ಹಾಗು ಹೃದಯವನ್ನು ಸ್ತಂಭಿತಗೊಳಿಸುವ ಆ ಓಲಗವು ಅಭಿಮಾನದಿಂದ ಇಂದ್ರಸಭೆಯ ಉಪಹಾಸ ಮಾಡುತ್ತಿತ್ತು. ಸ್ತಂಭಗಳಲ್ಲಿ

ನಕ್ಷತ್ರಗಳನ್ನು ಲಜ್ಜಿತವನ್ನಾಗಿ ಮಾಡುವ ರತ್ನಗಳು ಕೆಚ್ಚಲ್ಪಟ್ಟಿದ್ದವು. ಗೋಡೆಗಳ ಮೇಲೆ ಪ್ರಕೃತಿ ಸೌಂದರ್ಯವನ್ನು ಅಪಹರಣಮಾಡುವ ತೈಲಚಿತ್ರಗಳಿದ್ದವು. ಒಂದು ಸ್ತಂಭದಿಂದ ಮತ್ತೊಂದು ಸ್ತಂಭದವರೆಗೆ ಕುಸುಮಮಾಲೆಗಳು ಕಟ್ಟಲ್ಪಟ್ಟಿದ್ದವು. ಸಿಂಹಾಸನದ ಪ್ರತಿಯೊಂದು ಸೋಪಾನಗಳು ಮಣಿ ಮೌಕ್ತಿಕಗಳಿಂದ ಶೋಭಾಯಮಾನವಾಗಿದ್ದವು. ಬಹಳವೇನು? ಕುಬೇರನ ಐಶ್ವರ್ಯ ವಿನಿಮಯದಿಂದ ಬಾದಶಾಹೀ ಓಲಗವು ನಿರ್ಮಾಣವಾದಂತೆ ಭಾಸವಾಗುತ್ತಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸಿಂಹಾಸನದ ಬಲಭಾಗದಲ್ಲಿ ಅಮಾತ್ಯ ವರ್ಗವು ಭಯವಿಹ್ವಲ ಚಿತ್ತದಿಂದ ವಿರಾಜಮಾನವಾಗಿತ್ತು. ಎಡಭಾಗದಲ್ಲಿ ರಾಜಾತೋಡರಮಲ್ಲ, ರಾಜಾ ಮಾನಸಿಂಹ, ಹುಸೇನ ಕುಲೀಖಾನ, ಆಲಮಖಾನ ಮೊದಲಾದ ಪ್ರಭೃತಿಗಳೂ ಮಹಾರಥಿಗಳೂ ಶೂರಶ್ರೇಷ್ಠರೂ ಆದ ಸೇನಾಪತಿಗಳು ಶಂಕಾಕುಲ ಹೃದಯಿಗಳಾಗಿ ಕುಳಿತಿದ್ದರು. ಸಮ್ಮುಖದಲ್ಲಿ ಅಮೀರ, ಉಮರಾವ, ಸಭಾಸದರು ಮೊದಲಾದವರು ಚಕಿತದೃಷ್ಟಿಯಿಂದ ಭಾರತೇಶ್ವರನ ಮುಖವನ್ನು ನೋಡುತ್ತ ಉಚಿತಾಸನಗಳಲ್ಲಿ ಮಂಡಿಸಿದ್ದರು. ಸಭೆಯಲ್ಲಿ ಶಾಂತಿಸಾಮ್ರಾಜ್ಯವು ವ್ಯಾಪಿಸಿತ್ತು; ಆದರೆ ಪ್ರತಿಯೊಬ್ಬರ ಹೃದಯಗಳು ಮಾತ್ರ ನಾನಾ ವಿಕಾರಗಳಿಂದ ಅಲ್ಲೋಲ ಕಲ್ಲೋಲ ಹೊಂದತೊಡಗಿದ್ದವು. ಕೆಲವು ವೇಳೆಯವರೆಗೆ ಸಭೆಯು ತಟಸ್ಥವಾಗಿತ್ತು. ಅನಂತರದಲ್ಲಿ ಅಲ್ಲಿಯ ಶಾಂತಿಯನ್ನು ನಷ್ಟಪಡಿಸಿ, ಪ್ರಧಾನಸಚಿವನು ಸಮ್ರಾಟನ ಸಮ್ಮುಖದಲ್ಲಿ ಬಂದು ಅವನಿಗೆ ಅಭಿವಾದನೆಗಳನ್ನರ್ಪಿಸಿ ನಿಂತುಕೊಂಡನು. ಆಗ ಬಾದಶಹನು ಅವನನ್ನು ಕುರಿತು ಸಾಶಂಕವಾಣಿಯಿಂದ--"ಸಚಿವಶ್ರೇಷ್ಠರೆ, ಮತ್ತೇನು ಸಮಾಚಾರ?"

ವೃದ್ಧಸಚಿವನು ಬಾದಶಹನಿಗೆ ಮತ್ತೊಮ್ಮೆ ಅಭಿವಂದಿಸಿ ಭಯವಿನಯಗಳಿಂದ:—"ಜಹಾಂಪನಾಹ, ವಾರ್ತೆಯು ಭಯಾನಕವಿರುವದು. ಪಠಾಣಾಧಿಪತಿಯಾದ ನವಾಬ ದಾವುದಖಾನನು ಕಟಕದಲ್ಲಿ ವಾಸವಾಗಿ ನವಶಕ್ತಿಯನ್ನುಂಟುಮಾಡಿಕೊಂಡು ಬಿಹಾರ, ಓಡಿಸಾ ಪ್ರಾಂತಗಳನ್ನು ತನ್ನ ಅಧಿಕಾರಕ್ಕೊಳಪಡಿಸಿಕೊಂಡಿರುವನು. ಈಗ ಅವನು ಸ್ವಾತಂತ್ರ್ಯ ಘೋಷಣೆ ಮಾಡತೊಡಗಿರುವನು. ಬಂಗಾಲದ ರಾಜರೂ, ಜಮೀನದಾರರೂ ಅವನ ಆಧೀನರಾಗತೊಡಗಿರುವರು. ಖಾವಿಂದ, ಅವನನ್ನು ಉಪೇಕ್ಷಿಸಿದರೆ ಮುಂದೆ ಮೊಗಲ ಸಾಮ್ರಾಜ್ಯ ಶಕ್ತಿಗೆ ಮೀರುವದರಲ್ಲಿ ಸಂದೇಹವಿಲ್ಲ. ವಸ್ತುಸ್ಥಿತಿ

ಯನ್ನು ನಿವೇದಿಸಿರುವೆನು; ಅರಿಕೆಯಿರಬೇಕು."

ಮಹಾಮಂತ್ರಿಯ ಮಾತುಗಳಿಂದ ಅಕಬರ ಬಾದಶಹನ ಹೃದಯವು ಸಂತಪ್ತವಾಯಿತು. ಆಗ ಅವನು ಕ್ರೋಧ ಕಂಪಿತ ಸ್ವರದಿಂದ:—"ದಾವುದ ಖಾನನ ಅಹಂಕಾರವು ಮಿತಿಮೀರಿರುವದು. ಹಿಂದೆ ಹೊಂದಿದ ಪರಾಜಯ ವನ್ನು ಮರೆತು, ಅವನು ಮತ್ತೆ ಅವಿಚಾರದ ಕೃತಿಯನ್ನು ಮಾಡತೊಡಗಿರು ವನು. ಅವನ ಸ್ಪರ್ಧೆಯನ್ನು ಮಣ್ಣುಗೂಡಿಸಲಿಕ್ಕೇಬೇಕು. ಪಠಾಣ ಸಿಂಹಾ ಸನವನ್ನು ಭಾರತ ಭೂಮಿಯಿಂದ ಸಮೂಲವಾಗಿ ಕಿತ್ತು ಮಹಾಸಾಗರ ಗರ್ಭದಲ್ಲಿ ಬಿಸುಟಲಿಕ್ಕೇಬೇಕು. ನವಾಬ ದಾವುದಖಾನನ ಸಾಹಸಕ್ಕಾಗಿ ಅವನಿಗೆ ಯೋಗ್ಯ ದಂಡನೆಯನ್ನು ವಿಧಿಸಿ, ಮುಂದೆ ಯಾರೂ ಮೊಗಲ ಸಾಮ್ರಾಜ್ಯದ ಕಡೆಗೆ ಅಂಗುಲನಿರ್ದೇಶ ಮಾಡುವ ಧೈರ್ಯದ ಕೃತಿಯನ್ನು ಮಾಡದಂತೆ ವ್ಯವಸ್ಥೆ ಮಾಡುವೆನು. ಮೊಗಲರ ಹೆಸರು ಕೇಳಿದೊಡನೆಯೆ ಎಲ್ಲರೂ ಭಯಶಂಕೆಯಿಂದ ಅವನತ ಮಸ್ತಕರಾಗುವಂತೆ ಮಾಡುವೆನು. ಈ ಸಾರೆಯ ಮೊಗಲ ಸೇನೆಯ ಪ್ರತಾಪದಿಂದ ಪಠಾಣಶಕ್ತಿಯು ಖಂಡಿತವಾಗಿ ನಷ್ಟ ಹೊಂದುವದರಲ್ಲಿ ಸಂದೇಹವಿಲ್ಲ. ಸಚಿವಶ್ರೇಷ್ಠರೆ, ಹೋಗಿರಿ; ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿರಿ."

ಸಚಿವನು ಬಾದಶಹನಿಗೆ ಅಭಿವಂದಿಸಿ, ತನ್ನ ಆಸನವನ್ನಲಂಕರಿಸಿದನು. ಅನಂತರದಲ್ಲಿ ಬಾದಶಹನು ಗಂಭೀರ ಸ್ವರದಿಂದ:—"ಮನಾಯಿಮಖಾನ!"

ಮನಾಯಮಖಾನನು ಭಯಭೀತನಾಗಿ ಸಮ್ರಾಟನ ಸಮ್ಮುಖದಲ್ಲಿ ಶೀಘ್ರತೆಯಿಂದ ಬಂದು, ಅವನಿಗೆ ನಮಸ್ಕರಿಸಿ, ವಿನಮ್ರ ಸಶಂಕಿತಸ್ವರದಿಂದ:- "ಗರೀಬಪರವರದಿಗಾರ, ಇಸ ಗುಲಾಮಕೆ ಲಿಯೆ ಕ್ಯಾಹುಕ್ಮಹೈ?" ಎಂದು ನುಡಿದು ಗಾಂಭೀರ್ಯದಿಂದಲೂ ಅಭಿಮಾನದಿಂದಲೂ:—"ಈ ದೇಹದ ಸಮಸ್ತ ಶಕ್ತಿಗಳನ್ನು ಒಂದುಗೂಡಿಸಿ, ಪಠಾಣಶಕ್ತಿಯನ್ನು ಉಧ್ವಸ್ತಗೊಳಿಸ ಲಿಕ್ಕೆ ಈ ಸೇವಕನು ಎಂದೂ ಹಿಂದೆ ಮುಂದೆ ನೋಡಲಾರನು."

"ಅಚ್ಛಾ!" ಎಂದು ಬಾದಶಹನು ಆನಂದದಿಂದ ನುಡಿದು:—ನೀವು ವೀರಾಗ್ರಣಿಗಳಿರುವಿರೆಂಬದನ್ನು ನಾನು ಬಲ್ಲೆನು. ಅಂತೆಯೆ ನವಾಬ ದಾವುದ ಖಾನನ ದಮನಗೊಳಿಸುವ ಭಾರವನ್ನು ನಿಮ್ಮ ಮೇಲಿರಿಸಿರುವೆನು. ನೀವು ಪ್ರಧಾನ ಸೇನಾಪತಿಗಳಾಗಿ ಮತ್ತೊಮ್ಮೆ ಬಂಗಾಲದ ಮೇಲೆ ದಂಡೆತ್ತಿ ಹೊರ ಡಿರಿ. ರಾಜಾತೋಡರಮಲ್ಲರು ನಿಮಗೆ ಸಹಕಾರಿಗಳಾಗುವರು. ನೀವಿಬ್ಬರು

ನಾಮಾಂಕಿತ ಯೋಧರು. ಆ ದುರಭಿಮಾನಿಯಾದ ನವಾಬನ ಗರ್ವವನ್ನು ಶತಚೂರ್ಣಗೊಳಿಸಿರಿ. ಪಠಾಣಶಕ್ತಿಯು ಚೂರ್ಣ ವಿಚೂರ್ಣ-ವಾದದ್ದನ್ನು ನಾನು ನೋಡಲಿಚ್ಛಿಸುವೆನು. ನವಾಬನ ರುಧಿರಮಯವಾದ ಶಿರಹೀನ ದೇಹವನ್ನು ಅಥವಾ ಅವನ ಶೃಂಖಲಾಬದ್ಧ ದೇಹವನ್ನು ನೋಡಲಿಕ್ಕೆ ಆತುರಗೊಂಡಿರುವೆನು. ವಂಗವಿಜಯಿೂ ವೀರರೆ, ನೀವು ನನ್ನ ಈ ಇಚ್ಛೆಯನ್ನು ಈಡೇರಿಸಿ ಸಂತುಷ್ಟಗೊಳಿಸುವಿರೆಂದು ಪೂರಾ ನಂಬಿರುವೆನು. ನೀವು ಈ ಕಾರ್ಯವನ್ನು ನೆರವೇರಿಸಿದರೆ, ನಿಮ್ಮನ್ನು ಅತುಲ ಪುರಸ್ಕಾರ ಸನ್ಮಾನಗಳಿಂದ ವಿಭೂಷಿತರನ್ನು ಮಾಡುವೆನು. ಮೊಗಲ ಸಾಮ್ರಾಜ್ಯದ ಏಕನಿಷ್ಠ ಸೇವಕರಾದ ನೀವು ಮಾನವ ವಾಂಛನೀಯ ಪದಗೌರವವನ್ನು ಹೊಂದಲಿಕ್ಕೆ ಉತ್ಸಾಹಿಗಳಾಗಿರುವಿರೆಂಬದನ್ನು ನಾನು ಬಲ್ಲೆನು. ಪಠಾಣ ವಿಜಯಿೂ ವೀರರೆ, ನೀವು ನನ್ನ ಆಜ್ಞೆಯನ್ನು ಆನಂದದಿಂದ ಶಿರಸಾವಹಿಸಿರಿ."

ಮುನಾಯಿಮಖಾನನು ಬಾದಶಹನ ಮಾತುಗಳಿಂದ ಆನಂದೋತ್ಸಾಹಗೊಂಡವನಾದರೂ, ಒಂದು ವಿಧದ ಸಂಶಯದಿಂದ ತನ್ನ ಮನೋಗತವನ್ನು ವ್ಯಕ್ತಪಡಿಸಲಿಕ್ಕೆ ಅನುಮಾನಿಸುತ್ತ ಸುಮ್ಮನೆ ನಿಂತನು. ತೀಕ್ಷ್ಣಬುದ್ಧಿಯುವನಾದ ಬಾದಶಹನಿಗೆ ಅವನ ಮೌನದ ವಿಷಯವಾಗಿ ಸಂದೇಹವುಂಟಾಯಿತು. ಆಗ ಅವನು ಖಾನನನ್ನು ಕುರಿತು:—"ಮುನಾಯಿಮಖಾನ, ಮತ್ತೇನಾದರೂ ನಿಮ್ಮ ಪ್ರಾರ್ಥನೆಯಿರುವದೆ?"

ಮುನಾಯಿಮಖಾನನು ಅಭಿವಾದನೆ ಮಾಡಿ:---"ದೀನದುನಿಯಾಕೆ ಮಾಲಿಕ, ಈ ದಾಸನದೊಂದು ವಿನೀತ ಪ್ರಾರ್ಥನೆಯುಂಟು ಅಭಯದಾನ ಮಾಡಿದರೆ ಅರಿಕೆ ಮಾಡಿಕೊಳ್ಳುವೆನು."

"ಸೇನಾಪತಿಗಳೇ, ನಿಃಶಂಕೆಯಿಂದ ಹೇಳಿರಿ."

"ಜಹಾಂಪನಾಹ, ತಮ್ಮ ಆಜ್ಞೆಯನ್ನು ನಾನು ಒಳ್ಳೆಯ ಸನ್ಮಾನದಿಂದ ಶಿರಸಾವಹಿಸುವೆನು; ಆದರೆ ರಾಜಾತೋಡರಮಲ್ಲರನ್ನು ಬಿಟ್ಟು ಮತ್ತೊಬ್ಬ ಸೇನಾಪತಿಗಳು ಸಹಕಾರಿಗಳಾಗಬೇಕೆಂದು ನನ್ನ ಇಚ್ಛೆಯುಂಟು."

"ಇದೇನು ಸೇನಾಪತಿಗಳೆ, ಹೀಗೇಕೆ ವಿಚಿತ್ರ ಮಾತುಗಳನ್ನಾಡುವಿರಿ? ನಿಮಗೆ ರಾಜಾತೋಡರಮಲ್ಲರ ಸಹಕಾರವು ಬೇಕಾಗಿಲ್ಲವೆ? ನೀವು ದಿವ್ಯ ಸೇನಾಪತಿಗಳಾದ ಅವರ ಸಹಕಾರವನ್ನು ಉಪೇಕ್ಷಿಸುವದು ನೋಡಿ ನನಗೆ ಒಳ್ಳೆಯ ಸೋಜಿಗವೆನಿಸಿದೆ, ನಿಮ್ಮ ಮನಸ್ಸು ಈ ಮೇರೆಗೆ ವಿಪರೀತವಾದ

ಕಾರಣವೇನು?

"ಸಮ್ರಾಟರೆ, ಕಾರಣವಿಲ್ಲದೆ ನಾನು ಮಾತಾಡಿಲ್ಲ. ನನ್ನಲ್ಲಿ ಬಲವಾದ ಕಾರಣಗಳುಂಟು. ಘನವಾದ ಆಧಾರಗಳುಂಟು. ಅಂತೆಯೆ ಹೀಗೆ ಮಾತಾಡುವೆನು. ತೋಡರಮಲ್ಲರು ವಂಗವಿಜಯ ಕಾರ್ಯದಲ್ಲಿ ಅನುಕೂಲರಾಗದೆ ಪ್ರತಿಕೂಲರಾಗುವರೆಂಬದು ನನ್ನ ಮನವರಿಕೆಯಾದದ್ದರಿಂದ ಅವರ ಸಹಕಾರವನ್ನು ಇಚ್ಛಿಸುವದಿಲ್ಲ. ವಂಗೇಶ್ವರ-ದಾವುದಖಾನನ ಸದ್ಯದ ಶಕ್ತಿಸಂಗ್ರಹಕ್ಕೆ ರಾಜಾ ತೋಡರಮಲ್ಲರೇ ಕಾರಣೀಭೂತರಾಗಿರುವರು."

"ಅದು ಹೇಗೆ?" ಬಾದಶಹನು ವಿಸ್ಮಯದಿಂದ ಕೇಳಿದನು.

"ಖಾವಿಂದ, ನವಾಬನು ಪರಾಭೂತನಾಗಿ ಓಡಿಹೋಗುವ ಕಾಲದಲ್ಲಿ ಅವನು ಒಂದು ವ್ಯಕ್ತಿಯ ಮೊರೆ ಹೊಕ್ಕನು. ರಾಜಾ ತೋಡರಮಲ್ಲರು ಆ ವ್ಯಕ್ತಿಯ ದೊಡ್ಡಸ್ತಿಕೆಗೆ ಮೆಚ್ಚಿ ಕೈಯಲ್ಲಿ ಸಿಲುಕಿದ ನವಾಬನನ್ನು ಬಿಟ್ಟುಬಿಟ್ಟರು. ಆಗ ನಾನು ಇವರಿಗೆ ನವಾಬನನ್ನು ಬಿಡಕೂಡದೆಂದು ಆಜ್ಞೆಮಾಡಿದರೂ ಲಕ್ಷಿಸದೆ ನನ್ನೊಡನೆಯೇ ಯುದ್ಧಕ್ಕೆ ಅಣಿಯಾದರು. ಅಂತಃಕಲಹವು ಆತ್ಮನಾಶಕ್ಕೆ ಕಾರಣವೆಂದು ತಿಳಿದು ನಾನೇ ದೊಡ್ಡ ಮನಸ್ಸು ಮಾಡಿದೆನು. ಅಂತೆಯೆ ಕದನದ ಸಂಧಿಯು ತಪ್ಪಿತು. ತೋಡರಮಲ್ಲರ ಮೇಲೆ ಖಾವಿಂದರವರ ಪ್ರೇಮ ಬಹಳ. ಆದ್ದರಿಂದ ನಾನಾಗಿ ಈ ಸಂಗತಿಯನ್ನು ಬೈಲಿಗೆಳೆಯಲಿಕ್ಕೆ ಅನುಮಾನಗೊಂಡಿದ್ದೆನು. ಇಂದು ಪ್ರಸಂಗವೊದಗಿದ್ದರಿಂದ ನಿರ್ವಾಹವಿಲ್ಲದೆ ವಸ್ತುಸ್ಥಿತಿಯನ್ನು ಹೇಳಬೇಕಾಯಿತು. ತೋಡರಮಲ್ಲರ ಕೃತಿಯು ದಾವುದಖಾನನ ಸ್ವಾತಂತ್ರ್ಯಕ್ಕೂ ಅವನ ಪರಾಕ್ರಮವಿವೃದ್ಧಿಗೂ ಕಾರಣೀಭೂತವಾಗಿ, ಮೊಗಲ ಸಾಮ್ರಾಜ್ಯಕ್ಕೆ ಹಾನಿಯನ್ನುಂಟುಮಾಡಿತು. ನವಾಬನು ಈಗ ಸ್ವಾತಂತ್ರ್ಯವನ್ನು ಸಾರತೊಡಗಿರುವನು. ಮೊಗಲರು ಆಗ ವಿಜಯಿಗಳಾದದ್ದರ ಲಾಭವೆಲ್ಲ ನಾಶವಾಗಿ, ಮತ್ತೆ ವಂಗ ವಿಜಯವನ್ನು ಸಾಧಿಸುವ ಪ್ರಸಂಗವು ಈ ತೋಡರಮಲ್ಲರ ಕೃತಿಯಿಂದಲೇ ಘಟಿಸಿರುವದು"

ಮನಾಯಿಮಖಾನನ ಮಾತುಗಳು ಅಕಬರಬಾದಶಹನ ಹೃದಯದಲ್ಲಿ ಗೊಂದಲವನ್ನೆಬ್ಬಿಸಿದವು. ಅವನು ತೋಡರಮಲ್ಲನ ಮೇಲೆ ಸಿಟ್ಟಿಗೆದ್ದನು. ದೀರ್ಘವೈರ ಬಳೆಯಿಸಿದ ಪಠಾಣಾಧಿಪತಿಯನ್ನು ಬಿಟ್ಟದ್ದು ತೀರ ಅನುಚಿತವೆಂದು ಅವನ ಭಾವನೆಯಾಯಿತು. ಆಗ ಅವನು ತೀಕ್ಷ್ಣದೃಷ್ಟಿಯಿಂದ ತೋಡರಮಲ್ಲನನ್ನು ಕುರಿತು:—"ರಾಜಾ ತೋಡರಮಲ್ಲ! ಮನಾಯಿಮ

ಖಾನರು ನಿಮ್ಮ ಮೇಲೆ ದೋಷಾರೋಪಣೆ ಮಾಡುತ್ತಿರುವರು. ಇವರ ಮಾತುಗಳು ಸತ್ಯವೋ?''

ವೀರಾಗ್ರಣಿಯಾದ ತೋಡರಮಲ್ಲನು ಅಂಜದೆ, ಅಳುಕದೆ ಕುಳಿತ ಸ್ಥಳದಿಂದೆದ್ದು ಬಾದಶಹನ ಎದುರಿಗೆ ಬಂದು ನೆಲಮುಟ್ಟಿ ಅಭಿವಾದನೆಗಳನ್ನರ್ಪಿಸಿ ಉಚ್ಚಸ್ವರದಿಂದ—''ಸತ್ಯವಿರುವವು ಸಮ್ರಾಟರೆ! ಮನಾಯಿಮಖಾನರ ಮಾತುಗಳೆಲ್ಲವು ಸತ್ಯವಾದವುಗಳಿರುವವು; ಆದರೆ ದಾವುದಖಾನನನ್ನು ಬಿಟ್ಟಿದ್ದು ಅನುಚಿತವೆಂಬ ದೋಷವನ್ನು ಹೊರಲಿಕ್ಕೆ ನಾನು ಸಿದ್ಧನಿಲ್ಲ!''

ತೋಡರಮಲ್ಲನ ಉತ್ತರವನ್ನು ಕೇಳಿ ಸಭಿಕರೆಲ್ಲರೂ ವಿಸ್ಮಿತರಾದರು. ಬಾದಶಹನು ಅವನ ಮಾತುಗಳನ್ನು ಕೇಳಿ ಸಿಟ್ಟಾಗಿ ಭಯಂಕರವಾದ ಶಿಕ್ಷೆಯನ್ನು ವಿಧಿಸದಿರಲಾರನೆಂದು ಅವರು ಭಾವಿಸಿದರು. ಎಲ್ಲರೂ ಸಮ್ರಾಟನ ಮುಖವನ್ನು ನಿರೀಕ್ಷಿಸತೊಡಗಿದರು. ತೋಡರಮಲ್ಲನ ಸ್ಪಷ್ಟೋಕ್ತಿಯಿಂದ ಬಾದಶಹನ ಕಠೋರ ಹೃದಯವು ಜಾಗ್ರತವಾಯಿತು. ಅವನು ಹುಬ್ಬುಗಂಟಿಕ್ಕಿದನು. ಕೊನೆಗೆ ಅವನು ಉಕ್ಕುತ್ತಿರುವ ಸಂತಾಪವನ್ನು ನುಂಗಿಕೊಂಡು ತೀಕ್ಷ್ಣ ದೃಷ್ಟಿಯಿಂದ:--''ಸೇನಾಪತಿಗಳೆ, ನಾನು ನಿಮಗೆ ಅಸೀಮ ಪ್ರಭುತ್ವವನ್ನೂ ಅತುಲ ಶಕ್ತಿಯನ್ನೂ ಕೊಟ್ಟಿರುವೆನು; ಹಿಂದುಗಳಿರುವಿರೆಂಬ ಸಂಕೋಚವನ್ನು ಮನದಲ್ಲಿ ತಾರದೆ, ನಿಮ್ಮ ಮೇಲೆ ವಿಶ್ವಾಸವಿಟ್ಟು ಅಗಾಧವಾದ ಕರ್ತವ್ಯಭಾರವನ್ನು ಹಾಕಿರುವೆನು; ಆದರೆ ಈಗ ನಿಮ್ಮ ಮುಖದಿಂದ ಇದೇನು ಕೇಳುತ್ತಿರುವೆನು!''

''ಸಮ್ರಾಟರೆ!'' ರಾಜಾ ತೋಡರಮಲ್ಲನು ಗಂಭೀರತೆಯಿಂದ-''ಹಿಂದುಗಳು ಎಂದೂ ವಿಶ್ವಾಸಘಾತಮಾಡಲಾರರು. ರಜಪುತರ ಶುದ್ಧ ರಕ್ತವು ಎಂದೂ ಭಿನ್ನಸ್ವರೂಪವನ್ನು ಹೊಂದಲಾರದು. ಕರ್ತವ್ಯನಿಷ್ಠನೂ ಸ್ವಾಮಿಭಕ್ತನೂ ಆದ ಈ ರಾಜಾ ತೋಡರಮಲ್ಲನ ಲಲಾಟವು ವಿಶ್ವಾಸಘಾತಕದ ಕಲಂಕದಿಂದ ಎಂದೂ ಮಲಿನತೆ ಹೊಂದಲಾರದು ನಾನು ಏಕನಿಷ್ಠ ಪ್ರಜೆಯಿರುವೆನು. ಹಿಂದುಗಳು ರಾಜನನ್ನು ದೇವತಾಸ್ವರೂಪವೆಂದು ಭಾವಿಸುವರು ಹೀಗಿರಲು, ನಾನು ವಿಶ್ವಾಸಘಾತವನ್ನು ಮಾಡುವೆನೆ? ಜಾಹಂಪನಾಹ, ಈ ರಾಜಾ ತೋಡರಮಲ್ಲನು ಎಂದಾದರೂ ಅನುಚಿತ ಕಾರ್ಯವನ್ನು ಮಾಡಿದ್ದು ತಮ್ಮ ದೃಷ್ಟಿಗೆ ಬಿದ್ದಿರುವದೆ?''

ಸಾಮಯಿಕ ಸೈನ್ಯದ ಕಡೆಯಿಂದ ಶಸ್ತ್ರಗಳ ಝಣತ್ಕಾರವು ಕೇಳ

ಬಂತು. ರಾಜಾ ತೋಡರಮಲ್ಲನ ಪರಿಣಾಮವು ಒಳಿತಾಗದೆಂದು ಎಲ್ಲರೂ ತಿಳಿದರು. ಅಕಬರಬಾದಶಹನು ಮೊದಲಿನಂತೆ ನಿಶ್ಚಲತೆಯಿಂದ—"ಹಾಗಾದರೆ ದಾವುದಖಾನನನ್ನು ಬಿಟ್ಟರೇಕೆ?"

"ಯಾಕೆ ಬಿಟ್ಟೆಯೆಂದು ಕೇಳುವಿರಾ? ಆ ಕಥೆಯನ್ನೇನು ಕೇಳುವಿರಿ? ದಾವುದಖಾನನ ಬಿಡುಗಡೆ ಮಾಡಿದ್ದರ ಸುದ್ದಿಯು ವಿಚಿತ್ರವಿರುವದು. ಕೇಳುವ ಇಚ್ಛೆಯಿರುವದರಿಂದ ನಾನಾದರೂ ಆ ಸಂಗತಿಯನ್ನು ನಿವೇದಿಸುವೆನು ಕೇಳಿರಿ. ಪರಾಭೂತನಾದ ನವಾಬನು ಪ್ರಾಣಭಯದಿಂದ ಒಬ್ಬ ರಜಪುತ ಜಮೀನದಾರನ ಕುಮಾರಿಯ ಆಶ್ರಯ ಹೊಂದಿದನು...."

"ಏನು? ದಾವುದಖಾನನು ಒಬ್ಬ ರಜಪುತ ಬಾಲಿಕೆಯ ಆಶ್ರಯ ಹೊಂದಿದನೆ?" ಬಾದಶಹನು ವಿಸ್ಮಯದಿಂದ ಕೇಳಿದನು

"ಹೌದು; ಸಮ್ರಾಟರೆ, ದಾವುದಖಾನನು ಒಬ್ಬ ಕನ್ನಿಕೆಯ ಆಶ್ರಯ ಹೊಂದಿದನು. ಆಶ್ರಯದಾತಳಾದ ಬಾಲಿಕೆಯ ಬಳಿಯಲ್ಲಿ ಸೈನ್ಯವಿದ್ದಿಲ್ಲ; ಸಹಾಯಕರಿದ್ದಿಲ್ಲ. ಹೀಗಿದ್ದರೂ ಆ ಕ್ಷಾತ್ರಕನ್ನಿಕೆಯು ದಾವುದಖಾನನಿಗೆ ಆಶ್ರಯವಿತ್ತದ್ದು ವಿಸ್ಮಯಜನಕವಾದ ಸಂಗತಿಯಾಗಿರವದು. ಇಂತಹ ಅಭೂತಪೂರ್ವವಾದ ದೃಶ್ಯವನ್ನು ನೋಡಿದ್ದು ಇಡೀ ಜನ್ಮದಲ್ಲಿ ಅಂದೇ ಮೊದಲು. ನಾನು ಸೇನಾಸಮೇತನಾಗಿ ಬಾಲಿಕೆಯ ಅಟ್ಟಾಲಿಕೆಯ ಮೇಲೆ ಆಕ್ರಮಣ ಮಾಡಿದೆನು. ಆ ಬಾಲಿಕೆಯ ತಂದೆಯಾದ ರಾಜಾ ಹರಿನಾರಾಯಣನು ನಮಗೆ ಸಹಾಯ ಮಾಡುವದಕ್ಕಾಗಿ ಹೊರಟು ಮುಂಗೇರದಲ್ಲಿದ್ದನು. ನಾನು ರಜಪುತನಾಗಿದ್ದರೂ, ಧರ್ಮಯೋಧನಾಗಿದ್ದರೂ, ನಾಮಾಂಕಿತ ಶೂರನಾಗಿದ್ದರೂ ಆ ಬಾಲಿಕೆಯ ಮೇಲೆ ಆಕ್ರಮಣಮಾಡಬೇಕೆಂದು ನನ್ನ ಸೈನ್ಯಕ್ಕೆ ಆಜ್ಞಾಪಿಸಿದೆನು. ತೇಜಸ್ವಿನಿಯಾದ ರಜಪುತ ನಂದಿನಿಯು ತನ್ನ ಅಲ್ಪ ಸಂಖ್ಯಾಕರಾದ ಕಾವಲುಗಾರರನ್ನು ಪ್ರೋತ್ಸಾಹಿಸಿ ಯುದ್ಧಕ್ಕೆ ಅಣಿಮಾಡಿದಳು. ಸ್ವಾಮಿನಿಷ್ಠರಾದ ಕಾವಲುಗಾರರು ಶಕ್ತಿಮೀರಿ ಕಾದಿ ಧರಾಶಾಯಿಗಳಾದರು. ಕೂಡಲೆ ನಾನು ಅಟ್ಟಾಲಿಕೆಯನ್ನು ಪ್ರವೇಶಿಸಲಿಕ್ಕೆ ಮುಂದೆ ಸಾಗಿದೆನು. ಅಷ್ಟರಲ್ಲಿ ಒಂದು ಅಪೂರ್ವ ದೃಶ್ಯದಿಂದ ಸ್ತಂಭಿತನಾಗಿ ಸುಮ್ಮನೆ ನಿಂತುಬಿಟ್ಟೆನು."

"ರಾಜಾ, ನೀವು ಅಂತಹ ವಿಚಿತ್ರವನ್ನೇನು ಕಂಡಿರಿ?"

"ಖಾವಿಂದ, ರಾಮಧನುಸ್ಸಿನ ವರ್ಣದಂತೆ ಶೋಭಿಸುವ ಸುವಿಶಾಲ

ಕೇಶರಾಜಿಯಿಂದೊಪ್ಪುವ ಖಡ್ಗಧಾರಿಣಿಯಾದ ತೇಜೋಮಯಿ ಮೂರ್ತಿಯನ್ನು ನೋಡಿದೆನು; ತ್ರಿಭುವನದ ಸೌಂದರ್ಯರಾಶಿಯು ಒಬ್ಬಳಿಗೂಡಿದ ಮಹಾಮಹಿಮಾಮಯಿಯಾದ ಮೂರ್ತಿಯನ್ನು ಕಂಡೆನು; ನೇತ್ರಗಳಲ್ಲಿ ಅನಲಪ್ರವಾಹವೂ ಮುಖದಲ್ಲಿ ಸಮುದ್ರಸಮವಾದ ಗಾಂಭೀರ್ಯವೂ ತೋರುತ್ತಿರುವ ತೀಕ್ಷ್ಣ ಖಡ್ಗಪಾಣಿಯಾದ ಮಹಿಷಾಸುರ ಮರ್ದಿನಿಯನ್ನು ಕಂಡೆನು! ಈ ದೃಷ್ಯವನ್ನು ಕಂಡಕೂಡಲೆ ನಾನು ನಾಲ್ಕು ಹೆಜ್ಜೆ ಹಿಂದೆ ಸರಿದೆನು. ಆಶ್ರಯದಾಯಿನಿಯ ಮೇಲೆ ವಿಪನ್ನಾವಸ್ಥೆ ಬರುವದೆಂದು ತಿಳಿದು, ದಾವುದಖಾನನು ಅಟ್ಟಾಲಿಕೆಯಿಂದ ಹೊರಬಿದ್ದು ನನ್ನ ಮೇಲೆ ಆಕ್ರಮಣ ಮಾಡಿದನು. ಸ್ವಲ್ಪ ವೇಳೆ ಕಾಳಗವು ನಡೆದ ಮೇಲೆ ನವಾಬನ ಖಡ್ಗವು ನನ್ನ ಖಡ್ಗಾಘಾತದಿಂದ ಭೂಮಿಗೆ ಬಿತ್ತು. ಕೂಡಲೆ ನಾನು ಅವನನ್ನು ಸೆರೆಹಿಡಿಯಬೇಕೆಂದು ಮುಂದೆವರಿದೆನು. ಅಷ್ಟರಲ್ಲಿ ಕ್ಷಾತ್ರಧರ್ಮದ ಮೂರ್ತಿಮಂತ ದೇವತೆಯಾದ ರಾಜಕುಮಾರಿಯು ನವಾಬನನ್ನು ಹಿಂದೆ ಹಾಕಿಕೊಂಡು ನನ್ನ ಸಮ್ಮುಖದಲ್ಲಿ ನಿಂತಳು. ಬಾಲಿಕೆಯ ವಧೆ ಮಾಡಿದ ಹೊರತು ನವಾಬನನ್ನು ಕೈವಶ ಮಾಡಿಕೊಳ್ಳುವದು ಅಸಂಭವವೆಂಬದು ಗೊತ್ತಾಯಿತು. ನಿರಾಶ್ರಿತನೂ, ಪರಾಭವ ಹೊಂದಿ ಹಣ್ಣಾದವನೂ, ಒಂಟಿಗನೂ ಆದ ಶತ್ರುವಿನ ಸೆರೆ ಹಿಡಿಯುವದಕ್ಕಾಗಿ ನಾನು ಸೈನ್ಯಸಹಿತನಾಗಿ ಹೊರಟಿದ್ದೆನು; ಈ ಕಲಂಕದೊಡನೆ ನಾರೀಹತ್ಯೆಯಂತಹ ಮಹಾ ಪಾತಕವನ್ನು ಮಾಡಲಿಕ್ಕೆ ನನ್ನ ಮನಸ್ಸು ಒಪ್ಪದಾಯಿತು. ಆದ್ದರಿಂದ ನಾನು ಮನಾಯಿಮಖಾನ ಸೇನಾಪತಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ನವಾಬನನ್ನು ಬಿಟ್ಟೆನು. ಭಾರತಭಾಗ್ಯವಿಧಾತಾ, ಧರ್ಮಕ್ಕೆ ಕಟ್ಟು ಬಿದ್ದು ಮಾಡಿದ ನನ್ನ ಕೃತಿಯು ಸಾಮಾನ್ಯರಂತೆ ನಿಮ್ಮ ದೃಷ್ಟಿಗೂ ಅನೀತಿಯದಾಗಿ ಕಂಡರೆ, ನಾನು ಅಪರಾಧಿಯೆಂದು ಒಪ್ಪಿ ವಿಧಿಸಿದ ಶಾಸನವನ್ನು ಶಾಂತಿಪೂರ್ವಕವಾಗಿ ಹೊಂದಲಿಕ್ಕೆ ಸಿದ್ಧನಾಗುವೆನು; ಆದರೆ ವಿಶ್ವಾಸಘಾತಕತನದ ಮಹಾಕಲಂಕದಿಂದ ನನ್ನ ವಿಶುದ್ಧ ಕೀರ್ತಿಯನ್ನು ಮಲಿನಗೊಳಿಸಬಾರದೆಂದು ಬೇಡಿಕೊಳ್ಳುವೆನು."

ರಾಜಾ ತೋಡರಮಲ್ಲನು ನಿರ್ಭಯದಿಂದಲೂ ನಿರ್ದಾಕ್ಷಿಣ್ಯದಿಂದಲೂ ಆಡಿದ ಮಾತುಗಳಿಂದ ದಿಲ್ಲೀಶ್ವರನ ಮನಸ್ಸಿನಲ್ಲಿ ಹುಟ್ಟಿದ ಕ್ರೋಧವು ಸಮೂಲವಾಗಿ ನಾಶಹೊಂದಿ, ಆ ಸ್ಥಳದಲ್ಲಿ ಆನಂದ, ವಿಸ್ಮಯ, ಸಂತುಷ್ಟತೆ ಮೊದಲಾದ ಭಾವನೆಗಳು ನೆಲೆಗೊಂಡವು. ಆಗ ಅವನು:—"ಆಶ್ಚರ್ಯ! ರಾಜಾ, ನಿಮ್ಮ

ಧರ್ಮಬುದ್ಧಿಯು ವಿಸ್ಮಯಜನಕವಿರುವದು! ನೀವು ಸಾಮ್ರಾಜ್ಯದ ವಿಶ್ವಾಸ ಘಾತ ಮಾಡಿಲ್ಲ. ಮೊಗಲ ಸಮ್ರಾಟನ ಅಧಿಕಾರಿಗಳು ಎಂತಹ ಘನತರ ರಿರುವರೆಂಬದನ್ನು ನೀವು ಜಗತ್ತಿನ ನಿದರ್ಶನಕ್ಕೆ ತಂದು ಕೊಟ್ಟು, ಸಾಮ್ರಾಜ್ಯದ ಗೌರವದ ಹೆಚ್ಚಳ ಮಾಡಿದಿರಿ. ನೀವು ಅಸಾಹಾಯ್ಯ ಸ್ಥಿತಿಯಲ್ಲಿ ಒಂಟಿಗನಾಗಿದ್ದ ನವಾಬನನ್ನು ಸೆರೆ ಹಿಡಿದಿದ್ದರೆ, ಕ್ಷಾತ್ರತೇಜದಿಂದ ಬೆಳಗುವ ಧರ್ಮದ ಮೂರ್ತಿಮಂತ ದೇವತೆಯಾದ ರಾಜಕುಮಾರಿಯನ್ನು ವಧೆಗೊಳಿಸಿದ್ದರೆ ನನ್ನ ದಿವ್ಯ ಕೀರ್ತಿಗೆ ಕಲಂಕವು ತಗಲುತ್ತಿತ್ತು; ಮೊಗಲ ಸಮ್ರಾಟನು ಸ್ತ್ರೀಹತ್ಯಾಕಾರಿಯೆಂದು ಜಗತ್ತು ನನ್ನನ್ನು ಕ್ರುದ್ಧ ದೃಷ್ಟಿಯಿಂದ ನೋಡುತ್ತಿತ್ತು. ಸ್ತ್ರೀಹತ್ಯೆಯಂತಹ ಮಹಾಪಾತಕವು ನಿಮ್ಮಿಂದ ಘಟಿಸಿದ್ದರೆ, ನೀವು ಮೊಗಲ ಸಾಮ್ರಾಜ್ಯದ ಸೇನಾಪತಿಯ ಅಧಿಕಾರಕ್ಕೆ ಎರವಾಗಬೇಕಾಗುತ್ತಿತ್ತು. ತೋಡರಮಲ್ಲ, ನೀವು ಹಿಂದುಗಳಿರುವಿರಿ; ಧರ್ಮನಿಷ್ಠ ರಜಪುತರಿರುವಿರಿ. ಹಿಂದುಗಳಿಗೆ ಧರ್ಮದ ಹಾದಿಯನ್ನು ಯಾರೂ ತೋರಿಸುವ ಕಾರಣವಿಲ್ಲ. ಅದು ಅವರಲ್ಲಿ ಸ್ವಭಾವಸಿದ್ಧವಾಗಿರುವದು. ನೀವು ಮಾಡಿದ್ದು ಯಥಾಸ್ಥಿತವಾಗಿರುವದು. ನಿಮ್ಮ ಸದ್ಗುಣಗಳಿಗಾಗಿ ಎಷ್ಟು ಧನ್ಯವಾದನೆ ಮಾಡಿದರೂ ತೀರದು!"

ರಾಜಾ ತೋಡರಮಲ್ಲನು ನಿಶ್ಚಯವಾಗಿ ಬಾದಶಹನ ದಂಡನೆಗೀಡಾಗುವನೆಂದು ಓಲಗದೊಳಗಿನ ಪ್ರತಿಯೊಬ್ಬ ಅಧಿಕಾರಿಯು ತಿಳಿದಿದ್ದನು; ಆದರೆ ಪರಿಣಾಮವು ವಿಪರೀತವಾಯಿತು. ಬಾದಶಹನು ತೋಡರಮಲ್ಲನ ಗುಣಗಳಿಗೆ ಮೆಚ್ಚಿ ಬಹು ಪರಿಯಾಗಿ ಕೊಂಡಾಡಿದ್ದರಿಂದ ಬಹುತರವಾಗಿ ಎಲ್ಲ ಸಭಿಕರಿಗೆ ಅತ್ಯಾನಂದವಾಯಿತು; ಆದರೆ ಮನಾಯಿಮಖಾನ ಸೇನಾಪತಿಯು ಮಾತ್ರ ಈ ಪ್ರಕಾರದಿಂದ ಖೇದಗೊಂಡನು. ತನ್ನ ಪ್ರತಿಸ್ಪರ್ಧಿಯಂತಿರುವ ತೋಡರಮಲ್ಲನು ಕಠೋರ ಶಾಸನವನ್ನು ಹೊಂದಬೇಕೆಂದು ಅವನ ಹೆಬ್ಬಯಕೆಯಿತ್ತು. ನಿಗ್ರಹಕ್ಕೆ ಪ್ರತಿಯಾಗಿ ಅನುಗ್ರಹವಾದದ್ದರಿಂದ ಅವನಿಗೆ ಪುತ್ರಶೋಕಕ್ಕಿಂತಲೂ ಅಧಿಕವಾದ ದುಃಖವಾಯಿತು. ಮನದಲ್ಲಿಯೆ ಮಿಡುಕುವದಕ್ಕಿಂತ ಹೆಚ್ಚಾಗಿ ಅವನು ಏನೂ ಮಾಡುವಂತಿದ್ದಿಲ್ಲ. ಅವನು ಅವನತ ಮುಖನಾಗಿ ಕುಳಿತುಕೊಂಡನು.

ಬಾದಶಹನ ಧನ್ಯೋದ್ಗಾರಗಳನ್ನು ಕೇಳಿ ತೋಡರಮಲ್ಲನು ಸಂತುಷ್ಟನಾದನು. ಅವನು ಕೃತಜ್ಞತೆಯಿಂದ ಬಾದಶಹನನ್ನು ನೋಡತೊಡಗಿದನು.

ಬಾದಶಹನಾದರೂ ತೋಡರಮಲ್ಲನನ್ನು ಪ್ರಸನ್ನತೆಯಿಂದ ನೋಡಹತ್ತಿದ್ದನು. ಸ್ವಲ್ಪ ವೇಳೆಯ ಮೇಲೆ ಅವನು:-"ರಾಜಾತೋಡರಮಲ್ಲರೆ, ನೀವು ಉದಾರರೂ ಮಹಾನುಭಾವರೂ ಇರುವಿರಿ. ನಿಮ್ಮ ಘನವಂತಿಕೆಯನ್ನು ನೋಡಿ ನನ್ನ ಮನಸ್ಸು ಪ್ರಸನ್ನವಾಗಿರುವದು. ನಿಮ್ಮ ಗುಣಕ್ಕೆ ಪುರಸ್ಕಾರ ರೂಪವೆಂದು ನಾನು ಒಂದು ವಿಶಾಲ ಜಹಾಗೀರಿಯನ್ನು ನಿಮಗೆ ಕೊಟ್ಟಿರುವೆನು. ಇಂದಿನಿಂದ ನೀವು ಮಹಾರಾಜಾ ತೋಡರಮಲ್ಲರಾದಿರಿ!" ಎಂದು ನುಡಿದು, ಮನಾಯಿಮಖಾನನನ್ನು ಕುರಿತು:—"ಮನಾಯಿಮಖಾನ, ಮನುಷ್ಯನು ಕೇವಲ ಬಾಹುಬಲದಿಂದ ವೀರನಾಗುವದಿಲ್ಲ; ವಿಪತ್ತಿನಲ್ಲಿ ಶತ್ರುಗಳಿಗೆ ಕ್ಷಮಾದಾನ ಮಾಡುವದಕ್ಕಾಗಿ ಯಾವನ ಹೃದಯವು ವಿನ್ಮುಕ್ತವಾಗಿರುವದೋ ಅವನೇ ನಿಜವಾದ ವೀರನು."

ಅಪಮಾನ-ಲಾಂಛನತೆಗಳ ತೀವ್ರತರದ ಆಘಾತದಿಂದ ಮನಾಯಿಮಖಾನನ ಅವನತ ಮಸ್ತಕವು ಮತ್ತಿಷ್ಟು ಬಾಗಿತು. ಅನಂತರದಲ್ಲಿ ಸಮ್ರಾಟನು:—"ಹುಸೇನ ಕುಲೀಖಾನ!"

ಸುರೂಪಸೇನಾಪತಿಯಾದ ಹುಸೇನ ಕುಲೀಖಾನನು ಕುಳಿತ ಸ್ಥಳದಿಂದೆದ್ದು ಬಾದಶಹನಿಗೆ ವಂದಿಸಿ ನಿಂತುಕೊಂಡನು. ಅಗ ಬಾದಶಹನು ಅವನನ್ನು ಕುರಿತು:—"ನೀವು ಪ್ರತಾಪಶಾಲಿಗಳಿರುವಿರಿ; ಸ್ವಾಮಿನಿಷ್ಠರಿರುವಿರಿ. ವಂಗವಿಜಯದ ಭಾರವನ್ನು ನಾನು ನಿಮ್ಮ ಮೇಲೆ ಹಾಕಿರುವೆನು. ಮಹಾರಾಜಾ ತೋಡರಮಲ್ಲರು ನಿಮಗೆ ಸಹಕಾರಿಗಳಾಗುವರು."

ಮುಂದೆ ಸ್ವಲ್ಪ ವೇಳೆಯ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

———

## ೧೦ನೆಯ ಪರಿಚ್ಛೇದ.

ರಾಜಾ ಹರಿನಾರಾಯಣನು ಮರಣ ಹೊಂದಿ ಎರಡು ವರ್ಷಗಳಾಗಿದ್ದವು. ಈ ಎರಡು ವರ್ಷಗಳ ಕಾಲಾವಧಿಯಲ್ಲಿ ಕಾಲಚಕ್ರದ ಪ್ರಬಲ ತಾಂಡವದಿಂದ ಆರ್ಯಾವರ್ತದಲ್ಲಿ ಎಷ್ಟೋ ಸ್ಥಿತ್ಯಂತರಗಳಾಗಿದ್ದವು. ಎಷ್ಟೋ ಉತ್ಥಾನ ಪತನಗಳೂ, ಜನನ-ಮರಣಗಳೂ, ಸುಖ-ದುಃಖಗಳೂ ಘಟಿಸಿದ್ದವು. ಅಲಂಘನೀಯವಾದ ನಿಯತಿಯ ನಿಯಮಕ್ಕನುಸಾರವಾಗಿ ಕಾಲಸ್ರೋತಸ್ಸು ಹರಿಯುತ್ತಿರುವದು. ಆ ಸ್ರೋತಸ್ಸಿನಲ್ಲಿ ರಾಜಾ ಹರಿನಾರಾಯಣನಂತೆ ದಿಲೀಪಸಿಂಹನು ಗತಿಸಿ ಹೋಗಿದ್ದನು. ಯಾದವಲಾಲನೂ ಹೊರಟು ಹೋಗಿದ್ದನು.

ಅಮರಪ್ರಸಾದನು ಹರಿನಾರಾಯಣನ ಜಮೀನದಾರಿಗೆ ಒಡೆಯನಾಗಿದ್ದನು. ಊರ್ಮಿಳಾದೇವಿಯು ಅವನ ಧರ್ಮಪತ್ನಿಯಾಗಿದ್ದಳು. ರಾಜಾ ಅಮರ ಪ್ರಸಾದನು ರಾಣೀ ಊರ್ಮಿಳಾದೇವಿಯೊಡನೆ ಅತ್ಯಾನಂದದಿಂದ ಸಂಸಾರ ರಥವನ್ನು ನಡೆಯಿಸತೊಡಗಿದ್ದನು. ಹರಿನಾರಾಯಣನ ಜಮೀನದಾರಿಯೇ ರಾಜಾ ಅಮರಪ್ರಸಾದನ ಜಮೀನದಾರಿಯಾಯಿತು; ಹರಿನಾರಾಯಣನ ಅಟ್ಟಾಲಿಕೆಯೇ ರಾಜಾ ಅಮರಪ್ರಸಾದನ ಅಟ್ಟಾಲಿಕೆಯಾಯಿತು! ನಿಯತಿಯ ನಿಯಮ!

ರಾಣೀ ಊರ್ಮಿಳಾದೇವಿಯು ತನ್ನ ಅಟ್ಟಾಲಿಕೆಯಲ್ಲಿ ಸ್ವರ್ಣಮಂಚದ ಮೇಲೆ ಕುಳಿತಿದ್ದಳು. ಅವಳ ದಾಸಿಯಾದ ಚಂದ್ರಲೇಖೆಯು ಬಳಿಯಲ್ಲಿಯೆ ನಿಂತಿದ್ದಳು. ಎದುರಿಗಿದ್ದ ವಾತಾಯನದಲ್ಲಿ ರಾಜಮಹಾಲಿನ ಹಾಗು ಗಂಗಾ ನದಿಯ ಮನೋಹರವಾದ ದೃಶ್ಯವು ಕಾಣುತ್ತಿತ್ತು. ಊರ್ಮಿಳಾದೇವಿಯೂ ಚಂದ್ರಲೇಖೆಯೂ ಹರ್ಮ್ಯಾಗ್ರದಲ್ಲಿ ಕುಳಿತು ಹೊರಗಿನ ನೈಸರ್ಗಿಕ ಶೋಭೆಯನ್ನು ನಿರೀಕ್ಷಿಸುವದರಲ್ಲಿ ಮಗ್ನರಾಗಿದ್ದರು. ವಸಂತಸಮಯವಿತ್ತು. ಉದ್ಯಾನದೊಳಗಿನ ಪುಷ್ಪಲತೆಗಳು ಹೂಗಳಿಂದ ತುಂಬಿದ್ದವು. ತರುಗಳು ಫಲಭಾರದಿಂದ ಬಾಗಿದ್ದವು. ಶುಕಪಿಕಗಳು ತನಿವಣ್ಣಳನ್ನು ತಿಂದು ಇಂಪಾಗಿ ಉಲಿಯತೊಡಗಿದ್ದವು. ಉದ್ಯಾನದೊಳಗಿನ ಪ್ರಚಂಡವಾದ ಕಾರಂಜಿಯೊಳಗಿಂದ ನೀರು ಪುಟಿದು ಹೊರಟ ತುಂತುರ್ವನಿಗಳು ಮಂದಮಾರುತನು ತಂದ ಪುಷ್ಪಗಂಧದೊಡನೆ ಹರ್ಮ್ಯಾಗ್ರದಲ್ಲಿ ಪ್ರವೇಶಿಸುತ್ತಿದ್ದವು. ಕೆಲವು ವೇಳೆಯವರೆಗೆ ಸ್ವಾಮಿನಿಯೂ ದಾಸಿಯೂ ಸೃಷ್ಟಿಸೌಂದರ್ಯ ನೋಡುವದರಲ್ಲಿ ತಲ್ಲೀನರಾಗಿ ಮೌನವಾಗಿದ್ದರು. ಅನಂತರದಲ್ಲಿ ಊರ್ಮಿಳಾದೇವಿಯು:—

"ಚಂದ್ರಲೇಖೆ!"

"ಯಾಕೆ ದೇವಿ?"

"ಅಟ್ಟಾಲಿಕೆಯ ಮಹಾದ್ವಾರದ ಕಡೆಗೆ ಒಬ್ಬ ಪಠಾಣ ಅಶ್ವಾರೋಹಿಯು ಬರುವಂತಿದೆ."

"ಅಹುದು ರಾಣಿಯವರೆ!"

"ಅವನು ಇತ್ತಕಡೆಗೆ ಯಾವ ಕೆಲಸಕ್ಕಾಗಿ ಬರುತ್ತಿರಬಹುದು?"

"ಮೊಗಲ ಸಮ್ರಾಟನಿಂದ ಸಂದೇಶವನ್ನು ತರುತ್ತಿರಬಹುದು."

"ಅಲ್ಲಲ್ಲ...."

"ಮತ್ತೇನು?"

"ಅವನು ಮೊಗಲ ಸೈನಿಕನಂತೆ ತೋರುವದಿಲ್ಲ; ಪಠಾಣಸೈನಿಕನಿರಬಹುದಾಗಿದೆ"

"ನವಾಬ ದಾವುದಖಾನರ ಪತ್ರವನ್ನೇನಾದರೂ ತಂದಿರಬಹುದು."

"ಹೊರಗೆ ಯಾರಿರುವಿರಿ?" ಊರ್ಮಿಳಾದೇವಿಯು ಹೀಗೆ ನುಡಿದ ಕೂಡಲೆ ಒಬ್ಬ ಕಾವಲುಗಾರನು ಒಳಗೆ ಬಂದು ರಾಣಿಗೆ ಅಭಿವಂದಿಸಿ:— "ಮಹಾರಾಜ್ಞಿಯವರೆ, ಅಪ್ಪಣೆಯೇನು?"

"ಮಹಾದ್ವಾರದಲ್ಲಿ ಅಶ್ವಾರೋಹಿಯಾದ ಪಠಾಣನಿರುವನು. ದ್ವಾರರಕ್ಷಕರು ಅವನನ್ನು ತಡೆದಿರುವರು. ಹೊರಗೆ ಹೋಗಿ ಆ ಪಠಾಣನು ಯಾಕೆ ಬಂದಿರುವನೆಂಬದನ್ನು ತಿಳಿದುಕೊಂಡು ಬಾ."

ಕಾವಲುಗಾರನು ಹೊರಗೆ ಹೋಗಿ, ಅಶ್ವಾರೋಹಿಯಾದ ಪಠಾಣನಿಂದ ಒಂದು ಪತ್ರವನ್ನು ತಂದು ಊರ್ಮಿಳಾದೇವಿಯ ಕಡೆಗೆ ಒಪ್ಪಿಸಿದನು. ಊರ್ಮಿಳಾದೇವಿಯು ಪತ್ರವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದಳು; ಹೊರಗೆ ಯಾರ ವಿಳಾಸವೂ ಇರಲಿಲ್ಲ. ಕೇವಲ "ಅಮ್ಮಾ!" ಎಂಬ ಶಬ್ದವು ಮಾತ್ರ ಬರೆಯಲ್ಪಟ್ಟಿತ್ತು. ರಾಣಿಯು ವಿಸ್ಮಿತಾಂತಃಕರಣೆಯಾಗಿ ಪತ್ರವನ್ನು ಬಿಚ್ಚಿ ಓದತೊಡಗಿದಳು

"ಜನನಿ!

ನಾನು ಮತ್ತೊಮ್ಮೆ ತಮ್ಮ ಸ್ಮೃತಿ ಪಟಲದ ಮುಂದೆ ಉಪಸ್ಥಿತನಾಗಿರುವೆನು. ನಿಮ್ಮ ಮಗನಾದ ನಾನು ಸದ್ಯದ ವಿಪತ್ತಿನ ಪ್ರಸಂಗದಲ್ಲಿ ಮಾತೃಮೂರ್ತಿಯಾಗಿದ್ದ ನಿಮ್ಮನ್ನು ಹೇಗೆ ನೆನೆಯದಿರಲಿ? ಮುಂದೆ ಬೇಗನೆ ಒದಗಬಹುದಾದ ಗಂಡಾಂತರವು ಸಾಮಾನ್ಯವಾದದ್ದಲ್ಲ. ಮೊಗಲ ಸಾಮ್ರಾಜ್ಯದ ನಾಮಾಂಕಿತ ಸೇನಾಪತಿಗಳಾದ ಹುಸೇನ ಕುಲೀಖಾನರೂ ಮಹಾರಾಜಾ ತೋಡರಮಲ್ಲರೂ ಅಸಂಖ್ಯ ಸೇನೆಯೊಡನೆ ನನ್ನ ಪಾರಿಪತ್ಯಗೊಳಿಸಲಿಕ್ಕೆ ಹೊರಟಿರುವರು. ಮುಂದೆ ನಡೆಯಬಹುದಾದ ಯುದ್ಧದಿಂದ ಪಠಾಣರ ಹಾಗು ಮೊಗಲರ ಭಾಗ್ಯದ ನಿರ್ಣಯವಾಗುವದು. ಈ ಮಹಾಸಂಗ್ರಾಮದಲ್ಲಿ ಪಠಾಣರ ಭಾಗ್ಯವು ಮಹಾಸಾಗರದಲ್ಲಿ ಮುಳುಗಿ ಹೋಗುವದೋ, ಮೇರುಶಿಖರದಂತೆ ಉನ್ನತವಾಗಿ ಸಂಸಾರದಲ್ಲಿ ಪ್ರಕಾಶಮಾನವಾಗುವದೋ ಎಂಬದನ್ನು ಈಗ ಹೇಳಲಿಕ್ಕೆ ಸಾಧ್ಯವಿಲ್ಲ. ಮೊಗಲರು ಅಸೀಮ ಬಲಶಾಲಿ

ಗಳಿರುವರು; ನಾನು ದುರ್ಬಲನಿರುವೆನು. ಅಮ್ಮಾ, ನಾನು ಮಹಾವಿಪತ್ತಿನಲ್ಲಿ ಬಿದ್ದಿರುವೆನು. ಜೀವನ-ಮರಣಗಳ ಸಮಸ್ಯೆಯು ನನ್ನ ಸಮ್ಮುಖದಲ್ಲಿ ನಿಂತುಕೊಂಡಿರುವದು.

ಕರುಣಾರೂಪಿಣಿಯಾದ ಜನನಿಯೆ, ಭಾವೀ ಗಂಡಾಂತರದಿಂದ ಹೇಗೆ ಪಾರಾಗಬೇಕೆಂಬದರ ಬಗ್ಗೆ ನಾನು ಬಹಳೇ ಪೇಚಾಡತೊಡಗಿರುವೆನು. ಈ ಸಮಯದಲ್ಲಿ ನಾನು ನಿಮ್ಮಲ್ಲಿ ಒಂದು ಕ್ಷುದ್ರವಾದ ಭಿಕ್ಷೆಯನ್ನು ಯಾಚಿಸುತ್ತಿರುವೆನು. ನನ್ನ ಅಲ್ಪವಾದ ಬೇಡಿಕೆಯನ್ನು ನೀವು ಉಪೇಕ್ಷಿಸಲಾರಿರೆಂದು ನಂಬಿರುವೆನು. ತಾಯಿೞ! ಶುಭಾಶೀರ್ವಾದದಿಂದ ನನ್ನನ್ನು ಕಾಪಾಡಿರಿ. ಸ್ನೇಹಕವಚದ ಆಚ್ಛಾದನೆ ಮಾಡಿ, ಆಪತ್ತನ್ನು ದೂರ ಮಾಡಿರಿ. ಅಭಯವಾಣಿಯಿಂದ ನನ್ನಲ್ಲಿ ನವೋತ್ಸಾಹವೂ ನವಾಭಿಲಾಷೆಯೂ ಜಾಗ್ರತವಾಗುವಂತೆ ಮಾಡಿರಿ.

ಮಾತೆ! ಹಿಂದೆ ನನ್ನ ಮೇಲೆ ಸಂಕಟವೊದಗಿದಾಗ ನೀವು ಮೊಗಲಶಕ್ತಿಯನ್ನು ತುಚ್ಛೀಕರಿಸಿ, ನನ್ನ ಪ್ರಾಣರಕ್ಷಣೆಗೆ ಸಿದ್ಧರಾದಿರಿ. ರಜಪುತ ವೀರವರಾಂಗನೆಯರಾದ ನೀವು ಶರಣಾಗತರನ್ನು ರಕ್ಷಿಸುವ ಶೀಲದಿಂದ ಎಂದೂ ಚ್ಯುತರಾಗುವದಿಲ್ಲವೆಂದೇ ನನ್ನ ಆತ್ಮವಿಶ್ವಾಸ. ಇಂದು ನಾನು ಹಿಂದಿನಂತೆಯೇ ವಿಪತ್ತಿನಲ್ಲಿ ಸಿಲುಕಿರುವೆನು. ಅಂದು ನನಗೆ ಆಶ್ರಯವಿತ್ತ ಮೇಲೆ ನಿಮ್ಮಿಂದ ನನಗೆ ಆಶ್ವಾಸನೆಯು ದೊರೆತಿರುವದು. ನಿಮಗಾದರೂ ಆ ಮಾತು ಲಕ್ಷ್ಯದಲ್ಲಿರಬಹುದು. ಮುಂದೆ ಎಂದಾದರೂ ಸಂಕಟವೊದಗಿದರೆ, ಯಥಾಶಕ್ತಿಯಾಗಿ ಸಹಾಯ ಮಾಡುವೆನೆಂದು ನೀವು ನನ್ನ ತಲೆಯ ಮೇಲೆ ಅಭಯಹಸ್ತವನ್ನಿರಿಸಿರುವಿರಿ. ನಾನಾದರೂ ನಿಮ್ಮನ್ನು ಹೆಚ್ಚಾಗಿ ತೊಂದರೆಗೊಳಿಸದೆ ಒಂದೇ ಒಂದು ತುಚ್ಛವಾದ ಯಾಚನೆ ಮಾಡುವನು. ಮಾತೆಯು ಪುತ್ರನಿಗಾಗಿ ಉಚಿತವಾದ ಕರ್ತವ್ಯಮಾಡದಿರಲಾರಳೆಂದು ನನ್ನ ಮನವರಿಕೆ. ಅಮ್ಮಾ, ನಿಮ್ಮ ಸ್ವಾಮಿಗಳಾದ ಅಮರಪ್ರಸಾದರು ತಮ್ಮ ಪ್ರಭುಗಳೂ ಶ್ವಶುರರೂ ಆದ ಸ್ವರ್ಗವಾಸಿ ಹರಿನಾರಾಯಣರಂತೆ ವರ್ತನವನ್ನಿಡುವರು. ಅವರು ನಿಶ್ಚಯವಾಗಿ ಮೊಗಲರಿಗೆ ಸಹಕಾರಿಗಳಾಗುವರು. ನಿಮ್ಮ ಪತಿಗಳು ಅಸೀಮ ಶಕ್ತಿಶಾಲಿಗಳಿರುವರು. ಅವರ ವೀರತ್ವವು ಅದ್ಭುತವಿರುವದು. ಅವರು ಮೊಗಲಪಕ್ಷಪಾತಿಗಳಾದರೆ ನನಗೆ ವಿಜಯವು ದೊರೆಯುವದು ದುಸ್ತರವಾಗುವದು. ಆದ್ದರಿಂದ ಅಮರಪ್ರಸಾದರು ನನಗೆ ಸಹಾ

ಯಕಾರಿಗಳಾಗಬೇಕೆಂದು ಕೋರುವೆನು. ತಾಯಿೂ, ನೀವು ನನ್ನ ಈ ಸಣ್ಣ ಬೇಡಿಕೆಯನ್ನು ಪೂರೈಸುವಿರಾ? ಒಂದು ವೇಳೆ ಅವರು ನನಗೆ ಸಹಾಯ ಮಾಡಲಿಚ್ಛಿಸದಿದ್ದರೆ, ನಿರಪೇಕ್ಷಭಾವದಿಂದಿರುವಂತೆ ಮಾಡಬೇಕು. ಇಷ್ಟು ಕೆಲಸವಾದರೆ ನೀವು ನನಗೆ ಮಹದುಪಕಾರ ಮಾಡಿದಂತಾಗುವದು ಹೆಚ್ಚಿಗೇನು ಬರೆಯಲಿ? ಪುತ್ರನ ಈ ಪ್ರಾರ್ಥನೆಯು ನಿಷ್ಫಲವಾಗಲಿಕ್ಕಿಲ್ಲೆಂದು ನಂಬಿರುವೆನು.

ನಿಮ್ಮ ಮಾನಸ ಪುತ್ರ,
ದಾವುದಖಾನ"

ಪತ್ರವನ್ನೋದಿದ ಕೂಡಲೆ ಊರ್ಮಿಳಾದೇವಿಗೆ ಪರಮಾನಂದವಾಯಿತು. ಸ್ವಲ್ಪ ಆಶ್ರಯವಿತ್ತದ್ದಕ್ಕೆ ಅನ್ಯಧರ್ಮೀಯನಾದ ನವಾಬನು ತನ್ನ ವಿಷಯವಾಗಿ ಎಷ್ಟು ಕೃತಜ್ಞನಾಗಿರುವನೆಂದು ಅವಳು ಸಂಭ್ರಮಗೊಂಡಳು. ನವಾಬನ ವಿಷಯಕ್ಕೆ ಅವಳ ಮನಸ್ಸು ಮತ್ತಿಷ್ಟು ಪ್ರಸನ್ನವಾಯಿತು ಅನಂತರದಲ್ಲಿ ಅವಳು:—"ಚಂದ್ರಲೇಖೆ!"

"ಯಾಕೆ ದೇವಿ?" "ಇದು ಯಾರ ಪತ್ರವೆಂಬದನ್ನು ಬಲ್ಲೆಯಾ?"

"ಮಹಾರಾಣಿ, ನಾನು ಅರಿಯೆನು."

"ನವಾಬ ದಾವುದಖಾನ ವಂಗೇಶ್ವರರನ್ನು ಬಲ್ಲೆಯಾ?"

"ಹೆಸರು ಮಾತ್ರ ಕೇಳಿರುವೆನು ದೇವಿ."

'ಅವರೇ ಈ ಪತ್ರ ಕಳುಹಿಸಿರುವರು.' 'ಪತ್ರಾಭಿಪ್ರಾಯವೇನುಂಟು?'

"ಮೊಗಲ ಸೇನಾಪತಿಗಳಾದ ಹುಸೇನ ಕುಲೀಖಾನನೂ, ಮಹಾರಾಜಾ ತೋಡರಮಲ್ಲನೂ ಅಮೋಘವಾದ ಸೈನ್ಯದೊಡನೆ ವಂಗವಿಜಯ ಸಂಪಾದನೆಗಾಗಿ ಹೊರಟಿರುವರಂತೆ. ಈ ಸಮಯದಲ್ಲಿ ತಮಗೆ ಸಹಾಯ ಮಾಡಬೇಕೆಂದು ನವಾಬರು ಬರೆದಿರುವರು."

"ಮಹಾರಾಜ್ಞಿಯವರೆ, ಅಬಲೆಯರು ಯುದ್ಧದಂತಹ ಪ್ರಸಂಗದಲ್ಲಿ ಯಾವ ಸಹಾಯ ಮಾಡಬೇಕು?"

"ನನ್ನ ಸ್ವಾಮಿಗಳು ಮೊಗಲ ಪಕ್ಷಪಾತಿಗಳಾಗದಂತೆ ಮಾಡಬೇಕೆಂದು ಅವರು ತಿಳಿಸಿರುವರು. ಕಡೆಗೆ ಯಾರ ಪಕ್ಷವನ್ನೂ ಹಿಡಿಯದೆ ತಟಸ್ಥಭಾವದಿಂದಿದ್ದರೆ ದೊಡ್ಡ ಉಪಕಾರವಾಗುವದೆಂದು ಬರೆದಿರುವರು."

"ನೀವು ನವಾಬರ ಬೇಡಿಕೆಯನ್ನು ಪೂರೈಸುವಿರಾ?"

"ಸಾಧ್ಯವಾದ ಮಟ್ಟಿಗಾದರೂ ಅವರಿಗೆ ಸಹಾಯ ಮಾಡಲಿಕ್ಕೆಬೇಕು.

ವಂಗೇಶ್ವರರು ನನ್ನ ಮಾನಸಪುತ್ರರಿರುವದರಿಂದ ಅವರನ್ನು ಉಪೇಕ್ಷಿಸುವಂತಿಲ್ಲ."

ಊರ್ಮಿಳಾದೇವಿಯು ಚಂದ್ರಲೇಖೆಗೆ ಲೇಖನ ಸಾಮುಗ್ರಿಗಳನ್ನು ತರ ಹೇಳಿದಳು. ಅನಂತರದಲ್ಲಿ ಒಂದು ಗಳಿಗೆ ಯೋಚಿಸಿ ಪತ್ರಬರೆಯಲುಪಕ್ರಮಿಸಿದಳು.

"ಸ್ನೇಹಭಾಜನ ಪುತ್ರರಾದ ವಂಗೇಶ್ವರರೆ!"

ನಿಮ್ಮ ಪತ್ರವು ತಲುಪಿತು. ಇಷ್ಟು ದಿನಗಳಾದರೂ ನೀವು ನಿಮ್ಮ ದೀನ ಜನನಿಯನ್ನು ಮರೆಯದ್ದರಿಂದ ಅತ್ಯಾನಂದವಾಗಿದೆ. ನನ್ನ ಕ್ಷುದ್ರ ಶಕ್ತಿಗೆ ಯಾವದು ಸಂಭಾವ್ಯವೋ, ಯಾವದು ಸಾಧ್ಯವೋ ಆ ಕಾರ್ಯವನ್ನು ಈಡೇರಿಸುವದಕ್ಕಾಗಿ ಪ್ರಯತ್ನಿಸುವೆನು. ರಜಪುತ ಲಲನೆಯರು ಎಂದೂ ಅಸತ್ಯವಾದಿಗಳಾಗಲಾರರೆಂಬದನ್ನು ನೀವು ಮನವರಿಕೆ ಮಾಡಿಕೊಂಡಿರುವಿರಿ. ನೀವು ನಿಶ್ಚಿಂತೆಯಿಂದಿದ್ದು ಸಮಯಾನುಸಾರವಾಗಿ ನನ್ನ ಸಹಾಯತೆ ಹೊಂದಿರಿ.

ಈ ಸಮಯದಲ್ಲಿ ನನ್ನ ಸ್ವಾಮಿಗಳು ದುರ್ಗದಲ್ಲಿರುವರು. ನಿಮ್ಮ ಹೇಳಿಕೆಯ ಮೇರೆಗೆ ನಾನು ಅವರ ಮನವೊಲಿಸಲಿಕ್ಕೆ ಹವಣಿಸುವೆನು. ನಾನು ಅವರ ಚರಣಸೇವೆ ಮಾಡಲಿಕ್ಕೆ ಮಾತ್ರ ಭಾಧ್ಯಳಿರುವೆನು; ಆದರೆ ಇದೇ ಬಗೆಯಾಗಿ ನಡೆಯಬೇಕೆಂದು ಆಗ್ರಹದಿಂದ ಹೇಳಲಿಕ್ಕೂ, ಆಜ್ಞೆ ಮಾಡಲಿಕ್ಕೂ ನನಗೆ ಅಧಿಕಾರವಿಲ್ಲ. ವಿನಂತಿಯಿಂದಾದಷ್ಟು ಕಾರ್ಯ ಮಾಡುವೆನು. ಪತ್ರ ಬರೆದರೂ ಉಪೇಕ್ಷೆಯಾಯಿತೆಂದು ನೀವು ವಿಕಲ್ಪ ಭಾವನೆ ಮಾಡಿಕೊಳ್ಳಬಾರದು. ನಾನು ಮಾತ್ರ ನನ್ನ ಶೀಲಕ್ಕನುಗುಣವಾಗಿ ನಡೆಯುವೆನೆಂದು ಆಶ್ವಾಸನೆಯನ್ನೀಯುವೆನು. ಎಂತಹ ಪ್ರಸಂಗ ವೊದಗಿದರೂ ನಾನು ನಿಮ್ಮ ರಕ್ಷಣೆಗಾಗಿ ಹೆಣಗತಕ್ಕವಳೇ.

ವಂಗೇಶ್ವರರೇ, ನೀವು ವಿಜಯಿಗಳಾಗಿರಿ. ನಿಮ್ಮ ವೀರತ್ವವನ್ನು ನೋಡಿ ಶತ್ರುಗಳು ಚಕಿತರಾಗಲಿ. ಇತಿಹಾಸವು ಅಭಿಮಾನಪೂರ್ವಕವಾಗಿ ವೀರತ್ವಮಂಡಿತವಾದ ನಿಮ್ಮ ನಾಮವನ್ನು ವಕ್ಷಸ್ಥಳದಲ್ಲಿ ಧಾರಣ ಮಾಡಲಿ. ನೀವು ಗೌರವಾನ್ವಿತರಾಗಿರಿ. ಮೊಗಲ ವಿಜಯಿಗಳಾಗಿ ವಂಗ ಸಾಮ್ರಾಜ್ಯವನ್ನು ಅಪ್ರತಿಹತ ಪ್ರಭಾವದಿಂದ ಕಾಪಾಡಿರಿ! ಇಷ್ಟೇ ನನ್ನ ಆಶೀರ್ವಾದ.

ನಿಮ್ಮ ಮಾತೆ,

ರಾಣೀ ಊರ್ಮಿಳಾದೇವಿ."

ಪತ್ರವು ಪೂರಾ ಬರೆಯಲ್ಪಟ್ಟ ನೇಲೆ ವಿಳಾಸದ ಸ್ಥಳದಲ್ಲಿ ಅವಳು 'ಕಂದಾ!' ಎಂದು ಬರೆದಳು. ಅನಂತರದಲ್ಲಿ ಅವಳು ಅದನ್ನು ಚಂದ್ರಲೇಖೆಯ ಕೈಯಲ್ಲಿ ಕೊಟ್ಟು:—"ಇದನ್ನು ಪಠಾಣ ಸೈನಿಕನ ಕಡೆಗೆ ಕೊಡಬೇಕೆಂದು ಹೇಳಿ, ದ್ವಾರಪಾಲಕನ ಸ್ವಾಧೀನ ಮಾಡು."

ಚಂದ್ರಲೇಖೆಯು ಪತ್ರವನ್ನು ತೆಗೆದುಕೊಂಡು ದ್ವಾರಪಾಲಕನ ಕೈಯಲ್ಲಿ ಕೊಟ್ಟಳು; ದ್ವಾರಪಾಲಕನು ಅದನ್ನು ಅಶ್ವಾರೋಹಿಯಾದ ಪಠಾಣನ ಕಡೆಗೊಪ್ಪಿಸಿದನು ಕೂಡಲೆ ಪಠಾಣ ದೂತನು ರಾಜಮಹಾಲಿನಿಂದ ಓರಿಸಾದಕಡೆಗೆ ತೆರಳಿದನು.

ಪತಿಯು ಪಠಾಣಪಕ್ಷಪಾತಿಯಾಗುವದಕ್ಕೆ ಯಾವ ಹಂಚಿಕೆಮಾಡಬೇಕೆಂದು ಊರ್ಮಿಳಾದೇವಿಯು ವಿಚಾರಿಸತೊಡಗಿದಳು.

---

## ೧೧ನೆಯ ಪರಿಚ್ಛೇದ.

ಅಮರಪ್ರಸಾದನು ಅಶ್ವಾರೋಹಿಯಾಗಿ ದುರ್ಗದಿಂದ ಹೊರಹೊರಟಿದ್ದನು. ಆಗ ಒಬ್ಬ ಯುವನನು ಅವನನ್ನು ತಡೆದನು.

ವಿರಕ್ತಭಾವದಿಂದ ರಾಜಾ ಅಮರಪ್ರಸಾದನು ಅವನನ್ನು ಕುರಿತು:—"ನೀನು ಯಾರು?"

"ನಾನು ಯಾರೆಂಬದು ನಿಮಗೆ ತಿಳಿಯುವದಿಲ್ಲವೆ? ನಾನೊಬ್ಬ ಮೊಗಲ ಸೈನಿಕನಿರುವೆನು."

"ಮೊಗಲ ಸೈನಿಕನೆಂಬದು ಗೊತ್ತಾಗಿದೆ. ಇದಕ್ಕಿಂತ ಹೆಚ್ಚಿನ ಪರಿಚಯು ಮಾಡಿಕೊಡಲಿಕ್ಕೆ ನೀನು ಒಪ್ಪುವದಿಲ್ಲವೆ?"

"ನಾನು ಪ್ರಬಲಪ್ರತಾಪಿ ಭಾರತೇಶ್ವರ ಅಕಬರ ಬಾದಶಹರ ವಂಗ-ವಿಹಾರ-ಉತ್ಕಲದೇಶಗಳ ಪ್ರಧಾನ ಸೇನಾಪತಿಗಳಾದ ಅಲ್ಲೀಮಹಮ್ಮದ ಹುಸೇನ ಕುಲೀಖಾನರ ಅನುಚರನಿರುವೆನು."

"ಶಾಬಾಸ! ನಿನ್ನ ನಾಮಧೇಯದ ಒಕ್ಕಣಿಕೆಯು ಬಹು ಸರಸಾಗಿದೆ. ಒಳ್ಳೇದು, ಇಲ್ಲಿ ನಿನ್ನ ಕಾರ್ಯವೇನುಂಟು?"

"ಕಾರ್ಯವಿರುವದು·"

"ಯಾರ ಕಡೆಗೆ?"

"ನಿಮ್ಮ ಕಡೆಗೆ."

"ಯಾವ ಕೆಲಸವುಂಟು?"

"ಮೊಗಲ ಸೇನಾಪತಿಗಳಾದ ಹುಸೇನ ಕುಲೀಖಾನರು ವಂಗವಿಜಯಕ್ಕಾಗಿ ಹೊರಟಿರುವರು. ಸಂಗ್ರಾಮದಲ್ಲಿ ತಮಗೆ ಸಹಾಯ ಮಾಡಬೇಕೆಂಬ ವಿನಂತಿಯನ್ನು ತಿಳಿಸುವದಕ್ಕಾಗಿ ನನ್ನನ್ನು ಕಳುಹಿಸಿರುವರು. ನಿಮ್ಮ ಅಭಿಪ್ರಾಯವೇನಿರುವದು? ನೀವು ಮೊಗಲರನ್ನು ಅವಲಂಬಿಸುವಿರೋ? ಪಠಾಣ ಪಕ್ಷಪಾತಿಗಳಾಗುವಿರೋ?"

"ಒಂದು ವೇಳೆ ಪಠಾಣಪಕ್ಷಪಾತಿಯಾದರೆ?"

'ಈ ದುರ್ಗವೂ ನಿಮ್ಮ ರಾಜಪ್ರಾಸಾದವೂ ನೆಲಸಮ ಮಾಡಲ್ಪಡುವವು!'

ಪಠಾಣ ದೂತನ ಗರ್ವೋಕ್ತಿಗಳನ್ನು ಕೇಳಿ ಅಮರಪ್ರಸಾದನ ಹೃದಯವು ಸಂತಪ್ತವಾಯಿತು. ಕಣ್ಣುಗಳು ಕಿಡಿಗಳನ್ನು ಕಾರಹತ್ತಿದವು ಸರ್ವಾಂಗವು ಕಂಪಾಯಮಾನವಾಗತೊಡಗಿತು ಆಗ ಅವನು ಉಚ್ಚ ಸ್ವರದಿಂದ:— "ಮದಾಂಧ ಮೊಗಲಾ! ಯಾರ ಮುಂದೆ ಹೀಗೆ ಮಾತಾಡುತ್ತಿರುವೆಯೆಂಬದರ ಪರಿವೆಯು ನಿನಗಿರುವದೆ? ನಾನು ಪಠಾಣರ ಪಕ್ಷವಹಿಸಿದರೆ ಈ ದುರ್ಗವೂ ಈ ರಾಜಪ್ರಾಸಾದವೂ ನೆಲಸಮ ಮಾಡಲ್ಪಡುವವೆ? ಈ ರಾಜಾ ಅಮರಪ್ರಸಾದನನ್ನು ಪರಾಭವಗೊಳಿಸಿ, ಅವನ ದುರ್ಗ-ಮಂದಿರಗಳನ್ನು ನೆಲಸಮ ಮಾಡುವಂತಹ ಶಕ್ತಿಯು ಎಂತಹದಿರುವದೋ ನೋಡಬೇಕಾಗಿದೆ. ನಿನ್ನ ಒಡೆಯನಾದ ಹುಸೇನ ಕುಲೀಖಾನನು ಉನ್ಮತ್ತನಿರುವದರಿಂದ ಅವನ ಸೇವಕನಾದ ನೀನೂ ಅದೇ ಬಗೆಯಾಗಿ ಆಚರಣೆಯಿಟ್ಟಿರುವೆ ಮೊಗಲಾ! ಮೊ-ಗಲ ಸಾಮ್ರಾಜ್ಯದ ಶಕ್ತಿಪರೀಕ್ಷೆ ಮಾಡುವ ಉತ್ಕಟೇಚ್ಛೆಯು ರಾಜಾ ಅಮರಪ್ರಸಾದನಲ್ಲಿರುವದೆಂದು ನಿನ್ನ ಒಡೆಯನಿಗರುಹು!"

"ವಿಚಾರ ಮಾಡಿರಿ; ಇನ್ನೊಮ್ಮೆ ವಿಚಾರ ಮಾಡಿ ಹೇಳಿರಿ!"

"ವೀರಾಗ್ರಣಿಗಳಾದ ರಜಪುತರಿಗೆ ಪೊಳ್ಳು ಬೆದರಿಕೆ ತೋರಿಸುವದರಲ್ಲಿ ಏನೂ ಅರ್ಥವಿಲ್ಲ ರಜಪುತರು ಕ್ಷಾತ್ರಧರ್ಮೋಚಿತವಾದ ಕಾರ್ಯ ಮಾಡುವಾಗ ಜೀವದ ಇಲ್ಲವೆ, ರಾಜ್ಯಸಿಂಹಾಸನದ ಲೋಭ ವ್ಯಾಮೋಹಗಳಿಗೆ ಒಳಗಾಗುವದಿಲ್ಲ ನೀನು ನಿನ್ನ ಒಡೆಯನಿಗೆ ಇಷ್ಟೇ ಹೇಳು; ಅಮರಪ್ರಸಾದನು ಪಠಾಣ ಪಕ್ಷವನ್ನವಲಂಬಿಸಿರುವನು; ಅವನ ಸಹಕಾರದ ಆಶೆ ಹಿಡಿಯುವ ಕಾರಣವಿಲ್ಲ."

ಅಮರಪ್ರಸಾದನ ಕಠೋರವಾದ ಮಾತುಗಳನ್ನು ಕೇಳಿ ಮೊಗಲ

ದೂತನು ಧೈರ್ಯಗುಂದಿದನು. ಅಮರಪ್ರಸಾದನೆಂದರೆ ಸಾಮಾನ್ಯ ಜಮೀನದಾರನೆಂದು ತಿಳಿದು ಅವನು ಮನಬಂದಂತೆ ಮಾತಾಡಿದ್ದನು. ಹುಸೇನ ಕುಲೀಖಾನನು ದರ್ಪಯುಕ್ತವಾದ ಸಂದೇಶ ಕಳುಹಿಸಿದ್ದಿಲ್ಲ; ರಾಜಾ ಹರಿನಾರಾಯಣರಂತೆ ಮೊಗಲ ಸಾಮ್ರಾಜ್ಯದಲ್ಲಿ ನಿಷ್ಠೆಯುಳ್ಳವರಾಗಿ ಸಹಕಾರಿಗಳಾಗಬೇಕೆಂದು ಅವನು ಅಮರಪ್ರಸಾದನಿಗೆ ತಿಳಿಸಿದ್ದನು. ಮೊಗಲ ದೂತನು ಸ್ವಭಾವಜನ್ಯವಾದ ಅಹಂಕಾರದಿಂದ ಮಾತಾಡಿದ್ದರಿಂದ ಅಮರಪ್ರಸಾದನ ಅಭಿಮಾನಿಯಾದ ಹೃದಯವು ಸಂತಪ್ತವಾಗಿ ಕಠೋರವಾದ ಮಾತುಗಳನ್ನಾಡಿದನು. ಅವನ ಮಾತುಗಳನ್ನು ಕೇಳಿ ಮೊಗಲ ದೂತನು ಬೆರಗಾದನು. ಅವನ ಉನ್ಮತ್ತ ಭಾವವು ಪೂರಾ ನಷ್ಟವಾಯಿತು. ಆಗ ಅವನು ನಮ್ರತೆಯಿಂದ:—"ರಾಜಾ ಅಮರಪ್ರಸಾದರೆ, ಶಾಂತರಾಗಿರಿ. ನನ್ನ ಅಪರಾಧವನ್ನು ಕ್ಷಮಿಸಿರಿ. ತಮ್ಮ ಪಕ್ಷಕ್ಕೆ ಬರಬೇಕೆಂದು ಸೇನಾಪತಿಗಳು ನಿಮ್ಮನ್ನು ಬಹಳವಾಗಿ ಪ್ರಾರ್ಥಿಸಿರುವರು. ಅವರ ವಿನಂತಿಯನ್ನು ಧಿಃಕರಿಸಬೇಡಿರಿ. ತೇಜಸ್ವಿಗಳಾದ ನಿಮ್ಮ ಸ್ವಾಭಿಮಾನಯುಕ್ತ ಹೃದಯವನ್ನು ಪರೀಕ್ಷಿಸುವದಕ್ಕಾಗಿ ನಾನು ಎರಡು ಹೆಚ್ಚಿನ ಮಾತುಗಳನ್ನಾಡಿದೆನು. ಸ್ವರ್ಗಸ್ಥ ಶ್ವಶುರರಾದ ರಾಜಾ ಹರಿನಾರಾಯಣರು ಹೇಗೆ ಮೊಗಲ ಸಾಮ್ರಾಜದ ಏಕನಿಷ್ಠ ಸೇವಕರಾಗಿದ್ದರೋ, ಅವರಂತೆಯೆ ನೀವು ಆಚರಿಸುವಿರೆಂದು ಸೇನಾಪತಿಗಳೂ ಹಾಗು ಉಪಸೇನಾಪತಿಗಳಾದ ಮಹಾರಾಜಾ ತೋಡರಮಲ್ಲರೂ ವಿಶ್ವಾಸಗೊಂಡಿರುವರು."

ಮೊಗಲ ದೂತನ ಮಾತುಗಳಿಂದ ಅಮರಪ್ರಸಾದನು ಶಾಂತನಾದನು. ಯಾವ ಪಕ್ಷವನ್ನು ವಹಿಸುವದು ಶ್ರೇಯಸ್ಕರವೆಂಬ ಬಗ್ಗೆ ಅವನು ಒಂದು ಗಳಿಗೆ ಯೋಚಿಸಿದನು. ಸ್ವರ್ಗವಾಸಿಗಳಾದ ಪ್ರಭುಗಳಂತೆ ತಾನಾದರೂ ಮೊಗಲ ಸಿಂಹಾಸನದ ಏಕನಿಷ್ಠ ಸೇವಕನಾಗುವದೇ ಉಚಿತವೆಂದು ಅವನಿಗೆ ತೋರಿತು. ಆಗ ಅವನು:—"ನಾನು ಮೊಗಲರ ಪಕ್ಷವನ್ನು ಅವಲಂಬಿಸಲಿಕ್ಕೆ ಸಿದ್ಧನಾಗಿರುವೆನು. ಮೊಗಲ ಸಾಮ್ರಾಜ್ಯ ಶಕ್ತಿಗಂಜಿ ತಮ್ಮ ಪಕ್ಷಾವಲಂಬಿಯಾದೆನೆಂದು ನಿನ್ನ ಸೇನಾಪತಿಗಳು ತಿಳಿದುಕೊಳ್ಳತಕ್ಕದ್ದಲ್ಲ. ರಾಜಾ ಹರಿನಾರಾಯಣರು ಮೊಗಲರಲ್ಲಿ ನಿಷ್ಠೆಯುಳ್ಳವರಿದ್ದರು; ಅವರ ರಾಜ್ಯಕ್ಕೆ ನಾನು ಒಡೆಯನಾಗಿರುವದರಿಂದ ಅವರಂತೆ ವರ್ತನವಿಡುವದು ಶ್ರೇಯಸ್ಕರವೆಂದು ನನ್ನ ಭಾವನೆಯುಂಟು. ವಂಗೇಶ್ವರರಾದ ದಾವುದಖಾನರಿಗಿಂತ

ಮುಂಚಿತವಾಗಿ ಮೊಗಲ ಸೇನಾಪತಿಗಳು ಸಹಾಯ ಯಾಚನೆ ಮಾಡಿದ್ದ ರಿಂದ ಅವರಿಗೆ ಸಹಾಯ ಮಾಡಲಿಕ್ಕೆ ಒಪ್ಪಿರುವೆನು. ನನ್ನ ಸೈನ್ಯವು ಸುಸಜ್ಜಿತವಿರುವದು. ನಾಳೆ ಸಸೈನ್ಯನಾಗಿ ಶಿಬಿರಕ್ಕೆ ಬರುವೆನೆಂದು ಹುಸೇನ ಕುಲೀ ಖಾನನಿಗೆ ತಿಳಿಸು."

ಮೊಗಲ ದೂತನು ಅಮರಪ್ರಸಾದನಿಗೆ ನಮಸ್ಕಾರ ಮಾಡಿ ತನ್ನ ಕುದುರೆಯನ್ನು ಸಾಗಿಸಿದನು. ಅಮರಪ್ರಸಾದನಾದರೂ ಅಶ್ವಾರೋಹಿಯಾಗಿ ದುರ್ಗವನ್ನಿಳಿದು ರಾಜಪ್ರಾಸಾದದ ಕಡೆಗೆ ತೆರಳಿದನು.

ಸುಂದರವಾದ ರಾಜಪ್ರಾಸಾದದಲ್ಲಿ ಅಮರಪ್ರಸಾದನ ರಾಣಿಯಾದ ಊರ್ಮಿಳಾದೇವಿಯು ಕುಳಿತಿದ್ದಳು. ನಿರ್ಜರಾಂಗನೆಯರನ್ನು ನಾಚಿಸುವ ಆ ಲಾವಣ್ಯವತಿಯು ನೋಡುವವರಿಗೆ ನಿರ್ಜರಾಂಗನೆಯಂತೆಯೆ ತೋರುತ್ತಿದ್ದಳು. ಆಮಲ ಕಮಲ ನಯನ ಯುಗಲವು ತಾರಕೆಗಳಂತೆ ಉಜ್ವಲವಾದದ್ದೂ, ಸುಚಾರು ಮುಖಮಂಡಲವು ವಸಂತ ಕುಸುಮರಾಶಿಯಂತೆ ಸೌಂದರ್ಯಮಯವಾದದ್ದೂ ಶರಚ್ಚಂದ್ರಮರೀಚಿಯಂತೆ ದೀಪ್ತಿಮಾನವಾದದ್ದೂ ಆಗಿತ್ತು. ಪ್ರಭಾತದಂತೆ ಸುಂದರವೂ, ಮಲಯ ಸಮೀರಸಮವಾಗಿ ಸ್ನಿಗ್ಧವೂ, ಗಂಗಾಜಲದಂತೆ ಪವಿತ್ರವೂ ಆದ ಅವಳ ಲಲಿತ ವಿಮಲ ಹಾಸ್ಯವು ನೂರಾರು ಚಂದ್ರಕಿರಣಗಳಂತೆ ಭಾಸಮಾನವಾಗುತ್ತಿತ್ತು. ಅವಳ ಮುಖಮಂಡಲವು ಮಹಿಮಾನ್ವಿತವಾಗಿತ್ತು. ರಾಜಾ ಅಮರಪ್ರಸಾದನು ದುರ್ಗವನ್ನಿಳಿದು ಹರ್ಮ್ಯಾಗ್ರವನ್ನೇರಿ ತನ್ನ ಪತ್ನಿಯ ನೆರೆಯಲ್ಲಿ ಬಂದು ನಿಂತನು. ಅವಳು ಯಾವದೋ ಒಂದು ಗಹನವಾದ ವಿಚಾರದಲ್ಲಿ ತೊಡಗಿದ್ದಳು. ಬಳಿಯಲ್ಲಿ ಪತಿಯು ನಿಂತು ಬಹಳ ವೇಳೆಯಾಗಿದ್ದರೂ ಅವನ ಕಡೆಗೆ ಊರ್ಮಿಳಾದೇವಿಯ ಲಕ್ಷ್ಯವಿದ್ದಿಲ್ಲ. ಅಮರಪ್ರಸಾದನು ಪತ್ನಿಯ ಸ್ವರ್ಗೀಯ ಸೌಂದರ್ಯಾಮೃತವನ್ನು ಯಥೇಷ್ಟವಾಗಿ ಪಾನಮಾಡಿ ತಣಿದ ಮೇಲೆ:—"ಊರ್ಮಿಳಾ!"

ರಾಣಿಯು ಆಶ್ಚರ್ಯದಿಂದ ತಿರುಗಿ ನೋಡಿದಳು. ತನ್ನ ಹೃದಯ ದೇವತೆಯು ಮುಗುಳು ನಗೆ ನಗುತ್ತ ನಿಂತದ್ದು ನೋಡಿ ಲಜ್ಜಿತಳಾಗಿ— "ಯಾವಾಗ ಬರೋಣವಾಯಿತು ಪ್ರಭುಗಳೆ?"

"ನಾನು ಬಂದು ಬಹಳ ವೇಳೆಯಾಯಿತು."

"ಬಹಳ ವೇಳೆಯಾಯಿತು? ಹಾಗಿದ್ದರೆ ಚೋರರಂತೆ ಇಷ್ಟು ವೇಳೆಯವರೆಗೆ ಏನು ಮಾಡುತ್ತಿದ್ದಿರಿ ಸ್ವಾಮಿನ್?"

"ಏನು ನೋಡುತ್ತಿದ್ದೆನೆಂದು ಕೇಳುವೆಯಾ? ನೋಡುತ್ತಿದ್ದೆನು; ಚಂದ್ರ ಕಿರಣಲಿಪ್ತವಾದ ಸುಧಾಮಯ ಮುಖಮಂಡಲವನ್ನು ನೋಡುತ್ತಿದ್ದೆನು; ಪೂರ್ಣಚಂದ್ರನ ಕಾಂತಿಯಿಂದ ಶೋಭಿಸುವ ಮುಖದಲ್ಲಿರುವ ಕುಸುಮ ಸಮವಾದ ನೇತ್ರಯುಗಲವನ್ನು ನೋಡುತ್ತಿದ್ದೆನು. ಶೋಭಾಮಯವಾದ ತನುಲತೆಯನ್ನು ನೋಡುತ್ತಿದ್ದೆನು. ಊರ್ಮಿಳೆ, ನೀನು ಸ್ವರ್ಗದಿಂದಿಳಿದ ದೇವಾಂಗನೆಯು. ನೀನು ನಿಜವಾಗಿಯೂ ಮಾನವಳಲ್ಲ, ಮಾನವಳಲ್ಲ ನಿನ್ನಂತಹ ನಾರೀರತ್ನವನ್ನು ಹೊಂದಿದ ನಾನು ಧನ್ಯನು, ಪರಮಧನ್ಯನು!"

ಪತಿಯ ಮುಖದಿಂದ ಹೊರಟ ಸೌಂದರ್ಯ ಪ್ರಶಂಸೆಯನ್ನು ಕೇಳಿ ಊರ್ಮಿಳಾದೇವಿಯು ಲಜ್ಜಾವನತಮುಖಿಯಾದಳು. ಆಗ ಅವಳು ವಿನಯದಿಂದ—"ಈ ದಾಸಿಯನ್ನು ನಾಚಿಸುವದಕ್ಕಾಗಿ ಹೀಗೆ ವಿನೋದವಾಡುವಿರೆಂಬಂತೆ ತೋರುವದು. ತೇಜಸ್ವಿಗಳಾದ ನಿಮ್ಮಂತಹರ ಚರಣಸೇವೆಯ ಸುಯೋಗವು ಘಟಿಸಿದ್ದರಿಂದ ನಾನು ಪರಮಧನ್ಯಳಾಗಿರುವೆನು."

ಅಮರಪ್ರಸಾದನು ಪ್ರೇಮದಿಂದ ಬಾಹುಗಳನ್ನು ಮುಂದೆ ಮಾಡಿ ರಾಣಿಯನ್ನು ಆಲಿಂಗಿಸಿ ಆನಂದಯುಕ್ತವಾದ ಧ್ವನಿಯಿಂದ:—"ಊರ್ಮಿಳೆ, ನೀನು ದಾಸಿಯಲ್ಲ; ನನ್ನ ಹೃದಯ ರಾಜ್ಯದ ಅಧೀಶ್ವರಿಯು!" ಎಂದು ನುಡಿದು ಅವಳನ್ನು ಮೆಲ್ಲಗೆ ಚುಂಬಿಸಿದನು.

ಪ್ರೇಮಾಲಿಂಗನ ಚುಂಬನಗಳಿಂದ ರಾಣಿಯ ದೇಹವು ಕಂಪಾಯಮಾನವಾಯಿತು. ಕೆಲವು ವೇಳೆಯ ವರೆಗೆ ಅವಳು ದೇಹಭಾನವಿಲ್ಲದವಳಾಗಿದ್ದಳು. ಎಷ್ಟೋ ಹೊತ್ತಿನ ಮೇಲೆ ಅವಳು ತನ್ನ ದೇಹವನ್ನು ಪತಿಯ ಬಾಹುಪಾಶದಿಂದ ಬಿಡುಗಡೆ ಮಾಡಿಕೊಂಡು:—"ಪ್ರಭುಗಳೆ, ತಮ್ಮ ದಾಸಿಯೆಂದು ಹೇಳಿಸಿಕೊಳ್ಳುವದರಲ್ಲಿಯೆ ನನಗೆ ಗೌರವವಿರುವದು. ನೀವು ನನ್ನ ಹೃದಯ ದೇವತೆಗಳು. ಪೂಜನೀಯರು." ಎಂದು ನುಡಿದು ಮೆಲ್ಲಗೆ:—"ಸ್ವಾಮಿನ್, ನನ್ನದೊಂದು ಪ್ರಾರ್ಥನೆಯುಂಟು."

ಅಮರಪ್ರಸಾದನು ಕೃತ್ರಿಮ ಕ್ರೋಧದಿಂದ:—"ನಾನು ನಿನ್ನ ಸ್ವಾಮಿಯಿರುವೆನು; ಹೃದಯ ದೇವತೆಯಿರುವೆನು. ಹೀಗಿದ್ದು ನೀನು ಯಾವ ಅಧಿಕಾರದಿಂದ ನನ್ನ ಬಾಹುಪಾಶವನ್ನು ಬಿಡಿಸಿಕೊಂಡೆ? ಮೊದಲು ಈ ಮಾತಿನ ಪರಿಷ್ಕಾರವಾಗಲಿ; ಹಿಂದಿನಿಂದ ನಿನ್ನ ಪ್ರಾರ್ಥನೆಯ ಬಗ್ಗೆ ವಿಚಾರಮಾಡುವೆನು!"

ಪ್ರೇಮಪೂರ್ಣ ಹೃದಯಿಯಾದ ಊರ್ಮಿಳಾದೇವಿಯು ಮಂದಹಾಸ

ದಿಂದ:--"ಪ್ರಭೋ, ಈ ಮಾತಿನಲ್ಲಿ ನಾನು ಅಪರಾಧಿನಿಯಿರುವೆನೆಂದು ಒಪ್ಪಿಕೊಳ್ಳುವೆನು. ನನ್ನ ಈ ಅಪರಾಧಕ್ಕೆ ಯೋಗ್ಯ ಶಾಸನವನ್ನು ವಿಧಿಸಲಿಕ್ಕೆ ನೀವು ಬಾಧ್ಯರೇ ಇರುವಿರಿ."

ಅಮರಪ್ರಸಾದನು ಪುಷ್ಪಮಾಲೆಯನ್ನು ಕೈಯಲ್ಲಿ ತೆಗೆದುಕೊಂಡು ರಾಣಿಯ ಎರಡೂ ಕೈಗಳನ್ನು ಆ ಮಾಲೆಯಿಂದ ಬಂಧಿಸಿ:—"ನಿನ್ನ ಅಪರಾಧಕ್ಕೆ ಇದೇ ಶಾಸನವು ಅಪರಾಧಿನಿ, ನನ್ನ ಆಜ್ಞೆಯಾಗುವವರೆಗೆ ಈ ಬಂಧನೆಯನ್ನು ನಿವಾರಿಸಿಕೊಳ್ಳಬೇಡ" ಎಂದು ನುಡಿದು—"ಇದೇನು? ನಾನು ವಿಧಿಸಿದ ಶಾಸನದಿಂದ ನಿನ್ನ ಸಹಜಸಿದ್ಧವಾದ ಅಂಗಸೌಂದರ್ಯವು ಮತ್ತಿಷ್ಟು ಹೆಚ್ಚಾಯಿತು!"

"ಪ್ರೇಮಪೂರ್ಣವಾದ ಶಾಸನದಿಂದ ಈ ಪ್ರಕಾರವಾಗಿ ಸೌಂದರ್ಯ ವೃದ್ಧಿಯಾಗುತ್ತಿರುವದುಂಟು." ಊರ್ಮಿಳಾದೇವಿಯು ನಗುತ್ತ ನುಡಿದಳು.

"ಪ್ರಿಯೆ, ನಿನ್ನ ವಿನಂತಿಯೇನಿರುವದೆಂಬದನ್ನು ಈಗ ಹೇಳು."

"ಅಪರಾಧಿನಿಯು ತನ್ನ ಅಪರಾಧಕ್ಕಾಗಿ ಕ್ಷಮೆಯನ್ನು ಬೇಡುತ್ತಿರುವಳು. ನೀವು ಅವಳನ್ನು ಬಂಧನೆಯಿಂದ ಮುಕ್ತಗೊಳಿಸಲಾರಿರಾ?"

"ಒಳ್ಳೇದು. ನಾನು ನಿನ್ನ ಪ್ರಾರ್ಥನೆಯಂತೆ ಮುಕ್ತಗೊಳಿಸುವೆನು" ಎಂದು ನುಡಿದು ಅಮರಪ್ರಸಾದನು ಅವಳ ಕೈಗೆ ಕಟ್ಟಿದ ಪುಷ್ಪಮಾಲೆಯನ್ನು ಬಿಚ್ಚಿ: ಇನ್ನೊಮ್ಮೆ ಈ ಬಗೆಯ ಪ್ರಮಾದವಾಗದಂತೆ ಜಾಗ್ರತೆಗೊಳ್ಳತಕ್ಕದ್ದು.

"ಮಹಾರಾಜರ ಆಜ್ಞೆಯು ಶಿರಸಾಮಾನ್ಯವಿರುವದು."

"ನಿನ್ನ ವಿನಂತಿಯೇನಿರುವದೆಂಬದನ್ನು ತಿಳಿಸಲಿಲ್ಲವಲ್ಲ?"

"ಮೊಗಲ ಪಠಾಣರಲ್ಲಿ ಭೀಷಣವಾದ ಯುದ್ಧವು ನಡೆಯತಕ್ಕದ್ದಿರುವದು."

"ನಿಜವು. ಮುಂದೇನು?"

"ಭಾವೀ ಸಂಗ್ರಾಮದಲ್ಲಿ ನೀವು ಯಾರ ಪಕ್ಷವನ್ನು ವಹಿಸುವಿರಿ?"

"ನೀನು ಹೀಗೆ ಕೇಳುತ್ತಿರುವ ಉದ್ದೇಶವೇನು?"

"ಉದ್ದೇಶವಿಲ್ಲದಿದ್ದರೆ ಕೇಳುವದಿಲ್ಲ. ಸ್ವಾಮಿನ್, ನೀವು ಇದು ವರೆಗೆ ಯಾರ ಪಕ್ಷವನ್ನೂ ಸೇರಿರದಿದ್ದರೆ ಪಠಾಣರಿಗೆ ಸಹಾಯ ಮಾಡಬೇಕು."

"ಪಠಾಣರಿಗೆ ಏಕೆ ಸಹಾಯ ಮಾಡಬೇಕು? ಅವರು ನಮಗೆ ಸಂಬಂಧಿಕರೇನು?"

"ಪಠಾಣರು ನಮಗೆ ಸಂಬಂಧಿಕರಿರುವರು. ನವಾಬ ದಾವುದಖಾನರು ನನ್ನ ಮಾನಸ ಪುತ್ರರು. ನೀವು ನಿಷ್ಪಕ್ಷಪಾತಿಗಳಾಗಿರಿ; ಇಲ್ಲವೆ ಶಸ್ತ್ರ ಹಿಡಿದು ಪಠಾಣರಿಗೆ ಆಶ್ರಯವೀಯಲಿಕ್ಕೆ ಸಿದ್ಧರಾಗಿರಿ. ಮೊಗಲರಿಗೆ ಯಾವ ವಿಧದ ಸಹಾಯವನ್ನೂ ಮಾಡಬಾರದೆಂದು ಈ ದಾಸಿಯ ಪ್ರಾರ್ಥನೆ."

"ಪ್ರೇಯಸಿ! ನಿನ್ನ ಮಾತಿನಂತೆ ನಡೆಯಲಿಕ್ಕೆ ಸಾಧ್ಯವಿಲ್ಲ. ನಾನು ನನ್ನ ಸ್ವರ್ಗೀಯ ಸ್ವಾಮಿಗಳಾದ ಹರಿನಾರಾಯಣರ ಚರಣ ಚಿಹ್ನಾನುಸಾರ ವಾಗಿ ಕಾರ್ಯ ಮಾಡುವೆನು; ಇದಲ್ಲದೆ, ಮೊಗಲರಿಗೆ ಸಹಾಯ ಮಾಡುವ ಬಗ್ಗೆ ವಚನಬದ್ಧನಾಗಿರುವೆನು ರಾಣಿ!"

"ಪ್ರಭೋ, ಮೊಗಲರಿಗೆ ಸಹಾಯ ಮಾಡುವ ಬಗ್ಗೆ ವಚನಬದ್ಧರಾಗಿ ರುವಿರಾ? ಮುಂದೆ ಗತಿಯೇನು? ಪಠಾಣರಿಗೆ ಸಹಾಯ ಮಾಡಬೇಕೆಂದು ನನ್ನ ದೃಢಸಂಕಲ್ಪವಾಗಿ ಹೋಗಿದೆ."

"ಪ್ರಿಯತಮೆ, ತಪ್ಪಲ್ಲ; ತಪ್ಪಲ್ಲ. ಕಾತರಗೊಳ್ಳದಿರು. ರಜಪುತರ ವಾಕ್ಯಗಳು ಸತ್ಯವಾದವುಗಳಿರುವವು. ಅವರ ಸತ್ಯವು ಹಿಮಾಚಲದಂತೆ ಸ್ಥಿರತ್ವವುಳ್ಳದ್ದೂ ಉನ್ನತವಾದದ್ದೂ ಇರುವದು. ನೂರಾರು ವಜ್ರಾಘಾತ ಗಳಿಂದ ಸಹ ಅದು ಚಲಿಸಲಾರದು. ಆಶ್ರಿತರ ರಕ್ಷಣೆ ಮಾಡುವದು ಸತ್ಕು ಲದ ರಜಪುತರ ಕರ್ತವ್ಯವಾಗಿದೆ. ಚಂದ್ರ-ಸೂರ್ಯರು ಚಲವಿಚಲವಾಗ ಬಹುದು; ಆದರೆ ವೀರ ರಜಪುತರು ಎಂದೂ ಕರ್ತವ್ಯವಿಚಲಿತರಾಗಲಾರರು. ರಾಣಿ, ನೀನು ರಾಜನಂದಿನಿಯಿರುವೆ; ರಜಪುತ ಸಹಧರ್ಮಿಣಿಯಿರುವೆ. ನೀನು ನಿನ್ನ ಕರ್ತವ್ಯಪಾಲನೆ ಮಾಡಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರ ಳಾಗು. ರಜಪುತ ಲಲನೆಯರ ಗೌರವರಶ್ಮಿಯಿಂದ ಸಂಸಾರವು ಪ್ರಕಾಶಮಾನ ವಾಗಲಿ. ಲಬ್ಧಕೀರ್ತಿಪ್ರತಿಷ್ಠಳಾದ ನಿನ್ನನ್ನು ನೋಡಿ ನಾನು ಪರಮಧನ್ಯ ನೆಂದು ಭಾವಿಸುವೆನು. ನಾನು ನಿನಗೆ ಯಾವ ಬಗೆಯ ಸಹಾಯ ಮಾಡುವ ದಿಲ್ಲ. ಅಮರಪ್ರಸಾದನು ಸ್ತ್ರೀಯ ಮಾತು ಕೇಳಿ ವಿಶ್ವಾಸಘಾತ ಮಾಡಿ, ಪಠಾಣ ಪಕ್ಷಪಾತಿಯಾದನೆಂಬ ಅಪವಾದ ಹೊರಲಾರೆನು; ನನ್ನ ವಿಶುದ್ಧ ವಾದ ಕೀರ್ತಿಗೆ ಕಲಂಕ ಹಚ್ಚಲಾರೆನು. ಶಕ್ತಿಮಯಿ, ನೀನೇನು ಸಾಮಾನ್ಯ ಳಲ್ಲ ಆಶ್ರಯಾರ್ಥಿಗಳ ರಕ್ಷಣೆಗಾಗಿ ಅಗ್ರೇಸರತ್ವ ಹೊಂದಲಿಕ್ಕೆ ಅನುಮಾ ನಿಸಬೇಡ. ನಾನು ನಿನಗೆ ಸಹಾಯ ಮಾಡದಿದ್ದರೂ, ನವಾಬ ದಾವುದಖಾ ನನು ವಿಜಯಿಯಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುವೆನು. ಭಾವೀ

ಯುದ್ಧದಲ್ಲಿ ನೀನು ಮರಣ ಹೊಂದಿದರೆ, ಆಜೀವನಾಗಿ ನಿನ್ನ ಗುಣಗಾನ ಮಾಡುತ್ತಲಿರುವೆನು; ಒಂದು ವೇಳೆ ನನಗೆ ಮರಣ ಬಂದರೆ, ಜನ್ಮಜನ್ಮಾಂತರದಲ್ಲಾದರೂ ನೀನೇ ಅರ್ಧಾಂಗಿನಿಯಾಗಬೇಕೆಂದು ಅಂತ್ಯಕಾಲದಲ್ಲಿ ಪರಮಾತ್ಮನನ್ನು ಪ್ರಾರ್ಥಿಸುವೆನು"

"ಪ್ರಭುಗಳೆ, ಆಶ್ರಿತರ ರಕ್ಷಣೆ ಮಾಡಲಿಕ್ಕೆ ಸಮರ್ಥಳಾಗಬೇಕೆಂದು ಆಶೀರ್ವದಿಸಿರಿ; ಯಾವ ಕಾರಣದಿಂದಲೂ ಕರ್ತವ್ಯಭ್ರಷ್ಟಳಾಗಬಾರದೆಂದು ಶುಭಾಶೀರ್ವಾದವೀಯಿರಿ!"

"ಪ್ರಿಯೆ, ಕರ್ತವ್ಯ ಪಾಲನೆಯಲ್ಲಿ ನೀನು ರಜಪುತ ಲಲನೆಯರಿಗೆ ಆದರ್ಶವಾಗಬೇಕೆಂದು ಆಶೀರ್ವದಿಸುವೆನು."

"ರಾಣಿಯು ಭಕ್ತಿಪೂರ್ಣಹೃದಯಿಯಾಗಿ ಪತಿಯ ಚರಣರೇಣುಗಳನ್ನು ಮಸ್ತಕದ ಮೇಲಿರಿಸಿಕೊಂಡಳು

---

೧೨ನೆಯ ಪರಿಚ್ಛೇದ.

ಮನೋಹರವೂ ಹೃದಯರಂಜನಕಾರಿಯೂ ನಯನಾಭಿರಾಮವೂ ಆದ ಸುಂದರವಾದ ಪುಷ್ಪೋದ್ಯಾನದಲ್ಲಿ ಸಂಗಮರವರಿಯ ವೇದಿಕೆಯ ಮೇಲೆ ಒಬ್ಬ ಯುವತಿಯು ಕುಳಿತಿದ್ದಳು. ಆ ಉದ್ಯಾನವು ನಂದನವನವನ್ನು ಧಿಃಕರಿಸುವಂತಿದ್ದರೂ, ಆ ಯುವತಿಯ ಲಕ್ಷ್ಯವು ವನಶೋಭೆಯನ್ನು ನಿರೀಕ್ಷಿಸುವದರಲ್ಲಿ ತೊಡಗಿದ್ದಿಲ್ಲ. ಲತಾಮಂಟಪದಲ್ಲಿ ಅರಳಿದ ಪುಷ್ಪಮಂಜರಿಗಳ ಕಡೆಗೂ, ಸಂಗಮರವರಿಯಿಂದ ನಿರ್ಮಿಸಿದ ಕುಂಡದಲ್ಲಿ ಪುಟಿಯುತ್ತಿರುವ ಕಾರಂಜಿಯ ಕಡೆಗೂ ಅವಳು ನೋಡುತ್ತಿರಲಿಲ್ಲ. ಕೋಗಿಲೆಯ ಶ್ರುತಿ ಮನೋಹರವಾದ ಧ್ವನಿಯು ಅವಳ ಕರ್ಣವನ್ನು ಪ್ರವೇಶಿಸುತ್ತಿರಲಿಲ್ಲ. ಅವಳ ಚಿತ್ತವು ಬೇರೆ ವಿಷಯದಲ್ಲಿ ಲೀನತೆ ಹೊಂದಿತ್ತು. ಅವಳು ತನ್ನಲ್ಲಿಯೇ ತಾನು ವಿಚಾರ ಮಾಡಲಾರಂಭಿಸಿದ್ದಳು. "ಆ ವೀರ ಮಣಿಯು ನನ್ನ ಕಣ್ಣಿಗೆ ಬೀಳಬಹುದೆ? ಆ ಆದರ್ಶ ನರಶ್ರೇಷ್ಠನು ನನ್ನನ್ನು ಮರೆತಿರಬಹುದು; ಆದರೆ ನಾನು ಅವನನ್ನು ಹೇಗೆ ಮರೆಯಲಿ? ಒಂದೇ ದಿನ ಒಂದೇ ಸಾರೆ ನಾನು ಅವನನ್ನು ನೋಡಿರುವೆನು; ಆದರೂ ನಾನು ಆ ಮೂರ್ತಿಯನ್ನೂ ಆ ಸುಂದರ ಸ್ವರೂಪವನ್ನೂ ಮರೆತಿಲ್ಲ. ಆಹಾ! ಅದು ಎಂತಹ ಮನಮೋಹನ ಮೂರ್ತಿಯು! ಅಂತಹ ಉಜ್ವಲವೂ, ವೀರತ್ವ ವ್ಯಂಜಕವೂ

ತೇಜಪ್ರದೀಪ್ತವೂ ಆದ ಮೂರ್ತಿಯು ತ್ರಿಭುವನದಲ್ಲಿ ಮತ್ತೆಲ್ಲಿಯೂ ದೊರೆಯಲಾರದು. ಆ ಮೂರ್ತಿಯ ಮುಖವು ಪುಣ್ಯದ ಕಾಂತಿಯಿಂದಲೂ ಪವಿತ್ರತೆಯ ಪ್ರಭೆಯಿಂದಲೂ, ದಯಾಳುತನದ ಜ್ಯೋತಿಯಿಂದಲೂ ಎಷ್ಟು ಚಿತ್ತಾಕರ್ಷಕವಾಗಿತ್ತೆಂಬದನ್ನು ಹೇಳಲಿಕ್ಕೆ ಸಾಧ್ಯವಾಗುವದೆಂತು? ಆ ಮೂರ್ತಿಯು ನನ್ನ ಕಣ್ಣೆದುರಿಗೆ ನಿಂತಿರುವದು. ಅದರ ತೇಜವು ಇನ್ನೂ ನನ್ನ ಕಣ್ಣುಗಳನ್ನು ಕುಕ್ಕಿಸುತ್ತಿರುವದು. ಔದಾರ್ಯಪೂರ್ಣವೂ ದಯಾಳುವೂ ಆದ ಆ ಮೂರ್ತಿಯು ಮಾನವನಲ್ಲ; ಅದು ನಿಜವಾಗಿ ದೈವೀ ಮೂರ್ತಿಯು. ಆ ಮೂರ್ತಿಯ ಹೆಸರು ಅಮರಪ್ರಸಾದನೆಂದಿರುವದಲ್ಲವೆ? ಹೌದು; ಹೌದು. ಹೆಸರು ಸುಂದರ, ಕಾರ್ಯ ಸುಂದರ, ಹೃದಯವೂ ಸುಂದರವೇ. ಆ ಮಹಾನುಭಾವನಾದ ಅಮರಪ್ರಸಾದನು ಸರ್ವಾಂಗಸುಂದರನು; ಸದ್ಗುಣಮಂಡಿತನು; ಪೂಜನೀಯನು; ಅವರ್ಣನೀಯನು! ತನಗೆ ವಿಪತ್ತು ಒದಗುವದೆಂಬದರ ಪರಿವೆಯಿಲ್ಲದೆ ಅವನು ನನ್ನನ್ನು ಉದ್ಧಾರ ಮಾಡಿದನು. ಇಂತಹ ಮಹಾನುಭಾವನನ್ನು ಮಾನವನೆಂದು ಕಲ್ಪಿಸುವದು ಮೂರ್ಖತನವೇ ಸರಿ ಯಾವನೋ ದೇವತೆಯು ನನ್ನನ್ನು ಉದ್ಧರಿಸುವದಕ್ಕಾಗಿ ಮರ್ತ್ಯಲೋಕದಲ್ಲಿ ಆವಿರ್ಭೂತನಾಗಿರುವನು. ದುಃಖಾಬ್ಧಿಯಲ್ಲಿ ಮುಳುಗಿ ಇಹಲೋಕದ ಆಶೆಯನ್ನೇ ತ್ಯಜಿಸಿದ್ದ ನನ್ನ ಸ್ಥಿತಿಯನ್ನು ಗಾರುಡಿಗನಂತೆ ಕ್ಷಣಮಾತ್ರದಲ್ಲಿ ಬೇರೆ ಮಾಡಿ ಬಿಟ್ಟನು. ಎಂದು ಆ ಘನವಂತನ ಭೆಟ್ಟಿಯಾಯಿತೋ ಅಂದಿನಿಂದ ಅವನು ನನ್ನ ಹೃದಯಸಿಂಹಾಸನದಿಂದ ಅಚಲನಾಗಲೊಲ್ಲನು. ಅವನ ಹೆಸರನ್ನಾದರೂ ಮರೆಯಲಿಕ್ಕೆ ಸಾಧ್ಯವಾಗದಾಗಿದೆ. ಆ ಉದಾರಧಿಯ ನಾಮಜಪವನ್ನು ದಿನಾಲು ಮಾಡಬೇಕೆಂದೂ ಆ ಪುಣ್ಯಪುರುಷನನ್ನು ದಿನಾಲು ಪೂಜಿಸಬೇಕೆಂದೂ ಇಚ್ಛೆಯಾಗುತ್ತಲಿರುವದು. ಆ ಮಹಾಮಹಿಮನು ಇನ್ನೊಮ್ಮೆ ನನ್ನ ಕಣ್ಣಿಗೆ ಬೀಳಲಿಕ್ಕಿಲ್ಲವೇನು? ಮಹಾನುಭಾವನಾದ ಅಮರಪ್ರಸಾದ, ಕರುಣಹೃದಯಿಯಾಗಿ ಕರುಣಹಾಸ್ಯಗೈಯುತ್ತ ಕರುಣದೃಷ್ಟಿಯಿಂದ ನೋಡುತ್ತ ಇನ್ನೊಮ್ಮೆ ದರ್ಶನವನ್ನು ಕೊಡು. ನನ್ನ ಪ್ರೇಮಮಯ ದೇವತೆಯೇ, ನಿನ್ನ ಸುಂದರ ರೂಪವನ್ನು ಇನ್ನೊಮ್ಮೆ ತೋರು. ಬಾ, ಪ್ರಣಯದೇವಾ, ಬೇಗ ಬಾ!'' ಎಂದು ನುಡಿಯುತ್ತ ಆ ತರುಣಿಯು ಪಾಷಾಣವೇದಿಯ ಮೇಲೆ ಬಿದ್ದು ಮೂರ್ಛಿತಳಾದಳು.

ಆ ತರುಣಿಯು ರಂಗಮಹಾಲಿನ ವಿಖ್ಯಾತ ಧನಿಯಾದ ಧನಕುಬೇರ

ರುದ್ರಪತಿಯ ಕನ್ಯೆಯು. ಅವಳ ಹೆಸರು ಶೋಭನೆಯೆಂಬದನ್ನು ವಾಚಕ ಮಹಾಶಯರು ಅರಿತಿರಬಹುದು.

ಜ್ಯೋತ್ಸ್ನಾಮಯಿಯಾದ ರಾತ್ರಿಯು. ನೀಲಾಕಾಶದಲ್ಲಿ ನಿರ್ಮಲವೂ ಶುಭ್ರವೂ ಆದ ಚಂದ್ರಿಕೆಯನ್ನು ಪಸರಿಸಿ, ಶಾಮಲ ಧರಣಿಯ ಮೇಲೆ ಶ್ವೇತತರಂಗಗಳನ್ನು ನೆಲೆಗೊಳಿಸಿ, ತೃಣದಳಗಳ ಮೇಲೆ ಮೌಕ್ತಿಕ ಬಿಂದುಗಳನ್ನು ಸ್ಥಾಪಿಸಿ, ಕುಮುದಿನಿಯರ ಮುಖವನ್ನು ಪ್ರಫುಲ್ಲಿತಗೊಳಿಸಿ, ನದಿಯ ಹೃದಯದರ್ಪಣದಲ್ಲಿ ಶುಭ್ರವೂ, ಹಾಸ್ಯಮಯವೂ, ಸ್ವಚ್ಛವೂ ಆದ ಮುಖಕಮಲವನ್ನು ನೋಡುತ್ತ ನೋಡುತ್ತ, ಕೊರಳಲ್ಲಿ ತಾರಾಹಾರಗಳನ್ನು ಧರಿಸಿಕೊಂಡು ಚಂಚಲನೂ, ಕಡುದುಷ್ಟನೂ, ವಿರಹಿದ್ರೋಹಿಯೂ ಆದ ಚಂದ್ರಮನು ಶೋಭನೆಯ ಅವಸ್ಥೆಯನ್ನು ನೋಡಿ ಆಕಾಶಪಥದಲ್ಲಿ ಗಹಗಹಿಸಿ ನಗತೊಡಗಿದ್ದನು. ಈ ಸಮಯದಲ್ಲಿ ಒಬ್ಬ ಸುಂದರ ಕಿಶೋರಿಯು ಮೆಲ್ಲಮೆಲ್ಲಗೆ ವೇದಿಕೆಯ ಸಮೀಪಕ್ಕೆ ಬಂದು:-"ಸಖೀ, ಶೋಭನಾ!"

ಶೋಭನೆಯು ಸಾವಧಗೊಂಡು ಎದ್ದು ಕುಳಿತು ಮೆಲ್ಲಗೆ:—"ಯಾರು ಸಖೀ ಕಾಮನಾ!"

"ಹೌದು; ಅಕ್ಕಾ, ನಾನು ಕಾಮನೆಯಹುದು. ನಿನ್ನ ಮುಖಚರ್ಯೆಯು ಶುಷ್ಕವೂ ಉದಾಸವೂ ಆದ ಕಾರಣವೇನು?"

"ಕಾಮನೆ, ನನ್ನ ದುಃಖನೈರಾಶ್ಯಗಳನ್ನು ವಿಚಾರಿಸಿ ನೀನು ಮಾಡುವದೇನು?"

"ಶೋಭನೆ, ನೀನು ನಿನ್ನ ಮನೋಗತವನ್ನು ನನ್ನೆದುರಿಗೆ ಉಸುರುವದಿಲ್ಲವೆ? ನಾನು ನಿನಗೆ ಇಷ್ಟು ಪರಕೀಯಳಾದೆನೇನು?"

"ಕಾಮನೆ!" ಶೋಭನೆಯು ಕಾತರಕಂಠದಿಂದ:--"ನೀನು ಪರಕೀಯಳಲ್ಲ, ಸ್ವಕೀಯಳು. ನನ್ನ ಔದಾಶೀನ್ಯದ ಕಾರಣ ಕೇಳುವದರಿಂದ ನಿನಗೆ ಲಾಭವಿಲ್ಲ. ಅದನ್ನು ನೆನಪು ಮಾಡಿಕೊಂಡರೆ ನನಗೂ ಕ್ಲೇಶವಾಗುವದು. ನನ್ನ ಸರ್ವಸ್ವವೂ ಹೊರಟು ಹೋಗಿದೆ."

"ಶೋಭನೆ, ಇದೇನು ವಿಚಿತ್ರವಾದ ಮಾತುಗಳನ್ನಾಡುವೆ? ಧನಕುಬೇರನ ಪುತ್ರಿಯಾದ ನಿನಗೆ ಯಾವ ಕೊರತೆಯುಂಟಾಗಿದೆ? ನಿನ್ನ ಸರ್ವಸ್ವವೂ ಹೊರಟು ಹೋಗಿರುವದೆ?"

"ಹೌದು, ಹೋಗಿದೆ. ನನ್ನ ಸರ್ವಸ್ವವೂ ಹೋಗಿದೆ. ನನ್ನ ಹೃದಯ

ಜ್ಯೋತಿಯೂ, ಆಮೋದವೂ, ಆಹ್ಲಾದವೂ, ಸುಖ-ಶಾಂತಿಗಳೂ ಹೋಗಿವೆ. ನೇತ್ರಗಳ ಪ್ರಕಾಶವೂ, ಹೃದಯದ ತರಂಗವೂ, ಜೀವನದ ಸರ್ವಸ್ವವೂ ಹೋಗಿದೆ."

"ಸಖಿ, ನಿನ್ನ ಮಾತಿನ ಅರ್ಥವಾಗಲೊಲ್ಲದು. ಚನ್ನಾಗಿ ಬಿಚ್ಚಿ ಹೇಳ ಬಾರದೆ?"

"ಶಾಮನೆ, ಏನು ಹೇಳಲಿ? ಹೇಗೆ ಹೇಳಲಿ? ಹೃದಯವನ್ನು ಸುಟ್ಟು ಭಸ್ಮೀಭೂತ ಮಾಡುವ ಘಟನೆಯನ್ನು ಹೇಳುವದರಿಂದ ಲಾಭವೇನು? ನನ್ನ ಹೃದಯವನ್ನು ಸೆಳೆದೊಯ್ದ ಪ್ರಸಂಗದ ವರ್ಣನೆಯನ್ನು ಹೇಗೆ ಮಾಡಲಿ?"

"ಸಹಿಸು, ಸಹಿಸು; ಶೋಭನೆ, ದುಃಖವನ್ನು ಸಹಿಸು. ಸುಖ-ಶಾಂತಿಗಳ ಬೀಡಾಗಿದ್ದ ನಿನ್ನ ಹೃದಯವನ್ನು, ದುಃಖಮಯ ಮಾಡಿದ ಪ್ರಸಂಗವನ್ನು ನಿನ್ನ ಬಾಲಸಖಿಯಾದ ನನ್ನ ಮುಂದೆ ಹೇಳಲಾರೆಯಾ? ದುಃಖಿತ ಹೃದಯಿಗಳು ತಮ್ಮ ವೃತ್ತಾಂತವನ್ನು ಎರಡನೆಯವರ ಮುಂದೆ ಉಸುರಿದರೆ ದುಃಖಭಾರವು ಕಡಿಮೆಯಾಗುವ ಸಂಭವವುಂಟು. ಹೇಳು, ಹೇಳು, ಗಟ್ಟಿ ಮನಸ್ಸು ಮಾಡಿ ನಿನ್ನ ದುಃಖಪ್ರಸಂಗದ ವೃತ್ತಾಂತವನ್ನು ಹೇಳು."

"ಶಾಮನೆ, ನಾನು ಒಮ್ಮೆ ಸುಲಿಗೆಗಾರರ ಕೈಯಲ್ಲಿ ಸಿಲುಕಿ, ಮಹಾ ವಿಪತ್ತಿನಲ್ಲಿ ಬಿದ್ದಿದ್ದೆನು; ನರಾಧಮನಾದ ಸುಲಿಗೆಗಾರನು ನನ್ನ ನಾರೀ ಗೌರವವನ್ನು ಪದಾಘಾತಗೊಳಿಸಲುದ್ಯುಕ್ತನಾಗಿದ್ದನು; ಆ ಸಮಯದಲ್ಲಿ ಒಬ್ಬ ತೇಜಸ್ವಿಯಾದ ವೀರ ಪುರುಷನು ನನ್ನನ್ನು ಆ ದಸ್ಯುವಿನ ಕೈಯಿಂದ ಉದ್ಧಾರ ಮಾಡಿದನು. ಆಹಾ! ಆ ಮೂರ್ತಿಯ ಗುಣವನ್ನೂ ರೂಪವನ್ನೂ ವ್ಯಕ್ತ ಮಾಡಲಿಕ್ಕೆ ಭಾಷೆಯಲ್ಲಿ ಶಬ್ದಗಳು ದೊರೆಯಲೊಲ್ಲವು....."

"ಶೋಭನೆ, ನೀನು ಹೇಳುತ್ತಿರುವ ವೃತ್ತಾಂತವು ಆನಂದಪರ್ಯವಸಾಯಿಯಾಗಿರುವದು; ಆದರೆ ಈ ವೃತ್ತಾಂತಕ್ಕೆ ನೀನು ಹೃದಯವನ್ನು ಸುಡುವ ಘಟನೆಯೆಂದು ಹೆಸರಿಡುವೆಯಲ್ಲ?"

"ಆನಂದಪರ್ಯವಸಾಯಿಯಾದ ಘಟನೆಯೇ ಈಗ ಹೃದಯವನ್ನು ಸುಡುತ್ತಿರುವದು. ಆ ವೀರ ಪುರುಷರಾದ ಅಮರಪ್ರಸಾದರು ಒಬ್ಬರೇ ಸುಲಿಗೆಗಾರರೊಡನೆ ಕಾದಿ ನನ್ನನ್ನು ಮುಕ್ತಗೊಳಿಸಿದ್ದರಿಂದ ನನ್ನ ಮನಸ್ಸಿನ ಸ್ಥಿತಿಯು ಹೇಗಾಗಿರಬಹುದು? ಅವರೇನು ಸಾಮಾನ್ಯರೆ? ಗುಣ-ರೂಪಗಳಲ್ಲಿ ಅವರಿಗೆ ಸರಿಯಾದವರು ಈ ಆರ್ಯಾವರ್ತದಲ್ಲಿ ಯಾರೂ ಇರಲಿಕ್ಕಿಲ್ಲ. ಸಚ್ಚ

ರಿತರಾದ ಅವರ ವರ್ಣನೆಯನ್ನು ಎಷ್ಟು ಮಾಡಿದರೂ ಕಡಿಮೆಯೇ! 'ರಜಪುತರು ತಾವು ಮಾಡಿದ ಉಪಕಾರಕ್ಕಾಗಿ ಪ್ರತಿಫಲವನ್ನು ಇಚ್ಛಿಸುವದಿಲ್ಲ.' ಎಂಬ ಅವರ ಮಾತನ್ನು ಕೇಳಿದಾಗಂತೂ ನಾನು ಅತಿಯಾಗಿ ಮುಗ್ಧಳಾದೆನು. ಸಖಿ, ನನ್ನ ಹೃದಯುವು ಸಹಜವಾಗಿ ವಿಕಾರವಶವಾಗುವಂತಹದೆ? ನಾನು ಸ್ವತಂತ್ರಳು; ಸ್ವಾಭಿಮಾನಿಯು. ನನಗೆ ನನ್ನ ಸೌಂದರ್ಯದ ವಿಷಯುವಾಗಿ ಹೆಮ್ಮೆ ಬಹಳ. ವನಪುಷ್ಪಕಲಿಕೆಯಂತೆ ಸೊಬಗುಗೊಂಡು, ಪುಷ್ಪಗಳಂತೆ ಸುಗಂಧ ಬೀರುತ್ತ ಕೊನೆಗೆ ಪುಷ್ಪಸಮಾನವಾಗಿ ಸೌಂದರ್ಯ ಸೌರಭಗಳನ್ನು ತ್ಯಾಗ ಮಾಡಿ ಬಿಟ್ಟರಾಯಿತು. ಈ ತನುವಲ್ಲರಿಯನ್ನು ಯಾವ ಪುರುಷನ ಸ್ಪರ್ಶದಿಂದ ಕಲಂಕಿತಗೊಳಿಸಬಾರದು; ಮೊದಲಾದ ವಿಚಾರಗಳು ನನ್ನಲ್ಲಿ ನೆಲೆಗೊಂಡಿದ್ದವು. ಅಮರಪ್ರಸಾದರ ದರ್ಶನವಾದ ಮೇಲೆ, 'ವಿವಾಹವಾಗಬಾರದು; ಯಾವ ಪುರುಷನಿಗೂ ಹೃದಯದಾನ ಮಾಡಬಾರದು; ಪುರುಷೋಪಾಸಕಳಾಗಿ ಪುರುಷಸೇವೆ ಮಾಡುತ್ತ ಸ್ವಚ್ಛಂದವೃತ್ತಿಗೂ ಸ್ವಾಭಿಮಾನಕ್ಕೂ ಭಂಗತಂದುಕೊಳ್ಳಬಾರದು' ಮೊದಲಾದ ವಿಚಾರಗಳು ನಾಶಹೊಂದಿ, ಯಾ-ವಾಗ ಆ ಮಹಾಪುರುಷನ ಚರಣಗಳಿಗೆ ಆತ್ಮಸರ್ವಸ್ವವನ್ನರ್ಪಿಸುವೆನೋ, ಯಾವಾಗ ಆ ದೈವೀ ಪುರುಷನ ಸಾನ್ನಿಧ್ಯವನ್ನು ಹೊಂದುವೆನೋ ಎಂಬಂತಾಗಿ ಮನಸ್ಸು ಕುದಿಯತೊಡಗಿದೆ."

"ಸಖಿ, ತಿಳಿಯಿತು. ನಿನ್ನ ಹೃದಯದಲ್ಲಿ ಅಮರಪ್ರಸಾದರ ಮೂರ್ತಿಯು ಪ್ರತಿಷ್ಠಾಪನೆಯಾಗಿರುವದೆಂಬದು ತಿಳಿಯಿತು. ಅದಕ್ಕಾಗಿ ನೀನು ಬಹಳ ಕುದಿಯುತ್ತಿರುವೆ."

"ಸಖಿ, ಕಾಮುನೆ, ಏಕೆ ಕುದಿಯಬಾರದು? ಮದನಸಮರೂಪವಂತರೂ, ಭೀಮಪರಾಕ್ರಮಿಗಳೂ, ಉದಾರರೂ ಆದ ಅಮರಪ್ರಸಾದರು ನನ್ನ ಹೃದಯುವನ್ನು ಸೆಳೆದುಕೊಂಡು ಹೋಗಿ, ಇದುವರೆಗೆ ದರ್ಶನವನ್ನು ಕೊಡದಿರುವದರಿಂದ ನನ್ನ ಮನಸ್ಸು ಏಕೆ ದುಃಖಕಾತರಗೊಳ್ಳಬಾರದು? ಎಷ್ಟೋ ಪುರುಷರು ಸ್ತ್ರೀದಾಸರಾಗಿ, ಸ್ತ್ರೀಯ ಕೈಯೊಳಗಿನ ಸೂತ್ರದ ಗೊಂಬೆಗಳಂತೆ, ಏಳೆಂದಾಗ ಏಳುವದು, ಕುಳಿತುಕೊಳ್ಳ ಹೇಳಿದಾಗ ಕುಳಿತುಕೊಳ್ಳುವದು ಮಾಡುತ್ತ, ರಮಣಿಯ ವಶಲುವಾಗಿ ವಿವೇಕ-ಕರ್ತವ್ಯಗಳನ್ನು ತ್ಯಾಗ ಮಾಡುವರು; ಆದರೆ ತೇಜಸ್ವಿಗಳಾದ ಅಮರಪ್ರಸಾದರು ತಮ್ಮ ಗುಣಪ್ರಭಾವದಿಂದ ಸ್ತ್ರೀಯರನ್ನು ಸೇವಾತತ್ಪರರನ್ನಾಗಿ ಮಾಡುವಷ್ಟು ಯೋಗ್ಯತೆಯುವ

ರಿರುವರು. ಅವರ ದರ್ಶನವಾದಾಗಿನಿಂದ ನನ್ನ ಭ್ರಮೆಯೂ ಅಹಂಕಾರವೂ ತೊಲಗಿದವು. ಸ್ವಾಭಿಮಾನವೂ ಸ್ವಾತಂತ್ರ್ಯದ ಉತ್ಕಟೇಚ್ಛೆಯೂ ದೂರವಾದವು. ಕಾಮಿನೆ, ಅಮರಪ್ರಸಾದರ ಸನ್ನಿಧಿಯನ್ನು ಹೊಂದಿದ ಹೊರತು ನನಗೆ ಮನಶ್ಶಾಂತಿಯು ಲಭಿಸುವಂತಿಲ್ಲ. ಮನೆಯಲ್ಲಿ ಕುಬೇರನಂತಹ ಐಶ್ವರ್ಯವೂ, ದಾಸದಾಸಿಯರೂ, ವಿಲಾಸಸಾಮಗ್ರಿಗಳೂ ಇದ್ದರೂ ನನಗೆ ಸುಖವು ಲಭಿಸುವಂತಿಲ್ಲ. ನಾನು ಪ್ರಣಯಾಂಧಳಾಗಿರುವೆನು."

"ಪ್ರೇಮದ ನಿಯಮವೇ ಹಾಗಿರುವದು. ಪ್ರೇಮದ ಪ್ರಭಾವದಿಂದ ಮನುಷ್ಯರು ಅಂಧರಾಗುವರು. ಅವರ ಮಹತ್ವವು ಅತಿಶಯವಾದದ್ದಿರುವದು. ಪ್ರಣಯಾಂಧರು ಪಾತ್ರಾಪಾತ್ರಗಳ ಹಾಗು ಜಾತಿಭೇದಗಳ ವಿಚಾರ ಮಾಡುವದಿಲ್ಲ. ವಿಘ್ನವ್ಯಾಹತಿಗಳ ಕಡೆಗೆ ಲಕ್ಷ್ಯಗೊಡುವದಿಲ್ಲ. ದ್ರುತಗತಿಯ ನದಿಯು ಸಾಗರವನ್ನು ಸೇರುವಂತೆ ಪ್ರಣಯಿಗಳು ಪರಸ್ಪರರ ಕಡೆಗೆ ಧಾವಿಸುತ್ತಾರೆ ಸ್ನೇಹವು ಸ್ವರ್ಗೀಯ ವಸ್ತುವು. ನೀನು ಅಮರಪ್ರಸಾದರಲ್ಲಿ ಪ್ರಣಯವುಳ್ಳವಳಾಗಿರುವೆ; ಆದರೆ ನಿಷ್ಕಾಮ ಪ್ರೇಮದಿಂದ ನಡೆದರೆ ಕೀರ್ತಿವಂತಳಾಗುವೆ; ಆದರೆ ಸ್ವಸುಖಕ್ಕಾಗಿ ಮನಸ್ಸು ಮಾಡಿದರೆ ಅನ್ಯರ ಸುಖವನ್ನು ಸೂರೆಗೊಂಡ ಪಾತಕವೊದಗುವದು ಅದಕ್ಕಾಗಿ ನಿನಗೆ ಹೇಳುವದೇನಂದರೆ, ನೀನು ಅಮರಪ್ರಸಾದರಲ್ಲಿ ಭಕ್ತಿಯನ್ನಿಡು; ಅವರನ್ನು ಪೂಜಿಸು; ಆದರೆ ಅವರ ಹೃದಯ ಚೌರ್ಯ ಮಾಡಿ, ಅನ್ಯರನ್ನು ದುಃಖದಲ್ಲಿ ಕೆಡಹಬೇಡ"

"ಕಾಮಿನೆ, ಇದೇನು ಮಾತಾಡುವೆ? ನಾನು ಅಮರಪ್ರಸಾದರ ಪೂಜ್ಯಚರಣಗಳ ದಾಸಿಯಾದರೆ ಅನ್ಯರದೇನು ಕೆಡುವದು?"

"ಕೆಡುವದೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬಾರದಿದ್ದರೂ ಕೆಟ್ಟೀತೆಂಬ ಭಯ. ಒಂದು ವೇಳೆ ಕೆಡದಿದ್ದರೂ ಕೆಡದಿರಬಹುದು."

"ನಿನ್ನ ಮಾತಿನ ಅರ್ಥವಾಗಲೊಲ್ಲದು."

"ಶೋಭನೆ, ನೀನು ಅಮರಪ್ರಸಾದರ ಭಕ್ತಳಿರುವೆ; ಆದರೆ ಅಮರಪ್ರಸಾದರು ಒಬ್ಬ ಸ್ವರ್ಗೀಯ ಸುಂದರಿಯ ಉಪಾಸಕರಾಗಿರುವರು. ನೀನು ನಿನ್ನ ಸಾಮರ್ಥ್ಯದಿಂದ ವಿಜಯ ಹೊಂದುವೆಯಾ?"

"ಏನು? ಅಮರಪ್ರಸಾದರು ಒಬ್ಬ ನಿರ್ಜರಾಂಗನೆಯ ಪ್ರೇಮವಶರಾಗಿರುವರೆ? ಆಶ್ಚರ್ಯವು!"

"ಅವರು ರಾಜಮಹಾಲಿನ ರಾಜನಂದಿನಿಯಾದ ಊರ್ಮಿಳಾದೇವಿ

ಯನ್ನು ವರಿಸಿರುವರು. ರಾಜಾ ಹರಿನಾರಾಯಣರ ಜಮೀನದಾರಿಗೆ ಒಡೆಯು ರಾಗಿರುವರು. ನೀನು ನಿನ್ನ ಸೌಂದರ್ಯ ಬಲದಿಂದ ಅವರನ್ನು ಸೆಳೆದುಕೊಂಡರೆ ಊರ್ಮಿಳಾರಾಣಿಯು ಉದ್ವಿಗ್ನಳಾಗಲಿಕ್ಕಿಲ್ಲವೆ?"

ಅಮರಪ್ರಸಾದರ ಹೃದಯವನ್ನು ಸೆಳೆದ ಊರ್ಮಿಳಾದೇವಿಯು ನಿಶ್ಚಯವಾಗಿ ನಿರ್ಜರಾಂಗನೆಯಂತಿರಲಿಕ್ಕೆ ಬೇಕು" ಎಂದು ಶೋಭನೆಯು ನುಡಿದು ಸ್ವಲ್ಪ ಹೊತ್ತು ವಿಚಾರಿಸಿ:—"ಕಾಮನೆ, ಸ್ವಸುಖಕ್ಕಾಗಿ ಅನ್ಯರನ್ನು ದುಃಖಾಬ್ಧಿಯಲ್ಲಿ ಕೆಡಹುವಂತಹ ನೀಚಮನೋವೃತ್ತಿಯವಳು ನಾನಲ್ಲ ನಾನು ಒಮ್ಮೆ ಆ ದೈವಶಾಲಿನಿಗೆ ಭೆಟ್ಟಿಯಾಗಿ ಬರುವೆನು. ಅಮರಪ್ರಸಾದರನ್ನು ಸ್ವಾಧೀನಪಡಿಸಿಕೊಂಡ ಸ್ವರ್ಗಾಂಗನೆಯ ಸ್ವರ್ಗೀಯ ಸೌಂದರ್ಯವನ್ನು ನೋಡಿ ನೇತ್ರಗಳನ್ನು ಸಾಫಲ್ಯಗೊಳಿಸಬೇಕೆಂಬ ಇಚ್ಛೆಯಾಗಿದೆ. ನಾನು ನನ್ನ ಹೃದಯೇಶ್ವರರಾದ ಅಮರಪ್ರಸಾದರ ಮೂರ್ತಿಯನ್ನು ಪೂಜಿಸುತ್ತ ಕಾಲಹರಣ ಮಾಡುವೆನು. ನನ್ನ ಮನಸ್ಸು ವಿಲಾಸೋಪಭೋಗಗಳಿಗಾಗಿಯೂ ವೈಷಯಿಕ ವ್ಯಾಮೋಹಗಳಿಗಾಗಿಯೂ ಆತುರಗೊಂಡಿಲ್ಲ ಮನಶ್ಶಾಂತಿಯು ಲಭಿಸಬೇಕೆಂಬ ಉದ್ದೇಶದಿಂದ ನಾನು ನನ್ನ ಹೃದಯೇಶ್ವರನ ಪೂಜೆಯಲ್ಲಿ ತೊಡಗುವೆನು."

ಶೋಭನೆಯ ಮಾತುಗಳು ಕಾಮನೆಗೆ ಸೋಜಿಗವನ್ನುಂಟುಮಾಡಿದವು. ಯಾವನಿಗಾಗಿ ಹಗಲಿರುಳು ಕುದಿಯುತ್ತಿರುವಳೋ, ಅವನ ಪ್ರಾಪ್ತಿಯ ಸಲುವಾಗಿ ಸಾಹಸ ಮಾಡದೆ, ಅವಳು ಕೇವಲ ನಿಷ್ಕಾಮವೃತ್ತಿಯನ್ನು ವ್ಯಕ್ತಪಡಿಸಿದ್ದರಿಂದ ಕಾಮನೆಯು ಬೆರಗಾದಳು. ಅವಳಿಗೆ ತನ್ನ ಸಖಿಯ ದೃಢ ನಿಶ್ಚಯದ ವಿಷಯವಾಗಿ ಚನ್ನಾಗಿ ಮನವರಿಕೆಯಾಗಿತ್ತು. ಇನ್ನು ಮೇಲೆ ಅವಳು ಒಬ್ಬ ಯೋಗಿನಿಯಂತೆ ಕಾಲಹರಣ ಮಾಡುವ ವೃತ್ತಿಯನ್ನವಲಂಬಿಸಿರುವಳೆಂದು ತಿಳಿದು ಕಾಮನೆಯು ಖೇದಗೊಂಡಳು. ಆಗ ಅವಳು ತನ್ನ ಸಖಿಯನ್ನು ಕುರಿತು ಕಾತರಭಾವದಿಂದ:—"ಗೆಳತಿ, ನೀನು ಬ್ರಹ್ಮವಾದಿನಿಯಾಗಿ ಶೇಷಾಯುಷ್ಯವನ್ನು ನಿರರ್ಥಕಗೊಳಿಸುವೆಯಾ? ನೋಡು, ಚನ್ನಾಗಿ ವಿಚಾರ ಮಾಡಿ ನೋಡು. ಒಮ್ಮೆಲೆ ವಿರಕ್ತಭಾವ ತಳೆಯಬೇಡ. ವಿಕಾರವಶತೆಯ ಮೂಲಕವಾಗಿ ಸ್ತ್ರೀಯರಿಂದ ಒಮ್ಮೊಮ್ಮೆ ಅದೂರದರ್ಶಿತನದ ಕೃತಿಗಳು ಘಟಿಸುತ್ತಿರುವದುಂಟು."

ಕಾಮನೆಯ ಮಾತುಗಳನ್ನು ಕೇಳಿ ಶೋಭನೆಯು ಅಲ್ಪಮಟ್ಟಿಗೆ

ಸಂತಪ್ತಳಾದಳು ಆಗ ಅವಳು:—"ಕಾಮನೆ, ಇಷ್ಟು ದಿನಗಳ ಪರಿಚಯದಿಂದ ನಿನಗೆ ನನ್ನ ಸ್ವಭಾವದ ಪಡಿಕಟ್ಟು ಗೊತ್ತಾಗದ್ದು ನೋಡಿ ಸಕ್ರೋಧ ವಿಸ್ಮಿತಳಾಗಿರುವೆನು. ಶೋಭನೆಯು ಬೀದಿಯ ಬಸವೆಯಲ್ಲ. ಆದರ್ಶ ಆರ್ಯಾಂಗನೆಯಿರುವಳು!"

"ಸಖಿ! ಸಂತಾಪಗೊಳ್ಳಬೇಡ. ನಿನ್ನನ್ನು ಸಿಟ್ಟಿಗೆಬ್ಬಿಸುವ ಉದ್ದೇಶದಿಂದ ನಾನು ಮಾತಾಡಲಿಲ್ಲ. ನಿನ್ನ ಸ್ವಭಾವ ಪರಿಚಯವು ನನಗೆ ಚನ್ನಾಗಿರುವದು; ಆದರೆ ಸಂಸಾರದಲ್ಲಿ ವಿರಕ್ತಿಯುಳ್ಳವಳಾಗಿ ಆಯುಷ್ಯವನ್ನು ವ್ಯರ್ಥಗೊಳಿಸದೆ, ಸಂಸಾರಿಯಾಗಿ ಸುಖಬಡಬೇಕೆಂಬ ಉದ್ದೇಶದಿಂದ ನಾನು ಮಾತಾಡಿದೆನು. ಅಷ್ಟೈಶ್ವರ್ಯ ಸಂಪನ್ನಳಾದ ನೀನು ದೈವಾಯತ್ತವಾದ ಸೌಖ್ಯವನ್ನುಪೇಕ್ಷಿಸಿ ದುಃಖಾಬ್ಧಿಯಲ್ಲಿ ಮುಳುಗಬಾರದೆಂದು ನನ್ನ ವಿನಂತಿಯುಂಟು"

"ನನ್ನ ಮನಸ್ಸು ಮೇರುಗಿರಿಯಂತೆ ಅಚಲವಾದದ್ದು. ನೀನು ಈ ವಿಷಯದಲ್ಲಿ ಉಪದೇಶಿಸಬೇಡ."

"ಶೋಭನೆ, ನಾನು ಇನ್ನೊಂದು ಸೂಚನೆ ಮಾಡುವೆನು."

"ಅವಶ್ಯವಾಗಿ ಹೇಳು."

"ಊರ್ಮಿಳಾದೇವಿಯು ಸವತಿಮತ್ಸರ ಮಾಡುವ ಹೀನಕೋಟಿಯವಳಿರಲಾರಳು. ನೀನು ಅವಳನ್ನು ಕಂಡು ಅಮರಪ್ರಸಾದರ ಚರಣಸೇವೆಯು ಘಟಿಸುವಂತೆ ಯತ್ನಿಸು."

"ನಾನು ಊರ್ಮಿಳಾದೇವಿಯನ್ನು ಕಾಣುವೆನು; ಆದರೆ ನನಗೆ ಅಮರಪ್ರಸಾದರ ಪ್ರತ್ಯಕ್ಷ ಸೇವೆಯ ಅಗತ್ಯವಿಲ್ಲ ನಾನು ಅಮರ ಮೂರ್ತಿಯನ್ನು ಪೂಜಿಸುತ್ತ ಶೇಷಾಯುಷ್ಯ ಕಳೆಯುವೆನು."

ಕಾಮನೆಯು ನಿರುಪಾಯಳಾದಳು. ಅನುಪಮ ಲಾವಣ್ಯಮಯಿಯಾದ ಶೋಭನೆಯ ಗುಣ-ಸೌಂದರ್ಯಗಳು ಸಾರ್ಥಕವಾಗಬಾರದೆಂದೇ ಪರಮಾತ್ಮನ ಸಂಕೇತವಿರಬಹುದೆಂದು ತಿಳಿದು, ಅವಳು ಮನದಲ್ಲಿಯೇ ಬಹು ಪರಿಯಾಗಿ ಮಿಡುಕಿದಳು. ನಿಯತಿಯ ನಿಯಮಕ್ಕೆ ಯಾರೇನು ಮಾಡುವರು?

---

## ೧೪ನೆಯ ಪರಿಚ್ಛೇದ.

ಮೊಗಲರ ಹಾಗು ಪಠಾಣರ ನಡುವೆ ತುಮುಲವಾದ ಸಂಗ್ರಾಮವು ನಡೆಯಿತು. ರಣಭೇರಿ ನಿನಾದವೂ, ವೀರರ ಹುಂಕಾರಧ್ವನಿಯೂ, ಶಸ್ತ್ರಾಸ್ತ್ರ

ಗಳ ಝಣತ್ಕಾರವೂ ದಶದಿಶೆಗಳನ್ನು ವ್ಯಾಪಿಸಿದವು. ಅಶ್ವಾರೋಹಿಗಳೊಡನೆ ಅಶ್ವಾರೋಹಿಗಳೂ ಕಾಲಾಳುಗಳೊಡನೆ ಕಾಲಾಳುಗಳೂ ಕಾದತೊಡಗಿದರು ಸೈನಿಕರ ಕೋಲಾಹಲ, ಶಸ್ತ್ರಗಳ ಖಣಖಣಾಟ, ಮೃತ್ಯುಪಥಗಾಮಿಗಳ ಕರುಣಾಕಂಠಧ್ವನಿ ಮೊದಲಾದವುಗಳಿಂದ ಸಮರಭೂಮಿಗೆ ಭಯಾನಕತೆಯು ಪ್ರಾಪ್ತವಾಗಿತ್ತು. ರಣಭೂಮಿಯೆಂದರೆ ಕಾಲನ ರಾಜ್ಯವು-ಯಮನ ಲೀಲಾಭೂಮಿಯು! ಅಲ್ಲಿ ದಯಾಮಾರ್ದವಗಳೂ, ಮಮತ್ವವೂ, ಕೋಮಲತೆಯೂ, ಮಾಯಾಮೋಹಗಳೂ ತಿಲಾಂಶವಾದರೂ ಇರುವದಿಲ್ಲ. ಸಾವಿರಾರು ಸೈನಿಕರು ಮರ್ಮಭೇದಿಯಾದ ಯಾತನೆಗಳಿಂದ ಭೂಮಿಗೆ ಬಿದ್ದಿದ್ದರು. ಮೃತದೇಹಗಳು ರಾಶಿರಾಶಿಯಾಗಿ ಬಿದ್ದಿದ್ದವು. ಗಾಯ ಹೊಂದಿದವರನ್ನು ನೋಡಿ ಯಾರೂ ಮರಗುವವರಿದ್ದಿಲ್ಲ; ಸತ್ತವರಿಗಾಗಿ ಅಳುವವರಿರಲಿಲ್ಲ; ನಿರಾಶ್ರಿತರನ್ನು ನೋಡಿ ಸಹಾನುಭೂತಿ ತೋರಿಸುವವರಿದ್ದಿಲ್ಲ. ಶೋಣಿತಮಯವಾದ ಮೃತದೇಹಗಳು ಕುದುರೆಗಳ ಕಾಲಲ್ಲಿ ಸಿಲುಕಿ ಗಿಜಿಗಿಜಿಯಾಗತೊಡಗಿ ಮನುಷ್ಯನ ಪೈಶಾಚಿಕ ವೃತ್ತಿಯನ್ನು ಚನ್ನಾಗಿ ವ್ಯಕ್ತಗೊಳಿಸತೊಡಗಿದ್ದವು. ರಾಜ್ಯತೃಷ್ಣೆಯು ಅಂತಹ ಪ್ರಬಲವಾದದ್ದು; ಅಂತಹ ಕಠೋರವಾದದ್ದು!

ಮೊಗಲ ಸೇನಾಪತಿಗಳಾದ ಹುಸೇನ ಕುಲೀಖಾನನೂ ಮಹಾರಾಜಾ ತೋಡರಮಲ್ಲನೂ ಪಠಾಣರೊಡನೆ ಒಳ್ಳೆಯ ವೀರಾವೇಶದಿಂದ ಕಾದತೊಡಗಿದ್ದರು. ಪಠಾಣ ಸೇನಾಪತಿಗಳಾದ ಸಮಶೇರ ಅಲೀಖಾನ-ರುಸ್ತುಮಖಾನರಾದರೂ ಅಸಾಮಾನ್ಯ ಯೋಧರಾಗಿದ್ದರು. ಮೊಗಲ ಸೈನ್ಯವು ಪಠಾಣ ಸೈನ್ಯಕ್ಕಿಂತ ದೊಡ್ಡದಾಗಿದ್ದರೂ, ನವಾಬ ದಾವುದಖಾನನಂತಹ ದೀರ್ಘಸಾಹಸಿಯ ಕೈಯಲ್ಲಿ ನುರಿತ ಪಠಾಣರು ಒಳ್ಳೆಯ ಅಸಾಧ್ಯರಾಗಿದ್ದರು. ಆದ್ದರಿಂದ ಒಂದೇ ಆವೇಶದಲ್ಲಿ ವಿಜಯ ಸಂಪಾದನೆ ಮಾಡಿಕೊಳ್ಳುವೆವೆಂದು ಹೊರಟ ಮೊಗಲ ಸೇನಾಪತಿಗಳ ಹೆಮ್ಮೆಯು ಈಗ ಅಲ್ಪಮಟ್ಟಿಗಾದರೂ ಕಡಿಮೆಯಾಗಿತ್ತು. ಪಠಾಣ ಸೇನಾಪತಿಗಳು ಹೀನಬಲರೂ, ಭಯಭೀತರೂ ಅಲ್ಲವೆಂಬದು ಅವರಿಗೆ ಗೊತ್ತಾಯಿತು. ರಾಜಾತೋಡರಮಲ್ಲನು ಪಠಾಣಾಧಿಪತಿಯಾದ ದಾವುದಖಾನನ ಮೇಲೆ ಆಕ್ರಮಣ ಮಾಡಿದನು; ಹುಸೇನ ಕುಲೀಖಾನನು ಸಮಶೇರ ಅಲೀಖಾನನೊಡನೆ ಕಾದತೊಡಗಿದ್ದನು; ರಾಜಾ ಅಮರಪ್ರಸಾದನು ರುಸ್ತುಮಖಾನನೊಡನೆ ಕಾಳಗ ಮಾಡಹತ್ತಿದ್ದನು ರುಸ್ತುಮಖಾನನು ಶಸ್ತ್ರಕುಶಲನೂ ಶತ್ರುಗಳ ಹೃದಯದಲ್ಲಿ ಭಯವನು

ಉತ್ಪನ್ನ ಮಾಡುವವನೂ ಇರುವನೋ, ಇಲ್ಲವೋ ಎಂಬ ಸಂಶಯದಿಂದ ನವಾಬನು ಅವನಿಗೆ ಪ್ರಧಾನ ಸೇನಾಪತಿಯ ಪದವನ್ನು ಕೊಟ್ಟದ್ದಿಲ್ಲ. ನವಾಬನ ಈ ಕೃತಿಯು ಪಕ್ಷಪಾತದ್ದೆಂದು ರುಸ್ತುಮನು ತಿಳಿದಿದ್ದನು. ಈಶ್ವರನ ಪ್ರೇರಣೆಯಿಂದ ಪ್ರಸ್ತುತ ಯುದ್ಧದಲ್ಲಿ ಪಠಾಣರಿಗೆ ಪರಾಜಯವೊದಗಿದರೆ ತನ್ನ ಅಪಮಾನವೇನೂ ಆಗದೆ, ತನಗೆ ಪ್ರಧಾನ ಸೇನಾಪತಿಪದವನ್ನು ಕೊಡದ್ದಕ್ಕಾಗಿ ನವಾಬನಿಗೆ ಪ್ರಾಯಶ್ಚಿತ್ತವು ದೊರೆತಂತಾಗುವದೆಂದು ಅವನು ಅನ್ನತೊಡಗಿದ್ದನು.

ರುಸ್ತುಮಖಾನನು ಹಿಂದುಗಳ ಪರಮ ದ್ವೇಷಿಯಾಗಿದ್ದನು ಕಾಫಿರರ ನಾಶಮಾಡುವದಕ್ಕಾಗಿಯೇ ಪಠಾಣರ ಜನ್ಮವಿರುತ್ತದೆಂದು ಅವನ ತಿಳುವಳಿಕೆಯಿತ್ತು. ಪಠಾಣರೊಡನೆ ರಜಪುತರು ಎಂದೂ ಎದುರಾಳಿಗಳಾಗಿ ನಿಲ್ಲಲಾರರೆಂದು ಅವನ ವಿಶ್ವಾಸವಿತ್ತು. ರಾಜಾ ಅಮರಪ್ರಸಾದನು ತನ್ನ ಸೈನ್ಯದ ಮೇಲೆ ಆಕ್ರಮಣ ಮಾಡಿದ್ದನ್ನು ನೋಡಿ ರುಸ್ತುಮಖಾನನು ಅವನ ಉಪಹಾಸ ಮಾಡಿದನು. ಯಃಕಶ್ಚಿತ ರಜಪುತನೊಡನೆ ಕಾದಿದರೆ ತನ್ನ ದೊಡ್ಡಿಸ್ತಿಕೆಗೆ ಬಾಧೆಯುಂಟಾಗುವದೆಂದು ತಿಳಿದು, ತಾನು ಮುಂದೆ ಬೀಳದೆ ಸೈನಿಕರನ್ನು ಮುಂದೆ ಮಾಡಿದನು. ಪಠಾಣ ಸೈನಿಕರು ರಜಪುತರ ಆಕ್ರಮಣವನ್ನು ತಡೆಯಲಿಕ್ಕೆ ಮುಂದುವರಿದರು. ಸುಶಿಕ್ಷಿತನೂ, ವೀರಶ್ರೀಮಂಡಿತನೂ, ತೇಜಸ್ವಿಯೂ ಆದ ಅಮರಪ್ರಸಾದನ ಪ್ರಬಲವಾದ ಆಕ್ರಮಣದಿಂದ ಪಠಾಣ ಸೈನಿಕರು ಒಬ್ಬೊಬರೇ ಧರಾಶಾಯಿಗಳಾಗತೊಡಗಿದರು. ಕೂಡಲೆ ಅವರು ಎದೆಯೊಡೆದು ಹಿಂದೆ ಸರಿಯುವ ಹವಣಿಕೆ ಮಾಡತೊಡಗಿದರು. ರುಸ್ತುಮಖಾನನು ತನ್ನ ಸೈನ್ಯದ ದುಃಸ್ಥಿತಿಯನ್ನು ನೋಡಿ ಸಂತಾಪಗೊಂಡನು. ಆಗ ಅವನು ಕಠೋರತೆಯಿಂದ:—“ಸೈನಿಕರೆ, ಕಾಫಿರರಿಗೆ ಬೆನ್ನು ತೋರಿಸಿ, ಪಠಾಣರ ಯಶ-ಖ್ಯಾತಿಗಳನ್ನೂ ವೀರತ್ವ-ಗೌರವವನ್ನೂ ನಾಶಗೊಳಿಸುವಿರಾ? ಕಾಫಿರರಿಗೆ ಬೆನ್ನು ತೋರಿಸಲಿಕ್ಕೆ ಯತ್ನಿಸತೊಡಗಿದ ನಿಮಗೆ ಧಿಃಕಾರವಿರಲಿ! ಮುಂದೆ ಬೀಳಿರಿ, ಬೇಗನೆ ಮುಂದೆ ಬೀಳಿರಿ. ಭೇರಿನಿನಾದದೊಡನೆಯೂ ಶಸ್ತ್ರ ಝಣತ್ಕಾರದೊಡನೆಯೂ ಕಾಫಿರರನ್ನು ನಿರ್ನಾಮಗೊಳಿಸಿರಿ; ಅವರನ್ನು ಭಸ್ಮೀಭೂತಮಾಡಿರಿ!”

ರುಸ್ತುಮಖಾನನು ಆವೇಶಯುಕ್ತವಾದ ಕ್ರೋಧವಾಣಿಯಿಂದ ಆಡಿದ ಮಾತುಗಳು ಸೈನಿಕರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿದವು.

ಕೂಡಲೆ ಅವರು ರಜಪುತ ಸೈನ್ಯದ ಮೇಲೆ ಆಕ್ರಮಣ ಮಾಡಿದರು. ನಿಜವಾಗಿ ವಿಚಾರಿಸಿದರೆ ಪಠಾಣರು ಅಸೀಮ ಸಾಹಸಿಗಳೂ ಜೀವನದ ವಿಷಯದಲ್ಲಿ ಸಂಪೂರ್ಣವಾಗಿ ಮಮಕಾರ ಬುದ್ಧಿಯನ್ನು ನಾಶ ಗೊಳಿಸಿದವರೂ ಆಗಿದ್ದರು. ರಜಪುತರಂತೆ ಪಠಾಣರಿಗೂ ರಣಕ್ಷೇತ್ರವೆಂದರೆ ಕ್ರೀಡಾಕ್ಷೇತ್ರವಾಗಿತ್ತು; ಶತ್ರುಗಳ ಝಣತ್ಕಾರವು ಸುವಾದ್ಯಗಳ ಮಧುರನಿನಾದವಾಗಿತ್ತು; ದುಃಖಿತರ ಕೋಲಾಹಲವು ಆನಂದೋದ್ಗಾರಗಳಾಗಿದ್ದವು. ಅವರನ್ನು ನೋಡಿದರೆ ರಣಕ್ಷೇತ್ರದೊಳಗಿನ ಮಣ್ಣಿನಿಂದಲೆ ಇಂತಹ ಶೂರರ ದೇಹಗಳು ನಿರ್ಮಾಣವಾಗುತ್ತವೆಂಬ ಸಂಶಯವು ಉತ್ಪನ್ನವಾಗುವಂತಿತ್ತು. ನಿಜವಾಗಿ ವಿಚಾರಿಸಿದರೆ ರುಸ್ತುಮಖಾನನ ಪಠಾಣೀ ಪಡೆಯು ಅಮರಪ್ರಸಾದನ ರಜಪುತ ದಳದಷ್ಟು ಶಸ್ತ್ರಶಿಕ್ಷೆ, ಸಮರಚತುರತೆಗಳಲ್ಲಿ ಸುನಿಪುಣವಾದದ್ದಾಗಿರಲಿಲ್ಲ. ರಜಪುತರ ರಣಕೌಶಲ್ಯದ ಮುಂದೆ ಪಠಾಣರ ದೀಪ್ತವಹ್ನಿಯು ಮ್ಲಾನವಾಯಿತು. ತಾನೂ ತನ್ನ ಸೈನ್ಯವೂ ಅಸೀಮಶಕ್ತಿಶಾಲಿಯೆಂದು ತಿಳಿದು ರುಸ್ತುಮಖಾನನು ಇಷ್ಟು ವೇಳೆಯ ವರೆಗೆ ಆತ್ಮಾಭಿಮಾನ ಹೊಂದಿದವನಾಗಿದ್ದನು. ಬರಬರುತ್ತ ಅವನ ಅಭಿಮಾನ-ಅಹಂಕಾರಗಳೂ, ಹಿಂದು ವಿಜಯಿಯಾಗುವೆನೆಂಬ ಉತ್ಸಾಹವೂ ನಾಶ ಹೊಂದಿದವು. ಹಿಂದು ಶಕ್ತಿಯನ್ನು ತುಚ್ಛೀಕರಿಸಿ ಅಗ್ರೇಸರನಾಗದೆ, ಇಷ್ಟು ಹೊತ್ತಿನ ವರೆಗೆ ಅವನು ಸೈನ್ಯದ ಹಿಂಭಾಗದಲ್ಲಿದ್ದನು; ಆದರೆ ಇನ್ನು ಮೇಲೆ ನಿಶ್ಚಿಂತನಾಗಿ ಹಿಂದುಳಿದು ಸೇನಾಧಿಪತ್ಯ ಸಾಗಿಸುವದು ಅವನಿಗೆ ಅಸಂಭಾವ್ಯವಾಯಿತು.

ತನ್ನ ಸೈನ್ಯವು ಹಿಂಜರಿಯತೊಡಗಿದ್ದರಿಂದ ರುಸ್ತುಮಖಾನನು ತ್ವೇಷಗೊಂಡನು. ಅವನು ತನ್ನ ಸೈನ್ಯಕ್ಕೆ ಉತ್ಸಾಹ ಕೊಡುತ್ತ ಆವೇಶದಿಂದ ಮುಂದೆ ಬಿದ್ದು ರಾಜಾ ಅಮರಪ್ರಸಾದನ ಸಮ್ಮುಖದಲ್ಲಿ ಬಂದು:-"ಕಾಫೀರ, ಕೆಲವು ಸೈನಿಕರನ್ನು ಹೊಡೆದೆನೆಂಬ ಮದದಿಂದ ಪಠಾಣರು ಶಕ್ತಿಹೀನತೆ ಹೊಂದಿದರೆಂದು ತಿಳಿಯಬೇಡ. ನಾನು ಅಕ್ಷತ ದೇಹದಿಂದ ಸಶಸ್ತ್ರನಾಗಿ ಬಂದಿರುವೆನು. ಈ ರುಸ್ತುಮನೊಬ್ಬನೇ! ಹತ್ತು ಜನ ನಾಮಾಂಕಿತ ಹಿಂದು ಯೋಧರಿಗೆ ಮೀರಿರುವನು. ಜೀವದ ವ್ಯಾಮೋಹವಿದ್ದರೆ ಶಸ್ತ್ರತ್ಯಾಗ ಮಾಡಿ ರಮಣಿಯ ಸೆರಗಿನಿಂದ ಮೋರೆ ಮುಚ್ಚಿಕೋ!"

"ಪಠಾಣ!" ಅಮರಪ್ರಸಾದನು ವ್ಯಂಗ್ಯೋಕ್ತಿಗಳಿಂದ:—"ರಮಣಿಯ ಮರೆಯಲ್ಲಿ ಅಡಗಿಕೊಳ್ಳುವ ಶಿಕ್ಷಣವು ಪಠಾಣ ರುಸ್ತುಮಖಾನನಿಗೆ ಕೊಡಲ್ಪ

ಟ್ಟಿರಬಹುದಲ್ಲದೆ, ಅಂತಹ ವಿದ್ಯೆಯನ್ನು ಇದು ವರೆಗೆ ಯಾವ ರಜಪುತ್ರನೂ ಕಲಿತಿಲ್ಲ; ಮುಂದೆಯಾದರೂ ಕಲಿಯುವದಿಲ್ಲ. ರಜಪುತರು ಮಾತೃಗರ್ಭ ದಲ್ಲಿಯೆ ವೀರತ್ವ ಮಂತ್ರದ ಉಪದೇಶ ಹೊಂದಿರುತ್ತಾರೆ; ವೀರತ್ವ ವ್ರತ ವನ್ನು ಹೊಂದಿ ವೀರ ಕಥೆಗಳನ್ನು ಕೇಳಿ ಅವರು ಭೂಮಿಯಲ್ಲಿ ಪ್ರವೇಶ ಮಾಡುತ್ತಾರೆ. ಪ್ರಾಣಾಂತ್ಯದ ವರೆಗೆ ರಜಪುತರು ತಮ್ಮ ವೀರ ವ್ರತವನ್ನು ಮರೆಯುವದಿಲ್ಲ. ರಜಪುತರ ಕೋಶದಲ್ಲಿ, ರಜಪುತರ ಇತಿಹಾಸದಲ್ಲಿ, ರಜ ಪುತರ ಜೀವನದಲ್ಲಿ ಪಲಾಯನದ ಕಲಂಕವು-ಅಪಯಶದ ಕೃಷ್ಣವರ್ಣವು-ತಿಲಾಂಶವಾದರೂ ತಗಲುವದಿಲ್ಲ. ಪಠಾಣ, ನಾನು ನಿನ್ನ ಉಪದೇಶವನ್ನು ಬಯಸಿಲ್ಲ; ನನಗೆ ಬೇಕಾದದ್ದು ಯುದ್ಧವು!"

"ಅಮರಪ್ರಸಾದ, ಒಳ್ಳೆಯ ಗೌರವವನ್ನು ತಂದುಕೊಳ್ಳಲಿಕ್ಕೆ ವೃಥಾ ಭಾಷಣ ಮಾಡತೊಡಗಿರುವೆ. ನಿನ್ನ ವೀರತ್ವವು ಕೇವಲ ಮುಖದಿಂದ ಮಾತ್ರ ಹೊರಬೀಳತೊಡಗಿದೆ; ಕೃತಿಯಲ್ಲಿ ಅದರ ಗಂಧವಾರ್ತೆಯು ಕೂಡ ಇರುವ ದಿಲ್ಲ. ಹಿಂದುಗಳಾದ ನೀವು ನಿಜವಾದ ವೀರರೂ ಅಭಿಮಾನಿಗಳೂ ರಾಷ್ಟ್ರ ಧರ್ಮ ಪರಾಯಣರೂ ಆಗಿದ್ದರೆ, ಸುಕೀರ್ತಿಯು ಹಾಗು ಸ್ವಾತಂತ್ರ್ಯ ಗೌರ ವದ ಸುಕಲೆಗಳಿಂದ ಪರಿಪೂರ್ಣರಾಗಿದ್ದರೆ ಎಂದೂ ಪರವಶತೆ ಹೊಂದುತ್ತಿರ ಲಿಲ್ಲ. ಪರದಾಸ್ಯವೇ ಪರಮ ಪುರುಷಾರ್ಥವೆಂದು ತಿಳಿದುಕೊಳ್ಳುತ್ತಿರಲಿಲ್ಲ. ಇನ್ನು ವೃಥಾ ಗಳುಹಬೇಡ. ನಿನ್ನ ದೇಹವನ್ನು ಪದದಲಿತ ಮಾಡದಿದ್ದರೆ ಕೈ ಯಲ್ಲಿ ಶಸ್ತ್ರ ಹಿಡಿದು ಪ್ರಯೋಜನವೇನು?"

"ನಾನಾದರೂ ಪ್ರತಿಜ್ಞೆ ಮಾಡುವದೇನಂದರೆ, ಇಂದು ನಿನಗೆ ಚನ್ನಾಗಿ ಕೈ ತೋರಿಸಿ ಶಾಂತಿಪ್ರಿಯ ಹಿಂದುಗಳು ಪರಾಧೀನರಾಗಿದ್ದರೂ, ಧರ್ಮಕರ್ಮ ಗಳಲ್ಲಿಯೂ ವೀರತ್ವ-ಸಾಹಸಗಳಲ್ಲಿಯೂ ವಿಜೇತೃ-ಜಾತಿಗಿಂತಲೂ ವರಿಷ್ಠ ರೆಂಬದನ್ನು ನಿನ್ನ ನಿದರ್ಶನಕ್ಕೆ ತಂದು ಕೊಡುವೆನು."

"ನೀನು ನಿನ್ನ ಪರಮಾತ್ಮನ ಸ್ಮರಣ ಮಾಡು ಕಾಫಿರ!"

"ನೀನಾದರೂ ನಿನ್ನ ಅಲ್ಲಾನ ಚಿಂತನೆ ಮಾಡು ಪಠಾಣ!"

ಪರಸ್ಪರರು ಪರಸ್ಪರರ ಮೇಲೆ ಆಕ್ರಮಣ ಮಾಡಿದರು. ಭೀಷಣವಾದ ಯುದ್ಧ ವ್ಯಾಪಾರವು ನಡೆಯಿತು. ಇಬ್ಬರೂ ಅಶ್ವಾರೋಹಿಗಳಾಗಿದ್ದರು. ಇಬ್ಬರೂ ಸಮಾನ ಶಕ್ತಿಶಾಲಿಗಳಾಗಿದ್ದರು ಪಠಾಣ ಸೇನಾಧ್ಯಕ್ಷನಾದ ಕ್ರೋ ಧೋನ್ಮತ್ತ ರುಸ್ತುಮಖಾನನು ಸಮಸ್ತ ಶಕ್ತಿಗಳನ್ನು ಒಂದು ಗೂಡಿಸಿ ಅಮರ

ಪ್ರಸಾದನೊಡನೆ ಕಾದತೊಡಗಿದ್ದನು. ವಿಚಕ್ಷಣ ಬುದ್ಧಿವಂತನೂ ರಣಕುಶಲನೂ ವೀರಪುಂಗವನೂ ಆದ ಅಮರಪ್ರಸಾದನು ರುಸ್ತುಮಖಾನನ ಮೇಲೆ ಪ್ರತ್ಯಾಕ್ರಮಣ ಮಾಡದೆ, ಕೇವಲ ಆತ್ಮರಕ್ಷಣೆ ಮಾಡಿಕೊಳ್ಳತೊಡಗಿದ್ದನು. ಎಷ್ಟೋ ವೇಳೆಯ ವರೆಗೆ ತುಮುಲವಾದ ಸಂಗ್ರಾಮವು ನಡೆಯಿತು. ಕಡೆಗೆ ಅಮರಪ್ರಸಾದನ ಕುಶಲತೆಯು ಸಾರ್ಥಕವಾಯಿತು. ಬಹಳ ಹೊತ್ತಿನ ವರೆಗೆ ಶಕ್ತಿಮೀರಿ ಸಾಹಸ ಮಾಡಿದ್ದರಿಂದ ರುಸ್ತುಮಖಾನನು ದುರ್ಬಲನಾಗ ಹತ್ತಿದನು. ಅವನ ಹಸ್ತಚಪಲತೆಯು ಸ್ತಂಭಿತವಾಯಿತು; ಮುಷ್ಟಿಯು ಶಿಥಿಲವಾಯಿತು. ಅಮರಪ್ರಸಾದನು ಈ ಸಂಧಿಯನ್ನು ಸಾಧಿಸಿ ರುಸ್ತುಮಖಾನನ ಖಡ್ಗಕ್ಕೆ ತನ್ನ ಖಡ್ಗದಿಂದ ಬಲವಾಗಿ ಹೊಡೆದನು. ಪ್ರಚಂಡವಾದ ಆಘಾತದಿಂದ ಖಾನನ ಗೆಲವಿನ ಕತ್ತಿಯು ಕೈ ಬಿಟ್ಟು ದೂರ ಸಿಡಿದು ಬಿತ್ತು. ಅಮರಪ್ರಸಾದನು ಪಳದಷ್ಟಾದರೂ ವಿಲಂಬ ಮಾಡದೆ ಖಾನನ ಬಳಿಗೆ ಹೋಗಿ ಅವನನ್ನು ಎಡಗೈಯಿಂದ ಎಳೆದನು ಕೂಡಲೆ ಖಾನನು ಕುದುರೆಯ ಮೇಲಿಂದ ಭೂಮಿಗೆ ಬಿದ್ದನು. ಬಳಿಕ ಅಮರಪ್ರಸಾದನು ತನ್ನ ಕುದುರೆಯಿಂದಿಳಿದು: "ಪಠಾಣ! ಹಿಂದುಗಳು ಪರಾಧೀನರಾಗಿದ್ದರೂ, ಸ್ವಾತಂತ್ರ್ಯಹೀನರಾಗಿದ್ದರೂ, ವೀರತ್ವದಲ್ಲಿಯೂ, ಶಸ್ತ್ರ ನೈಪುಣ್ಯದಲ್ಲಿಯೂ ಹಿಂದುಳಿದಿಲ್ಲವೆಂಬದನ್ನು ಪ್ರತ್ಯಕ್ಷ ನೋಡು!" ಎಂದು ಗಾಂಭೀರ್ಯದಿಂದ ನುಡಿದು, ಖಾನನ ಬೆನ್ನ ಮೇಲೆ ಕೈಯಿಂದ ಬಲವಾಗಿ ಹೊಡೆದು, ಅವನ ಮೇಲೆ ಪದಾಘಾತ ಮಾಡಿ, ತನ್ನ ಪ್ರತಿಜ್ಞೆಯನ್ನು ಪೂರೈಸಿಕೊಂಡನು. ಅಮರಪ್ರಸಾದನ ಬಲವಾದ ಪೆಟ್ಟಿನಿಂದ ರುಸ್ತುಮಖಾನನು ಬಹಳ ಗಾಸಿಯಾದನು. ಬಹಳ ಎತ್ತರದಿಂದ ಪ್ರಚಂಡವಾದ ಲೋಹಮುದ್ಗರವು ಮೈಮೇಲೆ ಬಿದ್ದಂತೆ ಅವನಿಗೆ ಭಾಸವಾಯಿತು. ಅಮರಪ್ರಸಾದನು ಕುದುರೆಯನ್ನೇರಿ ಖಾನನನ್ನು ಕುರಿತು:—"ಪಠಾಣ, ಇನ್ನು ಮೇಲೆ ಇಡೀ ಆಯುಷ್ಯದಲ್ಲಿ ರಜಪುತರ ಗೌರವಕ್ಕೆ ಆಘಾತವಾಗುವಂತಹ ವರ್ತನವಿಡಬೇಡ. ಈ ಮಾತಿಗೆ ವಿರುದ್ಧವಾಗಿ ನಡೆದರೆ ನಿನಗೆ ತಕ್ಕ ಶಾಸನವು ವಿಧಿಸಲ್ಪಡುವದು. ನಿನಗೆ ಜೀವದಾನ ಕೊಟ್ಟಿರುವೆನು. ಇಲ್ಲಿಂದ ಹೊರಟು ಹೋಗು."

ಅಮರಪ್ರಸಾದನು ತನ್ನ ಕುದುರೆಯ ವಾಘೆಯನ್ನೆಳೆದು ಮಾರ್ಗಕ್ರಮಣ ಮಾಡಿದನು. ಅವನ ವಿಜಯಿ ಸೈನ್ಯವು ವಿಜಯಧ್ವನಿ ಮಾಡುತ್ತ ಅವನ ಹಿಂದೆ ಸಾಗಿತು. ರುಸ್ತುಮಖಾನನು ಜ್ವಲಂತ ಅಗ್ನಿಸಮವಾದ ನೇತ್ರ

ಗಳಿಂದ ಅಮರಪ್ರಸಾದನನ್ನು ನೋಡತೊಡಗಿದ್ದನು. ಅವನು ತನ್ನ ಕ್ರೋಧಾಗ್ನಿಯಿಂದ ವೈರಿಯನ್ನು ಭಸ್ಮಮಾಡಲಿಚ್ಛಿಸುತ್ತಿದ್ದನು; ಪ್ರಚಂಡವಾದ ಮುಷ್ಟಿಪ್ರಹಾರ ಮಾಡಿ ಅವನ ಶಿರಸ್ಸನ್ನು ಶತಚೂರ್ಣಗೊಳಿಸಬೇಕೆಂಬ ಆವೇಶವುಳ್ಳವನಾಗಿದ್ದನು; ಅವನ ದೇಹವನ್ನು ವಿದೀರ್ಣಗೊಳಿಸಿಬಿಡಬೇಕೆಂದು ಸಾಹಸ ಮಾಡತೊಡಗಿದ್ದನು; ಅವನ ದೇಹವನ್ನು ಚೂರ್ಣ-ವಿಚೂರ್ಣ ಮಾಡಿ ನಾಯಿ-ನರಿಗಳಿಗೆ ಉಣಬಡಿಸಬೇಕೆಂದು ಮನಸ್ಸು ಮಾಡಿದನು; ಆದರೆ ಖಾನನ ವಿಚಾರಗಳು ಶಕ್ತಿಯ ಹೊರಗಿನವಾಗಿದ್ದವು. ನಿಷ್ಫಲವಾದ ಕ್ರೋಧದಿಂದ ಅವನು ರಾಜಾ ಅಮರಪ್ರಸಾದನ ಕಡೆಗೆ ನೋಡುತ್ತ ಸ್ವಸ್ಥವಾಗಿ ಕುಳಿತನು.

---

## ೧೪ನೆಯ ಪರಿಚ್ಛೇದ.

ಅಮರಪ್ರಸಾದನು ಕಣ್ಣುಮರೆಯಾದ ಮೇಲೆ ರುಸ್ತುಮಖಾನನು ಕುಳಿತ ಸ್ಥಳದಿಂದೆದ್ದು ತನ್ನ ಅರಿವೆಗೆ ಹತ್ತಿದ ಧೂಳವನ್ನು ಜಾಡಿಸಿಕೊಂಡನು. ಅವನ ಅಭಿಮಾನಿಯಾದ ಹೃದಯವು ಅಪಮಾನ ಶಿಖಿಯಿಂದ ಒಂದೇ ಸವನೆ ಕುದಿಯತೊಡಗಿತ್ತು. ತನ್ನ ಸೈನ್ಯದ ಎದುರಿಗೆ ಒಬ್ಬ ಕಾಫರನಿಂದ ಅಪಮಾನವಾದ್ದರಿಂದ ಅವನು ಲಜ್ಜಿತನಾಗಿದ್ದನು. ಅವನು ಮುಖವನ್ನು ಬಾಗಿಸಿಕೊಂಡು, ಕುದುರೆಯನ್ನೇರಿ ಧ್ರುತಗತಿಯಿಂದ ತನ್ನ ಶಿಬಿರದ ಕಡೆಗೆ ಪ್ರಸ್ಥಾನ ಬಳೆಯಿಸಿದನು.

ಹಗಲೆಲ್ಲ ಪರಿಶ್ರಮ ಮಾಡಿದ ದಿನಮಣಿಯು ಸಂಧ್ಯಾಸಮಯದಲ್ಲಿ ಆರಕ್ತತೆಯನ್ನು ಹೊಂದಿದಂತೆ ರುಸ್ತುಮಖಾನನು ಯುದ್ಧಶ್ರಮದಿಂದಲೂ ಅಪಮಾನದಿಂದಲೂ ರಕ್ತವರ್ಣವನ್ನು ಹೊಂದಿದ್ದನು. ಅವನು ನಖಶಿಖಾಂತವಾಗಿ ಉರಿಯತೊಡಗಿದ್ದನು. ಹೃದಯ, ಮಸ್ತಕ, ಪಾಣಿ,ಪಾದಗಳು ಜ್ವಾಲಾಮಯವಾಗಿದ್ದವು. ಪ್ರತಿಯೊಂದು ರೋಮಕೂಪದಿಂದ ಉತ್ತಾಪವು ಹರಿಯಲಾರಂಭಿಸಿತ್ತು. ಈ ಭೀಷಣದಾಹದಿಂದ ಅವನು ಹುಚ್ಚನಾಗಿ ಹೋಗಿದ್ದನು. ಅವನು ಕುದುರೆಯನ್ನೋಡಿಸುತ್ತ ತನ್ನ ಡೇರೆಯ ಬಳಿಗೆ ಬಂದನು. ಕುದುರೆಯು ಓಡುತ್ತಿರುವಾಗಲೆ ಕೆಳಗೆ ಜಿಗಿದು ಅವನು ನೆಲಕ್ಕೆ ಬಿದ್ದನು. ಅನಂತರದಲ್ಲಿ ಸಾವರಿಸಿಕೊಂಡು ಎದ್ದು ಕುದುರೆಯನ್ನು ಸೇವಕನ ವಶಕ್ಕೆ ಕೊಟ್ಟು, ತನ್ನ ಡೇರೆಯನ್ನು ಪ್ರವೇಶಿಸಿದನು. ಆ ಮೇಲೆ ಅವನು ತನ್ನ ಅಪ

ಯಶದ ಖಡ್ಗವನ್ನೂ ಢಾಲನ್ನೂ ದೂರ ಬಿಸುಟಿದನು. ಮಾನವಶೋಣಿತ ಭಕ್ಷಕ ಕೃಪಾಣವು ಒಡೆಯನ ಅವಜ್ಞೆಯಿಂದ ದೂರ ಸಿಡಿದು ಬಿತ್ತು. ಖಾನನು ರಣದ ಉಡಿಗೆ-ತೊಡಿಗೆಗಳನ್ನು ತೆಗೆದೊಗೆದು ಒಂದು ಆಸನದ ಮೇಲೆ ವಿರಾಜಮಾನನಾದನು. ಅವನು ಕುಳಿತುಕೊಂಡ ಆಸನವು ಅತ್ಯಂತ ಮೃದುವಾಗಿದ್ದುದರಿಂದ ಅವನಿಗೆ ಬಹಳೇ ಪ್ರಿಯವಾದದ್ದಾಗಿತ್ತು; ಆದರೆ ಅಂದು ಆ ಮೃದುವಾದ ಆಸನವೇ ಕಲ್ಲಿಗಿಂತಲೂ ಕಲ್ಲಾದಂತೆ ಅವನಿಗೆ ತೋರ ಹತ್ತಿತು. ಕೂಡಲೆ ಅವನು ಅಲ್ಲಿಂದೆದ್ದು, ಅತ್ತಿಂದ ಇತ್ತ ಇತ್ತಿಂದ ಅತ್ತ ಅಡ್ಡಾಡತೊಡಗಿದನು ಅವನಿಗೆ ಕುಳಿತರೆ ಸಮಾಧಾನವಿದ್ದಿಲ್ಲ; ನಿಂತರೆ ಸಮಾಧಾನವಿದ್ದಿಲ್ಲ. ಅವನು ಸಮರ ಭೂಮಿಯಲ್ಲಿ ನಡೆದ ತನ್ನ ಅಪಮಾನದ ಬಗ್ಗೆ ವಿಚಾರ ಮಾಡತೊಡಗಿದನು. ಅವನಿಗೆ ಅಂತಹ ಅಪಮಾನವು, ಆ ಪ್ರಕಾರದ ಪರಾಭವವು ಇಡೀ ಆಯುಷ್ಯದಲ್ಲಿ ಎಂದೂ ಆಗಿದ್ದಿಲ್ಲ. ಅಂದು ಅವನ ವೀರತ್ವದ ಸ್ತಂಭವು ಕಡಿದು ಬಿದ್ದಂತಾಗಿತ್ತು ಮಾನದ ಮಹಾಮೇರುವು ಮಹಾಸಾಗರದಲ್ಲಿ ಮುಳುಗಿದಂತಾಗಿತ್ತು. ಪಠಾಣರ ಕೀರ್ತಿಕಿರೀಟವು ಕಳಚಿ ಭೂಮಿಗೆ ಬಿದ್ದಂತಾಗಿತ್ತು. ಅಮರಪ್ರಸಾದನಂತಹ ಸಾಮಾನ್ಯ ಜಮೀನದಾರನಿಂದ ಪಠಾಣ ಸಮ್ರಾಟನ ಪ್ರಧಾನ ಸೇನಾಪತಿಯ ಮಾನವು ಹಾಡು ಹಗಲು ಅವನ ಸೈನಿಕರೆದುರಿಗೆ ಸೂರೆಗೊಂಡಿತೆಂಬ ಅಪಕೀರ್ತಿಯು ದೇಶದ ತುಂಬ ಹರಡಿ, ತನ್ನ ಗೌರವಕ್ಕೆ ಕಲಂಕ ತಗಲುವದೆಂದು ಅವನು ಒಂದೇ ಸವನೆ ಕುದಿಯತೊಡಗಿದನು. ದೇಹದಲ್ಲಿ ಹುಟ್ಟಿದ ಅಪಮಾನ ಶಿಖಿಯು ತನ್ನನ್ನು ದಹಿಸದೆ ಬಿಡದೆಂದು ಅವನಿಗೆ ಭಾಸವಾಗಹತ್ತಿತು. ಯಾವ ಉಪಾಯದಿಂದ ತನ್ನ ಆಂತರಿಕ ದಾಹವು ಕಡಿಮೆಯಾಗಬಹುದೆಂದು ಅವನು ಬಹು ಪರಿಯಾಗಿ ಯೋಚಿಸಿದನು. ಅಪಮಾನಕ್ಕೆ ಅಪಮಾನ, ಸೇಡಿಗೆ ಸೇಡು, ಶೋಣಿತಕ್ಕೆ ಶೋಣಿತ, ಪಾಣಕ್ಕೆ ಪ್ರಾಣ! ಮಿಕ್ಕ ಉಪಾಯಗಳೇನೂ ಅವನಿಗೆ ತೋಚಲಿಲ್ಲ. ಅವನು "ಸೇಡು, ಸೇಡು!" ಎಂದು ಉದ್ಗಾರ ತೆಗೆದನು.

ಪ್ರಭುವಿನ ಈ ಉಗ್ರಮೂರ್ತಿಯನ್ನು ನೋಡಿ ಕಾವಲುಗಾರರು ಭಯ ಚಕಿತರಾದರು. ತಮ್ಮ ಮೇಲೆ ಎಂತಹ ಪ್ರಸಂಗವು ಬರುವದೋ ಏನೋ ಎಂದು ಅವರು ಭಯ ಶಂಕಿತರಾಗಿ, ತಮ್ಮನ್ನು ರಕ್ಷಿಸಬೇಕೆಂದು ಪರಮಾತ್ಮನನ್ನು ಅನನ್ಯ ಭಾವದಿಂದ ಪ್ರಾರ್ಥಿಸಹತ್ತಿದರು. ಅಷ್ಟರಲ್ಲಿ ಅವರಿಗೆ:"ಹೊರಗೆ ಯಾರಿರುವಿರಿ?" ಎಂಬ ಧ್ವನಿಯು ಕೇಳಿಸಿತು. ಆಗ ಆ ಸೇವಕರಲ್ಲ ಗಟ್ಟಿಗನೊ

ಬ್ಬನು ಒಳಗೆ ಹೋಗಿ ದೂರದಲ್ಲಿ ನಿಂತು ಖಾನನಿಗೆ ಮುಜುರೆ ಮಾಡಿದನು:-
"ಏ ಬೇಇಮಾನ, ಶರಾಬ ಲಾವೋ, ಶರಾಬ ಲಾವೋ, ಜಲ್ದೀ ಶರಾಬ ಲಾವೋ!"

ಒಡೆಯನ ಮಾತುಗಳು ಮುಗಿಯುವದಕ್ಕಿಂತ ಮುಂಚಿತವಾಗಿ ಆ ಸೇವಕನು ಅಲ್ಲಿಂದ ಹೊರಟು ಹೋದನು. ಮುಂದೆ ಸ್ವಲ್ಪ ವೇಳೆಯ ಮೇಲೆ ಅವನು ಸುಮನೋಹರವಾದ ರೌಪ್ಯ ಪಾತ್ರೆಯಲ್ಲಿ ಉತ್ತಮವಾದ ಸುರೆಯನ್ನು ತುಂಬಿಕೊಂಡು ಬಂದನು. ಸುರಾಸುಂದರಿಯನ್ನು ನೋಡಿ ಅವಳ ಚುಂಬನವನ್ನು ಬೇಗನೆ ತೆಗೆದುಕೊಳ್ಳಬೇಕೆಂಬ ಆತುರತೆಯಿಂದ ಖಾನನು:-
"ಮನೋಹಾರಿಣಿಯೂ, ಸುಹಾಸಿನಿಯೂ, ನಯನ ಶೋಭಿನಿಯೂ ಆದ ಸುರಾಸುಂದರಿಯನ್ನು ಬೇಗನೆ ತೆಗೆದುಕೊಂಡು ಬಾ."

ಸೇವಕನು ಅವಸರದಿಂದ ಸುರಾಪಾತ್ರೆಯನ್ನು ಖಾನನ ಕೈಯಲ್ಲಿ ಕೊಡಹೋದನು. ಭಯದಿಂದ ಸೇವಕನ ಕೈಯೂ, ಆತುರತೆ, ಕ್ರೋಧ, ಪರಿತಾಪಗಳ ಮೂಲಕವಾಗಿ ಖಾನನ ಕೈಯೂ ನಡುಗತೊಡಗಿದ್ದರಿಂದ ಪಾತ್ರೆಯು ಕೈ ಜಾರಿ ಭೂಮಿಗೆ ಬಿದ್ದು ಮದ್ಯವು ಮಣ್ಣುಪಾಲಾಯಿತು. ಅಭಾಗಿನಿಯಾದ ಮದಿರಾ ರಮಣಿಯು ಖಾನನ ಚುಂಬನಕ್ಕೆ ಎರವಾದಳು. ಮದ್ಯದ ಪಾತ್ರೆಯು ನೆಲಕ್ಕೆ ಬಿದ್ದದರಿಂದ ಖಾನನು ಮತ್ತಿಷ್ಟು ರೋಷಗೊಂಡನು. ಆಗ ಅವನು:-
"ಬದಮಾಷ! ನಿಕಲ್, ನಿಕಲ್, ಅಭೀ ನಿಕಲ್. ಉಲ್ಲೂ!" ಎಂದು ಸೇವಕನ ಮೇಲೆ ಹರಿಹಾಯ್ದನು. ಖಾನನು ಸಂತಪ್ತನಾದದ್ದರಿಂದ ಸೇವಕನು ಭಯಭೀತನಾಗಿ ಮೆಲ್ಲಡಿಯಿಡುತ್ತ ಅಲ್ಲಿಂದ ಕಾಲ್ದೆಗೆದನು. ಸೇವಕನು ಹೋಗತೊಡಗಿದ್ದನ್ನು ನೋಡಿ ಖಾನನು ಕ್ರೋಧವಾಣಿಯಿಂದ:'ಏ ಟೊಣಪಾ! ಎಲ್ಲಿಗೆ ಹೊರಟೆ? ಬೇಗನೆ ಇನ್ನೊಂದು ಪಾತ್ರೆ ಮದ್ಯವನ್ನು ತೆಗೆದುಕೊಂಡು ಬಾ."

ಸೇವಕನು ಪ್ರತಿಯೊಂದು ಶಬ್ದೋಚ್ಚಾರಣೆಯಾದ ಕೂಡಲೆ ಖಾನನಿಗೆ ಮುಜುರೆ ಮಾಡುತ್ತ ಮಾಡುತ್ತ, ಮಾತು ಮುಗಿದ ಮೇಲೆ ಶೀಘ್ರವಾಗಿ ಹೋಗಿ ಸುರೆಯನ್ನು ತೆಗೆದುಕೊಂಡು, ಅಲ್ಲಾನ ನಾಮಸ್ಮರಣೆ ಮಾಡುತ್ತ ಡೇರೆಗೆ ಬಂದನು. ಈ ಸಾರೆ ಅವನು ಸುರೆಯ ಪಾತ್ರೆಯನ್ನು ಖಾನನ ಕೈಯಲ್ಲಿ ಕೊಡಲಿಲ್ಲ; ಅವನ ಸಮ್ಮುಖದಲ್ಲಿರಿಸಿ ಸುಮ್ಮನೆ ಹೊರಟು ಹೋದನು. ರುಸ್ತುಮನು ಆ ಪಾತ್ರೆಯನ್ನು ಕೈಯಲ್ಲಿ ತೆಗೆದುಕೊಂಡು ತನಗಾದ ಅಪಮಾನದ ವಿಸ್ಮೃತಿಯಾಗಬೇಕೆಂಬ ಉದ್ದೇಶದಿಂದ ಮರುಭೂಮಿಯಲ್ಲಿ ಪ್ರವಾಸ

ಮಾಡಿ, ತೃಷೆಗೊಂಡ ಯಾತ್ರಿಕನು ಅತಿಯಾಗಿ ನೀರು ಕುಡಿಯುವಂತೆ ಬಹಳ ಸುರೆಯನ್ನೀಂಟಿದನು. ಸುರಾಪಾನದಿಂದ ಅವನಿಗೆ ಅಪಮಾನ ಘಟನೆಯು ವಿಸ್ಮೃತಿಯಾಗಲಿಲ್ಲ. ಅದು ಮತ್ತಿಷ್ಟು ಸ್ಪಷ್ಟರೂಪವಾಗಿ ಅವನ ದೃಷ್ಟಿಪಥದಲ್ಲಿ ಮೂರ್ತಿಮಂತಾಗಿ ನಿಂತಿತು. ಸುರಾಶಕ್ತಿಯೂ ಅಪಮಾನ ಘಟನೆಯೂ ಒಬ್ಬಳಿಗೂಡಿ ಅವನ ಹೃದಯಮಂಥನ ಮಾಡತೊಡಗಿದವು ಕೂಡಲೆ ಅವನು ಭ್ರಮಿಷ್ಠನಂತೆ ಅತ್ತಿತ್ತ ತಿರುಗಾಡಹತ್ತಿದನು. ತಿರುಗಾಟದಿಂದ ಸಮಾಧಾನವಾಗದಾಗಲು ಪುನಃ ಆಸನದ ಮೇಲೆ ಕುಳಿತನು. ಹೀಗೆ ಎಷ್ಟೋ ಸಾರೆ ಮಾಡಿದರೂ ಅವನಿಗೆ ಸಮಾಧಾನವಾಗಲಿಲ್ಲ. ಅವನು ತನ್ನ ಡೇರೆಯಲ್ಲಿ ವಿಶ್ರಾಂತಿಗಾಗಿ ಅನೇಕ ಆಸನಗಳನ್ನು ಇರಿಸಿದ್ದನು. ಆ ಆಸನಗಳಲ್ಲಿ ಎಷ್ಟೋ ಆಸನಗಳು ಒಡೆಯನ ದರ್ಶನವಿಲ್ಲದೆ ದೀನತೆ ಹೊಂದಿದ್ದವು; ಆದರೆ ಅಂದು ಮಾತ್ರ ಎಲ್ಲ ಆಸನಗಳೂ ಸಫಲತೆ ಹೊಂದಿದವು. ಆ ಮೇಲೆ ಖಾನನು ತನ್ನ ಡೇರೆಯಲ್ಲಿ ಆತ್ಮಶಾಂತಿಯು ದೊರೆಯದ್ದಕ್ಕಾಗಿ ಎಷ್ಟೋ ಡೇರೆಗಳಲ್ಲಿ ಕಾರಣವಿಲ್ಲದೆ ತಿರುಗಾಡಿ ಬಂದನು. ತರುವಾಯ ಅವನು ಒಂದು ಮಂಚದ ಮೇಲೆ ಒರಗಿ ತನ್ನ ಅಪಮಾನದ ಸಿಂಹಾವಲೋಕನ ಮಾಡತೊಡಗಿದನು:

"ಯಾವ ಕಾಫಿರನೊಡನೆ ಯುದ್ಧ ಮಾಡುವದು ಅಪಮಾನಕರವೂ ಗೌರವಕ್ಕೆ ಭಂಗವನ್ನುಂಟುಮಾಡುವಂತಹದೂ ಎಂದು ತಿಳಿದ್ದೇನೋ ಅದೇ ಕಾಫಿರನು ನನ್ನ ಅಪಮಾನಗೊಳಿಸಿದನಲ್ಲ! ಯುದ್ಧ ಪ್ರಾರಂಭ ಮಾಡಿದ ಮೇಲೆ ಯಾವ ಕಾಫಿರನ ವಧೆ ಮಾಡದೆ ಬಿಡಲಿಕ್ಕಿಲ್ಲವೆಂದು ದೃಢಸಂಕಲ್ಪ ಮಾಡಿದ್ದನೋ ಅವನೇ ನನ್ನನ್ನು ಕೊಲ್ಲುವಷ್ಟು ಸಮರ್ಥನಾದನಲ್ಲ! ಯಾವ ನನ್ನು ಪಶುಸಮಾನನೆಂದು ತಿಳಿದು ತಿರಸ್ಕಾರ ಮಾಡುತ್ತಿದ್ದೆನೋ ಅದೇ ಕಾಫಿರನು ನನ್ನನ್ನು ದನ ಹೊಡೆದಂತೆ ಹೊಡೆದು ಮಾನ ಕಳೆದನಲ್ಲ! ಮಾನ ಹೋದ ಮೇಲೆ ಮರಣ ಬಂದ ಹಾಗೆ. ನಾನು ಮಾನಗೇಡಿಯಾಗಿ ಬಾಳಿ ಪ್ರಯೋಜನವೇನು? ಇಷ್ಟು ದಿನಗಳ ವರೆಗೆ ನನ್ನ ಖಡ್ಗಕ್ಕೆ ವಿಜಯಿ ಖಡ್ಗವೆಂದು ಅಭಿಮಾನದಿಂದ ಅನ್ನುತ್ತಿದ್ದೆನು. ನಾನು ವಿಜಯಿ ವೀರನೆಂದು ಅಹಂಕಾರ ತಳೆದಿದ್ದೆನು. ಗೆಲವಿನ ಕತ್ತಿಯು ಅಪಜಯದಿಂದ ಮಲಿನವಾಯಿತು. ವಿಜಯಿ ವೀರನಾದ ನಾನು ಪರಾಭವ ಹೊಂದಿ ದುಷ್ಕೀರ್ತಿ ಹೊಂದಿದೆನು. ಪರಾಭವದ ಖಡ್ಗವನ್ನು ಪರಾಭವಗೊಂಡ ಕಾಯದಲ್ಲಿ ಪ್ರವೇಶ ಮಾಡಿಸಿ ಆತ್ಮತ್ಯಾಗ ಮಾಡಿಬಿಡುವೆನು. ಆ ಕಾಫಿರನು ನನ್ನನ್ನು ಬಲವಾಗಿ

ಹೊಡೆದು ಮೈಯನ್ನು ಜರ್ಜರಿತಗೊಳಿಸಿರುವನು. ಆ ಪೆಟ್ಟಿಗಿಂತಲೂ ನನ್ನ ಅಂತಃಕರಣಕ್ಕೆ ಬಲವಾದ ನೋವಾಗಿದೆ. ಮೇಲಿನ ಪೆಟ್ಟಿಗಿಂತ ಒಳ ನೋವು ಅತಿರೇಕವೆನಿಸಿದೆ. ಈ ಹೃದಯ ವಿದಾರಣವಾದ ಪ್ರಸಂಗವನ್ನು ಹೇಗೆ ಮರೆಯಲಿ? ಈ ಅಪಮಾನದ ಘಟನೆಯನ್ನು ಹೇಗೆ ಸಹಿಸಲಿ? ಆತ್ಮಹತ್ಯೆ ಮಾಡಿಕೊಂಡು ಎಲ್ಲವನ್ನೂ ಒಮ್ಮೆಲೆ ಮರೆತು ಬಿಡಲಾ? ಆತ್ಮಘಾತದಿಂದ ಈ ರುಸ್ತುಮನ ಕೀರ್ತಿಗೆ ಮತ್ತಿಷ್ಟು ಕಲಂಕವು ತಗಲಲಿಕ್ಕಿಲ್ಲವೆ? ಹಾಗಾದರೆ ಏನು ಮಾಡಲಿ? ಇಲ್ಲ, ಆತ್ಮತ್ಯಾಗಮಾಡುವದಿಲ್ಲ. ಸೇಡಿಗೆ ಸೇಡು! ರಕ್ತಕ್ಕೆ ರಕ್ತ! ಜೀವಕ್ಕೆ ಜೀವ!! ನನ್ನ ಮನಸ್ಸಿನ ನೋವು ಪ್ರತಿಶೋಧದಿಂದಲೇ ನಿವಾರಣೆಯಾಗತಕ್ಕದ್ದು. ನನಗಾದ ಅಪಮಾನದ ಸೇಡನ್ನು ಭೀಷಣವಾದ ಪ್ರಕಾರದಿಂದ ತೀರಿಸಿಕೊಳ್ಳುವೆನು ನನ್ನ ಕಠೋರ ಕೃತಿಯನ್ನು ನೋಡಿ ಕರಾಲ ಕಾಲನು ಸಹ ಮರುಗುವಂತೆ ಮಾಡುವೆನು. ಶತ್ರುವಿನ ಯಾತನೆಯ ಆರ್ತನಾದದಿಂದ ಕಠಿಣ ಹೃದಯಿಯಾದ ಅಂತಕನ ನೇತ್ರಗಳಲ್ಲಿ ಅಶ್ರುಧಾರೆಗಳು ಹರಿಯುವಂತೆ ಮಾಡುವೆನು! ಎಲೋ, ಅಲ್ಲಿ ಯಾರಿರುವಿರಿ? ಈಗಲೆ ಹೋಗಿ ನಸೀರಖಾನನನ್ನು ಕರೆದುಕೊಂಡು ಬನ್ನಿರಿ!"

ನಸೀರಖಾನನು ರುಸ್ತುಮನ ಪ್ರೀತಿಯ ಅನುಚರನೂ, ವಿಶ್ವಾಸದ ಮಂತ್ರಿಯೂ, ಪ್ರಶಂಸಕ ಮಿತ್ರನೂ ಆಗಿದ್ದನು. ಖಾನನ ಆಮಂತ್ರಣವು ಬಂದ ಕೂಡಲೆ ಅವನು ಲಗುಬಗೆಯಿಂದ ತನ್ನ ಡೇರೆಯನ್ನು ಬಿಟ್ಟು ಹೊರಟನು. ಖಾನನ ಡೇರೆಗೆ ಬಂದ ಮೇಲೆ ನಸೀರನಿಗೆ ಅಲ್ಲಿಯ ದೃಶ್ಯವನ್ನು ಕಂಡು ವಿಸ್ಮಯವಾಯಿತು ಬುಡಮೇಲಾಗಿಬಿದ್ದ ಮದ್ಯದ ಪಾತ್ರೆ, ಅಸ್ತವ್ಯಸ್ತವಾದ ಆಸನಗಳು, ತೆರಪಿಲ್ಲದೆ ಉರುಳಾಡುತ್ತಿದ್ದ ಖಾನಸಾಹೇಬರು, ಗಟ್ಟಿಯಾಗಿ ಉಸುರು ಬಿಡದೆ ಶಿಲಾಪ್ರತಿಮೆಗಳಂತೆ ನಿಂತಿದ್ದ ಕಾವಲುಗಾರರು ನಸೀರಖಾನನನ್ನು ದಂಗುಬಡಿಸಿದರು. ಖಾನನ ಉಗ್ರ ಪ್ರತಿಮೆಯು ನಸೀರನಿಗೆ ಭಯವನ್ನುಂಟು ಮಾಡಿತು. ಖಾನನನ್ನು ನೋಡಿ:"ಇವನೇನು ಮಾನವನೋ-ಪಿಶಾಚಿಯೋ!" ಎಂದು ಅವನು ಮನವಲ್ಲಿಯೇ ಅಂದು ಸಾವಕಾಶವಾಗಿ ಮಂಚದ ಬಳಿಗೆ ಸಾಗಿದನು.

ನಸೀರಖಾನನ ಆಗಮನವಾದ ಕೂಡಲೆ ರುಸ್ತುಮನು ಎದ್ದು ಕುಳಿತು: "ನಸೀರಖಾನ, ಪ್ರಿಯ ನಸೀರಖಾನ, ಬಾ; ಇಲ್ಲಿ ಬಾ. ನಿನ್ನನ್ನು ಯಾವ ಕೆಲಸಕ್ಕಾಗಿ ಕರೆಯಿಸಿದೆನೆಂಬದನ್ನು ಕಂಡು ಹಿಡಿದಿರುವೆಯೇನು?"

ನಸೀರಖಾನನು ಭ್ರಮಿಷ್ಟನಂತಾದನು. ಅವನು ಖಾನನ ಮುಖಲಕ್ಷಣವನ್ನು ನೋಡಿ ಬಹಳೇ ಗೊಂದಲದಲ್ಲಿ ಬಿದ್ದನು. ತನ್ನ ಒಡೆಯನು ಯುದ್ಧದಲ್ಲಿ ಜಯಶಾಲಿಯಾಗಿ ಬರುವನೆಂದೂ, ವಿಜಯಿಯಾದ ಖಾನನ ಗುಣಗಾನ ಮಾಡಿ ಅವನ ಮನಸ್ಸನ್ನು ಪ್ರಸನ್ನೀಕರಿಸಬೇಕೆಂದೂ ನಸೀರನು ಮುಂಚಿತವಾಗಿ ಯೋಚಿಸಿಕೊಂಡಿದ್ದನು. ರುಸ್ತುಮನ ಬೀಭತ್ಸ ಮೂರ್ತಿಯನ್ನು ನೋಡಿದ ಕೂಡಲೆ ಅವನ ಮನೋರಾಜ್ಯವು ಮಾಯವಾಯಿತು. ಒಡೆಯನ ಅನುಗ್ರಹ-ಪುರಸ್ಕಾರಗಳನ್ನು ದೊರಕಿಸುವದಕ್ಕೆ ಪ್ರತಿಯಾಗಿ ನಿಗ್ರಹ-ತಿರಸ್ಕಾರಗಳನ್ನು ಹೊಂದಬೇಕಾದ ಪ್ರಸಂಗವೊದಗಿತೆಂದು ಅವನು ಮರುಗಿದನು. ಖಾನನಿಗೆ ಏನು ಉತ್ತರವೀಯಬೇಕೆಂಬದೇ ಅವನಿಗೆ ತೋಚದಾಗಿ ಮೂಢನಂತೆ ಸ್ವಸ್ಥವಾಗಿ ಕುಳಿತನು.

"ಯಾಕೆ? ನಸೀರಖಾನ, ಸುಮ್ಮನೆ ಕುಳಿತ ಕಾರಣವೇನು? ನಾನು ನಿನ್ನನ್ನು ಯಾವ ಉದ್ದೇಶದಿಂದ ಕರೆಯಿಸಿದೆನೆಂಬದು ನಿನಗೆ ತಿಳಿಯದೇನು? ಇಂದು ಇಡೀ ಆಯುಷ್ಯದಲ್ಲಿ ನಡೆಯದಂತಹ ವಿಚಿತ್ರ ಕಾರ್ಯವು ನಡೆದು ಹೋಯಿತು. ಈ ಖಾನನ ಮದ-ಮಾನಗಳೂ, ಮಿಗಿಲಾದ ವೀರತೆ-ಯಶಗಳೂ ಮಾಯವಾದವು. ಒಬ್ಬ ಮದಾಂಧ ಕಾಫಿರನು ನನ್ನನ್ನು ಅಪಮಾನ ಜರ್ಜರಿತನನ್ನು ಮಾಡಿರುವನು. ನನ್ನ ಕೀರ್ತಿ ಮುಕುಟದ ಮೇಲೆ-ವಿಜಯಿ ಮಸ್ತಕದ ಮೇಲೆ ಪದಾಘಾತ ಮಾಡಿರುವನು. ನನ್ನ ಕೀರ್ತಿಸ್ತಂಭವನ್ನು ಮುರಿದು ಕೆಡಹಿರುವನು ಮೇರುಶಿಖರಕ್ಕಿಂತಲೂ ಉನ್ನತವಾದ ಮಾನರಾಶಿಯನ್ನು ರಸಾತಳಕ್ಕಿಳಿಸಿರುವನು ಅಪಮಾನವು,-ದೊಡ್ಡ ಅಪಮಾನವು, ಒಬ್ಬ ಕೈಲಾಗದ ಹೇಡಿ ಕಾಫಿರನಿಂದ ಕಲ್ಪನಾತೀತವಾದ ಅಪಮಾನವು ಸಂಘಟಿಸಿತು. ಈ ಅಪಮಾನ ಶಿಖಿಯು ಹೇಗೆ ನೊಂದುವದು? ನನ್ನ ಪ್ರಿಯಕರಳಾದ ಮದಿರಾ ಸುಂದರಿಯ ಸ್ಪರ್ಶದಿಂದ ಆ ಜ್ವಾಲೆಯು ಮತ್ತಿಷ್ಟು ಪ್ರಜ್ವಲಿತವಾಗಿದೆ. ನಸೀರಖಾನ, ಈಗ ಏನು ಮಾಡಲಿ? ನನ್ನ ಅಮೋಘವಾದ ಸೈನ್ಯದ ಮುಂದೆ ಕಾಫಿರನಾದ ಅಮರಪ್ರಸಾದನು ಮಾಡಿದ ಅಪಮಾನಕ್ಕಾಗಿ ನಾನು ಏನು ಮಾಡಲಿ? ಹೇಳು; ಬೇಗನೆ ಹೇಳು."

ಭಾಗ್ಯವಿಧಾತೃವಾದ ಪ್ರಭುವಿನ ಗುಣಗಾನ ಮಾಡಿ ಸಂಭಾವನೆ ಹೊಂದಬೇಕೆಂಬ ಆಶೆಯು ಈಗ ನಸೀರನ ಹೃದಯದಿಂದ ನಿರ್ನಾಮವಾಗಿ ಹೋಯಿತು. ಮುಂಜಾನೆ ಯಾವ ಪಾತಕಿಯ ಮುಖಾವಲೋಕನೆ ಮಾಡಿದ್ದರಿಂದ

ಈ ಬಗೆಯ ಅರಿಷ್ಟವು ಪ್ರಾಪ್ತವಾಯಿತೋ ಎಂದು ಅವನು ಮಿಡುಕಿದನು!

"ನಸೀರಖಾನ, ನನ್ನ ಹೃದಯವಹ್ನಿಯು ಶೀತಲವಾಗುವಂತೆ ಯಾವ ಉಪಾಯಮಾಡಬೇಕೆಂಬದು ನಿನಗೆ ತಿಳಿಯಲೊಲ್ಲದೆ?"

"ಪ್ರಭೋ!" ನಸೀರಖಾನನು ನಮ್ರತೆಯಿಂದ:—"ತಾಳಬೇಕು, ತಾಳಬೇಕು. ಏನೋ ಕುವೇಳೆಯ ಮೂಲಕ ನಿಮಗೆ ಪರಾಜಯ ಒದಗಿರುವದು. ಆ ಕಾಫರ ಅಮರಪ್ರಸಾದನೆಂದರೆ ಎಷ್ಟರವನು? ಇನ್ನೊಮ್ಮೆ ಆ ನೀಚನಿಗೆ ಗಂಟುಬಿದ್ದು ಪಾರುಪತ್ಯ ಮಾಡಿರಿ. ಪರಾಭವದ ಅಪಮಾನ ಶಿಖಿಯು ವಿಜಯದಿಂದ ಶಾಂತವಾಗುವದು. ಸೇಡಿಗೆ ಸೇಡು, ರುಧಿರಕ್ಕೆ ರುಧಿರ, ಪ್ರಾಣಕ್ಕೆ ಪ್ರಾಣ! ಹೀಗೆ ಮಾಡುವದೇ ಯೋಗ್ಯವಾದ ಉಪಾಯವು. ನಿಮ್ಮ ಸೇನೆಯು ಬಲಾಢ್ಯವಾದದ್ದಿರುವದು. ನೀವಾದರೂ ಅಸಾಮಾನ್ಯ ಶೂರರಿರುವಿರಿ. ಮನಸ್ಸಿನ ಮೇಲೆ ತೆಗೆದುಕೊಂಡರೆ, ನಿಮಗೆ ಅಸಾಧ್ಯವಾದದ್ದು ಯಾವದೂ ಇಲ್ಲ. ಒಮ್ಮೊಮ್ಮೆ ಒಬ್ಬ ಹೀನ ಬಲನು ಕೂಡ ನಾಮಾಂಕಿತ ಯೋಧನನ್ನು ಜಯಿಸಿದ ದೃಷ್ಟಾಂತಗಳು ಅನೇಕವಿರುವವು. ನಿಮಗಾದ ಪರಾಜಯವಾದರೂ ಅಂಥದೇ ಒಂದು ಪ್ರಕಾರದ್ದು. ಪ್ರಭುಗಳೆ, ನೀವು ಯಾವ ವಿಧದ ಯೋಚನೆ ಮಾಡಬೇಡಿರಿ; ಖೇದಗೊಳ್ಳಬೇಡಿರಿ; ಕಿಂಕರ್ತವ್ಯ ಮೂಢರಾಗಬೇಡಿರಿ. ದೀರ್ಘಸಾಹಸ ಮಾಡಿ ಆ ಕಾಫರನ ಶಿರವನ್ನು ತೆಗೆದುಕೊಂಡು ಬನ್ನಿರಿ."

"ನಸೀರ!" ರುಸ್ತುಮಖಾನನು ಗಾಂಭೀರ್ಯದಿಂದ:—"ಆತ್ಮಕ್ಕೆ ವಿನಿಮಯವಾಗಿ ಆತ್ಮವು! ಶೋಣಿತಕ್ಕೆ ವಿನಿಮಯವಾಗಿ ಶೋಣಿತವು! ಇದೇ ಪಠಾಣರ ಪ್ರತಿಶೋಧವು. ನೀನು ನನ್ನ ಹೃದಯದಲ್ಲಿ ಉತ್ಪನ್ನವಾದ ವಾಣಿಯನ್ನೇ ಪ್ರತಿಧ್ವನಿಗೊಳಿಸಿದೆ. ನಾನು ಯಾವ ಪ್ರಕಾರದಿಂದಲಾದರೂ ಸೇಡು ತೀರಿಸಿಕೊಳ್ಳತಕ್ಕವನೇ. ಅಮರಪ್ರಸಾದನು ಮಾಡಿದ ಅಪಮಾನದ ಸೇಡನ್ನು ತೀರಿಸಿಕೊಳ್ಳುವಾಗ ನಾನು ದಯೆ-ಧರ್ಮ, ಪಾಪ-ಪುಣ್ಯ ಮೊದಲಾದ ಯಾವ ವಿಚಾರಗಳನ್ನೂ ಮನಸ್ಸಿನಲ್ಲಿ ತರುವದಿಲ್ಲ. ನಾನು ಈ ಕರ್ತವ್ಯ ಮಾಡುವಾಗ ಯಾರ ಅಡ್ಡಿಯನ್ನೂ ಲೆಕ್ಕಿಸುವದಿಲ್ಲ. ಒಂದು ವೇಳೆ ನವಾಬ ದಾವುದಖಾನನು ಅಡ್ಡಾದರೆ ಸಹ ಕೇಳುವವನಲ್ಲ ಇಡೀ ರಾಷ್ಟ್ರವು ನನಗೆ ವೈರಿಯಾಗಿ ನಿಂತರೂ ಅದರ ಪರಿವೆ ನನಗಿಲ್ಲ. ಕರ್ಮಚ್ಯುತನಾದರೂ, ಬೀದಿಯ ಭಿಕ್ಷುಕನಾದರೂ ನಾನು ಕರ್ತವ್ಯಭ್ರಷ್ಟನಾಗುವದಿಲ್ಲ. ಪ್ರತಿಶೋಧವನ್ನು ಮರೆಯುವದಿಲ್ಲ. ಇದೇ ನನ್ನ ಪ್ರತಿಜ್ಞೆಯು! ಸತ್ಯವಾಣಿಯು!"

"ಶಾಬಾಸ್, ಶಾಬಾಸ್! ಪ್ರಭುಗಳೆ, ನಿಮ್ಮ ಪ್ರತಿಜ್ಞೆಯು ಸಾರ್ಥಕವಾದದ್ದಾಗಿರುವದು. ಆಡಿದಂತೆ ಕಾರ್ಯವನ್ನು ನೀವು ಮಾಡುವವರೇ ಆಗಿರುವಿರಿ."

ನಸೀರನ ಪ್ರಶಂಸೆಯಿಂದ ರುಸ್ತುಮಖಾನನು ಮತ್ತಿಷ್ಟು ಉಬ್ಬಿದನು.

## ೧೫ನೆಯ ಪರಿಚ್ಛೇದ.

ಭೀಷಣವೂ ಅಂಧಕಾರಯುಕ್ತವೂ ನೀರವವೂ ಆದ ಗಂಭೀರ ರಾತ್ರಿಯು. ಸೃಷ್ಟಿಯಲ್ಲಿ ಅಂಧಕಾರ ಸಾಮ್ರಾಜ್ಯವು ವ್ಯಾಪಿಸಿತ್ತು. ಶುಕ್ಲಪಕ್ಷದ ಪಂಚಮಿಯ ಚಂದ್ರಮನ ಕೋರೆಯು ಮರೆಯಾಗಿ ನಾಲ್ಕೈದು ಗಳಿಗೆಗಳಾಗಿದ್ದರಿಂದ ರಾತ್ರಿಗೆ ಮತ್ತಿಷ್ಟು ಯೌವನವು ಪ್ರಾಪ್ತವಾಗಿತ್ತು. ಅಂಧಕಾರಕ್ಕೆ ಭಯಾನಕತೆಯು ಬಂದಿತ್ತು. ಸಾಧ್ಯವಾದ ಮಟ್ಟಿಗೆ ಈ ಭೀಷಣತೆಯನ್ನು ದೂರ ಮಾಡುವದಕ್ಕಾಗಿ ಆಗಸದಲ್ಲಿ ತಾರೆಗಳು ಹಾಸ್ಯಗೈಯತೊಡಗಿದ್ದವು. ತಾರಕೆಗಳ ಹುಟ್ಟುಗುಣವೇ ಅಂತಹದಿದ್ದುದರಿಂದ ಅವುಗಳ ಹಾಸ್ಯವನ್ನು ಕೇಳುವವರು ಯಾರೂ ಇದ್ದಿಲ್ಲ. ಎಲ್ಲಿ ನೋಡಿದಲ್ಲಿ ಅಂಧಕಾರವೂ, ಸ್ತಬ್ಧತೆಯೂ, ಭಯಾನಕತೆಯೂ ವ್ಯಾಪಿಸಿದ್ದವು.

ಈ ಅಂಧಕಾರ ಸೃಷ್ಟಿಯ ಸುವಿಶಾಲ ಪ್ರದೇಶದ ಒಂದು ಭಾಗದಲ್ಲಿ ಮೊಗಲರ ಶಿಬಿರಗಳಿದ್ದವು. ಆ ಶಿಬಿರಗಳು ಒಂದೇ ಸ್ಥಳದಲ್ಲಿರದೆ, ಅನೇಕ ಸ್ಥಳಗಳಲ್ಲಿ ವಿಸ್ತೃತವಾಗಿ ಪಸರಿಸಿದ್ದವು. ಒಂದು ಕಡೆಯಲ್ಲಿ ಮೊಗಲರ ಪ್ರಧಾನ ಸೇನಾನಾಯಕನಾದ ಹುಸೇನ ಕುಲೀಖಾನನ ಶಿಬಿರವಿತ್ತು. ಮತ್ತೊಂದು ಕಡೆಗೆ ಉಪಸೇನಾಪತಿಯಾದ ಮಹಾರಾಜಾ ತೋಡರಮಲ್ಲನ ಶಿಬಿರವಿತ್ತು. ಬೇ-ರೊಂದು ಕಡೆಗೆ ಮೊಗಲರ ಸಹಾಯಕ ರಾಜಪರಿವಾರದ ಶಿಬಿರಗಳಿದ್ದವು. ಆ ಶಿಬಿರಗಳಿಂದ ಸ್ವಲ್ಪ ದೂರದಲ್ಲಿ ಮಹಾರಾಜಾ ಅಮರಪ್ರಸಾದನ ಶಿಬಿರವಿತ್ತು

ಯುದ್ಧಶ್ರಾಂತರಾದ ಸೈನಿಕರು ನಿದ್ರಾಧೀನರಾಗಿದ್ದರು. ಕಾವಲುಗಾರರು ಕಾವಲಿನ ಕೆಲಸ ಬಿಟ್ಟು ತೂಕಡಿಸತೊಡಗಿದ್ದರು. ರಾಜಾ ಅಮರಪ್ರಸಾದನ ಶಿಬಿರದ ಕರ್ತವ್ಯಪರಾಯಣರಾದ ಸಶಸ್ತ್ರ ಕಾವಲುಗಾರರಲ್ಲಿ ಇಬ್ಬರು ಮಾತ್ರ ಎಚ್ಚತ್ತಿದ್ದರು ಅಮರಪ್ರಸಾದನು ತನ್ನ ಮಂಚದ ಮೇಲೆ ಮಲಗಿದ್ದನು. ನಿದ್ರಾದೇವಿಯ ಕುಸುಮ ಪರಾಗಸ್ಪರ್ಶದಿಂದ ಅವನ ಎರಡೂ ಕಣ್ಣುಗಳು ಮುಚ್ಚಲ್ಪಟ್ಟಿದ್ದವು. ಈ ಸಮಯದಲ್ಲಿ ಕೆಲವು ಜನ ಕೃಷ್ಣವಸ್ತ್ರಾಚ್ಛಾದಿತರು ಒಳ್ಳೆಯ ಕೌಶಲ್ಯದಿಂದ ಮೆಲ್ಲ ಮೆಲ್ಲಗೆ ಅವನ ಮಂಚದ ಬಳಿಗೆ

ಬಂದರು. ಎಲ್ಲರ ಕೈಗಳಲ್ಲಿ ಕೃಪಾಣಗಳಿದ್ದವು ಒಳಗೆ ಬಂದವರಲ್ಲೊಬ್ಬನು ಅಮರಪ್ರಸಾದನ ಡೇರೆಯಲ್ಲಿದ್ದ ಶಸ್ತ್ರಗಳನ್ನು ತನ್ನ ಸಂಗಡಿಗರ ವಶದಲ್ಲಿ ಕೊಟ್ಟನು. ಅನಂತರದಲ್ಲಿ ಅವನು ಅಮರಪ್ರಸಾದನ ಸಮೀಪಕ್ಕೆ ಹೋದನು. ಮಂಚದ ಮೇಲೆ ಒಂದು ತೀಕ್ಷ್ಣವಾದ ಖಡ್ಗವಿದ್ದದ್ದು ಮಂದವಾದ ದೀಪ ಪ್ರಕಾಶದಲ್ಲಿ ಆಗಂತುಕನಿಗೆ ಕಂಡಿತು. ಕೂಡಲೆ ಅವನು ಆ ಶಸ್ತ್ರವನ್ನು ಕೈಯಲ್ಲಿ ತೆಗೆದುಕೊಳ್ಳಲು ಅದು ಜಾರಿ ಭೂಮಿಗೆ ಬಿದ್ದು ಝಣತ್ಕಾರ ಶಬ್ದ ಮಾಡಿತು. ಈ ಶಬ್ದವನ್ನು ಕೇಳಿ ಅಮರಪ್ರಸಾದನು ಎಚ್ಚತ್ತು ಕಣ್ಣುತೆರೆದನು. ಅವನಿಗೆ ತನ್ನ ಸಮೀಪದಲ್ಲಿ ಕೆಲವು ಜನ ಕೃಷ್ಣವಸ್ತ್ರಾಚ್ಛಾದಿತ ಜನರು ನಿಂತದ್ದು ಕಂಡಿತು. ಕೂಡಲೆ ಅವನು ಎದ್ದು ಕುಳಿತು, ಬಂದಿರುವ ಜನರು ತುಡುಗರೆಂದು ಭಾವಿಸಿ ಮಂಚದಿಂದ ಕೆಳಗೆ ಜಿಗಿದನು. ಪರಕ್ಷಣದಲ್ಲಿ ಅವನು ತನ್ನ ಶಸ್ತ್ರವನ್ನು ತೆಗೆದುಕೊಳ್ಳಲಿಕ್ಕೆ ಮಂಚದ ಮೇಲೆ ಕೈ ಹಾಕಿದನು; ಆದರೆ ಅಲ್ಲಿ ಶಸ್ತ್ರವಿದ್ದಿಲ್ಲ. ಆಗ ಅವನು ಕರ್ಕಶ ವಾಣಿಯಿಂದ:—"ಚೋರರೆ, ನೀವು ನನ್ನ ಶಸ್ತ್ರವನ್ನು ಅಪಹರಿಸಿರುವಿರಾ? ನಾನು ನಿಶ್ಶಸ್ತ್ರನಾಗಿದ್ದರೂ ನಿಮ್ಮೊಳಗಿನ ಮೂರು-ನಾಲ್ಕು ಜನರ ಅಸುವನ್ನು ಹೀರದೆ ಸಾಯತಕ್ಕವನಲ್ಲವೆಂಬದನ್ನು ದೃಢವಾಗಿ ನಂಬಿರಿ. ನೀವು ಸುಮ್ಮನೆ ಜೀವವನ್ನು ಕಳೆದುಕೊಳ್ಳಬೇಡಿರಿ. ನೀವು ಧನಾಪೇಕ್ಷಿಗಳಾಗಿ ಇಲ್ಲಿಗೆ ಬಂದಿರುವಿರಲ್ಲವೆ? ಈ ಮುತ್ತಿನ ಹಾರವನ್ನೂ, ರತ್ನದ ಉಂಗುರವನ್ನೂ, ದ್ರವ್ಯವನ್ನೂ ಕೊಡುವೆನು. ನನ್ನ ಪ್ರೀತಿಯ ವಿಜಯೀ ಖಡ್ಗವನ್ನಿಟ್ಟು ಸುಮ್ಮನೆ ಹೊರಟು ಹೋಗಿರಿ."

ಅಮರಪ್ರಸಾದನ ಮಾತುಗಳನ್ನು ಕೇಳಿ, ಒಬ್ಬ ದೀರ್ಘಾಕಾರದ ವ್ಯಕ್ತಿಯು ಮುಂದೆ ಬಂದು ತೀವ್ರ ವ್ಯಂಗ್ಯಸ್ವರದಿಂದ:—"ನಾನು ನಿನ್ನ ದ್ರವ್ಯವನ್ನು ಒಯ್ಯಲಿಕ್ಕೆ ಬಂದಿಲ್ಲ ಕಾಫರ!"

"ಹಾಗಾದರೆ ಏನು ಒಯ್ಯಲಿಕ್ಕೆ ಬಂದಿರುವೆ ಯವನ?"

"ನಿನ್ನ ಪ್ರಾಣವನ್ನು!"

"ತಿಳಿಯಿತು. ನೀನು ತಸ್ಕರನಲ್ಲ; ದಸ್ಯುವಲ್ಲ; ನೀನು ನನ್ನ ಶತ್ರುವೆಂಬದು ತಿಳಿಯಿತು." ಎಂದು ನುಡಿದು, ಅಮರಪ್ರಸಾದನು ತನ್ನ ಸೇವಕರನ್ನು ಕುರಿತು:—"ಹೊರಗೆ ಯಾರಿರುವಿರಿ? ಒಂದು ಖಡ್ಗವನ್ನು ಬೇಗನೆ ತೆಗೆದುಕೊಂಡು ಬರ್ರಿ!"

"ಹೊರಗೆ ಯಾರೂ ಇಲ್ಲ. ಇಬ್ಬರು ಕಾವಲುಗಾರರು ಎಚ್ಚರಾಗಿದ್ದರು.

ಅವರನ್ನು ಚಿರನಿದ್ರೆ ಮಾಡಹಚ್ಚಿ ಒಳಗೆ ಬಂದಿರುವೆವು."

"ನೀವು ಯಾರು?"

"ನಿನ್ನ ಕಾಲರೂಪಿಯಾದ ರುಸ್ತುಮನು!" ಎಂದು ರುಸ್ತುಮಖಾನನು ಗರ್ಜಿಸಿ, ತನ್ನ ಕೃಷ್ಣವರ್ಣದ ವಸ್ತ್ರಾಚ್ಛಾದನವನ್ನು ತೆಗೆದು ಹಾಕಿ:-"ನನ್ನ ಮಾತು ಸತ್ಯವೋ-ಅಸತ್ಯವೋ ಎಂಬದನ್ನು ಚನ್ನಾಗಿ ನೋಡು."

"ರುಸ್ತುಮಖಾನ, ಇದು ಧರ್ಮಾಚರಣೆಯಲ್ಲ ಈ ಬಗೆಯ ವರ್ತನವು ನಿನ್ನಂತಹ ಪ್ರತಾಪಶಾಲಿಯ ಶೀಲಕ್ಕೆ ಶೋಭಿಸುವಂತಹದಲ್ಲ. ಪರಾಕ್ರಮದ ಪರೀಕ್ಷೆ ಮಾಡುವದಿದ್ದರೆ ಶಸ್ತ್ರವನ್ನು ಕೊಟ್ಟು ನೋಡು."

"ನಾನು ನಿನ್ನ ವೀರತ್ವದ ಪರೀಕ್ಷೆಗೆ ಬಂದಿಲ್ಲ; ಧರ್ಮಾಧರ್ಮದ ವಿಚಾರಕ್ಕೆ ಬಂದಿಲ್ಲ. ನಾನು ಬಂದದ್ದು ನನ್ನ ಅಪಮಾನದ ಸೇಡಿಗಾಗಿ. ಯಾವದೇ ಬಗೆಯ ಸಾಧನದಿಂದ ನಾನು ನನ್ನ ಕರ್ತವ್ಯವನ್ನು ಕೊನೆಗಾಣಿಸತಕ್ಕವನೇ! ಅಮರಪ್ರಸಾದ, ಇದೇ ನನ್ನ ಸದ್ಯದ ಧರ್ಮವು, ಸದ್ಯದ ಶೀಲವು!" ಎಂದು ರುಸ್ತುಮನು ನುಡಿದು, ತನ್ನ ಅನುಚರರನ್ನು ಕುರಿತು:-"ಈ ಕಾಫರನನ್ನು ಸೆರೆಹಿಡಿಯಿರಿ!"

ಖಾನನ ಮಾತುಗಳಿಂದ ಅಮಪ್ರಸಾದನ ಹೃದಯವು ಜಾಗ್ರತವಾಯಿತು. ಅವನು ಕ್ರೋಧದಿಂದ:-"ಈ ವೀರ ರಜಪುತನ ದೇಹದಲ್ಲಿ ಪ್ರಾಣವೂ ಧಮನಿಗಳಲ್ಲಿ ಶೋಣಿತವೂ ವಾಸವಾಗಿರುವ ವರೆಗೆ ಅವನ ಅಂಗಸ್ಪರ್ಶ ಮಾಡುವ ಕ್ಷಮತೆಯು ಯಾವನಲ್ಲುಂಟು?"

ಅಮರಪ್ರಸಾದನು ಶೀಘ್ರವಾಗಿ ಮಂಚದ ಬಳಿಗೆ ಹೋಗಿ, ಅದನ್ನು ಎತ್ತಿ ಒಳ್ಳೆಯ ಕಸುವಿನಿಂದ ನೆಲಕ್ಕೆ ಒಗೆದನು. ಆ ಆಘಾತದಿಂದ ಕಟ್ಟಿಗೆಯ ಮಂಚವು ಮುರಿಯಿತು. ಕೂಡಲೆ ಅವನು ಆ ಮಂಚದ ಒಂದು ಉದ್ದವಾದ ಕಟ್ಟಿಗೆಯನ್ನು ತೆಗೆದುಕೊಂಡು, ಅದನ್ನು ತಿರುವುತ್ತ:-"ಬನ್ನಿರಿ, ಬೇಗನೆ ಬನ್ನಿರಿ; ಯಾರು ಪ್ರಾಣಕೊಡಲಿಕ್ಕೆ ಸಿದ್ಧರಾಗಿರುವಿರೋ ಅವರು ಆಕ್ರಮಣ ಮಾಡ ಬನ್ನಿರಿ!"

"ಹಾ! ಹೆದರಬೇಡಿರಿ! ಅನುಮಾನಿಸದೆ ಈ ಕಾಫರನನ್ನು ಹಿಡಿದು ಹೆಡಮುರಿಗೆ ಕಟ್ಟಿರಿ!" ಎಂದು ರುಸ್ತುಮಖಾನನು ತನ್ನ ಅನುಚರರಿಗೆ ಹೇಳಿದೊಡನೆಯೆ ಎಂಟು-ಹತ್ತು ತೀಕ್ಷ್ಣಕೃಪಾಣಗಳು ಅಮರಪ್ರಸಾದನ ಮೇಲೆ ಎತ್ತಲ್ಪಟ್ಟವು.

ಅಮರಪ್ರಸಾದನು ತನ್ನ ಕೈಯೊಳಗಿನ ದಂಡದ ಮೇಲೆ ವಿಶ್ವಾಸವಿಟ್ಟು, ರುಸ್ತುಮನ ಸೈನ್ಯದ ಮೇಲೆ ಆಕ್ರಮಣ ಮಾಡಿದನು; ಆದರೆ ಎಂಟು-ಹತ್ತು ಜನ ಸಬಲ ಸಶಸ್ತ್ರಸೈನಿಕರ ಶಸ್ತ್ರಾಘಾತದಿಂದ ಕಟ್ಟಿಗೆಯ ದಂಡವು ಮುರಿಯುತ್ತ ಮುರಿಯುತ್ತ ಸಣ್ಣದಾಗಹತ್ತಿತು. ಕೂಡಲೆ ಅವನು ತನ್ನ ಕೈಯೊಳಗಿನ ಸಣ್ಣ ದಂಡವನ್ನು ಯವನ ಸೈನಿಕರ ಮೇಲೆ ಬಿಸುಟಿದನು. ಆ ದಂಡವು ಒಬ್ಬನ ಪ್ರಾಣತಕ್ಕೊಳ್ಳದೆ ಬಿಡಲಿಲ್ಲ. ತರುವಾಯ ಅವನು ಮುರಿದು ಬಿದ್ದ ಮಂಚದ ಬಳಿಗೆ ಹೋಗಿ ಮತ್ತೊಂದು ಕಟ್ಟಿಗೆಯನ್ನು ಕಿತ್ತುಕೊಂಡು ಪ್ರತಿ ಪಕ್ಷಿಗಳ ಮೇಲೆ ಆಕ್ರಮಣ ಮಾಡಿದನು ಕೆಲವು ವೇಳೆಯಲ್ಲಿ ಆ ದಂಡದ ಗತಿಯಾದರೂ ಮೊದಲಿನ ದಂಡದಂತೆಯೆ ಆಯಿತು ಮುರಿದ ಮಂಚದಲ್ಲಿ ಇನ್ನು ಆಯುಧದಂತೆ ಉಪಯೋಗವಾಗುವ ಒಂದೂ ಕಟ್ಟಿಗೆಯುಳಿಯಲಿಲ್ಲ. ಇನ್ನು ಮೇಲೆ ತನ್ನ ಉದ್ಧಾರವಾಗುವದು ಅಸಂಭವವೆಂದು ಅಮರಪ್ರಸಾದನು ತಿಳಿದನು. ಆಗ ಅವನು ಚೀತ್ಕಾರ ಧ್ವನಿಯಿಂದ ಖಾನನನ್ನು ಕುರಿತು:-"ರುಸ್ತುಮ, ನೀನು ಪಠಾಣನಿರುವೆ; ನಾಮಾಂಕಿತ ಯೋಧನಿರುವೆ; ಯಥಾರ್ಥವಾದ ಪ್ರತಾಪಶಾಲಿ ಇರುವೆ. ನನಗೆ ಸಹಾಯಕರು ಯಾರೂ ಇಲ್ಲ; ನಿನ್ನೊಡನೆ ಹತ್ತು ಜನ ಸೈನಿಕರುಂಟು. ನಿನ್ನ ಸೈನಿಕರು ಖಡ್ಗಪಾಣಿಗಳಾಗಿರುವರು; ನನ್ನ ಕೈಯಲ್ಲಿ ಮುರಿದು ಸಣ್ಣದಾದ ಒಂದು ದಂಡವುಂಟು. ನಿಃಶಸ್ತ್ರನಾದ ನನ್ನನ್ನು ಹತ್ತು ಜನ ದೀಪ್ತಿಮಾನ ಕೃಪಾಣಧಾರಿಗಳೊಡನೆ ಮುತ್ತಿ, ಪಶುಸಮಾನವಾಗಿ ವಧೆಮಾಡಬೇಡ. ನನಗೆ ಒಂದು ಶಸ್ತ್ರವನ್ನು ಕೊಟ್ಟು ನೋಡು."

ವಿಕಟ ಹಾಸ್ಯದಿಂದ ಖಾನನು:—"ಇಲ್ಲಿ ನಿನಗೆ ಶಸ್ತ್ರ ಕೊಡುವದಿಲ್ಲ; ಪಶುವಿನಂತೆ ನಿನ್ನ ಕೊಲೆ ಮಾಡುವೆನು."

"ಇದು ಪಠಾಣರ ವೀರ ಧರ್ಮವೆ? ಇಂತಹ ಆಚರಣೆಯು ಕೀರ್ತಿಪ್ರದವೆ?"

"ಹೌದು, ಇದೇ ಪಠಾಣರ ವೀರ ಧರ್ಮವು, ಇದೇ ಕೀರ್ತಿಪ್ರದವಾದ ವರ್ತನವು. ಅಮರಪ್ರಸಾದ, ಅಂದು ನೀನು ನನ್ನ ಮೇಲೆ ಪದಾಘಾತ ಮಾಡುವಾಗ ಈ ಧರ್ಮೋಪದೇಶವು ಎಲ್ಲಿ ಅಡಗಿತ್ತು?"

"ಖಾನ, ನೀನು ಅಂದು ಶಸ್ತ್ರಪಾಣಿಯಾಗಿದ್ದೆ; ಪರಾಭೂತನಾಗಿದ್ದೆ."

"ಇಂದು ನೀನೂ ಪರಾಜಯ ಹೊಂದಿರುವೆ ಕೈಯಲ್ಲಿ ಶಸ್ತ್ರವಿಲ್ಲದಿದ್ದರೆ ನಾನೇನು ಮಾಡಲಿ? ನನಗಾದ ಅಪಮಾನದ ಸೇಡನ್ನು ಅತ್ಯಂತ ಭೀಷಣ

ವಾದ ಪ್ರಕಾರದಿಂದ ತೀರಿಸಿಕೊಳ್ಳುವೆನೆಂದು ಪ್ರತಿಜ್ಞೆ ಮಾಡಿರುವೆನು. ಅಲ್ಲಾನ ಅನುಗ್ರಹದಿಂದ ಇಂದು ಒಳ್ಳೆಯ ಸಂಧಿಯು ಸಾಧಿಸಿರುವದು."

"ಇದು ಪಠಾಣರ ಧರ್ಮವಲ್ಲ, ಶೀಲವಲ್ಲ, ನ್ಯಾಯ ನೀತಿಗಳಲ್ಲ. ನೋಡು, ಚನ್ನಾಗಿ ವಿಚಾರ ಮಾಡಿ ನೋಡು."

'ಚನ್ನಾಗಿ ವಿಚಾರಿಸಿರುವೆನು. ನಿನ್ನನ್ನು ವಧೆಮಾಡುವದೇ ನನ್ನ ಧರ್ಮವು, ಪಠಾಣ ಧರ್ಮವು, ಸಮಸ್ತ ವಿಶ್ವದಲ್ಲಿರುವ ಇಸ್ಲಾಮಿಯರ ಪವಿತ್ರ ಧರ್ಮವು!'

"ಸುಳ್ಳು, ತೀರ ಸುಳ್ಳು!" ನಾಲ್ಕೂ ದಿಕ್ಕುಗಳನ್ನು ನಡುಗಿಸುವಂತಹ ಗಂಭೀರವಾದ ಧ್ವನಿಯು ಹೊರಬಿದ್ದಿತು. "ಈ ಮಾತು ತೀರ ಸುಳ್ಳು!"

ಈ ವಾಕ್ಯವು ಹೊರಬೀಳುತ್ತಲೆ ಬಹು ಮೂಲ್ಯ ಆಭರಣಗಳಿಂದ ಭೂಷಿತನಾದ ಒಬ್ಬ ಮನುಷ್ಯನು ಅಮರಪ್ರಸಾದನ ಡೇರೆಯನ್ನು ಪ್ರವೇಶಿಸಿದನು. ಎಲ್ಲರೂ ಬೆರಗಾಗಿ ಆ ಮೂರ್ತಿಯನ್ನು ನೋಡುತ್ತ ನಿಂತರು. ಪರ ಕ್ಷಣದಲ್ಲಿ ಎಲ್ಲರ ವಿಸ್ಮಯವೂ ದೂರಾಯಿತು. ಸೇನಾಧ್ಯಕ್ಷ ರುಸ್ತುಮಖಾನನೂ ಅವನ ಅನುಚರರೂ ಆಗಂತುಕನಿಗೆ ನೆಲಮುಟ್ಟಿ ಅಭಿವಾದನೆಗಳನ್ನರ್ಪಿಸಿದರು. ಅನಂತರದಲ್ಲಿ ಆ ಮನುಷ್ಯನು ಅಧಿಕಾರಯುಕ್ತ ವಾಣಿಯಿಂದ:—

"ರುಸ್ತುಮಖಾನ, ನೀವು ವೀರರಲ್ಲ. ವೀರ ಜನರು ಇಂತಹ ಹೇಸಿ ಕೃತ್ಯವನ್ನೆಂದೂ ಮಾಡುವದಿಲ್ಲ. ನೀವು ಪಠಾಣರ ವಿಶುದ್ಧವಾದ ಕೀರ್ತಿಗೆ ಕಲಂಕರೂಪಿಗಳಾಗಿರುವಿರಿ. ನಿಮ್ಮ ಈ ಅನುಚಿತ ಕಾರ್ಯಕ್ಕಾಗಿ ಅಘೋರ ಶಾಸನವನ್ನು ವಿಧಿಸುತ್ತಿದ್ದೆನು; ಆದರೆ ಈಗ ಸಂಗ್ರಾಮದ ಸಮಯವಿರುವದರಿಂದಲೂ, ಇದು ನಿಮ್ಮ ಮೊದಲಿನ ಅಪರಾಧವಿರುವದರಿಂದಲೂ ಕ್ಷಮಿಸಿರುವೆನು; ಆದರೆ ಇನ್ನು ಮೇಲೆ ನೀವು ನಿಶ್ಶಸ್ತ್ರ ಮನುಷ್ಯನ ಮೇಲೆ ಎಂದಾದರೂ ಶಸ್ತ್ರವೆತ್ತಿದ್ದು ನೋಡಿದರೆ, ಕೇಳಿದರೆ, ಆ ಕ್ಷಣದಲ್ಲಿಯೆ ನಿಮಗೆ ಪ್ರಾಣದಂಡನೆ ವಿಧಿಸುವೆನು. ಇನ್ನು ಮೇಲೆ ಜಾಗ್ರತೆಯಿಂದ ವರ್ತಿಸಿರಿ. ನೀವು ಈಗಲೆ ನಿಮ್ಮ ದಳಸಹಿತವಾಗಿ ಈ ಸ್ಥಳದಿಂದ ಹೊರಟು ಹೋಗಿರಿ!"

ಈ ಪ್ರಕಾರದಿಂದ ರುಸ್ತುಮಖಾನನ ಕಲ್ಲೆದೆಯು ನಡುಗಿತು. ಆಗಂತುಕ ವ್ಯಕ್ತಿಯ ಆಜ್ಞೆಯಾದೊಡನೆಯೆ ಅವನು ಪ್ರತಿಮಾತನಾಡದೆ ಅಲ್ಲಿಂದ ಹೊರಟು ಹೋದನು.

ಆಗಂತುಕನು ವಂಗಸಮ್ರಾಟನಾದ ನವಾಬ ದಾವುದಖಾನನಾಗಿದ್ದನು. ಅಮರಪ್ರಸಾದನು ಅವನ ದೊಡ್ಡಸ್ತಿಕೆಯನ್ನು ನೋಡಿ ದಂಗುಬಡೆದನು.

ನವಾಬನು ಅತ್ಯಾಚಾರಿಯೂ ಅನೀತಿಪರನೂ ಎಂದು ಅಮರಪ್ರಸಾದನು ಈ ಕ್ಷಣಕ್ಕಿಂತ ಮುಂಚಿತವಾಗಿ ತಿಳಿದಿದ್ದನು. ನವಾಬನ ವರ್ತನವನ್ನು ನೋಡಿ ಅವನ ತಿಳುವಳಿಕೆಯು ಬೇರೆಯಾಯಿತು. ಪದಭ್ರಷ್ಟ ನವಾಬನು ಧರ್ಮದ ಮೂರ್ತಿಮಂತ ದೇವತೆಯೂ, ವೀರತ್ವದ ಉಜ್ವಲ ಪ್ರಕಾಶಕಿರಣವೂ, ನೀತಿಯ ಸಾನ್ನಿಧ್ಯವೂ ಆಗಿರುವನೆಂದು ಅವನ ದೃಢವಾದ ನಂಬಿಗೆಯಾಯಿತು. ಆಗ ಅವನು ಗಾಂಭೀರ್ಯದಿಂದ:—"ಶಾಬಾಸ್! ಪಠಾಣ ಸಮ್ರಾಟ್! ಶಾಬಾಸ್! ನಿನ್ನ ಸದ್ಗುಣಗಳನ್ನು ಕೊಂಡಾಡುವದು ನನ್ನಿಂದಾಗದು!" ಎಂದು ಧನ್ಯೋದ್ಗಾರ ತೆಗೆದನು.

ಅಷ್ಟರಲ್ಲಿ ನವಾಬನು ಅಮರಪ್ರಸಾದನ ಡೇರೆಯಿಂದ ಹೊರಟು ಹೋಗಿದ್ದನು.

———

## ೧೬ನೆಯ ಪರಿಚ್ಛೇದ

"ಕಾಮುನೆ!"

"ಯಾಕೆ ದೇವಿ?"

"ಇಲ್ಲಿ ನೋಡು ಇದೇ ಅಟ್ಟಾಲಿಕೆಯು ಆ ದೈವಶಾಲಿನಿಯದಿರಬಹುದೆಂದು ತರ್ಕಿಸುವೆನು."

"ಅಹುದು ದೇವೀ. ಈ ರಾಜಭುವನವೇ ಆ ಊರ್ಮಿಳಾದೇವಿಯದು."

"ಆ ದೇವಿಯು ನನ್ನನ್ನು ಸನ್ಮಾನಿಸಬಹುದೆ? ಮಮತೆಯಿಂದ ಎರಡು ಮಾತುಗಳನ್ನಾಡಬಹುದೆ?"

"ರಾಣಿಯು ಮಹಾಗುಣಸಂಪನ್ನಳಿರುವಳು. ಸದ್ಗುಣ ಮಂಡಿತಳಾದ ಅವಳನ್ನು ನಾನು ಎಷ್ಟೆಂದು ವರ್ಣಿಸಲಿ? ದೇವೀ, ಅವಳು ನಿನ್ನನ್ನು ಒಡಹುಟ್ಟಿದವಳೆಂದು ಭಾವಿಸಿ ಆದರಿಸುವಳು. ನಾನು ಆ ನಾರೀರತ್ನವನ್ನು ಎಷ್ಟೋ ಸಾರೆ ಕಂಡಿರುವೆನು; ಸದ್ಗುಣಗಳ ಖ್ಯಾತಿಯನ್ನು ಕೇಳಿರುವೆನು. ನೀನು ರಾಣಿಯನ್ನು ಕಾಣಲಿಕ್ಕೆ ಅನುಮಾನಿಸಕೂಡದು; ಹಾಗು ಯಾವ ವಿಧದ ಭಯವನ್ನೂ ಮನಸ್ಸಿನಲ್ಲಿ ತರಕೂಡದು."

"ಕಾಮುನೆ, ನಾನಾದರೂ ಆ ಮಹಾನುಭಾವಳ ಖ್ಯಾತಿಯನ್ನು ಕೇಳಿರುವೆನು. ವಸ್ತುಸ್ಥಿತಿಯನ್ನು ಹೇಳಿದರೆ ಸವತಿಮಾತ್ಸರ್ಯವು ತಲೆದೋರಿ, ಭೆಟ್ಟಿಯ ಪ್ರಸಂಗವು ಎಲ್ಲಿ ವಿರಸವಾಗುವದೋ ಎಂಬ ಭಯವು ಈಗ ಉತ್ಪನ್ನವಾಗಿದೆ."

"ಸಖಿ, ಭಯಪಡಬೇಡ. ಆ ಗುಣಾಢ್ಯಳನ್ನು ಕಂಡು ಎರಡು ಮಾತು ಗಳನ್ನಾಡಿದೊಡನೆಯೆ ನಿನ್ನ ಭ್ರಮನಿರಸನವಾಗುವದು."

ಆ ಇಬ್ಬರು ಸ್ತ್ರೀಯರು ಅಟ್ಟಾಲಿಕೆಯ ಮಹಾದ್ವಾರದ ಬಳಿಗೆ ಬಂದರು. ಆಗ ಕಾಮನೆಯು ದ್ವಾರಪಾಲಕನನ್ನು ಕುರಿತು:—"ರಂಗಮಹಾಲಿನಿಂದ ಇಬ್ಬರು ಸ್ತ್ರೀಯರು ಭೆಟ್ಟಿಗಾಗಿ ಬಂದಿರುವರೆಂದು ನಿಮ್ಮ ಒಡತಿಗೆ ಅರುಹು."

ದ್ವಾರರಕ್ಷಕನು ಒಳಗೆ ಹೋಗಿ ರಾಣಿಗೆ ಈ ಸುದ್ದಿಯನ್ನು ತಿಳಿಸಿ, ಆಗಂತು ಕರನ್ನು ಒಳಗೆ ಕಳುಹಿಸುವದಕ್ಕೆ ಆಜ್ಞೆ ಪಡೆದುಕೊಂಡು ಬಂದು:—"ದೇವಿ ಯವರೆ, ರಾಣಿಯವರು ನಿಮ್ಮ ಆಗಮನವನ್ನೇ ನಿರೀಕ್ಷಿಸುತ್ತಲಿರುವರು." ಎಂದು ವಿನಯದಿಂದ ಹೇಳಿದನು. ಕೂಡಲೆ ಆ ಸ್ತ್ರೀಯರು ಮಹಾದ್ವಾರವನ್ನು ಪ್ರವೇಶಿಸಿ ಊರ್ಮಿಳಾರಾಣಿಯು ಕುಳಿತ ಕೋಣೆಯನ್ನು ಹೊಕ್ಕರು.

ಸುಂದರವೂ ಶೋಭಾಯಮಾನವೂ ಆದ ಒಂದು ಕೋಣೆಯಲ್ಲಿ ಸುಕೋ ಮಲವಾದ ಆಸನದ ಮೇಲೆ ರಾಣಿಯು ವಿರಾಜಮಾನಳಾಗಿದ್ದಳು. ಅವಳ ಮನಸ್ಸು ಉದ್ವಿಗ್ನವಾಗಿತ್ತು; ಚಾಂಚಲ್ಯ ಹೊಂದಿತ್ತು. ಅವಳು ತನ್ನ ಪತಿ ಯಾದ ಅಮರಪ್ರಸಾದನ ವಿಷಯವಾಗಿ ಚಿಂತಾಮಗ್ನಳಾಗಿದ್ದಳು. ಪುತ್ರನಂತೆ ಭಾವಿಸಿದ್ದ ನವಾಬ ದಾವುದಖಾನನ ವಿರುದ್ಧವಾಗಿ ತನ್ನ ಪತಿಯು ಶಸ್ತ್ರವನ್ನು ಹಿಡಿದದ್ದರಿಂದ ಅವಳು ಬಹಳೇ ತೊಂದರೆಗೊಳಗಾಗಿದ್ದಳು. ಅಷ್ಟರಲ್ಲಿ ರಂಗ ಮಹಾಲಿನಿಂದ ಇಬ್ಬರು ಸ್ತ್ರೀಯರು ಬಂದಿರುವರೆಂಬ ವಾರ್ತೆಯನ್ನು ತೆಗೆದು ಕೊಂಡು ದ್ವಾರಪಾಲಕನು ಬಂದ ಕೂಡಲೆ, ಅವಳ ವಿಚಾರ ತರಂಗಗಳು ಸ್ತಂಭಿತವಾದವು. ಆಗಂತುಕ ಸ್ತ್ರೀಯರನ್ನು ಒಳಗೆ ಕಳಿಸುವದಕ್ಕಾಗಿ ಆಜ್ಞೆ ಮಾಡಿದ ಒಂದೆರಡು ನಿಮಿಷಗಳಲ್ಲ ಅವರಿಬ್ಬರೂ ಅಲ್ಲಿಗೆ ಬಂದರು. ಆ ಸ್ತ್ರೀಯ ರಲ್ಲಿ ಒಬ್ಬಳು ಮಾತ್ರ ರಾಣಿಯ ಹೃದಯವನ್ನು ಚನ್ನಾಗಿ ಆಕರ್ಷಿಸಿದಳು. ಆಗಂತುಕ ರಮಣಿಯಲ್ಲೊರ್ವಳು ಕಾಂತಿಯುಕ್ತ ಕುಮುದಿನಿಯಂತೆ ಅತಿ ಸುಂದರಿಯಾಗಿದ್ದಳು; ಆದರೆ ಯಾವ ಕಾರಣದಿಂದಲೋ ಅತ್ಯಂತ ಮಲಿನ ಳಾಗಿದ್ದಳು. ಪೌರ್ಣಿಮೆಯ ಪೂರ್ಣ ಚಂದ್ರನಂತೆ ಅವಳ ಮುಖಮಂಡಲವು ಮನೋರಮವಾಗಿತ್ತು; ಆದರೆ ಶುಭ್ರ ಮೇಘಗಳ ಆಚ್ಛಾದನೆಯಿಂದ ಕಾಂತಿ ಹೀನವಾಗಿತ್ತು. ಪುಷ್ಪಮಯವಾದ ಉದ್ಯಾನದಂತೆ ಅವಳ ತನುಲತೆಯು ಶೋಭಾಯಮಾನವಾಗಿತ್ತು; ಆದರೆ ಯಾವದೋ ನಿರ್ದಯತೆಯ-ಕಠೋರ ಕರ ಪೀಡನದ-ಮೂಲಕ ವಿವರ್ಣವಾಗಿತ್ತು. ಅವಳ ಸ್ವರ್ಗೀಯ ಲಾವಣ್ಯ

ವನ್ನು ನೋಡಿ ರಾಣಿಯು ಬೆರಳು ಕಚ್ಚಿ, ಮೃದುಮಧುರ ಕಂಠದಿಂದ:—
"ದೇವಿ, ನೀನು ಯಾರು?"

ಆಗಂತುಕ ರಮಣಿಯು ನಮ್ರವಾಣಿಯಿಂದ:-"ನಾನು ನಿನಗೆ ಯಾವ ರೀತಿಯಿಂದ ಪರಿಚಯ ಮಾಡಿಕೊಡಲಿ ರಾಣಿ? ನಾನೊಬ್ಬ ಅಭಾಗಿನಿ ಯಿರುವೆನೆಂಬದನ್ನಷ್ಟು ಹೇಳಬಲ್ಲೆನು. ನನ್ನನ್ನು ನಿನ್ನ ಒಡಹುಟ್ಟಿದವಳಂತೆ ತಿಳಿಯಬೇಕೆಂದು ಪ್ರಾರ್ಥಿಸುವೆನು. ನನಗೆ ನಿನ್ನ ತಂಗಿಯ ಅಧಿಕಾರವನ್ನು ಕೊಡುವೆಯಾ?"

"ನೀನು ಅಭಾಗಿನಿಯೆ?" ಊರ್ಮಿಳಾರಾಣಿಯು ವಿಸ್ಮಯವಾಣಿ ಯಿಂದ:—"ವಿಧಾತನು ಮನಃಪೂರ್ವಕವಾಗಿ ಸೃಷ್ಟಿಸಿದ ಅತುಲನೀಯವೂ ಅಸೀಮವೂ ಆದ ಈ ರೂಪರಾಶಿಯು ಎಂದಾದರೂ ದೈವಹೀನತೆ ಹೊಂದುವ ದುಂಟೆ? ನೀನು ಒಬ್ಬ ರಾಜನ ರಾಣಿಯಾಗಲಿಕ್ಕೆ ತಕ್ಕವಳಿರುವೆ. ಬಾ, ತಂಗೀ, ಇಲ್ಲಿ ಬಾ. ಈ ಆಸನವನ್ನಲಂಕರಿಸು. ಪ್ರಿಯ ಭಗಿನೀ, ನಿನ್ನ ರಹಸ್ಯಮಯ ವಾದ ಹೃದಯ ಚಾರಿತ್ರ್ಯವನ್ನು ಕೇಳಲಿಚ್ಛಿಸಿರುವೆನು."

ಊರ್ಮಿಳಾದೇವಿಯು ಹೀಗೆ ನುಡಿದು, ಆ ಯುವತಿಯ ಕೈಯನ್ನು ಹಿಡಿದು ತನ್ನ ಬಳಿಯಲ್ಲಿದ್ದ ಆಸನದಲ್ಲಿ ಕುಳ್ಳಿರಿಸಿ:-'ಆ ಯುವತಿಯು ಯಾರು?'

"ದೇವಿ, ಅವಳು ನನ್ನ ಸಹಚರಿಯಾದ ಕಾಮನೆಯು."

"ಬಾ; ಭಗಿನೀ, ಕಾಮನೇ, ಬಾ; ಇಲ್ಲಿ ಕುಳಿತುಕೋ."

ಊರ್ಮಿಳಾದೇವಿಯು ಒಳ್ಳೆಯ ಆದರದಿಂದ ಕಾಮನೆಯನ್ನು ಮ- ತ್ತೊಂದು ಆಸನದಲ್ಲಿ ಕುಳ್ಳಿರಿಸಿ ತಾನೊಂದು ಆಸನದಲ್ಲಿ ಕುಳಿತುಕೊಂಡಳು ಅನಂತರದಲ್ಲಿ ಅವಳು ಯುವತಿಯನ್ನು ಕುರಿತು:—"ಭಗಿನೀ, ನೀನು ನಿನ್ನ ಈ ಪ್ರೇಮಲ ಭಗಿನಿಯ ಮುಂದೆ ಯಾವ ರಹಸ್ಯವನ್ನೂ ಮುಚ್ಚಿಡಬೇಡ. ನಾನು ಇದು ವರೆಗೆ ಯಾರಿಗೂ ಭಗಿನಿಯ ಅಧಿಕಾರವನ್ನು ಕೊಟ್ಟಿಲ್ಲ. ರತಿ- ಶಚಿಯರಂತಹ ನಿನ್ನ ಸ್ವರ್ಗೀಯ ಲಾವಣ್ಯವನ್ನೂ, ಶಿಷ್ಟವೂ ಶಾಂತವೂ ಆದ ನಿನ್ನ ಸ್ವಭಾವವನ್ನೂ ನೋಡಿ ಆನಂದವಾಗಿದೆ. ನನ್ನನ್ನು ನೀನು ಒಡಹುಟ್ಟಿದ ಅಕ್ಕನೆಂದು ಭಾವಿಸಿ ನಿನ್ನ ಪರಿಚಯ ಹೇಳು."

"ಭಗಿನಿ, ನಾನು ರಂಗಮಹಾಲಿನ ರುದ್ರಪತಿಯ ಕನ್ಯೆಯಿರುವೆನು ನನಗೆ ಶೋಭನೆಯೆನ್ನುವರು."

"ನೀನು ರುದ್ರಪತಿಯ ಕುಮಾರಿಯೆ? ಧನಶ್ರೇಷ್ಠ, ಲಕ್ಷ್ಮೀಪುತ್ರ ರುದ್ರ

ಪತಿಯ ಕನ್ಯೆಯೆ?"

"ಅಹುದು ಅಕ್ಕಾ! ಅದೇ ರುದ್ರಪತಿಯ ಪುತ್ರಿಯು ನಾನು!"

"ಕುಬೇರನ ಐಶ್ವರ್ಯವು ನಿಮ್ಮ ಪಾದಗಳ ಮೇಲೆ ಬಿದ್ದಿರುವದು. ಹೀಗಿರಲು ನೀನು ಅಭಾಗಿನಿಯು ಹೇಗೆ ತಂಗಿ?"

"ಅಕ್ಕಾ, ಐಶ್ವರ್ಯದ ವಿನಿಮಯದಿಂದ ಎಲ್ಲ ಸುಖಗಳು ದೊರಕುವವೇನು?"

"ಐಶ್ವರ್ಯದವಿನಿಮಯದಿಂದ ಎಲ್ಲ ಸುಖಗಳು ದೊರಕುವವೆಂದು ನಾನು ಅನ್ನುವದಿಲ್ಲ. ರುದ್ರಪತಿಯ ಕನ್ಯೆಯಾದ ನೀನು ಸರ್ವ ಸೌಖ್ಯಗಳ ಬೀಡಾಗಿರಬಹುದೆಂದು ನಾನು ಕಲ್ಪಿಸಿದ್ದೆನು. ನಿನಗೆ ರೂಪ-ಐಶ್ವರ್ಯಗಳ ಕೊರತೆಯಿಲ್ಲ. ಒಂದು ಅಭಿಲಷಿತ ವಸ್ತುವಿನ ಅಭಾವಕ್ಕಾಗಿ ನೀನು ಖಿನ್ನಳಾಗಿರುವೆಯೆಂಬದು ಸ್ಪಷ್ಟವಾಗಿ ತಿಳಿಯುತ್ತದೆ. ಶೋಭನೆ, ನೀನು ಇದು ವರೆಗೆ ವಿವಾಹವಾಗಿಲ್ಲವೇಕೆ? ಭಗಿನೀ, ನಿನ್ನ ಪ್ರಣಯದೇವನು ಯಾರು?"

"ಅಕ್ಕಾ, ಈ ಹೃದಯವು ಅಯಾಚಿತ ಭಾವದಿಂದ ಒಬ್ಬ ದೇವತೆಯ ಚರಣಗಳಿಗೆ ಒಪ್ಪಿಸಲ್ಪಟ್ಟಿದೆ."

"ಆ ಭಾಗ್ಯಶಾಲಿಯಾದ ಪುರುಷನು ಯಾರೆಂಬದನ್ನು ಹೇಳುವೆಯಾ? ನಿನ್ನಂತಹ ಅಸೀಮ ರೂಪರಾಶಿಯ ಹೃದಯದ ಮೇಲೆ ಅಧಿಕಾರ ಕೂಡಿಸಿದವನು ನಿಜವಾಗಿಯೂ ಸುದೈವಿಯು."

"ನನ್ನ ಹೃದಯೇಶ್ವರರು ಅಸಾಮಾನ್ಯ ಭಾಗ್ಯಶಾಲಿಗಳಿರುವರು. ವೀರತ್ವದಲ್ಲಿ ಅವರು ಅಪ್ರತಿದ್ವಂದ್ವಿಗಳಿರುವರು. ಅವರ ರೂಪವು ಅನಂತವು; ಗುಣವೂ ಅನಂತವಾದದ್ದಿರುವದು. ಸ್ವರ್ಗದೊಳಗಿನ ಒಂದು ಆತ್ಮವೇ ಪ್ರಪಂಚಕ್ಕೆ ಶಿಕ್ಷಣ ಕೊಡುವದಕ್ಕಾಗಿ ಈ ಮರ್ತ್ಯಲೋಕದಲ್ಲಿ ಅವತರಿಸಿರುವದು"

"ಶೋಭನೆ, ನೀನು ನಿನ್ನ ಹೃದಯೇಶ್ವರನಲ್ಲಿ ಭಕ್ತಿ-ಭಾವಗಳನ್ನಿಟ್ಟಿರುವೆ; ಅವನು ನಿನ್ನಲ್ಲಿ ಪ್ರೇಮವುಳ್ಳವನಿರುವನೆ?"

"ಅದನ್ನು ನಾನು ಅರಿಯೆನು."

"ಅವನೊಡನೆ ಮಾತು-ಕಥೆಗಳನ್ನಾಡಿ ಅವನ ಹೃದಯ ಪರಿಚಯ ಹೊಂದಿಲ್ಲವೇಕೆ?"

"ಪ್ರಣಯದ ಮಾತುಗಳನ್ನಾಡಲಿಕ್ಕೆ ಅವಕಾಶವೆಲ್ಲಿ ದೊರೆಯಬೇಕು? ನಾವು ಪರಸ್ಪರರನ್ನು ಒಮ್ಮೆ ಮಾತ್ರ ನೋಡಿರುವೆವು. ಆ ಸಮಯವೆಂದರೆ,

ಒಳ್ಳೆಯ ಕಠಿಣತರದ್ದಾಗಿತ್ತು. ಅಂತಹ ಸಮಯದಲ್ಲಿ ಪ್ರೇಮಭಾಷಣಗಳನ್ನು ಆಡುವ ಬಗೆ ಹೇಗೆ?"

"ತಂಗೀ, ಶೋಭನೆ, ನೀನು ನಿನ್ನ ಹೃದಯೇಶ್ವರನನ್ನು ಯಾವ ಕಠಿಣ ಪ್ರಸಂಗದಲ್ಲಿ ಕಂಡಿದ್ದೆ?"

"ಒಮ್ಮೆ ನಾನು ಸುಲಿಗೆಗಾರರ ಕೈಯಲ್ಲಿ ಸಿಲುಕಿದ್ದೆನು ಆಗ ಅವರು ನನ್ನ ಮಾನ-ಪ್ರಾಣಗಳನ್ನು ಕಾಯ್ದರು. ಅವರ ರೂಪ-ಗುಣಗಳಿಗೆ ಮೆಚ್ಚಿ, ನಾನು ಅಂದೇ ಅವರಿಗೆ ಆತ್ಮಸಮರ್ಪಣ ಮಾಡಿರುವೆನು. ಆಗ ನನ್ನ ಹೃದಯನಾಥರು ಒಮ್ಮೆ ಮಾತ್ರ ನನ್ನ ಮೇಲೆ ದೃಷ್ಟಿಪಾತ ಮಾಡಿದರು. ತಿರುಗಿ ಅವರು ನನ್ನನ್ನು ನೋಡಲಿಲ್ಲ. ಅವರು ಮಾಡಿದ ಉಪಕಾರಕ್ಕಾಗಿ ನನ್ನ ತಂದೆಯವರು ಹೇರಳವಾದ ಧನವನ್ನು *ಪ್ರತಿಫಲವೆಂದು ಕೊಡಲಿಕ್ಕೆ ಸಿದ್ಧರಿದ್ದರು; ಆದರೆ ನಿರಪೇಕ್ಷ ಬುದ್ಧಿಯವರಾದ ಅವರು ಪ್ರಸನ್ನತೆಯಿಂದ ಪ್ರತಿಫಲದ ಉಪೇಕ್ಷೆ ಮಾಡಿದರು. ಅವರ ದೊಡ್ಡ ಮನಸ್ಸನ್ನು ನೋಡಿದ ಮೇಲಂತು ನಾನು ಮತ್ತಿಷ್ಟು ಮುಗ್ಧಳಾದೆನು.

ಅಕ್ಕಾ, ಮುಂದೆ ಕೆಲವು ದಿನಗಳ ಮೇಲೆ ನಾನು ಕೇಳಿದ್ದೇನಂದರೆ, ನನ್ನ ಪ್ರಭುಗಳಿಗೆ ಒಂದು ಜವಾಬದಾರಿಯು ದೊರೆತಿರುವದು; ಈ ಸಂಗತಿಯೊಡನೆ ಅವರು ಒಬ್ಬ ನಿರ್ಜರಾಂಗನೆಯನ್ನು ತಮ್ಮ ಸಹಧರ್ಮಿಣಿಯನ್ನಾಗಿ ಮಾಡಿಕೊಂಡಿರುವರೆಂಬದೂ ಗೊತ್ತಾಯಿತು. ದೇವ-ದೇವಿಯರ ಮಿಲನವಾದ ಮೇಲೆ ನನ್ನ ಆಶೆಯು ಹೇಗೆ ಸಫಲವಾಗಬೇಕು? ಮೊದಲು ನನ್ನ ಲಾಲಸಾನಲವು ಅತ್ಯಂತ ಉಜ್ವಲವಾಗಿತ್ತು; ಮನಸ್ಸು ಒಳ್ಳೆಯ ಚಾಂಚಲ್ಯ ಹೊಂದಿತ್ತು; ಮನೋನಿಗ್ರಹ ಮಾಡಲಿಕ್ಕೆ ನಾನು ತೀರ ಅಸಮರ್ಥಳಾಗಿದ್ದೆನು; ಆದರೆ ನನ್ನ ಸಖಿಯಾದ ಈ ಕಾಮನೆಯ ಮುಖಾಂತರವಾಗಿ ನನ್ನ ಹೃದಯೇಶ್ವರರು ಚತುರ್ಭುಜರಾದ ಸಂಗತಿಯು ತಿಳಿದ ಕೂಡಲೆ ನನ್ನಲ್ಲಿಯ ಲಾಲಸಾನಲವು ನಿರ್ವಾಪಿತವಾಯಿತು, ಚಾಂಚಲ್ಯವು ನಷ್ಟವಾಯಿತು; ಮನಸ್ಸು ಗಟ್ಟಿಯಾಯಿತು. ಆ ನನ್ನ ಹೃದಯ ದೇವನ ಮೂರ್ತಿಯನ್ನು ಪೂಜಿಸುತ್ತ ಶೇಷಾಯುಷ್ಯವನ್ನು ಕಳೆಯಬೇಕೆಂದು ಸಂಕಲ್ಪ ಮಾಡಿಕೊಂಡಿರುವೆನು. ನಾನು ನನ್ನ ಹೃದಯೇಶ್ವರರಿಗಾಗಿ ಈ ಪ್ರಾಣವನ್ನು ಸಮರ್ಪಿಸುವ ಪ್ರಸಂಗ ಪೊದಗಿದರೂ ಅನುಮಾನ ಮಾಡಲಾರೆನು. ಭಗಿನಿ, ನನ್ನ ಹೃದಯೇಶ್ವರರು ಯಾರೆಂಬದನ್ನು ತಿಳಿದುಕೊಳ್ಳಲಿಕ್ಕೆ ನೀವು ಆತುರಗೊಂಡಿರಬಹುದಲ್ಲವೆ?

ದೇವಿ, ನಿನ್ನ ದೇವನೇ ನನ್ನ ದೇವನು!"

ಊರ್ಮಿಳಾದೇವಿಯು ಶೋಭನೆಯ ಮಾತುಗಳನ್ನು ಕೇಳಿ ಬೆಟ್ಟಿ ಬಿದ್ದಳು. ಒಂದೇ ಒಂದು ಪ್ರಸಂಗದಲ್ಲಿ ಹೃದಯಸಮರ್ಪಣೆ ಮಾಡಿ, ಏಕ ನಿಷ್ಠೆಯಿಂದ ಪ್ರಣಯದೇವನ ಪೂಜೆ ಮಾಡಲುದ್ಯುಕ್ತಳಾದ ಶೋಭನೆಯ ಸತೀತ್ವದ ಮಹಿಮೆಯು ಘನತರವಾದದ್ದೆಂದು ಅವಳು ಬಗೆದಳು. ಕೆಲವು ವೇಳೆಯವರೆಗೆ ಅವಳು ವಿಚಾರದಲ್ಲಿ ಮುಳುಗಿದ್ದಳು. ರಾಣಿಯು ಸುಮ್ಮನೆ ಕುಳಿತದ್ದನ್ನು ನೋಡಿ ಶೋಭನೆಯ ಮನದಲ್ಲಿ ಒಂದು ವಿಧದ ಸಂಶಯವು ಹುಟ್ಟಿ:—"ದೇವೀ, ನೀನು ಶಂಕಾಕುಲಳಾಗಬೇಡ. ನಾನು ಸವತಿತನವನ್ನು ಸಾಧಿಸಲಿಕ್ಕೆ ಬಂದವಳಲ್ಲ ನೀನು ಘನವಂತಳಾಗಿದ್ದರೂ ಸ್ತ್ರೀಸ್ವಭಾವಕ್ಕನು ಗುಣವಾದ ವಿಕಲ್ಪಗಳು ಹುಟ್ಟುವದು ಸಹಜವಿರುವದು. ನಾನು ಬಂದ ಉದ್ದೇಶವೇ ಬೇರೆಯಾಗಿರುವದು."

"ಶೋಭನೆ, ನೀನು ನನ್ನ ಭಗಿನಿಯಾದ ಮೇಲೆ ನಿನ್ನ ವಿಷಯವಾಗಿ ವಿಕಲ್ಪಭಾವನೆಯನ್ನೇಕೆ ತಳೆಯಲಿ? ಸವತಿತನದ ಭಾವನೆಗಳನ್ನು ಮನಸ್ಸಿನಲ್ಲಿ ತರುವಂಥ ಕ್ಷುದ್ರ ಮನೋವೃತ್ತಿಯವಳು ನಾನಲ್ಲ. ನನ್ನ ಹೃದಯೇಶ್ವರರೇ ನಿನ್ನ ಮಾನಸ ಪತಿಗಳಿರುವರು. ನೀನು ಅವರಲ್ಲಿ ದೃಢವಾದ ಭಕ್ತಿಯುಳ್ಳವಳಾಗಿರುವೆ. ಹೀಗಿದ್ದ ಮೇಲೆ ಪತಿಯ ಸೇವೆಗೂ ಸಹವಾಸಕ್ಕೂ ನೀನು ಹೊರತಾಗಿರಬೇಕೆಂದು ನಾನು ಬಯಸಿದರೆ ಅದೊಂದು ಮಹಾಪಾತಕವಲ್ಲವೆ? ಸದ್ಗುಣಮಂಡಿತಳಾದ ನಿನ್ನ ಪಾಣಿಗ್ರಹಣ ಮಾಡುವದಕ್ಕಾಗಿ ನನ್ನ ಪತಿಗಳಿಗೆ ಬೇಡಿಕೊಳ್ಳುವೆನು. ನನ್ನ ವರ್ತನದ ವಿಷಯವಾಗಿ ನೀನು ಆಕ್ಷೇಪಣೆ ತೆಗೆದುಕೊಳ್ಳಬೇಡ."

"ಅಕ್ಕಾ, ನಿನ್ನ ದೊಡ್ಡ ಮನಸ್ಸನ್ನು ನೋಡಿ ನನಗೆ ಆನಂದವಾಯಿತು. ನಾನು ಅಮರಪ್ರಸಾದರನ್ನು ವರಿಸಿ ಸಂಸಾರರತಳಾಗಬೇಕೆಂದು ಎಂದೂ ಇಚ್ಛಿಸುವದಿಲ್ಲ. ಅಭಾಗಿನಿಯಾದ ಒಬ್ಬ ಯುವತಿಯು ತಮ್ಮ ಪೂಜೆ ಮಾಡುತ್ತಿರುವಳೆಂಬದು ಅವರಿಗೆ ತಿಳಿದರೆ ನಾನು ಕೃತಕೃತ್ಯಳಾದೆನು. ನನ್ನ ಪೂಜೆಯಿಂದ ಅವರು ನನ್ನ ಮೇಲೆ ಪ್ರೇಮವುಳ್ಳವರಾದರೆ ಸಾಕು. ನಾಥರ ಅನುಗ್ರಹಪ್ರಾಪ್ತಿಯಾಗಬೇಕೆಂಬ ಉದ್ದೇಶದಿಂದ ನಾನು ನನ್ನ ಅಲಂಕಾರಗಳನ್ನೆಲ್ಲ ಸೌಭಾಗ್ಯಶಾಲಿನಿಯಾದ ನಿನಗೆ ಕಾಣಿಕೆಯನ್ನಾಗಿ ಅರ್ಪಿಸಲಿಕ್ಕೆ ಬಂದಿರುವೆನು. ತೆಗೆದುಕೋ, ಈ ಆಭೂಷಣಗಳನ್ನು ತೆಗೆದುಕೋ. ಈ ಉಪಾ

ಹಾರವನ್ನು ತೆಗೆದುಕೊಂಡು ನನಗೆ ಶುಭಾಶೀರ್ವಾದವನ್ನು ಕೊಡು.'' ಎಂದು ನುಡಿದು, ಶೋಭನೆಯು ತನ್ನ ಸಖಿಯಾದ ಕಾಮನೆಯ ಬಳಿಯಲ್ಲಿದ್ದ ಎಲ್ಲ ಅಲಂಕಾರಗಳನ್ನು ರಾಣಿಯ ತಕ್ಕೊಂಡು ವಶಕ್ಕೆ ಕೊಟ್ಟಳು.

ಶೋಭನೆಯ ಮಾತುಗಳೂ ಅವಳ ವರ್ತನವೂ ರಾಣಿಗೆ ಪರಮಾಶ್ಚರ್ಯವನ್ನುಂಟು ಮಾಡಿದವು. ಆಗ ಅವಳು:—''ಶೋಭನಾದೇವಿ, ನಿನ್ನ ಆಭರಣಗಳು ನಿನ್ನಲ್ಲಿಯೆ ಇರಲಿ. ನಾನು ನನ್ನ ನಾಥರಿಗೆ ನಿನ್ನ ವೃತ್ತಾಂತವನ್ನೆಲ್ಲ ತಿಳಿಸಿ ನಿನ್ನನ್ನು ಪತ್ನಿಯನ್ನಾಗಿ ಪರಿಗ್ರಹಿಸುವಂತೆ ಮಾಡುವೆನು ನಿನ್ನಂತಹ ಅನುಪಮ ಗುಣವತಿಯಾದ ಗೃಹಿಣಿಯ ಸಹವಾಸದಲ್ಲಿ ಅವರ ಆಯುಷ್ಯವು ಸುಖಮಯವಾಗುವದು."

''ಬೇಡ; ರಾಣಿ, ಬೇಡ. ಅವರು ನನ್ನನ್ನು ಗೃಹಿಣಿಯನ್ನಾಗಿ ಸ್ವೀಕರಿಸುವದು ಬೇಡ. ಒಬ್ಬ ಅಬಲೆಯು ತಮ್ಮ ಧ್ಯಾನದಲ್ಲಿ ತೊಡಗಿರುವಳೆಂಬದರ ಅರಿವು ಅವರಿಗಾದರೆ ಸಾಕು. ಮುಂದಿನ ಜನ್ಮದಲ್ಲಾದರೂ ಅವರು ಲಭಿಸಬೇಕೆಂದು ನಾನು ತಪಾಚರಣೆ ಮಾಡುತ್ತಿರುವೆನಲ್ಲದೆ, ನಾನು ಮಾಡುವದು ಈ ಜನ್ಮದ ಸೌಖ್ಯಕ್ಕಲ್ಲ. ನಾನು ನನ್ನ ಹೃದಯಸ್ಥ ದೇವತೆಗಳ ಸಲುವಾಗಿ ಪ್ರಸಂಗವೊದಗಿದರೆ ಆತ್ಮೋತ್ಸರ್ಗ ಮಾಡಲಿಕ್ಕಾದರೂ ಸಿದ್ಧಳಿರುವೆನು. ಸದ್ಯಕ್ಕೆ ನಾನು ಆಶೆಗೊಂಡಿರುವದೇನಂದರೆ, ಅವರ ನಲುವಿನ ಒಂದು ಹನಿಯನ್ನು ನನಗೆ ಇತ್ತರೆ ಕೃತಾರ್ಥಳಾದೆನು. ಈ ನನ್ನ ಅಲಂಕಾರಗಳನ್ನು ಭಗಿನಿಯಾದ ನಿನಗೆ ಪ್ರೇಮದ ಹಾಗು ಪ್ರಥಮ ಪರಿಚಯದ ಕುರುಹೆಂದು ಕಾಣಿಕೆಯಾಗಿ ಕೊಟ್ಟಿರುವೆನು ನೀನು ನಿನ್ನ ತಂಗಿಯ ಕಾಣಿಕೆಯನ್ನು ಸ್ವೀಕರಿಸಿ ಅವಳನ್ನು ಆನಂದಗೊಳಿಸಲಾರೆಯಾ?''

''ಅವಶ್ಯವಾಗಿ ಸ್ವೀಕರಿಸುವೆನು'' ಎಂದು ನುಡಿದು, ಊರ್ಮಿಳಾದೇವಿಯು ಆನಂದದಿಂದ:-''ಶೋಭನಾದೇವಿ, ನೀನು ಧನ್ಯಳಿರುವೆ. ಸಾಧ್ವಿಯರ ಮನೋಭಿಲಾಷೆಯು ಎಂದೂ ಅಪೂರ್ಣವಾಗುವದಿಲ್ಲ. ನೀನು ವಯಸ್ಸಿನಿಂದ ನನಗಿಂತ ಚಿಕ್ಕವಳಾದರೂ ಗುಣದಿಂದ ಹಿರಿಯಳಿರುವೆ. ನೀನು ನನಗೆ ತಂಗಿಯಲ್ಲ; ಅಕ್ಕನು. ನಾನು ನಿನ್ನ ಕನಿಷ್ಠ ಭಗಿನಿಯು. ಸತೀತ್ವದ ಆದರ್ಶರೂಪಿಣಿಯಾದ ಭಗಿನೀ, ನೀನು ನನಗೆ ಆಶೀರ್ವಾದ ಕೊಡು. ನಿನ್ನಂತಹ ನಿರಪೇಕ್ಷಬುದ್ಧಿಯ ಸಾಧ್ವೀಮಣಿಗಳ ಆಶೀರ್ವಾದದಿಂದ ಜೀವನದ ಸಫಲತೆಯಾಗಿ ಇಹ-ಪರಗಳಲ್ಲಿ ಸೌಖ್ಯವು ಲಭಿಸುವದು.''

ಊರ್ಮಿಳಾದೇವಿಯು ಶೋಭನೆಯನ್ನು ಪ್ರೇಮದಿಂದ ಆಲಿಂಗಿಸಿದಳು. ಆದರ್ಶ ಸತಿಶಿರೋಮಣಿಗಳಾದ ಆ ರಮಣಿಯರಿಬ್ಬರ ನೇತ್ರಗಳು ಆನಂದಾಶ್ರುಗಳಿಂದ ಪರಿಪೂರ್ಣವಾದವು.

"ಭಗಿನಿ, ನನಗೆ ಅನುಜ್ಞೆಯನ್ನು ಕೊಡು." ಶೋಭನೆಯು ಊರ್ಮಿಳಾದೇವಿಯನ್ನು ಕುರಿತು ಕೇಳಿದಳು.

"ಶೋಭನಾದೇವಿ, ರಂಗಮಹಾಲಿಗೆ ಹೊರಡುವೆಯಾ?"

"ರಾಣಿ, ನನ್ನ ಮಾನಸ ಪತಿಗಳು ಯುದ್ಧಕ್ಷೇತ್ರದಲ್ಲಿರುವರು. ಪ್ರಸಂಗವೊದಗಿದರೆ ನಾನು ಅವರಿಗೆ ನೆರವಾಗಬೇಕೆಂದು ಯೋಚಿಸಿರುವೆನು."

"ಹೋಗಿಬಾರಮ್ಮಾ, ಹೋಗಿ ಬಾ. ಪತಿಸೇವಾಧುರೀಣಳಾದ ನಿನಗೆ ಮಂಗಳವಾಗಲಿ."

---

## ೧೭ನೆಯ ಪರಿಚ್ಛೇದ.

ಇಂದು ಪಠಾಣರು ಸ್ವಾನಂದ ಸಾಮ್ರಾಜ್ಯದಲ್ಲಿ ಲೋಲಾಡಹತ್ತಿದ್ದರು. ಇಂದಿನ ಯುದ್ಧದಲ್ಲಿ ಅವರು ಜಯಶಾಲಿಗಳಾದ್ದರಿಂದ ಶಿಬಿರದಲ್ಲೆಲ್ಲ ವಿಜಯ ಧ್ವನಿಯೂ ಉತ್ಸಾಹವೂ ವ್ಯಕ್ತವಾಗಹತ್ತಿದ್ದವು. ನಾಮಾಂಕಿತ ಯೋಧರೆಂದು ಹೇಳಿಸಿಕೊಳ್ಳುವ ಮಹಾರಾಜಾ ತೋಡರಮಲ್ಲ, ಹುಸೇನ ಕುಲೀಖಾನ, ಅಮರಪ್ರಸಾದ ಮೊದಲಾದ ಜನರ ಮುಖಗಳು ಕಳೆಗುಂದಿದ್ದವು ಮಾರನೆಯ ದಿನದ ಯುದ್ಧದಲ್ಲಾದರೂ ಉತ್ಸಾಹದಿಂದ ಕಾದಿ ಮೊಗಲರ ಕೀರ್ತಿಯನ್ನುಳಿಸಬೇಕೆಂದು ಅವರು ತಮ್ಮ ಸೈನಿಕರಿಗೆ ಉಪದೇಶಿಸತೊಡಗಿದ್ದರು.

ಸಂಧ್ಯಾಸಮಯವಾಗಿತ್ತು. ರಣಕ್ಲಾಂತ ಸೇನಾಪತಿಗಳೂ ಸೈನಿಕರೂ ತಮ್ಮ ತಮ್ಮ ಶಿಬಿರಗಳನ್ನು ಸೇರತೊಡಗಿದ್ದರು. ಅಮರಪ್ರಸಾದನ ಐದು ಸಾವಿರ ಅಶ್ವಾರೋಹಿ ಸೈನಿಕರಲ್ಲಿ ಜೀವಂತವಾಗಿ ಉಳಿದ ಇಪ್ಪತ್ತೈದು ಜನರೊಡನೆ ಅರಣ್ಯ ಮಾರ್ಗವಾಗಿ ತನ್ನ ಶಿಬಿರದ ಕಡೆಗೆ ಸಾಗಿದ್ದನು. ಸೂರ್ಯನು ಆದೇ ಅಸ್ತಂಗತನಾಗಿದ್ದನು. ಆಗಸದಲ್ಲಿ ಚಂದ್ರನ ಅಧಿಕಾರವು ಪ್ರಸ್ಥಾಪಿತವಾಗಿತ್ತು. ಮೃದುಸಮೀರನಿಂದ ತರುಲತೆಗಳು ಅಲ್ಲಾಡತೊಡಗಿದ್ದವು. ವಿಸ್ತಾರವಾದ ಬಾನ್ ಪ್ರದೇಶದಲ್ಲಿ ತಾರೆಗಳು ವಿರಲವಾಗಿ ಮಿನುಗಹತ್ತಿದ್ದವು. ಅರಣ್ಯ ಮಾರ್ಗದಿಂದ ಹೋಗುವಾಗ ಅಮರಪ್ರಸಾದನ ಸೈನಿಕರು ಹಿಂದೆ ಉಳಿದರು. ಅವನ ಜೊತೆಗೆ ಮೂರು ನಾಲ್ಕು ಜನ ಅಂಗರಕ್ಷಕರು ಮಾತ್ರ

ಉಳಿದಿದ್ದರು. ಅವನು ನಿಬಿಡವಾಗಿ ಬೆಳೆದ ಅರಣ್ಯ ಮಾರ್ಗದಿಂದ ಹೊರಟಿರಲು, ಸಮ್ಮುಖದಲ್ಲಿ ಪಠಾಣ ಸೈನ್ಯವು ಬರುತ್ತಿರುವಂತೆ ಭಾಸವಾಯಿತು. ಮುಂದೆ ಕೆಲವು ನಿಮಿಷಗಳಲ್ಲಿ ನೂರಾರು ಜನ ಪಠಾಣರು ಅಮರಪ್ರಸಾದನನ್ನು ಮುತ್ತಿದರು.

ಈ ಆಕಸ್ಮಿಕವಾದ ಘಟನೆಯಿಂದ ಅಮರಪ್ರಸಾದನು ವಿಸ್ಮಿತನಾದನು. ಗಂಡಾಂತರದಿಂದ ಹೇಗೆ ಪಾರಾದೇನೆಂಬ ವಿಚಾರವೂ ಅವನಲ್ಲಿ ಉದಯಿಸಿತು. ಅಲ್ಪಸಂಖ್ಯಾಕ ಸೈನಿಕರು ಹಿಂದೆ ಉಳಿದದ್ದರಿಂದ ಅವನ ವಿಚಾರವು ಮತ್ತಿಷ್ಟು ಬೆಳೆಯಿತು; ಆದರೆ ವಿಚಾರಿಸುತ್ತ ಸುಮ್ಮನೆ ನಿಂತುಕೊಳ್ಳುವ ಸಮಯವು ಅದಾಗಿರಲಿಲ್ಲ; ಯಾಕಂದರೆ ಪಠಾಣರು ಕೋಶೋನ್ಮುಕ್ತವಾದ ಖಡ್ಗಗಳನ್ನು ಹಿರಿದು ಅವನ ಮೇಲೆ ಏರಿ ಬಂದರು. ಅಮರಪ್ರಸಾದನು ದುರ್ಬಲನಾಗಿದ್ದನು; ರಣಕ್ಲಾಂತನಾಗಿದ್ದನು. ಆದರೂ ಅವನು ಧೃತಿಗುಂದದೆ ಪಠಾಣ ಸೈನ್ಯದೊಡನೆ ಕಾದಲನುವಾದನು ಕೆಲವು ವೇಳೆಯ ವರೆಗೆ ಯುದ್ಧವು ನಡೆಯುವಷ್ಟರಲ್ಲಿ ಅಮರಪ್ರಸಾದನ ಖಡ್ಗವು ಮುರಿದು ಹೋಯಿತು. ಕೂಡಲೆ ಒಬ್ಬ ಪಠಾಣನು ಅವನನ್ನು ಹೊಡೆಯುವದಕ್ಕಾಗಿ ಅಗ್ರೇಸರನಾದನು. ಆ ಪಠಾಣನ ಪ್ರಯತ್ನವು ಅಮರಪ್ರಸಾದನಿಗೆ ತಿಳಿಯಿತು. ಆಗ ಅವನು ತನ್ನ ಮುರಿದ ಖಡ್ಗವನ್ನು ಆ ಪಠಾಣನ ಮೇಲೆ ಎಸೆದನು. ಅವ್ಯರ್ಥವಾದ ಆ ಪೆಟ್ಟಿನಿಂದ ಪಠಾಣನ ಲಲಾಟವು ಭಗ್ನವಾಗಿ ಅವನು ಭೂಮಿಗೆ ಬಿದ್ದನು. ಕೂಡಲೆ ಮತ್ತೊಬ್ಬ ಪಠಾಣನು ಅಗ್ರೇಸರನಾದನು. ಅಮರಪ್ರಸಾದನು ತನ್ನ ಧನುಸ್ಸಿಗೆ ಬಾಣವನ್ನು ಹೂಡಿ ಹೊಡೆದನು. ಆ ಪಠಾಣನಾದರೂ ಮುಂಚಿನವನ ದಾರಿಯನ್ನೇ ಹಿಡಿದನು. ಆ ಮೇಲೆ ಮತ್ತೊಬ್ಬ ಪಠಾಣನು ಮುಂದಾದನು. ಅಮರಪ್ರಸಾದನು ಅವನ ಮೇಲೆ ಬಾಣ ಹೊಡೆಯಬೇಕೆಂದು ಬತ್ತಳಿಕೆಯಲ್ಲಿ ಕೈ ಹಾಕಿದನು; ಆದರೆ ಅದರಲ್ಲಿ ಒಂದೂ ಅಂಬುಗಳಿದ್ದಿಲ್ಲ. ಅವನು ಧನುಸ್ಸಿನ ಸಹಾಯದಿಂದಲೆ ಶತ್ರುಗಳೊಡನೆ ಕಾದತೊಡಗಿದನು; ಆದರೆ ಬಿಲ್ಲು ಶಸ್ತ್ರದಂತೆ ಉಪಯೋಗವಾಗಿ ತಡೆಯುವ ಬಗೆ ಹೇಗೆ? ಸ್ವಲ್ಪ ವೇಳೆಯಲ್ಲಿ ಅದು ಮುರಿದು ಹೋಯಿತು. ಅಮರಪ್ರಸಾದನು ಎದುರಾಳಿಯಾಗಿ ನಿಂತಿದ್ದ ಪಠಾಣನ ಮೇಲೆ ತೂಣೀರವನ್ನೆಸೆದನು. ಅವನ ಹೊಡತದಿಂದ ಪಠಾಣನ ಶಿರಸ್ಸು ಒಡೆಯಿತು. ರುಧಿರಪ್ರವಾಹವು ಮಡುವುಗಟ್ಟಿ ನಿಂತಿತು. ಆ ಪಠಾಣನು ಅಲ್ಲಾನ ಸ್ಮರಣೆ ಮಾಡುತ್ತ

ಧರಾಶಾಯಿಯಾದನು. ಆ ಮೇಲೆ ಮತ್ತೊಬ್ಬ ಪಠಾಣನು ಯುದ್ಧಕ್ಕೆ ಅಣಿಯಾದನು. ಅಮರಪ್ರಸಾದನು ಟೊಂಕದಲ್ಲಿರಿಸಿಕೊಂಡಿದ್ದ ಬಾಕನ್ನು ಹೊರ ತೆಗೆದು ವೈರಿಯ ಎದೆಗೆ ಹೊಡೆದನು. ಆ ಹೊಡತದಿಂದ ಆ ಪಠಾಣನ ಉರಪ್ರದೇಶವು ಭೇದಿಸಿತು. ಕೂಡಲೆ ಅವನು ಆರ್ತನಾದ ಮಾಡುತ್ತ ಭೂಮಿಗೆ ಬಿದ್ದು, ಮೊದಲಿನ ಪಠಾಣರ ಪಥಾನುಸರಣ ಮಾಡಿದನು. ತರುವಾಯ ಮತ್ತೊಬ್ಬ ಪಠಾಣನು ಕಾಳಗಕ್ಕೆ ಸಿದ್ಧನಾಗಿ ಮುಂದಾದನು. ಆಗ ಅಮರಪ್ರಸಾದನ ಬಳಿಯಲ್ಲಿ ಒಂದು ಶಸ್ತ್ರವೂ ಉಳಿದಿದ್ದಿಲ್ಲ. ಅವನು ಬಹಳೇ ತೊಂದರೆಗೊಳಗಾದನು. ಶತ್ರುವು ಶಸ್ತ್ರಧಾರಿಯಾಗಿ ಆಕ್ರಮಣ ಮಾಡಿದ ಕೂಡಲೆ ಅವನು ಗಂಭೀರ ಧ್ವನಿಯಿಂದ:--"ನಿಜವಾದ ಕ್ಷಾತ್ರವೃತ್ತಿಯುವರು, ಧರ್ಮಯುದ್ಧ ಮಾಡುವವರು ನಿಃಶಸ್ತ್ರರಾದವರ ಮೇಲೆ ಶಸ್ತ್ರವೆತ್ತುವದಿಲ್ಲ. ಪಠಾಣರಾದ ನಿಮಗೆ ಧರ್ಮಯುದ್ಧದ ಗಂಧವಾರ್ತೆಯು ಹೇಗೆ ಗೊತ್ತಾಗಬೇಕು? ಧರ್ಮಜ್ಞರಾದವರು ಇಲ್ಲಿ ಯಾರಾದರೂ ಇದ್ದರೆ ಒಂದು ಶಸ್ತ್ರವನ್ನು ಕೊಟ್ಟು ಈ ರಜಪುತ ವೀರನ ಗೌರವವನ್ನು ಕಾಪಾಡಬೇಕು!"

"ರಾಜಾ! ಈ ಶಸ್ತ್ರವನ್ನು ತೆಗೆದುಕೊಳ್ಳತಕ್ಕದ್ದು."

ಅಮರಪ್ರಸಾದನು ವಿಸ್ಮಯಗೊಂಡು ತಿರುಗಿ ನೋಡಿದನು; ಒಬ್ಬ ಸುಂದರ ಬಾಲಕನು ಶಸ್ತ್ರವನ್ನು ಕೈಯಲ್ಲಿ ಹಿಡಿದು ರಾಜನ ಕಡೆಗೆ ನೋಡು-ತ್ತ ನಿಂತಿದ್ದನು. ಶಸ್ತ್ರವನ್ನು ನೋಡಿದ ಕೂಡಲೆ ಅಮರ ಪ್ರಸಾದನಿಗೆ ಅತ್ಯಾನಂದವಾಯಿತು. ಅವನು ಆ ಬಾಲಕನನ್ನು ಕೃತಜ್ಞತೆಯಿಂದ ನೋಡಿ ಶಸ್ತ್ರವನ್ನು ಕೈಯಲ್ಲಿ ತೆಗೆದುಕೊಂಡನು. ಉಪಕಾರ ಕರ್ತನ ಉಪಕೃತಿಯನ್ನು ಸ್ಮರಿಸುತ್ತ ನಿಲ್ಲುವ ಅವಕಾಶವು ಆಗ ಅಮರಪ್ರಸಾದನಿಗಿದ್ದಿಲ್ಲ ಶಸ್ತ್ರವು ಕೈಯಲ್ಲಿ ಬಂದಕೂಡಲೆ ಅವನು ಶಾರ್ದೂಲನಂತೆ ಶತ್ರುವಿನ ಮೇಲೆ ಸಾಗಿ ಹೋದನು. ಆ ಬಾಲಕನು ಸುನೀಲಜಲದ ಮಧ್ಯದಲ್ಲಿಯ ಮಿಂಚಿನಂತೆ ಆ ಕ್ಷಣದಲ್ಲಿಯೆ ಅಂತರ್ಧಾನನಾದನು.

ಅಮರಪ್ರಸಾದನು ನವೋತ್ಸಾಹದಿಂದ ಸಂಗ್ರಾಮವನ್ನು ಪ್ರಾರಂಭ ಮಾಡಿದನು. ಅವನ ಶಕ್ತಿಯು ಅಸಾಧಾರಣವಾದದ್ದು. ಅವನು ಎಷ್ಟೇ ದಣಿದಿದ್ದರೂ ಒಬ್ಬೊಬ್ಬರಂತೆ ಎಷ್ಟೋ ಪಠಾಣರನ್ನು ಅಲ್ಲಾನ ಲೋಕಕ್ಕೆ ಕಳುಹಿಸಿದ್ದನು. ಏಕಾಕಿಯಾಗಿ ಕಾದತೊಡಗಿದ ಅಮರಪ್ರಸಾದನು ಬರಬರುತ್ತ ಶಕ್ತಿಹೀನನಾಗತೊಡಗಿದನು. ಶಸ್ತ್ರವನ್ನು ಕೈಯಲ್ಲಿ ಹಿಡಿಯುವ ಸಾಮರ್ಥ್ಯವು

ಸಹ ಅವನಲ್ಲಿ ಇಲ್ಲದಂತಾಗುತ್ತ ಬಂದಿತು. ಅವನು ನಿರಾಶೆಗೊಂಡು ಪರಮಾತ್ಮನನ್ನು ಸ್ಮರಿಸತೊಡಗಿದನು.

ನಿರಾಶಾಕಾತರ ಹೃದಯದಿಂದ ಯುಕ್ತನಾದ ಅಮರಪ್ರಸಾದನು ಪರಮಾತ್ಮನನ್ನು ಮೊರೆಹೊಕ್ಕನು. ಅವನ ಭಕ್ತಿಗೆ ಮೆಚ್ಚಿಯೋ ಏನೋ, ಪರಮಾತ್ಮನು ಅವನ ಸಹಾಯಕ್ಕೆ ರಜಪುತ ಸೈನ್ಯವನ್ನು ಕಳುಹಿಸಿದನು. ಅಮರಪ್ರಸಾದನಿಗೂ ಪಠಾಣ ಸೈನಿಕರಿಗೂ ಕುದುರೆಗಳ ಖುರಪುಟ ಧ್ವನಿಯು ಕೇಳತೊಡಗಿತು. ಅವರು ವಿಸ್ಮಿತರಾಗಿ ಅತ್ತ ಕಡೆಗೆ ನೋಡಹತ್ತಿದರು. ಸ್ವಲ್ಪ ವೇಳೆಯಲ್ಲಿ ರಜಪುತ ಸೈನ್ಯವು ಬರುತ್ತಿರುವದನ್ನು ಅವರು ಕಂಡರು. ಕೂಡಲೆ ಪಠಾಣರು ಭಯಭೀತರಾಗಿ ಪಲಾಯನ ಮಾಡತೊಡಗಿದರು. ಹೊಸದಾಗಿ ಬಂದ ರಜಪುತ ಸೈನಿಕರು ತನ್ನವರೇ ಎಂಬದು ಅಮರಪ್ರಸಾದನಿಗೆ ತಿಳಿದು ಸಂತೋಷಭರಿತನಾದನು. ರಜಪುತ ಸೈನಿಕರು ತಮ್ಮ ಒಡೆಯನಿಗೆ ವಂದನೆಗಳನ್ನರ್ಪಿಸಿ, ಪಲಾಯನ ಮಾಡತೊಡಗಿದ ಪಠಾಣರನ್ನು ಬೆನ್ನಟ್ಟಿ ಹೋಗಲಿಕ್ಕೆ ಆಜ್ಞೆಯನ್ನೀಯಬೇಕೆಂದು ಬೇಡಿಕೊಂಡರು. ಆಗ ಅಮರಪ್ರಸಾದನು: "ಸೈನಿಕರೆ, ಪ್ರಾಣಭಯವಿಹ್ವಲರಾಗಿ ಪಲಾಯನ ಮಾಡತೊಡಗಿದವರ ಮೇಲೆ ಸಾಗಿ ಹೋಗುವದು ಕ್ಷಾತ್ರಧರ್ಮವಲ್ಲ. ರಜಪುತರ ಗೌರವಕ್ಕೆ ಕಲಂಕವುಂಟಾಗುವಂತಹ ಕೃತಿಯನ್ನು ಎಂದೂ ಮಾಡಬಾರದು. ಶಾಂತರಾಗಿರಿ, ಎಲ್ಲರೂ ಶಾಂತರಾಗಿರಿ. ಎದುರಾಳಿಗಳಾಗಿ ನಿಂತ ಶತ್ರುಗಳಿಗೆ ನಿಮ್ಮ ಪ್ರತಾಪವನ್ನು ತೋರಿಸಿ ಕೀರ್ತಿ ಹೊಂದಲಿಕ್ಕೆ ಮುಂದೆ ಸಮಯವುಂಟು. ಸದ್ಯಕ್ಕೆ ಎಲ್ಲರೂ ಶಾಂತರಾಗಿರಿ."

ರಾಜಾದೇಶದಂತೆ ಎಲ್ಲ ಸೈನಿಕರೂ ಶಾಂತರಾದರು. ಅನಂತರದಲ್ಲಿ ರಜಪುತ ಪಡೆಯ ಉಪನಾಯಕನಾದ ದೀಪನನು:—"ಒಡೆಯರೇ, ನೀವು ಹೀಗೆ ಏಕಾಂಗಿಗಳಾಗಿ ಪ್ರಯಾಣ ಮಾಡುವದು ಯೋಗ್ಯವಲ್ಲ. ಇಂದು ಪರಮಾತ್ಮನ ಅನುಗ್ರಹವಿದ್ದುದರಿಂದ ಜೀವದ ಮೇಲೆ ಬಂದ ಗಂಡಾಂತರವು ದೂರವಾಯಿತು. ನಿಮ್ಮ ಅಂಗರಕ್ಷಣೆಗಾಗಿ ಎಷ್ಟೋ ಸೈನಿಕರು ಬದ್ಧಕಂಕಣರಿರುವಾಗ ನೀವು ಹೀಗೆ ಒಬ್ಬರೇ ಪ್ರಯಾಣ ಮಾಡಬೇಕೆ? ನಮ್ಮಂತಹ ಕ್ಷುದ್ರಸೇವಕರು ರಾಜಮಹಾಲಿನ ಜಮೀನದಾರಿಯಲ್ಲಿ ಅನೇಕರುಂಟು; ಆದರೆ ನಿಮ್ಮಂತಹ ಒಡೆಯರು ರಾಜಮಹಾಲಿನ ಪ್ರಜೆಗಳಿಗೆ ಹೇಗೆ ದೊರೆಯುವರು? ಪ್ರತಿಯೊಂದು ಕೆಲಸದಲ್ಲಿ ನೀವೇ ಮುಂದೆ ಬೀಳುತ್ತಿರುವಿರಿ. ನಮ್ಮಂತಹ

ಸೇವಕರು ಬೇಕಾದಂತಹ ಕೆಲಸ ಮಾಡಲಿಕ್ಕೆ, ಪ್ರಸಂಗವೊದಗಿದರೆ ಆತ್ಮಬಲಿ ದಾನ ಮಾಡಲಿಕ್ಕೆ ಸಿದ್ಧರಿರುವರು. ಒಡೆಯರೆ, ನಿಮ್ಮ ಮೇಲೆ ಎರಡು-ಮೂರು ದುರ್ಘಟ ಪ್ರಸಂಗಗಳು ಬಂದವು. ಇನ್ನು ಮೇಲೆ ನೀವು ಹೀಗೆ ಅಸಾವಧರಾಗಿ ವರ್ತಿಸಬಾರದೆಂದು ನಮ್ರವಾದ ವಿನಂತಿಯುಂಟು. ಸೇವಕನು ಉದ್ಧಾಮತನದಿಂದ ವರ್ತಿಸಿದನೆಂದು ತಿಳಿಯದೆ, ಹೆಚ್ಚು ಮಾತನಾಡಿದ್ದಕ್ಕಾಗಿ ಕ್ಷಮಿಸಿ ನನ್ನ ಅಭಿಪ್ರಾಯದಂತೆ ವರ್ತಿಸಬೇಕು.''

''ಸ್ವಾಮಿನಿಷ್ಠ ದೀಪನ, ಸರಳ ಹೃದಯದವನಾದ ನಿನ್ನ ಮಾತುಗಳನ್ನು ಕೇಳಿ ಆನಂದವಾಯಿತು. ಪ್ರತಿಯೊಂದು ಕಾರ್ಯದಲ್ಲಿ ಸೇವಕರನ್ನು ಮುಂದೆ ಮಾಡಿ, ಜೀವಗಳ್ಳರಂತೆ ಹಿಂದೆ ಉಳಿಯುವದು ಕ್ಷತ್ರಿಯರ ಧರ್ಮವಲ್ಲ. ಒಡೆಯನಂತೆ ಸೇವಕರ ಜೀವನಕ್ಕಾದರೂ ಬೆಲೆಯುಂಟು. ಕರ್ತವ್ಯಕ್ಕಾಗಿ ಒಡೆಯನೂ ಸೇವಕರೂ ಕೂಡಿಯೆ ಆತ್ಮಬಲಿಯೊಪ್ಪಿಸುವ ಪ್ರಸಂಗವೊದಗುವದು. ಇರಲಿ ದೀಪನ, ನೀನು ಇಲ್ಲಿಗೆ ಹೇಗೆ ಬಂದೆ? ನಾನು ಇಲ್ಲಿ ಗಂಡಾಂತರದಲ್ಲಿರುವೆನೆಂಬದು ನಿನಗೆ ಹೇಗೆ ತಿಳಿಯಿತು?''

''ಒಡೆಯರೇ, ನೀವು ಗಂಡಾಂತರದಲ್ಲಿ ಬಿದ್ದ ಸಂಗತಿಯನ್ನು ಒಬ್ಬ ಸುಂದರ ಬಾಲಕನು ಶಿಬಿರಕ್ಕೆ ಬಂದು ಹೇಳಿದನು.''

ತನಗೆ ಶಸ್ತ್ರವನ್ನು ಕೊಟ್ಟ ಬಾಲಕನೇ ಶಿಬಿರಕ್ಕೆ ಹೋಗಿ, ತಾನು ಗಂಡಾಂತರದಲ್ಲಿ ಬಿದ್ದ ಸಂಗತಿಯನ್ನು ಹೇಳಿರುವನೆಂಬದು ಅಮರಪ್ರಸಾದನಿಗೆ ತಿಳಿಯಿತು. ಆ ಬಾಲಕನು ಯಾರಿರಬಹುದೆಂದು ಅವನು ವಿಚಾರ ಮಾಡತೊಡಗಿದನು; ಆದರೆ ಅವನಿಗೆ ಯಾವದೂ ಗೊತ್ತಾಗಲಿಲ್ಲ. ಅವನು ತನ್ನ ಸೈನಿಕರೊಡನೆ ಅಲ್ಲಿಂದ ಹೊರಟು ತನ್ನ ಶಿಬಿರವನ್ನು ತಲುಪಿದನು.

---

## ೧೮ನೆಯ ಪರಿಚ್ಛೇದ.

ಮಾರನೆಯ ದಿನ ಪ್ರಾತಃಕಾಲದಲ್ಲಿ ಮೊಗಲ-ಪಠಾಣರ ನಡುವೆ ಜೀವನ-ಮರಣಗಳ ಘನಘೋರ ಸಂಗ್ರಾಮವು ಪ್ರಾರಂಭವಾಯಿತು. ಮುನ್ನಿನ ಯುದ್ಧದಲ್ಲಿ ಮೊಗಲರು ಪರಾಭೂತರಾಗಿದ್ದರೂ, ಅವರ ಸೈನ್ಯವು ಪಠಾಣರ ಸೈನ್ಯಕ್ಕಿಂತ ಬಹಳೇ ಹೆಚ್ಚಾಗಿತ್ತು. ಉತ್ಸಾಹವಾದರೂ ಜೇತೃಗಳಾದ ಪಠಾಣರಿಗಿಂತ ಮೊಗಲರಲ್ಲಿ ಹೆಚ್ಚಿಗೆ ಇತ್ತು. ಅವರು ಒಳ್ಳೆಯ ವೀರಾವೇಶದಿಂದ ಪಠಾಣ ಸೈನಿಕರ ಮೇಲೆ ಬಿದ್ದರು. ಬಿರುಗಾಳಿಯು ಕದಳೀಬನವನ್ನು

ಹೊಕ್ಕಂತಾಯಿತು. ಪಠಾಣರ ಎದೆಯು ಇಬ್ಭಾಗವಾಯಿತು. ಕೆಲವು ಕ್ಷಣಗಳಲ್ಲಿ ಹಿಂದಿನ ದಿನದ ವಿಜಯೋತ್ಸಾಹವು ನಿರ್ನಾಮವಾಗಿ ಹೋಯಿತು.

ರಾಜಾ ಅಮರಪ್ರಸಾದನು ಯುದ್ಧಕ್ಷೇತ್ರದಲ್ಲಿ ಬಂದು ನಾಲ್ಕೂ ಕಡೆಗೆ ನಿರೀಕ್ಷಣೆ ಮಾಡಿದನು; ಆದರೆ ಅಲ್ಲಿ ಅವನಿಗೆ ರುಸ್ತುಮಖಾನನು ಕಾಣಲಿಲ್ಲ. ಅಸ್ವಸ್ಥತೆಯು ಮೂಲಕವಾಗಿಯೋ ಅಥವಾ ಇನ್ನಾವ ಕಾರಣದಿಂದಲೋ ಖಾನನು ರಣಭೂಮಿಗೆ ಬಂದಿಲ್ಲವೆಂದು ಅವನು ತಿಳಿದು, ರಾಜಾ ತೋಡರಮಲ್ಲನ ಸಹಕಾರ ಹೊಂದಿ ನವಾಬ ದಾವುದಖಾನನ ಮೇಲೆ ಆಕ್ರಮಣ ಮಾಡಿದನು. ಭೀಷಣವಾದ ಕಾಳಗವು ಪ್ರಾರಂಭವಾಯಿತು. ಪ್ರಬಲವಾದ ಯುದ್ಧದಿಂದ ಮನುಷ್ಯನ ನಿಷ್ಠುರತೆಯು ಬೀಭತ್ಸ್ಯಮೂರ್ತಿಯು ಪ್ರಕಟವಾಯಿತು. ವಿಶ್ವವು ಕೋಲಾಹಲದಿಂದ ವ್ಯಾಪ್ತವಾಗಿ ಹೋಯಿತು. ಆರ್ತಜನರ ಚೀತ್ಕಾರನಿನಾದವು ದಶದಿಶೆಗಳನ್ನು ವ್ಯಾಪಿಸಿತು. ಗಾಯಾಳುಗಳ ಕಿರಿಚೆರಳಿಕೆಯು ಎದೆ ಕರಗಿಸುವಂತಿತ್ತು. ಶೋಣಿತದೊಡನೆ ಶೋಣಿತದ ಆಟವು, ಪ್ರಾಣಗಳೊಡನೆ ಪ್ರಾಣಗಳ ಆಟವು. ಹೀಗಾಗಿ ಜೀವಿತವು ಕ್ಷಣಭಂಗುರವಾಗಿ ಹೋಯಿತು. ಕೆಲವು ಗಳಿಗೆ ಯುದ್ಧವು ನಡೆಯುವಷ್ಟರಲ್ಲಿ ನೆತ್ತರವು ಸರವುಗಟ್ಟಿ ಹರಿಯಹತ್ತಿತು. ಹೆಣಗಳು ರಾಶಿರಾಶಿಯಾಗಿ ಬಿದ್ದವು. ಆ ರಣಸ್ಥಳವು ಕಾಲನ ಲೀಲಾಭೂಮಿಯಾಗಿ ಹೋಯಿತು! ಉಭಯ ಪಕ್ಷಗಳು ಉತ್ಸಾಹದಿಂದ ಕಾದತೊಡಗಿದ್ದವು. ಯಾರೂ ಹಿಂಜರಿದಿರಲಿಲ್ಲ. ಅಷ್ಟರಲ್ಲಿ ದಾವುದಖಾನನ ಸೈನ್ಯದೊಡನೆ ಯುದ್ಧ ಮಾಡುತ್ತಿದ್ದ ಅಮರಪ್ರಸಾದನು ದೂರದಲ್ಲಿ ಸೈನ್ಯಸಮೇತನಾಗಿ ಯುದ್ಧ ಮಾಡುತ್ತಿದ್ದ ರುಸ್ತುಮಖಾನನನ್ನು ಕಂಡನು. ಕೂಡಲೆ ಅವನು ಖಾನನ ಮೇಲೆ ಆಕ್ರಮಣ ಮಾಡಿದನು.

ರುಸ್ತುಮಖಾನನು ಅಮರಪ್ರಸಾದನ ಆಕ್ರಮಣಕ್ಕೆ ಪ್ರತ್ಯಾಕ್ರಮಣ ಮಾಡಲಿಲ್ಲ. ಅವನು ಆತ್ಮರಕ್ಷಣೆ ಮಾಡಿಕೊಳ್ಳುತ್ತ ತನ್ನ ಸೈನ್ಯದೊಡನೆ ಮೆಲ್ಲಮೆಲ್ಲನೆ ಹಿಂದೆ ಸರಿಯತೊಡಗಿದನು. ಅಮರಪ್ರಸಾದನು ಖಾನನ ಈ ಕೃತಿಯಿಂದ ವಿಸ್ಮಿತನಾದನು. ಅವನು ಹಿಂಜರಿಯ ತೊಡಗಿದ ಪಠಾಣರ ಮೇಲೆ ಆಕ್ರಮಣ ಮಾಡುತ್ತ ಮುಂದೆ ಸಾಗಿದನು. ಖಾನನ ಸೈನ್ಯವು ಹಿಂದೆ ಸರಿಯುತ್ತ ಸರಿಯುತ್ತ ನದೀ ತೀರಕ್ಕೆ ಬಂತು. ಆಗ ಅಮರಪ್ರಸಾದನು ರುಸ್ತುಮಖಾನನ ಸಮೀಪಕ್ಕೆ ಬಂದು ಉಚ್ಚಕಂಠದಿಂದ:—"ನನಗೆ ತಿಳಿದು ಬಂದಿದೆ; ರುಸ್ತುಮಖಾನನಿಗ ವಿಜಯ ಸಂಪಾದನೆಯ ವಿಷಯವಾಗಿ ಆಶಂ

ಕೆಯು ಉತ್ಪನ್ನವಾಗಿರುವದೆಂಬದು ಚನ್ನಾಗಿ ಮನವರಿಕೆಯಾಗಿದೆ. ಯಾಕೆ, ಖಾನಸಾಹೇಬರೆ? ನಿಮ್ಮಲ್ಲಿ ಶಸ್ತ್ರಗಳ ತೀಕ್ಷ್ಣತೆಯನ್ನು ಸಹನ ಮಾಡಿ ಕೊಳ್ಳುವ ಶಕ್ತಿಯು ಉಳಿಯದ್ದರಿಂದ ಯುದ್ಧ ಭೂಮಿಯನ್ನು ತ್ಯಜಿಸಿ ನದೀ ತೀರಕ್ಕೆ ಓಡಿ ಬಂದಿರೊ?"

"ಅಮರಪ್ರಸಾದ!" ಖಾನನು ಗಾಂಭೀರ್ಯದಿಂದ:—"ಶಂಕಾಭಯು ಗಳು ಪಠಾಣರ ಕೋಶದಲ್ಲಿಲ್ಲ. ನಿನ್ನ ಹಾಗು ನಿನ್ನ ಕಾಫರ ಸೈನ್ಯದ ಮೃತ ದೇಹಗಳಿಂದ ನದಿಗೆ ಸೇತುವೆ ಕಟ್ಟುವದಕ್ಕಾಗಿ ಇಲ್ಲಿಗೆ ಬಂದಿರುವೆನು. ಕಾಫರ, ಆತ್ಮರಕ್ಷಣೆಗೆ ಸಿದ್ಧನಾಗು. ವಿಲಂಬ ಮಾಡಬೇಡ. ಅಗೋ, ಸೂರ್ಯನು ಪಶ್ಚಿಮಾಂಬುಧಿಯಲ್ಲಿ ದುಮುಕಲುದ್ಯುಕ್ತನಾಗಿರುವನು ಕಾಲಾತಿಕ್ರಮಣ ವಾದರೆ ನನ್ನ ಆಶೆಯು ಸಫಲವಾಗಲಿಕ್ಕಿಲ್ಲ. ಬೇಗನೆ ಯುದ್ಧಸನ್ನದ್ಧನಾಗು."

"ರುಸ್ತುಮಖಾನ!" ಅಮರಪ್ರಸಾದನು ಉಪಹಾಸಪೂರ್ವಕವಾಗಿ:--"ನಿನ್ನ ಮಾತುಗಳಲ್ಲಿ ಹೆಚ್ಚಾಗಿ ಪೌರುಷವು ತುಂಬಿತುಳುಕುವದು; ಆದರೆ ಕೃತಿಯಲ್ಲಿ ಮಾತ್ರ ಏನೂ ಕಾಣುವದಿಲ್ಲ ನೀನು ಅಸಾಧ್ಯವಾದ ಆಶೆಗೊಳಗಾ ಗಿರುವೆ. ನಿನ್ನ ಆಶೆಯು ಈ ಜನ್ಮದಲ್ಲಿಯಷ್ಟೇ ಏಕೆ, ನೂರಾರು ಜನ್ಮಗಳಲ್ಲಾ ದರೂ ಪೂರ್ಣವಾಗಲಾರದು. ಈಗ ಸೂರ್ಯನು ಅಸ್ತನಾಗುವನೆಂಬದನ್ನ ಷ್ಟು ಹೇಳಲಿಕ್ಕೆ ಧೈರ್ಯ ಮಾಡಿದೆ; ಆದರೆ ಅವನೊಡನೆ ನಿನ್ನ ಸೌಭಾಗ್ಯ ಸೂರ್ಯನಾದರೂ ಮುಳುಗುವನೆಂಬದನ್ನು ಹೇಳಲಿಕ್ಕೆ ಬರಲಿಲ್ಲವೇಕೆ? ಖಾನ, ಈ ಜಾಹ್ನವಿಗೆ ಹಿಂದು ಶವಗಳ ಸೇತುವೆಯು ಬೇಕಾಗಿಲ್ಲ; ಅವಳು ಯವನ ಕಲೇವರಸ್ತೂಪಗಳನ್ನು ಬಯಸುತ್ತಿರುವಳೆಂಬದು ನೀನು ಜೀವಂತ ವಾಗಿ ಕೆಲವು ವೇಳೆಯಾದರೂ ಉಳಿದರೆ ನಿನ್ನ ನಿದರ್ಶನಕ್ಕೆ ಬಂದೇ ಬರು ವದು. ವಿಲಂಬಮಾಡದೆ ಯುದ್ಧಕ್ಕೆ ಅಣಿಯಾಗು ಮ್ಲೇಂಛಾ."

ಪರಕ್ಷಣದಲ್ಲಿ ಉಭಯ ಪಕ್ಷಗಳು ಕಾಳಗದಲ್ಲಿ ತೊಡಗಿದವು. ರಕ್ತ ಪಿಪಾಸು ದಾನವರಂತೆ ಎರಡೂ ಬಣದವರು ಶೋಣಿತ ಪ್ರವಾಹವನ್ನು ಹರಿ ಸುವ ಸಾಹಸ ಮಾಡಹತ್ತಿದರು. ಕೆಲವು ವೇಳೆಯಲ್ಲಿ ಯುದ್ಧಭೂಮಿಯು ರಕ್ತರಂಜಿತವಾಯಿತು. ನದಿಯು ರಕ್ತಪ್ರವಾಹದಿಂದೊಡಗೂಡಿ ಆರಕ್ತತೆ ಹೊಂದಿತು. ಈ ನಾರಕೀಯ ಪೈಶಾಚಿಕ ದೃಶ್ಯದಿಂದ ವ್ಯಥಿತನಾದ ಭಾಸ್ಕ ರನು ಪಶ್ಚಿಮಾಂಬುಧಿಯಲ್ಲಿ ಧುಮುಕಿ ಮರೆಯಾದನು. ಸೂರ್ಯನು ಮು-ಳುಗಿ ಸ್ವಲ್ಪ ವೇಳೆಯಾದ ಮೇಲೆ ರುಸ್ತುಮಖಾನನು ಅಮರಪ್ರಸಾದನನ್ನು

ಕುರಿತು;—"ಕಾಫರ, ನಿನ್ನ ಮೇಲೆ ಪರಮಾತ್ಮನ ಅಸೀಮವಾದ ಕೃಪೆಯಿರುವದೆಂದು ತಿಳಿಯುತ್ತದೆ. ಅಂತೆಯೆ ಅವನು ನಿನ್ನ ಮೃತಿಯನ್ನಿಚ್ಛಿಸಲಿಲ್ಲ. ಸೂರ್ಯನು ಅಸ್ತಂಗತನಾದನು. ಇಂದು ಯುದ್ಧವನ್ನು ನಿಲ್ಲಿಸು."

"ಮ್ಲೇಂಛಾ!" ಅಮರಪ್ರಸಾದನು ಆಕ್ರಮಣವನ್ನು ನಿಲ್ಲಿಸಿ:—"ನಿನ್ನ ಮೇಲಾದರೂ ಅಲ್ಲಾನ ಅನುಗ್ರಹವಿರುವದರಿಂದಲೇ ಇಂದು ರಜಪುತರ ಕರಾಲ ಖಡ್ಗದ ಆಘಾತಹೊಂದದೆ ಜೀವದಿಂದುಳಿದೆ. ನಿನ್ನ ಇಚ್ಛೆಯ ಮೇರೆಗೆ ಇಗೋ, ಖಡ್ಗವನ್ನು ಒರೆಗಾಣಿಸುವೆನು. ನಾಳಿನ ಯುದ್ಧದಲ್ಲಿ ನಿನ್ನ ಸಮಾಚಾರವನ್ನು ತೆಗೆದುಕೊಳ್ಳುವೆನು."

"ನಿನ್ನ ಈ ಅಭಿಮಾನವು ನಾಳೆಗೆ ಉಳಿಯಲಾರದು. ನಿನ್ನ ಈ ಮಾನ-ಗೌರವಗಳು ಭಯಭೀತವಾಗಿ ನನ್ನ ಚರಣಗಳಿಗೆ ಸಾಷ್ಟಾಂಗವೆರಗುವವು." ಎಂದು ನುಡಿದು, ಖಾನನು ತನ್ನ ಕುದುರೆಯನ್ನು ವೇಗದಿಂದ ಸಾಗಿಸಿದನು. ಅವನೊಡನೆ ಸ್ವಲ್ಪ ಜನರು ಮಾತ್ರ ತೆರಳಿದರು. ಉಳಿದ ಸೈನಿಕರು ಸಾವಕಾಶವಾಗಿ ಶಿಬಿರದ ದಾರೀ ಹಿಡಿದರು. ನೋಡ ನೋಡುವಷ್ಟರಲ್ಲಿ ಖಾನನು ಅದೃಶ್ಯನಾದನು. ರುಸ್ತುಮಖಾನನ ಈ ವರ್ತನದಿಂದ ಅಮರಪ್ರಸಾದನು ಬೆರಗಾದನು. ಅವನು ತನ್ನ ಎಲ್ಲ ಸೈನ್ಯವನ್ನು ಬಳಿಯಲ್ಲಿ ತೆಗೆದುಕೊಳ್ಳದೆ ಹೋದದ್ದರ ರಹಸ್ಯವೇನಿರಬಹುದೆಂದು ವಿಚಾರಿಸತೊಡಗಿದನು. ಕಡೆಗೂ ಅವನ ಸಂದೇಹವು ದೂರವಾಗಲಿಲ್ಲ. ಅವನು ತನ್ನ ಸೈನ್ಯವನ್ನು ತೆಗೆದುಕೊಂಡು ಶಿಬಿರದ ದಾರೀ ಹಿಡಿದನು. ಮಾರ್ಗಕ್ರಮಣ ಮಾಡುತ್ತಲೆ ಅವನು ರುಸ್ತುಮಖಾನನ ಕೃತ್ಯಗಳ ವಿಷಯವಾಗಿ ಯೋಚಿಸತೊಡಗಿದ್ದನು. ಖಾನನು ಮೊದಲು ಯುದ್ಧಕ್ಕೆ ವಿಲಂಬವಾಗಿ ಬಂದದ್ದೂ, ಕಾಳಗವು ಪ್ರಾರಂಭವಾದ ಮೇಲೆ ಹಿಂದೆ ಸರಿಯುತ್ತ ನದೀ ತೀರಕ್ಕೆ ಹೋದದ್ದೂ, ಆ ಮೇಲೆ ಸೂರ್ಯಾಸ್ತದ ನಿಮಿತ್ತವನ್ನು ಮುಂದೆ ಮಾಡಿ ಪ್ರಸ್ಥಾನ ಬೆಳೆಯಿಸಿದ್ದೂ ಅವನನ್ನು ಗೊಂದಲದಲ್ಲಿ ಕೆಡಹಿದ್ದವು.

ಅಮರಪ್ರಸಾದನು ವಿಚಾರತಂದ್ರಿಯಲ್ಲಿ ಮಾರ್ಗಕ್ರಮಣ ಮಾಡುತ್ತಿರುವಾಗ ಅವನ ಏಕಾಗ್ರತೆಯನ್ನು ಭಂಗಪಡಿಸುವಂತಹ ಆರ್ತನಾದವು ಹೊರಟಿತು. ಅಮರಪ್ರಸಾದನು ಎಚ್ಚತ್ತನು. ಕರುಣಪ್ರಳಾಪವು ರಮಣಿಯದೆಂದು ಅವನು ತಿಳಿದನು. ಹಿಂದೆಯೊಮ್ಮೆ ಒಬ್ಬ ಬಾಲಿಕೆಯು ಧರ್ಮರಕ್ಷಣಾರ್ಥವಾಗಿ ಆರ್ತನಾದ ಮಾಡಿದ್ದೂ, ಅವಳನ್ನು ಸಂಕಟದಿಂದ ಪಾರು ಮಾಡಿದ್ದೂ ಅವನ

ಲಕ್ಷ್ಯಕ್ಕೆ ಬಂತು. ಇಂದಾದರೂ ಅವಳೇ ಸಂಕಟದಲ್ಲಿ ಸಿಲುಕಿರಬಹುದೇನೆಂದು ಅವನು ಯೋಚಿಸಿದನು. ಯಾರೇ ಇರಲಿ, ಸಂಕಟಾಪನ್ನರನ್ನು ರಕ್ಷಿಸುವದು ತನ್ನ ಶೀಲವೆಂದು ಭಾವಿಸಿ, ಯಾವ ನಿಟ್ಟಿನಿಂದ ಧ್ವನಿಯು ಕೇಳಬರುತ್ತಿರುವದೋ ಅದೇ ನಿಟ್ಟಿಗೆ ಅಭಿಮುಖವಾಗಿ ಕುದುರೆಯನ್ನು ದ್ರುತಗತಿಯಿಂದ ಸಾಗಿಸಿದನು. ಕೆಲವು ದೂರ ಸಾಗಿ ಹೋದ ಮೇಲೆ ಮತ್ತೆ ರೋದನ ಧ್ವನಿಯು ಕೇಳಿತು. ಆ ಧ್ವನಿಯು ಆಗ ಮೊದಲಿನಷ್ಟೇ ದೂರದಿಂದ ಕೇಳಿತು. ಅಮರಪ್ರಸಾದನು ಮತ್ತೆ ಮುಂದೆ ಸಾಗಿದನು. ಮತ್ತೊಮ್ಮೆ ಧ್ವನಿಯು ಕೇಳಿತು. ಆಗಲೂ ಮೊದಲಿನಷ್ಟೇ ದೂರದಿಂದ ಕೇಳಿತು. ಅಮರಪ್ರಸಾದನು ಧ್ವನಿಗೆ ಅಭಿಮುಖವಾಗಿ ಹೋದ ಹೋದಂತೆ ಧ್ವನಿಯೂ ದೂರದೂರ ಹೋಗಲಾರಂಭಿಸಿತು. ಬರಬರುತ್ತ ಸ್ವರವು ಅಸ್ಪಷ್ಟವಾಗುತ್ತ ಕೊನೆಗೆ ಮೃಗಮರೀಚಿಕೆಯಾಗಿ ಹೋಯಿತು!

ಅಮರಪ್ರಸಾದನು ಈ ಘಟನೆಯಿಂದ ವಿಸ್ಮಿತನಾದನು. ಅವನ ವಿಚಾರ ಪ್ರವಾಹವು ಮೇರೆದಪ್ಪಿತು. ಯಾವಳೊಬ್ಬ ಅನಾಥ ರಮಣಿಯನ್ನು ಒಬ್ಬ ದುಷ್ಮನನು ತೆಗೆದುಕೊಂಡು ಹೋಗುತ್ತಿರಬಹುದೆಂದು ಅವನು ನಿರ್ಧರಿಸಿದನು. ಧ್ವನಿಯು ಕೇಳದಾಯಿತೆಂದು ಅವನು ತನ್ನ ಕರ್ತವ್ಯವನ್ನು ಬಿಡಲಿಲ್ಲ. ಅವನು ತನ್ನ ಕುದುರೆಯನ್ನು ಪವನಗತಿಯಿಂದ ಮುಂದೆ ಸಾಗಿಸಿದನು. ಒಂದು ಪ್ರಹರ ರಾತ್ರಿಯಾಗುತ್ತ ಬಂದಿತ್ತು. ಚಂದ್ರಪ್ರಕಾಶವು ನಾಲ್ಕೂ ಕಡೆಗೆ ಬಿದ್ದಿತ್ತು. ಧವಳ ಚಂದ್ರಿಕೆಯಿಂದ ಸೃಷ್ಟಿದೇವಿಯು ಶ್ವೇತವಸ್ತ್ರ ಪರಿಧಾನ ಮಾಡಿದಂತೆ ಕಾಣುತ್ತಿತ್ತು. ಅಮರಪ್ರಸಾದನು ಕೆಲವು ವೇಳೆ ಮುಂದೆ ಹೋದ ಮೇಲೆ ಶುಭ್ರವಾದ ಒಂದು ವಸ್ತುವು ಭೂಮಿಯ ಮೇಲೆ ಬಿದ್ದಂತೆ ಭಾಸವಾಯಿತು. ಕೂಡಲೆ ಅವನು ಆ ವಸ್ತುವಿನ ಸಮೀಪಕ್ಕೆ ಹೋದನು. ಅವನಿಗೆ ಕಿರಿನರಳಿಕೆಯು ಕೇಳ ಬಂತು. ಆ ವಸ್ತುವಿನ ಬಳಿಗೆ ಹೋದ ಕೂಡಲೆ ಅವನು ಕುದುರೆಯನ್ನು ನಿಲ್ಲಿಸಿದನು. ಕೂಡಲೆ ವಿಕಟ ಶಬ್ದಮಾಡಿ ಅದು ಮುಗ್ಗರಿಸಿತು. ಕುದುರೆಯು ಮುಗ್ಗರಿಸಿದ್ದರಿಂದ ಅಮರಪ್ರಸಾದನು ಭೂಮಿಗೆ ಬಿದ್ದನು. ಕುದುರೆಯಾದರೂ ನಡುಗುತ್ತ ಭೂಮಿಗೆ ಬಿತ್ತು. ಅಮರಪ್ರಸಾದನು ಹುಲ್ಲ ಮೇಲೆ ಬಿದ್ದದರಿಂದ ಅವನಿಗೆ ಅಷ್ಟೊಂದು ಪೆಟ್ಟು ಹತ್ತಲಿಲ್ಲ. ಅವನು ಎದ್ದು ಸಾವರಿಸಿಕೊಂಡು ಮುಂದೆ ಹೋಗುವಷ್ಟರಲ್ಲಿ ಹಿಂದಿನಿಂದ ಯಾರೋ ಅವನ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದರು.

ಈ ಪ್ರಸಂಗದಿಂದ ವಿಸ್ಮಿತನಾದ ಅಮರಪ್ರಸಾದನು ತಿರುಗಿ ನೋಡಲು, ಇಬ್ಬರು ಮುಸಲಮಾನರು ಕೈಗಳನ್ನು ಹಿಡಿದು ನಿಂತುಕೊಂಡಿದ್ದರು. ಅವರ ಹಿಂದೆ ಕೆಲವು ನಗ್ನಖಡ್ಗಧಾರಿಗಳಾದ ಯವನ ಸೈನಿಕರಿದ್ದರು. ಮುಂದೆ ಒಂದೆರಡು ಕ್ಷಣಗಳಲ್ಲಿ ಪಠಾಣರು ಅಮರಪ್ರಸಾದನನ್ನು ಸುತ್ತುಗಟ್ಟಿ ನಿಂತು ಕೊಂಡರು. ಒಬ್ಬಿಬ್ಬರು ಅವನ ಕೈಕಾಲುಗಳಿಗೆ ಲೋಹ ಶೃಂಖಲೆಗಳನ್ನು ಹಾಕಿದರು. ಇಷ್ಟೆಲ್ಲ ಕಾರ್ಯವು ಒಂದೆರಡು ಕ್ಷಣಗಳಲ್ಲಿ ಗದ್ದಲವಿಲ್ಲದೆ ಆಗಿ ಹೋಯಿತು.

ಈ ಅಕಲ್ಪಿತ ಘಟನೆಯಿಂದ ಅಮರಪ್ರಸಾದನು ವಿಸ್ಮಯ-ಸಂತಾಪ ಗಳಿಂದ ಯುಕ್ತನಾದನು. ಅವನು ಕ್ರೋಧಕಠೋರ ಸ್ವರದಿಂದ: "ಕಾಪುರುಷ ರಾದ ನೀವು ಯಾರು? ಹಿಂದಿನಿಂದ ಭಾಲೆಯನ್ನೊಗೆದು ನನ್ನ ಕುದುರೆಯನ್ನು ಕೊಂದು ಹಾಕಿದಿರಿ. ಕುತ್ಸಿತರಾದ ನೀವು ಹಿಂದಿನಿಂದ ನನ್ನ ಕೈಗಳನ್ನು ಹಿಡಿದು ಶೃಂಖಲೆ ತೊಡಿಸಿದಿರಿ ಶಸ್ತ್ರವನ್ನು ತೆಗೆದುಕೊಳ್ಳಲಿಕ್ಕೆ ಅವಕಾಶ ವನ್ನು ಸಹ ಕೊಡಲಿಲ್ಲ. ಹೀಗೆ ಕಪಟದಿಂದ ನನ್ನನ್ನು ಬಂಧಿಸಿದ ಅಧಮ ರಾದ ನೀವು ಯಾರು?"

ಹಿಂದಿನಿಂದ ವಿಕಟ ಹಾಸ್ಯ ಮಾಡುತ್ತ ಉಪಹಾಸಾತ್ಮಕ ಧ್ವನಿಯಿಂದ:- "ಇದು ಅಧಮತನವಲ್ಲ, ಕಾಪುರುಷ ವೃತ್ತಿಯಲ್ಲ; ರಣಕೌಶಲ್ಯವು; ವಿಸ್ಮಯ ಪ್ರದವಾದ ಯುದ್ಧಕಾರಸ್ಥಾನವು; ಸಂಗ್ರಾಮದ ಒಂದು ಪದ್ಧತಿಯು! ನೀನು ಪರಮ ಮೂರ್ಖನಿರುವದರಿಂದ ರಮಣಿಯ ಆರ್ತನಾದವನ್ನು ಕೇಳಿ ಹಿಂಬಾ ಲಿಸಿ ಬಂದೆ."

"ಯಾರು? ರುಸ್ತುಮನೇನು! ಈ ಕೃತಿಯು ಘಟಿಸಿದ ಕೂಡಲೆ ಬಹಳ ಮಾಡಿ ನಿನ್ನ ಕಾರಸ್ಥಾನವೇ ಎಂದು ಅನುಮಾನಿಸಿದ್ದೆನು. ನನ್ನ ತರ್ಕವು ನಿಜ ವಾಯಿತು. ರುಸ್ತುಮು, ನಾನು ಮೂರ್ಖನಲ್ಲ. ನನ್ನಿಂದ ಮೂರ್ಖತನದ ಹಾಗು ಅಧರ್ಮದ ಕೃತಿಗಳು ಈ ಜನ್ಮದಲ್ಲಿಯಂತು ಘಟಿಸಲಾರವು. ರಜ ಪುತರು ಕಪಟಿಗಳಲ್ಲ, ಸರಳತೆಯುವರು. ಅವರು ಎಂದೂ ಅಧರ್ಮಾಚರಣೆ ಯಿಂದ ನಡೆಯಲಾರರು. ಅನುಚಿತ ವಾಣಿಯೂ, ಅನುಚಿತ ಕೃತಿಗಳೂ, ಘೃಣಿತ ಕಾಪುರುಷೋಚಿತ ವ್ಯವಹಾರವೂ ನಿನ್ನಂತಹನಿಗೆ ಶೋಭಾಯ ಮಾನವಾಗಿರುವವು. ರುಸ್ತುಮು, ನೀನು ಪಠಾಣ ಕುಲಕ್ಕೆ ಕಲಂಕಪ್ರಾಯ ನಾಗಿರುವೆ!"

ಖಾನನು ಮತ್ತಿಷ್ಟು ಗಹಗಹಿಸಿ ನಗುತ್ತ:--"ಅಮರಪ್ರಸಾದ, ನಾನು ಪಠಾಣ ಕುಲಕ್ಕೆ ಭೂಷಣಭೂತನಾಗಿರುವೆನು. ಕಾಫರರ ವಧೆಮಾಡುವದು ಮಹಮ್ಮದೀಯರ ಪವಿತ್ರ ಧರ್ಮವಾಗಿರುವದು. ಛಲ, ಬಲ, ಕೌಶಲ್ಯ ಈ ಮೂರರಲ್ಲಿ ಯಾವ ಪ್ರಕಾರದಿಂದ ಸಾಧ್ಯವಾಗುವದೋ ಆ ಪ್ರಕಾರದಿಂದ ಹಿಂದುಗಳ ಕೊಲೆ ಮಾಡಿದರೆ ಸ್ವರ್ಗಪ್ರಾಪ್ತಿಯಾಗುವದು; ಆದರೆ ಸದ್ಯಕ್ಕೆ ನಾನು ನಿನ್ನ ವಧೆ ಮಾಡುವದಿಲ್ಲ; ಸೆರೆ ಹಿಡಿದು ಪ್ರತಿಬಂಧದಲ್ಲಿರಿಸುವೆನು. ನಿನ್ನನ್ನು ಒಮ್ಮೆಲೆ ಕೊಲ್ಲುವ ಇಚ್ಛೆಯು ನನಗಿಲ್ಲ. ಮೆಲ್ಲಮೆಲ್ಲನೆ ಯಾತನೆಗಳನ್ನು ಕೊಡುತ್ತ ಕೊಡುತ್ತ ನಿನ್ನನ್ನು ಕೊಲ್ಲುವೆನು. ನಾನು ಮಾಡಬಹುದಾಗಿರುವಂತಹ ಕೊಲೆಯು ಹಿಂದೆ ಎಂದೂ ಆಗಿಲ್ಲ; ಮುಂದೆ ಎಂದೂ ಆಗುವದಿಲ್ಲ, ಎಂದು ಪ್ರಸಿದ್ಧಿ ಹೊಂದುವಂತಹ ಭೀಷಣ ಪ್ರಕಾರದಿಂದ ಮಾಡುವೆನು."

ಅಮರಪ್ರಸಾದನು ಸಂತಪ್ತನಾದನು. ಅವನು ಏನೋ ಮಾತಾಡಬೇಕೆಂಬ ಸಾಹಸದಲ್ಲಿದ್ದನು. ಮಾತಾಡುವದಕ್ಕೆ ಅವನಿಗೆ ಅವಕಾಶ ಕೊಡದೆ, ರುಸ್ತುಮನು ತನ್ನ ಸೈನಿಕರನ್ನು ಕುರಿತು:—"ಯಾಕೆ ನಿಂತಿರೊ? ಸೆರೆಯಾಳನ್ನು ಕುದುರೆಯ ಮೇಲೆ ಹಾಕಿಕೊಂಡು ಬೇಗನೆ ಹೊರಡಿರಿ!"

ರುಸ್ತುಮನು ತನ್ನ ಕುದುರೆಯನ್ನು ವೇಗದಿಂದ ಸಾಗಿಸಿದನು. ಇಬ್ಬರು ಪಠಾಣರು ಅಮರಪ್ರಸಾದನನ್ನು ಎತ್ತಿ ಕುದುರೆಯ ಮೇಲೆ ಕುಳ್ಳಿರಿಸಿದರು. ಮತ್ತೊಬ್ಬ ಪಠಾಣನು ಆ ಕುದುರೆಯನ್ನೇರಿ ಖಾನನು ಹೋದ ಮಾರ್ಗವಾಗಿ ಸಾಗಿದನು. ಉಳಿದ ಸೈನಿಕರು ಅಮರಪ್ರಸಾದನು ಕುಳಿತ ಕುದುರೆಯನ್ನು ಸುತ್ತು ಗಟ್ಟಿ ಮಾರ್ಗಕ್ರಮಣ ಮಾಡಹತ್ತಿದರು.

ಅಮರಪ್ರಸಾದನ ಹಿಂದುಳಿದ ಸೈನಿಕರು ಅವನನ್ನು ಹುಡುಕಿ ಹುಡುಕಿ ಬೇಸತ್ತು, ಆ ಘಟನಾಸ್ಥಳಕ್ಕೆ ಬಂದರು. ಅಲ್ಲಿ ರುಸ್ತುಮಖಾನನ ಸೈನಿಕರೊಬ್ಬರೂ ಇದ್ದಿಲ್ಲ. ಅವರಿಗೆ ತಮ್ಮ ಒಡೆಯನ ಪ್ರೀತಿಯ ಕುದುರೆಯು ಮೃತಿಹೊಂದಿ ಬಿದ್ದದ್ದು ಕಂಡಿತು. ಅಮರಪ್ರಸಾದನು ಶತ್ರುಗಳ ಸ್ವಾಧೀನನಾಗಿರುವನೆಂದು ಸತ್ತ ಕುದುರೆಯ ಮೇಲಿಂದ ತರ್ಕಿಸಿ, ಅವರು ವ್ಯಥಿತಾಂತಃಕರಣಿಗಳಾಗಿ ತಮ್ಮ ಶಿಬಿರದ ದಾರೀ ಹಿಡಿದರು!

———

೧೯ನೆಯ ಪರಿಚ್ಛೇದ

ಪಠಾಣರ ಶಿಬಿರಗಳು. ಅಸಂಖ್ಯ ಶ್ರೇಣೀಬದ್ಧ ಶಿಬಿರಗಳು ನಿಶ್ಚಲಭಾವದಿಂದ ನಿಂತುಕೊಂಡಿದ್ದವು; ಆದರೆ ಅವು ಮೊಗಲರ ಭಯದಿಂದ ತ್ರಸ್ತವಾಗಿದ್ದವು. ಆದ್ದರಿಂದಲೆ ಆ ಶಿಬಿರಗಳು ಶಬ್ದಹೀನವೂ ನಿರುತ್ಸಾಹಿಗಳೂ ಆಗಿದ್ದವು. ಪ್ರತಿಯೊಂದು ಶಿಬಿರಗಳಲ್ಲಿ ಸೈನಿಕರಿದ್ದರು. ಆ ಸೈನಿಕರು ತುಟಿಯನ್ನು ಎರಡು ಮಾಡಲಿಕ್ಕೆ ಅಂಜಿ ಸ್ತಬ್ಧರಾಗಿದ್ದರು ಅವರು ಪ್ರಾಣಗಳಿದ್ದೂ ಇಲ್ಲದಂತೆಯೂ, ಅಭಿಮಾನವಿದ್ದೂ ತೇಜೋಹೀನರಾದವರಂತೆಯೂ ಅವಸ್ಥೆ ಹೊಂದಿದ್ದರು. ಮಧ್ಯದಲ್ಲಿ ನವಾಬ ದಾವುದಖಾನನ ವಿಶಾಲವಾದ ಶಿಬಿರವಿತ್ತು. ಆ ಶಿಬಿರದ ಶಿಖರದ ಮೇಲೆ ಪಠಾಣರ ಗೌರವದ ಹಾಗು ಪಠಾಣರ ಸ್ವಾತಂತ್ರ್ಯದ ಚಿಹ್ನವಾದ ಅರ್ಧ ಚಂದ್ರಾಂಕಿತ ತಾಮ್ರಧ್ವಜವು ಉಡ್ಡಾಣ ಮಾಡತೊಡಗಿತ್ತು. ಎಲ್ಲ ಶಿಬಿರಗಳಲ್ಲಿ ದೊಡ್ಡದೂ ಉನ್ನತವಾದದ್ದೂ ಆದ ಪಠಾಣಸೂರ್ಯ ದಾವುದಖಾನನ ಶಿಬಿರದ ಪತಾಕೆಯಾಗಿದ್ದರೂ, ಅದು ಅಂದು ಉಡ್ಡಾಣ ಮಾಡುತ್ತಿರುವಾಗ ಧ್ವನಿಗೈಯುದೆ ಸ್ತಬ್ಧವಾಗಿತ್ತು; ಅದರ ಚಂಚಲ ನೃತ್ಯವು ಕಟ್ಟಾಗಿತ್ತು; ತರಂಗಯುಕ್ತ ಕಲ್ಲೋಲವು ನಾಶವಾಗಿತ್ತು. ಆ ಪತಾಕೆಯು ಅಂದು ದೈನ್ಯತೆಹೊಂದಿತ್ತು; ಅದರ ಉನ್ನತವಾದ ಮಸ್ತಕವು ಮೊಗಲರ ಪಾದಧೂಳಿಯಿಂದ ಮಲಿನವಾಗುವ ಪ್ರಸಂಗ ಬಂದದರಿಂದ ಮ್ಲಾನವಾಗಿತ್ತು.

ರಾತ್ರಿಯ ಮೊದಲನೆಯ ಪ್ರಹರವು ಮೀರುತ್ತ ಬಂದಿತ್ತು. ಆಕಾಶದಲ್ಲಿ ನಿಶಾನಾಥನಿದ್ದಿಲ್ಲ. ರಾಜನಿಲ್ಲದ ರಾಜ್ಯವಾದದ್ದರಿಂದ ತಾರಕೆಗಳು ಸ್ವೇಚ್ಛೆಯಿಂದ ಕುಲುಕುಲು ನಗತೊಡಗಿದ್ದವು ಪೃಥ್ವಿಯು ಅಂಧಕಾರಮಯವಾಗಿತ್ತು. ಎಲ್ಲ ಕಡೆಯಲ್ಲಿ ನಿಸ್ತಬ್ಧತೆಯು ವ್ಯಾಪಿಸಿತ್ತು. ಆಗ ರಣವಾದ್ಯಗಳ ಕೊಲಾಹಲವಿದ್ದಿಲ್ಲ; ಮೃತ್ಯುಪಥಗಾಮಿಗಳ ಆರ್ತಧ್ವನಿಯಿರಲಿಲ್ಲ; ವೀರರ ರಣಗರ್ಜನೆಯಿಲ್ಲ; ಶಸ್ತ್ರಗಳ ಝಣತ್ಕಾರವಿದ್ದಿಲ್ಲ. ಮೃತ್ಯುಲೀಲೆಯೂ ಪೈಶಾಚಿಕ ಕೃತ್ಯಗಳೂ ಇರಲಿಲ್ಲ. ಇವುಗಳೊಡನೆ ವಿಶ್ವದ ಸಮಸ್ತ ಕೋಲಾಹಲವು ನಿಂತುಹೋಗಿತ್ತು. ಪ್ರಪಂಚವು ಭೀಷಣವಾದ ಶಾಂತಿಸಾಮ್ರಾಜ್ಯದಲ್ಲಿ ನಿಮಗ್ನವಾಗಿತ್ತು.

ಪ್ರತಿಯೊಂದು ಶಿಬಿರದಲ್ಲಿ ರಣಕ್ಲಾಂತ ಸೈನಿಕರು ಮಲಗಿದ್ದರು. ಕೆಲವರು ಮಂಚದ ಮೇಲೆ, ಕೆಲವು ಜನರು ಹಾಸುಗೆಯ ಮೇಲೆ, ಕೆಲವರು ಭೂಮಿಯ ಮೇಲೆ ಮಲಗಿ ನಿದ್ರಾವಶರಾಗಿದ್ದರು. ಕೆಲವರು ತಮ್ಮ ಕೈಗಳನ್ನು ತಲೆಗಿಂಬು ಮಾಡಿದ್ದರು; ಕೆಲವರು ಶಿರಸ್ತ್ರಾಣಗಳನ್ನು ಇರಿಸಿಕೊಂಡಿದ್ದರು.

ಕೆಲವರು ಅರಿವೆಗಳ ಸುರುಳಿ ಮಾಡಿ ಇಟ್ಟುಕೊಂಡಿದ್ದರು. ಪ್ರತಿಯೊಂದು ಶಿಬಿರಗಳಲ್ಲಿ ಇಬ್ಬಿಬ್ಬರು ಸಶಸ್ತ್ರ ಕಾವಲುಗಾರರು ಎಚ್ಚರಾಗಿ ಕಾವಲಿನ ಕೆಲಸ ಮಾಡುತ್ತಿದ್ದರು. ನವಾಬನ ಶಿಬಿರವು ಸುವಿಶಾಲವಾದದ್ದೂ ಮನೋಹರವಾದದ್ದೂ ಇತ್ತು. ಅವನ ಶಿಬಿರದಲ್ಲಿಯ ದೀಪವು ನಿಚ್ಚಳವಾಗಿ ಉರಿಯ ತೊಡಗಿತ್ತು. ಉಳಿದ ಶಿಬಿರಗಳಲ್ಲಿಯ ದೀಪಗಳು ಮಂದವಾಗಿದ್ದುದರಿಂದ ಈ ದೀಪವು ನಕ್ಷತ್ರ ಮಂಡಲದೊಳಗಿನ ಚಂದ್ರನಂತೆ ಭಾಸವಾಗುತ್ತಿತ್ತು. ನವಾಬನು ತನ್ನ ಶಿಬಿರದಲ್ಲಿ ಉಚ್ಚತರದ ಆಸನದ ಮೇಲೆ ಕುಳಿತುಕೊಂಡಿದ್ದನು. ಅವನ ಮುಖವು ಮ್ಲಾನತೆಹೊಂದಿತ್ತು. ಯಾವದೋ ಒಂದು ದೀರ್ಘಾಲೋಚನೆಯಲ್ಲಿ ಅವನು ಮಗ್ನನಾಗಿರುವನೆಂಬದು ಅವನನ್ನು ನೋಡಿದೊಡನೆಯೇ ತಿಳಿಯುತ್ತಿತ್ತು. ಶಿಲಾಪ್ರತಿಮೆಯಂತೆ ಅವನು ನಿಶ್ಚಲನಾಗಿದ್ದನು. ವಾಯುಗತಿಯಿಂದ ಜಲತರಂಗಗಳು ಪರಿವರ್ತನ ಹೊಂದುತ್ತಿರುವಂತೆ, ನವಾಬನಲ್ಲಿ ಹುಟ್ಟಿ ಬೆಳೆಯತೊಡಗಿದ್ದ ಚಿಂತೆಯ ಗತಿಯಿಂದ ಅವನ ಮುಖಭಾವದಲ್ಲಾದರೂ ಹೆಚ್ಚುಕಡಿಮೆಯಾಗತೊಡಗಿತ್ತು. ಅವನು ಭಯ, ಚಿಂತೆ, ಆಶಂಕೆಗಳಿಂದ 'ಇದೇನಾಗುವದು-ಇದೇನಾಗುವದು?' ಎಂದು ಉದ್ಗಾರ ತೆಗೆಯತೊಡಗಿದ್ದನು. ಅವನು ಗಹನವಾದ ವಿಚಾರ ಸಾಗರದಲ್ಲಿ ಮುಳುಗಿ ಬಿಟ್ಟಿದ್ದನು.

"ಪಠಾಣರ ಸೌಭಾಗ್ಯ ಸೂರ್ಯನು ವಿರಾಟವಾದ ಹಾ ಹಾಕಾರದೊಡನೆ ಸಾಗರಗರ್ಭದಲ್ಲಿ ಲೀನವಾಗುವನೋ, ಸಂಸಾರದಲ್ಲಿ ಪ್ರಕಾಶಿತನಾಗಿ ಆನಂದ ಕೊಡುವನೋ? ಉತ್ಥಾನ ಹೊಂದುವನೊ, ಪತನವಾಗುವನೊ? ಪಠಾಣಜೀವನವು ಪ್ರಕಾಶಿತವಾಗುವದೊ, ಅಂಧಕಾರಮಯವಾಗುವದೊ? ಸದ್ಯಕ್ಕೆ ಅಪಯಶದ ದುಶ್ಚಿಹ್ನವು ತೋರಿದೆ. ಸದ್ಯದ ಅಂಧಕಾರವು ದಟ್ಟವಾದದ್ದು. ಎಲ್ಲಿಯ ವರೆಗೆ ರಜಪುತರು ಸಹಾಯಕಾರಿಗಳಾಗಿದ್ದರೊ, ಅಲ್ಲಿಯ ವರೆಗೆ ಇಂತಹ ವಿಪುಲವಾದ ಅಂಧಕಾರದಲ್ಲಿ ಪ್ರಕಾಶಮಯ ರಾಜ್ಯವನ್ನು ಪ್ರಾಪ್ತಮಾಡಿಕೊಳ್ಳಲಿಕ್ಕೆ ಸಮರ್ಥನಾಗಿದ್ದೆನು. ಈ ಯುದ್ಧದಲ್ಲಾದರೂ ರಜಪುತರ ಸಹಾನುಭೂತಿಯನ್ನು ಯಾಕೆ ದೊರಕಿಸಿಕೊಳ್ಳಲಿಲ್ಲ? ಈ ದೃಷ್ಟಿಯೂ ಈ ಬುದ್ಧಿಯೂ ಮೊದಲೆ ನನ್ನಲ್ಲಿ ಇದ್ದಿಲ್ಲವೇಕೆ? ನಾನು ಮೊದಲು ವಿಚಾರಪೂರ್ಣನಾಗಿದ್ದರೆ ಪಠಾಣರ ಗೌರವವು ಭಾರತದ ಉರಪ್ರದೇಶದಲ್ಲಿ ಸದಾ ಅಂಕಿತವಾಗಿರುತ್ತಿತ್ತು. ನಾನು ಅಜ್ಞಾನಾಂಧಕಾರದಲ್ಲಿ ಬಿದ್ದು, ಇಷ್ಟು ದಿನಗಳ

ವರೆಗೆ ಧರ್ಮ-ಪುಣ್ಯಗಳ ಮೇದ ಮಜ್ಜಾಗರಿತ ಹಿಂದುಗಳ ಯೋಗ್ಯತೆಯನ್ನ ರಿಯಲಿಲ್ಲ. ಹಿಂದುಗಳೆಂದರೆ ಕಃಪದಾರ್ಥವೆಂದು ತಿಳಿದಿದ್ದರ ಕಟು ಫಲವು ದೊರೆಯಿತು. ಕೇವಲ ಒಂದು ದಿನ ಮಾತ್ರ ತೀರ ನಿರಾಶ್ರಿತನಾದ ಸ್ಥಿತಿಯಲ್ಲಿ ಹಿಂದು ಲಲನೆಯು ಮರೆಹೊಕ್ಕಾಗ ಅವಳು ತನ್ನ ಪ್ರಾಣವನ್ನು ಗಂಡಾಂತರ ದಲ್ಲಿ ಕೆಡಹಿ ನನ್ನನ್ನು ರಕ್ಷಿಸಿದಳು. ಅಹಹಾ! ಇದೆಂತಹ ಅತುಲನೀಯ ಧರ್ಮವು! ಇಂತಹ ಧರ್ಮ-ಕೀರ್ತಿಗಳ ದೃಶ್ಯಗಳು ಹಿಂದುಗಳಲ್ಲಲ್ಲದೆ ಇನ್ನಾವ ಕಡೆಗಾದರೂ ಕಾಣಲು ಸಾಧ್ಯವಿದೆಯೆ? ಸಂಸಾರದಲ್ಲಿಯು ಆದರ್ಶಜನಾಂಗ ಗಳಿಗೆ ಹಿಂದುಜಾತಿಯು ಆದರ್ಶಭೂತವಾಗಿರುವದು. ಧರ್ಮ, ಪುಣ್ಯ, ರಾಜ ನಿಷ್ಠೆ, ಆತಿಥ್ಯಗಳಲ್ಲಿ ಹಿಂದುಗಳಿಗೆ ಸರಿಯಾದವರು ಯಾರೂ ಇಲ್ಲ. ಜಾತಿಗತ ಈರ್ಷೆಯನ್ನು ಬಿಟ್ಟು ಒಮ್ಮೆ ಬಂಧುಭಾವದಿಂದೊಡಗೂಡಿ ಸ್ವಚ್ಛ ಹೃದಯ ದಿಂದ ಏಕತ್ರಿತರಾದರೆ, ಒಂದು ಸಾರೆ ಜಾತಿಗತ ಈರ್ಷೆ-ದ್ವೇಷಾಸೂಯೆ ಗಳನ್ನೂ ಸ್ವಾರ್ಥ, ಕ್ರೋಧ, ಅಹಂಕಾರಗಳನ್ನೂ ಮರೆತು ಏಕಕಂಠ, ಏಕ ವಾಕ್ಯಗಳಿಂದ 'ಜಯತಿ ಜಯಭಾರತ ಮಾತೆ!' ಎಂದು ಜಯಜಯಕಾರ ಮಾಡಿದರೆ, ಅವರಿಗೆ ವಿಶ್ವಬ್ರಹ್ಮಾಂಡವಾದರೂ ಅಂಜುವದು; ಆದರೆ ಹಾಗೆ ಆಗುವಂತಿಲ್ಲ ಹಿಂದುಗಳ ಉತ್ಥಾನವು ಅಸಂಭವವಿರುವದು. ಹಿಂದುಗಳಲ್ಲಿ ಅನೇಕ ಆದರ್ಶಗುಣಗಳಿದ್ದರೂ ಅವರಲ್ಲಿ ಐಕ್ಯವಿಲ್ಲ. ಅವರಲ್ಲಿ ಒಕ್ಕಟ್ಟಿದ್ದರೆ, ಇಂದು ಅಕಬರನು ಇಪ್ಪತ್ತು ಕೋಟಿ ಜನರ ಭಾಗ್ಯವಿಧಾತೃವಾಗಿ ಭಾರ ತದ ಸಾಮ್ರಾಜ್ಯಸಿಂಹಾಸನದ ಮೇಲೆ ಎಂದೂ ವಿರಾಜಮಾನನಾಗುತ್ತಿದ್ದಿಲ್ಲ. ಎಷ್ಟೋ ದಿನಗಳ ಹಿಂದೆಯೆ ವಂಗ ರಾಜದಂಡವು ನನ್ನ ಕೈ ಬಿಟ್ಟು ಹೋಗು ತ್ತಿತ್ತು. ಹಿಂದುಗಳ ಪ್ರಭೂತ ಶಕ್ತಿಯನ್ನು ತಿಳಿಯಲಿಕ್ಕೆ ನಾನು ಇದು ವರೆಗೆ ಸಮರ್ಥನಾಗಲಿಲ್ಲ. ತೀವ್ರಬುದ್ಧಿಯ ಅಕಬರನು ಅದನ್ನು ತಿಳಿದನು. ಅಂ- ತೆಯೆ ರಾಜಾ ತೋಡರಮಲ್ಲ-ಮಾನಸಿಂಹರಂತಹ ಮಹಾ ಪ್ರತಾಪಶಾಲಿ ಗಳನ್ನು ಸ್ನೇಹಶೃಂಖಲೆಯಿಂದ ಬಿಗಿದು, ಸಾಮ್ರಾಜ್ಯದ ಆಧಾರಸ್ತಂಭಗಳನ್ನು ಮಾಡಿಕೊಂಡಿರುವನು. ಈ ಇಬ್ಬರು ವೀರರ ಶಕ್ತಿಯಿಂದಲೆ ಮೊಗಲ ಸಿಂಹಾ ಸನಕ್ಕೆ ಸ್ಥೈರ್ಯವುಂಟಾಗಿರುವದು. ಇವರ ಸಹಾಯವಿಲ್ಲದಿದ್ದರೆ ಆರ್ಯಾವರ್ತ ದಲ್ಲಿಯ ಮೊಗಲ ಸಾಮ್ರಾಜ್ಯದ ಸುವರ್ಣ ಸಿಂಹಾಸನವು ಇಷ್ಟೊತ್ತಿಗೆ ಚೂರ್ಣವಿಚೂರ್ಣವಾಗಿ ಹೋಗುತ್ತಿತ್ತು."

ದಾವುದಖಾನನು ಈ ವರೆಗೆ ವಿಚಾರತಂದ್ರಿಯಲ್ಲಿದ್ದಾಗ ಕಾವಲು

ಗಾರನು ಅವನು ಕುಳಿತ ಕೋಣೆಯಲ್ಲಿ ಪ್ರವೇಶಿಸಿ ಅಭಿವಾದನ ಮಾಡಿದನು. ಕಾಲುಗಾರನ ಅಸಮಯ ಆಗಮನದಿಂದ ನವಾಬನು ವಿಸ್ಮಿತನಾದನು. ಆಗ ಅವನು ರುಕ್ಷಸ್ವರದಿಂದ:—"ನಿನಗೆ ಏನು ಬೇಕಾಗಿದೆ ಬದ್ರುವಿೂಜ?"

ಕಾವಲುಗಾರನು ಮತ್ತೊಮ್ಮೆ ನೆಲಮುಟ್ಟಿ ನಮಸ್ಕಾರ ಮಾಡಿ:—"ಜಹಾಂಪನಾಹ, ಒಬ್ಬ ಹಿಂದು ರಮಣಿಯು ಖಾವಿಂದರವರ ಭೆಟ್ಟಿಯು ಅಪೇಕ್ಷೆ ಮಾಡಿರುವಳು. ಆಜ್ಞೆಯಾದರೆ ಅವಳನ್ನು ಇಲ್ಲಿಗೆ............"

ಕಾವಲುಗಾರನ ಮಾತುಗಳು ಮುಗಿಯುವದರೊಳಗೆ ಖಾನನು ವಿಸ್ಮಯಗೊಂಡು:—"ಹಿಂದು ರಮಣಿಯು? ಇಂತಹ ಗಂಭೀರ ನಿಸ್ತಬ್ಧ ರಾತ್ರಿಯಲ್ಲಿ ಹಿಂದು ನಾರಿಯು ಆಗಮಿಸಿರುವಳೆ? ಅವಳೊಡನೆ ಯಾರಾದರೂ ರಕ್ಷಕರಿರುವರೆ?"

"ಒಬ್ಬನೇ ಅಂಗರಕ್ಷಕನಿರುವನು ಮೆಹೆರಬಾನ!"

"ಹಾಗಾದರೆ ಆ ಹಿಂದು ಲಲನೆಯು ನಿಶ್ಚಯವಾಗಿ ಹುಚ್ಚಳಿರುವಳು. ಇಂತಹ ರಾತ್ರಿಯಲ್ಲಿ-ಇಂತಹ ಸಶಸ್ತ್ರ ಸೈನಿಕರಿಂದ ವೇಷ್ಟಿತವಾದ ಸೇನಾಸಾಗರದಲ್ಲಿ-ಬುದ್ಧಿಸ್ವಾಸ್ಥ್ಯವಿದ್ದಂತಹ ಹಿಂದು ರಮಣಿಯು ಹೀಗೆ ದುಸ್ಸಾಹಸ ಮಾಡುವದಿಲ್ಲ. ಆ ಹುಚ್ಚಳಿಗೆ ಇಂತಹ ರಾತ್ರಿಯಲ್ಲಿ ಬಂಗಾಲದ ಅಧೀಶ್ವರನ ಭೆಟ್ಟಿಯಾಗುವ ಅಭಿಲಾಷೆಯು ಯಾಕೆ ಹುಟ್ಟಿರಬಹುದು?"

"ನಿಜವಾಗಿ ಅವಳು ಭ್ರಮಿಷ್ಟಳಿರಬಹುದೆಂದು ನಾನು ಊಹಿಸುತ್ತೇನೆ ಖಾವಿಂದ."

"ಹುಚ್ಚಳಿರಲಿಕ್ಕೆ ಬೇಕು.—"

'ವಾಸ್ತವವಾಗಿ ಅವಳು ಹುಚ್ಚಳಿರುವಳು ನವಾಬ!' ಕೋಣೆಯ ಕಿಟಕಿಯಲ್ಲಿ ಮುಖವಿಟ್ಟು ಒಬ್ಬ ರಮಣಿಯು ನುಡಿದಳು.

ನವಾಬನು ಹೊರಳಿ ನೋಡಿದನು. ಒಬ್ಬ ಜೋತಿರ್ಮಯಿಯಾದ ಮೂರ್ತಿಯು ಕಿಟಕಿಯಲ್ಲಿ ಮುಖವಿಟ್ಟು ನಿಂತಿದ್ದಳು. ಕೂಡಲೆ ಅವನು ಆಸನತ್ಯಾಗ ಮಾಡಿ ವಿಸ್ಮಯದಿಂದ:—"ಇದೇನು! ಅಮ್ಮಾ, ನೀವೇನು? ನೀವು ಈ ಸ್ಥಾನದಲ್ಲಿ ಇಂತಹ ಕುಸಮಯದಲ್ಲಿ ಯಾಕೆ ಬಂದಿರಿ ಜನನಿ? ಆಜ್ಞೆಯಾಗಿದ್ದರೆ ನಿಮ್ಮ ಈ ಪುತ್ರನು ನಿಮ್ಮ ಬಳಿಗೆ ಬರುತ್ತಿದ್ದನು. ಒಳಗೆ ಬನ್ನಿರಿ ತಾಯಿ!"

"ನವಾಬ, ನಾನು ಇಂದು ನಿಮ್ಮ ಬಳಿಗೆ ಜನನೀ ಸ್ವರೂಪಳಾಗಿ ಬಂದಿಲ್ಲ; ಭಿಕ್ಷುಕಿಯಾಗಿ ಬಂದಿರುವೆನು" ಆ ಯುವತಿಯು ಒಳಗೆ ಬಂದು ನುಡಿದಳು.

"ಏನು? ನೀವು ಭಿಕ್ಷುಕರೆ? ಆಶ್ಚರ್ಯವು! ನೀವು ವಂಗಸಮ್ರಾಟನ ಜನನಿಯರು, ರಾಜನಂದಿನಿಯರು, ರಾಜನ ರಾಣಿಯರು. ಹೀಗಿದ್ದು ಭಿಕ್ಷುಕರಾದ ರಹಸ್ಯವೇನು ಮಾತೆಯವರೆ?"

"ನವಾಬ, ಇದು ರಹಸ್ಯವಲ್ಲ, ಸತ್ಯವು; ಪ್ರತ್ಯಕ್ಷವು. ನೀವು ನನಗೆ ಒಂದೇ ಒಂದು ಭಿಕ್ಷೆ ನೀಡುವಿರಾ? ಹೇಳಿರಿ; ನವಾಬರೆ, ನೀವು ಈ ದೀನ ಯಾಚಕಿಯ ಒಂದೇ ಯಾಚನೆಯನ್ನು ಪೂರೈಸುವಿರಾ?"

"ಮಾತೆ, ಈ ರಾಜ್ಯವೂ ನನ್ನ ಸಿರಿ-ಸಂಪತ್ತೂ ನಿಮ್ಮವಿರುವವೆಂಬದಿಷ್ಟೇ ಅಲ್ಲ; ಈ ಪ್ರಾಣವೂ ನಿಮ್ಮದಾಗಿರುವದು. ನಿಮ್ಮ ಅಸೀಮವಾದ ಕರುಣೆಯಿಂದಲೆ ನಾನು ಇದುವರೆಗೆ ಜೀವಿಸಿರುವದಿಲ್ಲವೆ? ನಿಮ್ಮ ಅತುಲನೀಯ ಸ್ವಾರ್ಥತ್ಯಾಗ, ಧರ್ಮ, ಭಾವನೆಗಳಿಂದಲೆ ನಾನು ವಂಗ ಸಿಂಹಾಸನದಲ್ಲಿ ವಿರಾಜಮಾನನಾಗಿಲ್ಲವೆ? ನಿಮಗಾಗಿ ಅದೇಯುವಾದದ್ದಾವದಿರುವದು? ಜನನಿ, ಆಜ್ಞೆಯಾಗಬೇಕು. ನಿಮ್ಮ ಇಚ್ಛೆಯು ಏನಿರುವದು?"

"ಕೊಡುವಿರಾ? ಬೇಡುವೆನು ಕೊಡುವಿರಾ? ಬೇಕಾದದ್ದು ಬೇಡಿದರೂ ಕೊಡುವಿರಾ? ಹಿಂದಿನಿಂದ ದುಃಖ, ಪಶ್ಚಾತ್ತಾಪ, ಅನುಮಾನ, ಶಂಕೆಗಳಿಗೆ ಒಳಗಾಗಲಿಕ್ಕಿಲ್ಲವೆ? ಕೊಡುವದು, ನಿಜವೆ?"

"ಮಾತೆ, ನೀವು ನಿಮ್ಮ ಈ ಪುತ್ರನ ವಿಷಯವಾಗಿ ಇಷ್ಟೇಕೆ ಅನುಮಾನ-ಅವಿಶ್ವಾಸಗಳನ್ನು ತಾಳತೊಡಗಿರುವಿರಿ? ಯುದ್ಧವ್ಯವಸಾಯಿಯೂ, ವಿದೇಶೀಯನೂ, ವಿಧರ್ಮೀಯ ಪಠಾಣನೂ ಆಗಿದ್ದರೂ ಸಹ ನಾನು ಅಕೃತಜ್ಞನೂ, ಪಶುವೂ, ಪಿಶಾಚಿಯೂ ಅಲ್ಲವೆಂಬದನ್ನು ಮರೆಯಬೇಡಿರಿ. ಜನನಿ, ನಾನು ಪ್ರತಿಜ್ಞೆ ಮಾಡಿ ಹೇಳುವೆನು. ನೀವು ಏನು ಬೇಡುವಿರೋ ಅದನ್ನು ಅನುಮಾನಿಸದೆ, ಪಶ್ಚಾತ್ತಾಪ ಹೊಂದದೆ ಸ್ವಸಂತೋಷದಿಂದ ಕೊಡುವೆನು. ಹೇಳಿರಿ, ನಿಮಗೇನು ಬೇಕು ಹೇಳಿರಿ. ನನ್ನ ಶಿರವು ಬೇಕೆ? ಶಿರಹೀನ ದೇಹವು ಬೇಕೆ? ನನ್ನ ಕೈಯಿಂದಲೆ ಕತ್ತರಿಸಲ್ಪಟ್ಟ ನನ್ನ ಮಸ್ತಕವು ಬೇಕೆ? ಹೃತ್ಪಿಂಡವು ಬೇಕೊ, ದೇಹಶೋಣಿತವುಬೇಕೊ? ಹೇಳಿರಿ, ಬೇಗನೆ ಹೇಳಿರಿ. ನೀವು ಇಚ್ಛಿಸಿದ್ದನ್ನು ಅಮ್ಲಾನವಾಗಿ ಕೊಡುವೆನು. ಬೇಡಿರಿ, ಪ್ರಾಣವನ್ನು ಬೇಡಿರಿ; ಬಂಗಾಲದ ರಾಜದಂಡವನ್ನು ಬೇಡಿರಿ; ವಂಗ ಸಾಮ್ರಾಜ್ಯ ಸಿಂಹಾಸನವನ್ನು ಬೇಡಿರಿ. ಏನು ಬೇಡುವದಿರುವದೋ ಅದನ್ನು ಅವಶ್ಯವಾಗಿಯೂ ಶೀಘ್ರವಾಗಿಯೂ ಬೇಡಿರಿ."

"ನೀವು ಹೇಳಿದ್ದು ನನಗೆ ಯಾವದೂ ಬೇಡ."

"ಮತ್ತೇನು ಬೇಕು ಜನನಿ?"

"ಪತಿದಾನ!"

"ಹಾ! ಏನು ಮಾತೆ?"

"ಪತಿದಾನ ಬೇಡುವೆನು. ನನ್ನ ಪತಿಗಳಾದ ಅಮರಪ್ರಸಾದರ ಮುಕ್ತಿ ಭಿಕ್ಷೆ ಬೇಡುವೆನು"

"ಏನು? ನಿಮ್ಮ ಸ್ವಾಮಿಗಳಾದ ಅಮರಪ್ರಸಾದರು ಪಠಾಣ ಶಿಬಿರ ದಲ್ಲಿ ಬಂಧನೆಗೊಳಗಾಗಿರುವರೆ?"

"ಹೌದು ನವಾಬ!" ರಾಣೀ ಊರ್ಮಿಳಾದೇವಿಯು ಹೇಳಿದಳು.

"ನನಗೆ ಈ ಸಂಗತಿಯು ಗಂಧವಾರ್ತೆಯಿಲ್ಲ ಬಹಳ ಮಾಡಿ ಈ ಕೃ-ತಿಯು ಸೇನಾಪತಿಯಾದ ರುಸ್ತುಮಖಾನನದಿರಬಹುದಾಗಿದೆ. ಅಮರಪ್ರಸಾದರ ಸಲುವಾಗಿ ಅವನು ಅತ್ಯಂತ ಕ್ರೋಧವುಳ್ಳವನಾಗಿರುವನು. ಒಮ್ಮೆ ಅವನು ಒಂದು ರಾತ್ರಿಯಲ್ಲಿ ಅಪ್ರಸ್ತುತರಾದ ಅಮರಪ್ರಸಾದರನ್ನು ಕೊಲ್ಲ ಲುದ್ಯುಕ್ತನಾಗಿದ್ದನು; ಆದರೆ ನಾನು ಅಲ್ಲಿಗೆ ಹೋದದ್ದರಿಂದ ಅವನ ಕಾರಸ್ಥಾನವು ಈಡೇರಲಿಲ್ಲ. ಜನನಿ, ನೀವು ನಿಶ್ಚಿಂತರಾಗಿರಿ. ನಾನು ಈಗಲೇ ಅಮರ ಪ್ರಸಾದರ ಮುಕ್ತತೆಯ ಬಗ್ಗೆ ವ್ಯವಸ್ಥೆ ಮಾಡುವೆನು. ಮಾತೇ, ನಿಮ್ಮ ಈ ಪುತ್ರನಿಂದ ನಿಮ್ಮ ಪತಿದೇವರ ಜೀವಕ್ಕೆ ಎಂದೂ ಅಪಾಯ ತಟ್ಟಲಾರದು; ಎರಡನೆಯವರಿಂದಲಾದರೂ ಅವರಿಗೆ ಅಮಂಗಲವಾಗದಂತೆ ಸಾಹಸ ಮಾಡುವೆನು. ನೀವು ಮನೆಗೆ ಹೋಗಿರಿ." ಹೀಗೆ ದಾವುದಖಾನನು ಭಕ್ತಿಭಾವದಿಂದ ನುಡಿದು ಸೇವಕನನ್ನು ಕುರಿತು:—"ಪ್ರತಿಹಾರಿ, ಒಳ್ಳೆಯ ಸನ್ಮಾನದೊಡನೆ ಇವರನ್ನು ಇಚ್ಛಿತ ಸ್ಥಾನಕ್ಕೆ ಕಳುಹಿಸು. ಇವರು ನನ್ನ ಜನನಿಯರೆಂಬದು ನಿನ್ನ ಲಕ್ಷ್ಯದಲ್ಲಿಟ್ಟು ಎಚ್ಚರದಿಂದ ಕೆಲಸ ಮಾಡು!"

ಸೇವಕನು ಅಭಿವಾದನೆ ಮಾಡಿ ಮುಂದೆ ನಡೆದನು. ಊರ್ಮಿಳಾದೇವಿಯೂ ಹೊರಡಲುದ್ಯುಕ್ತಳಾಗಿ ದಾವುದಖಾನನನ್ನು ಕುರಿತು:-"ನವಾಬರೆ, ನಿಮ್ಮ ಗುಣಗಳು ಅನುಪಮೇಯವಾದವುಗಳಿರುವವು. ನಿಮ್ಮ ಚಾರಿತ್ರ್ಯವೂ ಕಲ್ಪನಾತೀತವಿರುವದು. ನಿಮ್ಮಂತಹ ಘನವಂತ ಪುತ್ರರನ್ನು ಹೊಂದಿದ ನಾನು ಧನ್ಯಳು; ಪರಮ ಧನ್ಯಳು. ನೀವು ಕೇವಲ ಪಠಾಣರ ಅಧಿಪತಿಗಳಲ್ಲ; ಕುಲಗೌರವ ತರುವಂತಹರಾದ ನೀವು ಪಠಾಣರ ಕೀರ್ತಿಮುಕುಟರಾಗಿರು

ವಿರಿ. ನಿಮ್ಮ ಉದಾರತೆಯನ್ನೂ, ನಿಮ್ಮ ಋಣವನ್ನೂ ನಾನು ಎಂದೂ ಮರೆಯಲಾರೆನು. ನಿಮ್ಮಂತಹ ಉಜ್ವಲ ಆದರ್ಶವನ್ನು ಮರೆಯುವಂತಹ ಕೃತಘ್ನಳೂ ನಾನಲ್ಲ. ಪುತ್ರರೆ, ಹೋಗಿ ಬರುತ್ತೇನೆ. ಇನ್ನೊಂದು ಮಾತು ನಿಮಗೆ ತಿಳಿಸುವದಿರುವದು. ಅದೇನಂದರೆ, ನಾನು ತಮ್ಮ ವಿಮೋಚನೆಗೆ ಕಾರಣಳಾದೆನೆಂಬದು ನನ್ನ ಪತಿರಾಯರಿಗೆ ತಿಳಿಯದಂತೆ ವ್ಯವಸ್ಥೆ ಮಾಡಿರಿ. ವೀರತ್ವಾಭಿಮಾನಿಗಳೂ ತೇಜಸ್ವಿಗಳೂ ಆದ ರಾಜರು ಎಂದೂ ಮುಕ್ತಿಭಿಕ್ಷೆಯನ್ನು ಸ್ವೀಕರಿಸರು; ಆದ್ದರಿಂದಲೆ ಅವರ ಬಂಧವಿಮೋಚನೆಯ ರಹಸ್ಯವು ಅಪ್ರಕಾಶಿತವಾಗಿರಲೆಂದು ಬೇಡಿಕೊಳ್ಳುವೆನು.''

''ಮಾತೆ, ನೀವು ಯೋಚನೆ ಮಾಡಬೇಡಿರಿ. ನಾನು ಎಲ್ಲ ವಿಧದ ವ್ಯವಸ್ಥೆ ಮಾಡುವೆನು.''

''ಹೋಗಿ ಬರುವೆನು ಪುತ್ರರೆ''

''ಅಮ್ಮಾ, ಅಭಿವಾದನೆ ಮಾಡುವೆನು; ಹೋಗಿ ಬನ್ನಿರಿ.''

ರಾಣಿಯು ನವಾಬನ ಸಿರೋಪ ಹೊಂದಿ ಅಲ್ಲಿಂದ ಹೊರಟಳು. ಪ್ರತಿಹಾರಿಯು ಮಾರ್ಗದರ್ಶಕನಾಗಿ ಮುಂದೆ ಮುಂದೆ ಸಾಗಿದನು.

ರಾಣಿಯು ಹೋದ ಮೇಲೆ ನವಾಬನು ಉಚ್ಚಕಂಠದಿಂದ:—"ಹೊರಗೆ ಯಾರಿರುವಿರಿ?"

ಒಬ್ಬ ಕಾವಲುಗಾರನು ಕೋಣೆಯಲ್ಲಿ ಬಂದು ಅಭಿವಾದನೆ ಮಾಡಿ:-"ಆಜ್ಞೆಯೇನು, ಮೆಹೆರಬಾನ?"

''ಬೇಗನೆ ರುಸ್ತುಮಖಾನನನ್ನು ಬರಹೇಳು.''

ಪ್ರತಿಹಾರಿಯು ರುಸ್ತುಮಖಾನನನ್ನು ಕರೆಯಲಿಕ್ಕೆ ಹೊರಟನು. ನವಾಬನು ತನ್ನ ಚಿಂತಾಯುಕ್ತವೂ ಅವಸಾದಗ್ರಸ್ತವೂ ಆದ ದೇಹಭಾರವನ್ನು ಸಹಿಸದೆ ಕೋಮಲವಾದ ಆಸನದ ಮೇಲೆ ಒರಗಿದನು. ಮುಂದೆ ಸ್ವಲ್ಪ ವೇಳೆಯಲ್ಲಿಯೆ ರುಸ್ತುಮಖಾನನು ಬಂದು ಅವನ ಎದುರಿಗೆ ನಿಂತುಕೊಂಡನು. ಕೂಡಲೆ ಅವನು:—''ರುಸ್ತುಮಖಾನ!"

''ಶಾಹನಶಾಹ!''

''ರಾಜಾ ಅಮರಪ್ರಸಾದರು ನಿಮ್ಮ ಸೆರೆಯಲ್ಲಿರುವರೇ?''

''ಹೌದು ಜಹಾಂಪನಾಹ!''

''ಅವರನ್ನು ಯಾರು ಸೆರೆಹಿಡಿದರು?''

"ನಾನು."

"ಯುದ್ಧಕ್ಷೇತ್ರದಲ್ಲಿ ಅವರು ಸೆರೆಹಿಡಿಯಲ್ಪಟ್ಟಿರುವರೇ?"

"ಹೌದು; ಯುದ್ಧಕ್ಷೇತ್ರದಲ್ಲಿಯೆ ಸಶಸ್ತ್ರ ಸ್ಥಿತಿಯಲ್ಲಿ ಸೆರೆಹಿಡಿದಿರುವೆನು."

"ಒಳ್ಳೇದು, ಅವರನ್ನು ಇದೇ ಕ್ಷಣದಲ್ಲಿ ಒಳ್ಳೆಯ ಸನ್ಮಾನದೊಡನೆ ಬಿಡುಗಡೆ ಮಾಡಿ ಕಳಿಸಿ ಕೊಡಿರಿ."

"ಖಾವಿಂದ, ಇದೇನು? ಅಮರಪ್ರಸಾದನು ನಮ್ಮ ಕಡು ಹಗೆಯು."

"ಅದನ್ನು ನಾನು ತಿಳಿದಿರುವೆನು."

"ಅವನನ್ನು ಮುಕ್ತಗೊಳಿಸುವದೆಂದರೆ ಒಂದು ದೊಡ್ಡ ವಿಪತ್ತನ್ನು ಬುದ್ಧಿಪೂರ್ವಕವಾಗಿ ಬರಮಾಡಿಕೊಂಡಂತೆಯೆ ಸರಿ."

"ಇದನ್ನಾದರೂ ನಾನು ತಿಳಿದಿರುವೆನು."

"ಪ್ರತಿಪಕ್ಷಿಗಳಲ್ಲಿ ರಾಜಾ ತೋಡರಮಲ್ಲ ಹಾಗು ಅಮರಪ್ರಸಾದ ಇವರು ಅತ್ಯಂತ ರಣವಿಶಾರದರಿರುವರು. ಅಮರಪ್ರಸಾದನನ್ನು ಬಿಡುಗಡೆ ಮಾಡಿದ ಮೇಲೆ ವಿಜಯಪ್ರಾಪ್ತಿಯ ಆಶೆಯನ್ನೇ ತೊರೆಯಬೇಕಾಗುವದು. ಚನ್ನಾಗಿ ಪರಿಶೀಲಿಸಿ ಕಾರ್ಯ ಮಾಡಬೇಕು ಮೆಹೆರಬಾನ!'

"ನಾನು ಎಲ್ಲ ಬಗೆಯಿಂದ ವಿಚಾರಿಸಿರುವೆನು; ಎಲ್ಲವನ್ನೂ ತಿಳಿದಿರುವೆನು. ಅಮರಪ್ರಸಾದರ ಬಿಡುಗಡೆ ಮಾಡುವದೆಂದರೆ, ನಮ್ಮ ಬೆರಳನ್ನು ನಮ್ಮ ಕಣ್ಣಲ್ಲಿ ಚುಚ್ಚಿಕೊಂಡಂತಾಗುವದು. ನಮ್ಮ ಹೃತ್ಪಿಂಡವನ್ನು ನಮ್ಮ ಕೈಯಿಂದ ಕಡೆಗೆ ತೆಗೆದುಕೊಂಡಂತಾಗುವದು. ಅಮರಪ್ರಸಾದರು ಮಹಾ ರಥಿಗಳಿರುವರೆಂಬದು ನನಗೆ ಅರಿತಿದೆ. ಅವರ ಬಂಧವಿಮೋಚನೆಯಾದರೆ ಪಠಾಣರ ಪರಾಭವವು ಅನಿವಾರ್ಯವಾಗುವದು. ಇಷ್ಟೆಲ್ಲ ತಿಳಿದಿದ್ದರೂ ನಾನು ಅವರನ್ನು ಮುಕ್ತಗೊಳಿಸುವ ವಿಚಾರ ಮಾಡಿರುವೆನು."

"ಗರೀಬಪರವರದಿಗಾರ! ಇದರ ಅರ್ಥವೇನು?" ರುಸ್ತುಮ ಖಾನನು ವಿಸ್ಮಯದೊಡನೆ ಕೇಳಿದನು.

"ಇದರ ಅರ್ಥವೇ? ಖಾನ, ನೀವು ಇದರ ಅರ್ಥವನ್ನು ತಿಳಿಯಲಾರಿರಿ. ನಾನು ನಿಮ್ಮೆದುರಿಗೆ ಅದನ್ನು ಹೇಳಲೂ ಇಚ್ಛಿಸುವದಿಲ್ಲ. ನೀವು ಈಗಲೆ ಹೋಗಿ ಅಮರಪ್ರಸಾದರನ್ನು ಸನ್ಮಾನದಿಂದ ಬಿಡುಗಡೆ ಮಾಡಿರಿ. ಕೆಟ್ಟ ಆಚರಣೆಯೂ ಕಟುಶಬ್ದಪ್ರಯೋಗವೂ ಅವರ ಸಲುವಾಗಿ ಮಾಡಲ್ಪಡಬಾರದು. ಎಚ್ಚರ,

ಬಹಳೇ ಎಚ್ಚರ! ಅವರ ಮಾನಕ್ಕೆ ಹಾಗು ಗೌರವಕ್ಕೆ ಕಲಂಕವುಂಟಾಗುವಂತಹ ವರ್ತನವು ಘಟಿಸಿದರೆ ಕ್ಷಮೆಯು ಎಂದೂ ದೊರೆಯಲಿಕ್ಕಿಲ್ಲ. ಎಚ್ಚರದಿಂದ ಕೆಲಸ ಮಾಡಿರಿ! ಹೋಗಿರಿ, ಈಗಲೆ ಹೋಗಿ, ಅವರ ಬಿಡುಗಡೆಮಾಡಿ, ಸುರಕ್ಷಿತವಾಗಿ ಶಿಬಿರವನ್ನು ತಲುಪಿಸುವ ವ್ಯವಸ್ಥೆಮಾಡಿರಿ. ಹೂ, ಬೇಗನೆ ಹೋಗಿರಿ."

ರುಸ್ತುಮಖಾನನಿಗೆ ನಭೂತಪೂರ್ವವಾದ ವಿಸ್ಮಯವಾಯಿತು; ಆದರೆ ನಿಗ್ರಹಾನುಗ್ರಹ ಶಕ್ತಿಸಂಪನ್ನನಾದ ನವಾಬನೆದುರಿಗೆ ಪ್ರತಿ ಮಾತಾಡುವ ಧೈರ್ಯವು ಅವನಲ್ಲಿದ್ದಿಲ್ಲ. ತಾನು ಕಾರಸ್ಥಾನ ರಚಿಸಿ ಸಂಪಾದಿಸಿದ ವಿಜಯವು ಉಧ್ವಸ್ತವಾಯಿತೆಂದು ವಿಷಾದಬಡುತ್ತ ಅವನು ತನ್ನ ಶಿಬಿರದ ದಾರೀ ಹಿಡಿದನು.

ರುಸ್ತುಮಖಾನನು ಹೋದ ಮೇಲೆ ದಾವುದಖಾನನು ವಿಚಾರಸಾಗರದಲ್ಲಿ ಮುಳುಗಿ ತನ್ನ ಹಾಸುಗೆಯ ಮೇಲೆ ಹೊರಳಾಡತೊಡಗಿದನು. ಅಂದು ಬೆಳತನಕ ಅವನ ಕಣ್ಣಿಗೆ ಕಣ್ಣು ಹತ್ತಲಿಲ್ಲ.

---

## ೨೦ನೆಯ ಪರಿಚ್ಛೇದ.

"ನಸೀರ!"

"ಜಹಾಂಪನಾಹ!"

"ನಸೀರ—ಎಲ್ಲವೂ ವ್ಯರ್ಥವಾಯಿತು!"

"ವ್ಯರ್ಥವಾದದ್ದೇನು ಹುಜೂರ?"

"ನನ್ನ ಉದ್ಯಮ, ನನ್ನ ಕೌಶಲ್ಯ, ನನ್ನ ಮಹಾ ವಿಜಯ ಇವೆಲ್ಲ ವ್ಯರ್ಥವಾಗಿ ಹೋದವು."

"ಅದೇಕೆ ಖಾವಿಂದ?"

"ಅಮರಪ್ರಸಾದನನ್ನು ಬಿಡಬೇಕೆಂದು ನವಾಬರು ಕಠೋರವಾದ ಆಜ್ಞೆ ಮಾಡಿರುವರು."

"ಇದೇನು! ಅಮರಪ್ರಸಾದನು ನಿಮ್ಮ ಸೆರೆಯಲ್ಲಿರುವನೆಂಬದು ನವಾಬರಿಗೆ ಹೇಗೆ ಗೊತ್ತಾಯಿತು?"

"ಹೇಗೆ ಗೊತ್ತಾಯಿತೋ ದೇವರೇ ಬಲ್ಲ!"

"ನಾವು ಎಷ್ಟು ಕೌಶಲ್ಯದಿಂದ ಅಮರಪ್ರಸಾದನನ್ನು ಸೆರೆಹಿಡಿದಿರುವೆ

ವೆಂಬದು ನವಾಬರಿಗೆ ಗೊತ್ತಾಗಿಲ್ಲವೇನು?"

"ಅವರಿಗೆ ಗೊತ್ತಾಗಿದ್ದಿಲ್ಲ. ಈ ಸಂಗತಿಯ ಬಗ್ಗೆ ಅವರು ನನ್ನನ್ನೇ ವಿಚಾರಿಸಿದರು. ಅಮರಪ್ರಸಾದನನ್ನು ಯುದ್ಧಕ್ಷೇತ್ರದಲ್ಲಿ-ಶಸ್ತ್ರಸ್ಥಿತಿಯಲ್ಲಿ-ಸೆರೆಹಿಡಿದಿರುವೆನೆಂದು ನಾನು ಅವರಿಗೆ ಹೇಳಿದೆನು. ನನ್ನ ಮಾತಿನಲ್ಲಿ ಅವರಿಗೆ ನಂಬಿಗೆಯಾಯಿತೋ ಇಲ್ಲವೋ ನನಗೆ ತಿಳಿಯಲಿಲ್ಲ. ಅವರು ನನ್ನ ದೀರ್ಘಸಾಹಸದ ಬಗ್ಗೆ ಪ್ರಶಂಸೆ ಮಾಡುವದೊತ್ತಟ್ಟಿಗುಳಿದು, ಇದೇ ಕ್ಷಣದಲ್ಲಿ ಅಮರಪ್ರಸಾದನನ್ನು ಒಳ್ಳೆಯ ಸನ್ಮಾನದಿಂದ ಬಿಡುಗಡೆ ಮಾಡಬೇಕೆಂದು ಕಠಿಣವಾದ ಆಜ್ಞೆ ಮಾಡಿದರು. ಅವನೊಡನೆ ಕೆಟ್ಟತನದಿಂದ ನಡೆದರೆ, ಇಲ್ಲವೆ ಅವನ ಮರ್ಯಾದೆಗೆ ಭಂಗ ತರುವಂತಹ ಕೃತಿಗಳು ಘಟಿಸಿದರೆ ಕ್ಷಮೆಯು ದೊರೆಯಲಾರದೆಂದು ಸಾವಧಾನಗೊಳಿಸಿರುವರು. ನಸೀರ, ಮುಂದೆ ಏನು ಉಪಾಯ ಮಾಡಬೇಕು?"

"ಉಪಾಯವೆ? ಖಾವಿಂದ, ನನಗಂತು ಯಾವ ಉಪಾಯವೂ ತೋಚದಾಗಿದೆ. ಪಠಾಣರ ಮಹಾ ರಾಹುರೂಪೀ ಶತ್ರುವಾದ, ಮಹಾ ಪ್ರತಾಪಿ ಅಮರಪ್ರಸಾದನನ್ನು ಕುಶಾಗ್ರಬುದ್ಧಿಯ ನವಾಬರು ಏಕೆ ಮುಕ್ತಮಾಡಿರುವರೆಂಬದರ ರಹಸ್ಯವು ತಿಳಿಯದಾಗಿದೆ. ಈ ರಹಸ್ಯವು ನಿಜವಾಗಿಯೂ ರಹಸ್ಯಮಯವಾಗಿರಲಿಕ್ಕೆ ಬೇಕು ಆ ರಹಸ್ಯವು ಏನಿರಬಹುದೆಂದು ಬಹು ಪರಿಯಾಗಿ ಯೋಚಿಸಿದರೂ ನನ್ನ ವಿಶಾಲ ಬುದ್ಧಿಗೆ ಅದರ ಗಂಧವಾರ್ತೆಯು ಸಹ ತಗಲದಾಗಿದೆ."

"ಆ ರಹಸ್ಯವು ಏನಾದರೂ ಇರಲೊಲ್ಲದೇಕೆ; ಈಗಂತೂ ಅಮರಪ್ರಸಾದನನ್ನು ರಾಜಾದೇಶದಂತೆ ಬಂಧವಿಮೋಚನೆ ಮಾಡುವ ಪ್ರಸಂಗವಂತೂ ಬಂದಿರುವದು. ಯಾವ ಕಾಫರನನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿರುವೆನೋ, ಯಾವ ಕಾಫರನನ್ನು ಕಃಪದಾರ್ಥವೆಂದು ತಿಳಿದಿರುವೆನೋ, ಯಾವ ಕಾಫರನನ್ನು ಪರಾಜಿತನೆಂದು ತಿಳಿದುಕೊಂಡಿರುವೆನೋ ಆ ದುಷ್ಟ ಅಮರಪ್ರಸಾದನನ್ನು ಸನ್ಮಾನಪೂರ್ವಕವಾಗಿ ಬಂಧವಿಮೋಚನೆಗೊಳಿಸಬೇಕಾಗಿರುವದು. ಯಾವನು ನನ್ನನ್ನು ಮೇಲಿಂದ ಮೇಲೆ ಪರಾಭವಗೊಳಿಸಿರುವನೋ, ಯಾವನು ನನ್ನನ್ನು ಮೇಲಿಂದ ಮೇಲೆ ಅಪಮಾನಗೊಳಿಸಿರುವನೋ, ಯಾವನು ನನ್ನ ಅಭಿಮಾನಿಯಾದ ಹೃದಯವನ್ನು ಸಂತಪ್ತಗೊಳಿಸುತ್ತಿರುವನೋ ಅವನ ಕೊಲೆ ಮಾಡದೆ, ಅಪಮಾನ ಮಾಡದೆ, ಸೇಡಿಗೆ

ಸೇಡು ತೀರಿಸಿಕೊಳ್ಳದೆ ಬಹುಮಾನ್ಯ ಮಾನ್ಯತೆಯಿಂದ ಕಳಿಸಿಕೊಡುವ ಪ್ರಸಂಗವೊದಗಿರುವದು! ನಸೀರ-ನಸೀರ! ಇಂತಹ ಅಪಮಾನಕಾರಕ ಘಟನೆಯಿಂದ ಮರಣದ ಇಚ್ಛೆಯು ಉತ್ಪನ್ನವಾಗತೊಡಗಿದೆ. ಪ್ರಿಯ ದೋಸ್ತ ನಸೀರ, ಈ ಅಪಮಾನಕಾರಕ ಮೃತ್ಯುವಿನಿಂದ ಈ ರುಸ್ತುಮಖಾನನ ಉದ್ಧಾರವಾಗುವಂತಹ ಉಪಾಯವು ತೋಚಲೊಲ್ಲದೆ?"

ನಸೀರಖಾನನು ಕ್ಷಣಹೊತ್ತು ವಿಚಾರಸಾಗರದಲ್ಲಿ ಮುಳುಗಿ, ಅನಂತರದಲ್ಲಿ ರುಸ್ತುಮಖಾನನನ್ನು ಕುರಿತು:—"ಒಂದು ಉಪಾಯವಿರುವದು ಜಹಾಂಪನಾಹ!"

ರುಸ್ತುಮಖಾನನು ಉತ್ಸಾಹಪೂರ್ವಕವಾಗಿ:-"ಇರುವದೆ? ಉಪಾಯವಿರುವದೆ? ಶೀಘ್ರವಾಗಿ ಹೇಳು, ಯಾವ ಉಪಾಯುವದು?"

"ಅಮರಪ್ರಸಾದನ ಬಿಡುಗಡೆ ಮಾಡಿ, ಇಂದೇ ರಾತ್ರಿ ಮಾರ್ಗದಲ್ಲಿ ಘಾತಕರಿಂದ ಅವನ ಕೊಲೆ............"

"ಅಸಂಭವ, ಅಸಂಭವ!"

"ಅಸಂಭವವೇಕೆ ಹುಜೂರ? ಗಂಭೀರ, ನಿಸ್ತಬ್ಧ, ಅಂಧಕಾರಮಯವಾದ ರಾತ್ರಿಯಿರುವದು. ಯಾರೂ ನೋಡುವದಿಲ್ಲ; ಯಾರೂ ಕೇಳುವದಿಲ್ಲ. ಸುಲಿಗೆಗಾರರಿಂದ ಅಮರಪ್ರಸಾದನು ಕೊಲ್ಲಲ್ಪಟ್ಟನೆಂದು ಎಲ್ಲರೂ ತಿಳಿಯುವರು. ಖಾವಿಂದ, ಈ ಕುಶಾಗ್ರಬುದ್ಧಿಯ ನಸೀರನ ಬುದ್ಧಿಕೌಶಲ್ಯವು ಹೇಗಿದೆ? ಒಮ್ಮೊಮ್ಮೆ ನನ್ನ ಬುದ್ಧಿಯು ತೀಕ್ಷ್ಣವಾಗತೊಡಗಿದರೆ ಜನರನ್ನು ಬೆರಗುಗೊಳಿಸುತ್ತದೆ ನೋಡಿರಿ."

"ನಸೀರ, ನಿನ್ನ ಬುದ್ಧಿಗೆ ಬೆಂಕೀ ಹಚ್ಚಿತು. ನಿನ್ನ ಬುದ್ಧಿಯಂತೆ ನಡೆದರೆ ಎಲ್ಲವೂ ಹಾಳಾಗಿ ಹೋದೀತು. ಇಂದೇ ಅಮರಪ್ರಸಾದನ ಕೊಲೆಯಾದರೆ, ನನ್ನಿಂದಲೇ ಈ ಕೃತಿಯು ಘಟಿಸಿತೆಂದು ಎಲ್ಲರೂ ಅನುಮಾನಿಸುವರು. ನಾನು ಅಮರಪ್ರಸಾದನ ದೀರ್ಘ ಶತ್ರುವೆಂಬದು ನವಾಬರಿಗೂ ಗೊತ್ತಿದೆ. ಬಿಡುಗಡೆಯಾದ ದಿನವೇ ಕೊಲೆಯಾದರೆ ನನ್ನ ಮೇಲೆ ಅವರು ಸಂಶಯುವಿಟ್ಟು ಭಯಂಕರವಾದ ಶಾಸನವನ್ನು ವಿಧಿಸಬಹುದು. ರಾಜಾ ಅಮರಪ್ರಸಾದನ ಆಕಸ್ಮಿಕ ಕೊಲೆಯಿಂದ ರಜಪುತರೂ ಮೊಗಲರೂ ಕೂಡಿಯೇ ಕ್ಷುಬ್ಧರಾಗುವರು. ಆ ಮೇಲೆ ಪಠಾಣರ ಹೆಸರು, ಪಠಾಣರ ಸ್ಮೃತಿಯು ಭಾರತದ ವಕ್ಷದಿಂದ ವಿಲುಪ್ತವಾಗಿ ಹೋಗುವದು. ನಸೀರ, ಜನ

ಪ್ರಿಯನಾದ ರಾಜಾ ಅಮರಪ್ರಸಾದನು ಮೋಸಹೊಂದಿ ಕೊಲ್ಲಲ್ಪಟ್ಟದ್ದು ಗೊತ್ತಾದರೆ ಎಲ್ಲ ರಜಪುತರು ಒಟ್ಟಾಗಿ ಭಾರತ ವರ್ಷದಲ್ಲಿ ಪಠಾಣರನ್ನು ಹೇಳ ಹೆಸರಿಲ್ಲದಂತೆ ಮಾಡಲಿಕ್ಕಿಲ್ಲವೆ? ನಾನು ವ್ಯಕ್ತಿಗತ ಭಾವದಿಂದ ರಾಜನ ಶತ್ರುವಾಗಿದ್ದರೂ, ಪಠಾಣರಿಗೆ ಶತ್ರುವಲ್ಲ; ಪಠಾಣರ ಅಮಂಗಲ ಚಿಂತನೆ ಮಾಡುವವನಲ್ಲ. ನಾನು ಸದಾ ಸರ್ವದಾ ಸ್ವಕುಲದ ಅಭ್ಯುದಯವನ್ನು ಇಚ್ಛಿಸುವವನಿರುವೆನು. ತನ್ನ ಜಾತಿಯ ಗೌರವಚಿಂತನೆಯನ್ನು ಯಾರು ಮಾಡುವದಿಲ್ಲವೋ ಅವರು ಜೀವಿಸಿ ಪ್ರಯೋಜನವೇನು? ನಸೀರ, ಈ ಹಂಚಿಕೆಯ ಹೊರತು ಮತ್ತಾವ ಹಂಚಿಕೆಯಾದರೂ ಇದ್ದರೆ ಹೇಳು."

ನಸೀರಖಾನನು ಮುಖವನ್ನು ಕೆಳಗಿರಿಸಿ ತಲೆ ತುರಿಸಿಕೊಳ್ಳುತ್ತ, ಕೆಲವು ವೇಳೆ ಆಲೋಚನೆ ಮಾಡಿ:—"ಇನ್ನೊಂದು ಉಪಾಯವು ಹೊಳೆಯುತ್ತಿರುವದು."

"ಯಾವ ಉಪಾಯವು?"

"ಇಂದು ಇಂತಹ ರಾತ್ರಿಯ ಸಮಯದಲ್ಲಿ ಅಮರಪ್ರಸಾದನನ್ನು ಆಕಸ್ಮಾತ್ತಾಗಿ ಬಿಡುಗಡೆ ಮಾಡಿದರೆ, ರಾಜಾದೇಶದಿಂದ ಇಲ್ಲವೆ ಮೊಗಲರಿಗೆ ಅಂಜಿ ತನ್ನ ಮುಕ್ತತೆಯು ನಿಮ್ಮಿಂದ ಮಾಡಲ್ಪಟ್ಟಿತೆಂದು ಅವನು ತಿಳಿಯುವನು. ಇದರಿಂದ ಮತ್ತಿಷ್ಟು ನಿಮ್ಮ ಮಾನಗೇಡಾದಂತಾಗುವದು. ಹೀಗೆ ಮಾಡುವದಕ್ಕಿಂತ ಅಮರಪ್ರಸಾದನನ್ನು ಇಲ್ಲಿಗೆ ಕರೆಯಿಸಿಕೊಂಡು ಕ್ಷಮಾಯಾಚನೆ ಮಾಡಿದರೆ ಬಿಡುಗಡೆ ಮಾಡುವೆನೆಂದು ಅವನಿಗೆ ಹೇಳಿರಿ. ಶತ್ರುಗಳ ಅಂಧಕಾರ ಗೃಹದಲ್ಲಿ ಬಂಧನೆಗೊಳಗಾಗಿರಲಿಕ್ಕೆ ಯಾರೂ ಇಚ್ಛಿಸುವದಿಲ್ಲ. ರಾಜನು ನಿಶ್ಚಯವಾಗಿ ನಿನ್ನುಲ್ಲಿ ಕ್ಷಮಾಯಾಚನೆ ಮಾಡುವನು. ಅನಂತರದಲ್ಲಿ ಅವನ ಬಿಡುಗಡೆ ಮಾಡಿದರೆ ನಿಮಗೆ ಕಲಂಕ ಹತ್ತುವದಿಲ್ಲವೆಂಬದಿಷ್ಟೇ ಅಲ್ಲ, ಗೌರವವುಂಟಾಗುವದು; ಅಲ್ಲದೆ ರಾಜಾಜ್ಞೆಯನ್ನು ಪಾಲಿಸಿದಂತಾಗಿ ಹೆಚ್ಚಿನ ಶ್ರೇಯುವೂ ಬರುವದು."

"ನಸೀರ, ಒಳ್ಳೇಯ ಸುಂದರವಾದ ಯುಕ್ತಿಯಿದು. ರಾಜನನ್ನು ಇಲ್ಲಿಗೆ ಕಳಿಸುವದಕ್ಕಾಗಿ ಕಾವಲುಗಾರನಿಗೆ ಈಗಲೆ ಆಜ್ಞಾಪತ್ರಕಳುಹಿಸುವೆನು" ಎಂದು ನುಡಿದು, ರುಸ್ತುಮಖಾನನು ಆಜ್ಞಾಪತ್ರಬರೆದು:--"ಕೋನಹೈ?"

ಒಬ್ಬ ರಕ್ಷಕನು ರುಸ್ತುಮಖಾನನಿಗೆ ಅಭಿವಾದನೆ ಮಾಡಿ ನಿಂತು

ಕೊಂಡನು. ಆಗ ಖಾನನು ಅವನನ್ನು ಕುರಿತು:—"ಯಹ ಫರಮಾನ ಕಾರಾಗಾರಕೆ ದಾರೋಗಾಕೆ ಪಾಸ ಲೇಜಾವೋ!"

ಕಾವಲುಗಾರನು ಆಜ್ಞಾಪತ್ರವನ್ನು ತೆಗೆದುಕೊಂಡು ಅಲ್ಲಿಂದ ತೆರಳಿದನು. ಅನಂತರದಲ್ಲಿ ಖಾನನು ನಸೀರನಿಗೆ:—"ನಸೀರ, ನಿನ್ನ ಮಂತ್ರಣಾಪರಾಮರ್ಶಗಳೂ ಕೌಶಲ್ಯವೂ ಪ್ರಶಂಸನೀಯವಿರುವವು. ಅಂತೆಯೇ ನೀನು ನನಗೆ ಪ್ರಿಯನಾಗಿರುವೆ. ನಿನ್ನ ಧೂರ್ತತನದ ಅಭಿಪ್ರಾಯಗಳಿಂದ ನಾನು ಎಷ್ಟೋ ಸಾರೆ ಅಂಧಕಾರಮಯ ಮಾರ್ಗದಿಂದ ಪ್ರಕಾಶದಲ್ಲಿ ಬಂದಿರುವೆನು; ಎಷ್ಟೋ ಸಾರೆ ವಿಪತ್ತಿನೊಳಗಿಂದ ಪಾರಾಗಿರುವೆನು. ಆದ್ದರಿಂದ ನೀನು ನನ್ನ ಪ್ರೀತಿಗೆ ಪಾತ್ರನಾಗಿರುವೆ."

ಖಾನನ ಪ್ರಸನ್ನತಾ ವಾಣಿಯನ್ನು ಕೇಳಿ ನಸೀರನು ಹಿಗ್ಗಿ:-"ಇದು ತಮ್ಮ ದಯಾವಿಶೇಷವು. ಪ್ರಭುವಿನ ಮಂಗಲ ಸಾಧನವೇ ಸೇವಕನ ಕರ್ತವ್ಯವಾಗಿರುವದು. ನನ್ನಿಂದ ಯಾವ ಯಾವ ವೇಳೆಯಲ್ಲಿ ಎಂಥ ಎಂಥ ಕಾರ್ಯಗಳಾಗಿರುವವೋ ಅವೆಲ್ಲವೂ ನನ್ನ ಕರ್ತವ್ಯಗಳೆಂದೇ ಭಾವಿಸಿರುವೆನು."

ಅಷ್ಟರಲ್ಲಿ ಶೃಂಖಲಾಬದ್ಧ ಅಮರಪ್ರಸಾದನು ಸಶಸ್ತ್ರ ಕಾವಲುಗಾರರೊಡನೆ ಖಾನನ ಶಿಬಿರವನ್ನು ಪ್ರವೇಶಿಸಿದನು. ರಾಜನನ್ನು ನೋಡಿ ಖಾನನು ಗಂಭೀರತೆಯಿಂದ:—"ಕಾಫಿರ, ನಾನು ನಿನ್ನನ್ನು ಇಚ್ಛಿಸುತ್ತಿದೆನು."

ಉಪೇಕ್ಷಾಪೂರ್ಣ ಕಂಠದಿಂದ ರಾಜನು:—"ನಿನ್ನ ಮಾತನ್ನು ಕೇಳಿ ಪ್ರಸನ್ನನಾದೆನು. ರುಸ್ತುಮ, ನೀನು ನನ್ನನ್ನು ಯಾವಾಗ ಇಚ್ಛಿಸಿರುವೆಯೊ ಆಗ ನೀನು ನನ್ನ ಮೃತ್ಯುವಿನ ವ್ಯವಸ್ಥೆಯನ್ನು ಮಾಡಿರುವೆಯೆಂದು ತಿಳಿದಿರುವೆನು. ನಾನಾದರೂ ಅದನ್ನೇ ಬಯಸುವೆನು. ಪಠಾಣರ ನೆಳಲು ಬಿದ್ದ ನೀರನ್ನು ಸ್ಪರ್ಶ ಮಾಡಲಿಕ್ಕೂ ನನ್ನ ಮನಸ್ಸಿಲ್ಲ. ಹೇಳು; ರುಸ್ತುಮ, ನನ್ನ ಮರಣದ ವ್ಯವಸ್ಥೆಯನ್ನು ಹೇಗೆ ಮಾಡಿರುವೆ?"

"ಕಾಫಿರ,ವ್ಯವಸ್ಥೆಯನ್ನು ಕೇಳಿದೆಯೆಂದರೆ ನಿನ್ನ ಎದೆಯು ನಡುಗೀತು. ರಾಜಾ, ನಿನ್ನ ವಿಷಯವಾಗಿ ಯಾಕೋ ನನ್ನಲ್ಲಿ ಅನುಕಂಪೆಯು ಹುಟ್ಟಿದೆ. ನಾಮಾಂಕಿತ ಯೋಧನೆಂದು ಮೆರೆಯುವ ನಿನ್ನನ್ನು ಕುರಿಗಳನ್ನು ಕೊಯ್ದಂತೆ ಕೊಯ್ದು ಚಲ್ಲಬಾರದೆಂದು ನನ್ನ ವಿಚಾರವಿದೆ. ನಿನ್ನ ವಧೆಯು ಯುದ್ಧಭೂಮಿಯಲ್ಲಿ ಆಗುವದೇ ಒಳಿತು. ಅದಕ್ಕಾಗಿ ನಾನು ನಿನಗೆ ಕ್ಷಮಾದಾನ ಮಾಡಬೇಕೆಂದು ಇಚ್ಛಿಸುತ್ತಿರುವೆನು; ಆದರೆ ಆ ಕ್ಷಮೆಯು ಅನಾಯಾಸವಾಗಿ ದೊರೆಯ

ತಕ್ಕದ್ದಿರುವದಿಲ್ಲ; ನೀನು ನನ್ನೆದುರಿಗೆ ಮೊಳಕಾಲೂರಿ ಪ್ರಾರ್ಥಿಸಿದರೆ ಮಾತ್ರ ಅದು ದೊರೆಯುತಕ್ಕದ್ದಿರುವದು."

ಖಾನನ ಮಾತುಗಳನ್ನು ಕೇಳಿ ಅಮರಪ್ರಸಾದನು ಸಂತಪ್ತನಾದನು. ಅವನು ಎದೆಯುಬ್ಬಿಸಿ ಉಚ್ಚಕಂಠದಿಂದ:—"ಮೊಳಕಾಲೂರಿ ಮುಕ್ತಿಭಿಕ್ಷೆ ಬೇಡಬೇಕೆ? ಯಾರೆದುರಿಗೆ—ಈ ದುಷ್ಮನ ಖಾನನೆದುರಿಗೆಯೋ?"

"ಹೌದು, ಈ ಖಾನ ಬಹಾದ್ದೂರನ ಎದುರಿಗೆ!" ಅಭಿಮಾನ ಪೂರ್ವಕ ವಾಗಿ ಖಾನನು ನುಡಿದನು.

ಅಮರಪ್ರಸಾದನು ತಿರಸ್ಕಾರವ್ಯಂಜಕ ಸ್ವರದಿಂದ:-"ಅಸಂಭವ! ಅಸಂಭವ! ಈ ಮಾತು ತೀರ ಅಸಂಭವ! ರುಸ್ತುಮ, ಇಂತಹ ವಿಚಾರವನ್ನು ಮಾಡಬೇಡ. ಈ ರಾಜಾ ಅಮರಪ್ರಸಾದನು ನಿನ್ನಂತಹ ತಸ್ಕರ ಕಾಪುರುಷನ ಬಳಿಯಲ್ಲಿ ಪ್ರಾಣರಕ್ಷಣೆಯ ಸಲುವಾಗಿ ಮುಕ್ತಿಭಿಕ್ಷೆಯನ್ನೆಂದೂ ಬೇಡಲಾರೆನು."

"ವಸ್ತುಸ್ಥಿತಿಯು ಹೀಗಿದ್ದರೂ ನಾನು ನಿಮ್ಮನ್ನು ಮುಕ್ತಗೊಳಿಸುವೆನು! ರಾಜಾ, ನಿಮ್ಮಂತಹ ಪುರುಷಸಿಂಹರನ್ನು ಮೋಸದಿಂದ ಸೆರೆಹಿಡಿದು ಹಿಂಸಿಸುವದರಲ್ಲಿ ಯಾವ ಪುರುಷಾರ್ಥವಿದೆ?"

ಶಂಕಾಕುಲ ಹೃದಯದಿಂದ ರುಸ್ತುಮನು ಮುಖವೆತ್ತಿ ನೋಡಿದನು; ರಾಜಪಥದಲ್ಲಿ ನವಾಬ ದಾವುದಖಾನನು ನಿಂತು ಗಂಭೀರತೆಯಿಂದ ಮಾತಾಡಹತ್ತಿದನು. ಕೂಡಲೆ ಖಾನನು ಆಸನಪರಿತ್ಯಾಗ ಮಾಡಿ ಅವನಿಗೆ ಅಭಿವಾದನೆ ಮಾಡಿ ಒಂದು ಮೂಲೆಯಲ್ಲಿ ನಿಂತನು. ನಸೀರನಾದರೂ ಭಯಕಾತರತೆಯಿಂದ ನವಾಬನಿಗೆ ವಂದಿಸಿದನು. ರಾಜನ ಕಾವಲುಗಾರರು ತಮ್ಮ ಸ್ವಾಮಿಗೆ ನಮಸ್ಕರಿಸಿ ಅಮರಪ್ರಸಾದನನ್ನು ಬಿಟ್ಟು ದೂರ ನಿಂತರು. ಅಮರಪ್ರಸಾದನು ವಿಸ್ಮಯಭರಿತನಾಗಿ ನವಾಬನನ್ನು ನೋಡಹತ್ತಿದನು. ಆಗ ದಾವುದಖಾನನು ತಾನೇ ಮುಂದೆ ಬಂದು ಸ್ವಹಸ್ತದಿಂದ ಅಮರಪ್ರಸಾದನ ಶೃಂಖಲೆಗಳನ್ನು ತೆಗೆಯಹತ್ತಿದನು. ಶೃಂಖಲೆಗಳನ್ನು ತೆಗೆಯುವದಾದ ಮೇಲೆ ಅವನು ಅಮರಪ್ರಸಾದನನ್ನು ಬಲವಾಗಿ ಅಪ್ಪಿಕೊಂಡು:—"ರಾಜಾ, ನಿಮಗೆ ತೊಡಿಸಿರುವ ಲೋಹ ಶೃಂಖಲೆಗಳನ್ನು ತೆಗೆದು, ಪ್ರೇಮ ಶೃಂಖಲೆಗಳಿಂದ ಬಿಗಿದಿರುವೆನು."

ಈ ಸಮಯದಲ್ಲಿ ರುಸ್ತುಮನು ಭಯಭೀತನಾಗಿ ಈಶ್ವರನ ನಾಮ

ಸ್ಮರಣೆ ಮಾಡತೊಡಗಿದ್ದನು. ಅಮರಪ್ರಸಾದನು ತಾನು ಬಂಧನೆಗೊಳಗಾದ ವೃತ್ತಾಂತವನ್ನು ನವಾಬನೆದುರಿಗೆ ಹೇಳಿದರೆ ತನ್ನ ಕಪಟವೆಲ್ಲ ಬೈಲಿಗೆ ಬಿದ್ದು ರಾಜಕ್ಷೋಭೆಗೆ ಪಾತ್ರನಾಗುವೆನೆಂದು ಅವನು ಒಂದೇಸವನೆ ನಡುಗತೊಡಗಿದ್ದನು. ಅವನು ಆಕಾಶದ ಕಡೆಗೆ ಮುಖ ಮಾಡಿ ತನ್ನ ಮೇಲಿನ ಗಂಡಾಂತರವು ದೂರಾಗಬೇಕೆಂದು ಅಲ್ಲಾನ ಸ್ಮರಣೆಯನ್ನು ಮಾಡಹತ್ತಿದನು.

ಕೆಲವು ಕ್ಷಣಗಳ ಮೇಲೆ ನವಾಬನು ತನ್ನ ಆಲಿಂಗನಪಾಶದಿಂದ ರಾಜನನ್ನು ಮುಕ್ತಗೊಳಿಸಿ:—"ರಾಜಾ, ನಿಮ್ಮ ಪವಿತ್ರವಾದ ದೇಹಸ್ಪರ್ಶದಿಂದ ನಾನು ಧನ್ಯನಾದೆನು. ಹೋಗಿರಿ, ರಜಪುತರ ವೀರತ್ವಸ್ತಂಭರೆ, ವೀರತ್ವದ ದೀಪ್ತ ಸೂರ್ಯರೇ, ನೀವು ಮುಕ್ತರಾಗಿರುವಿರಿ ಹೋಗಿರಿ!" ಎಂದು ನುಡಿದು, ತನ್ನ ಸೈನಿಕರನ್ನು ಕುರಿತು:—"ಇದೇ ಕ್ಷಣದಲ್ಲಿ ರಾಜಾ ಅಮರಪ್ರಸಾದರಿಗೆ ಒಂದು ಸುಸಜ್ಜಿತವಾದ ಕುದುರೆಯನ್ನು ಕೊಡಿರಿ. ಇವರನ್ನು ಸುರಕ್ಷಿತವಾಗಿ ಅವರ ಶಿಬಿರಕ್ಕೆ ತಲುಪಿಸಬೇಕು. ಯಾವ ವಿಧದಿಂದಲಾದರೂ ಇವರಿಗೆ ನಿಮ್ಮಿಂದ ತೊಂದರೆಯಾಯಿತೆಂಬದು ತಿಳಿದರೆ ಪ್ರಾಣದಂಡನೆಯು ವಿಧಿಸಲ್ಪಡುವದು."

ಸೈನಿಕರು ನವಾಬನ ಆಜ್ಞೆಯಂತೆ ನಡೆಯುವ ಬಗ್ಗೆ ಒಪ್ಪಿಕೊಂಡರು. ಅನಂತರದಲ್ಲಿ ಅಮರಪ್ರಸಾದನನ್ನು ಕುರಿತು ನವಾಬನು ವಿನಯದಿಂದ:— "ರಾಜಾ, ಈಗ ಅಪ್ಪಣೆ ಕೊಡಿರಿ. ನಾಳೆ ಯುದ್ಧಕ್ಷೇತ್ರದಲ್ಲಿ ಮತ್ತೆ ಭೆಟ್ಟಿಯಾಗೇ ಆಗುವದು"

"ಪಠಾಣಪತಿ, ನಿಮ್ಮ ಈ ದೊಡ್ಡಿಸ್ತಿಕೆಯಿಂದ ನಾನು ಸುಖಿಯಾಗಲಿಲ್ಲ."

"ಅದೇಕೆ ರಾಜಾ?"

"ದೊಡ್ಡಿಸ್ತಿಕೆ, ಸಾತ್ವಿಕತನ, ಔದಾರ್ಯ ಮೊದಲಾದ ಸದ್ಗುಣಗಳ ಮುಂದೆ ವೀರತ್ವವು ಪರಾಭವ ಹೊಂದುವದು. ಮಹಾನುಭಾವತೆಯಿಂದ ಶತ್ರುಗಳನ್ನು ಮುಕ್ತಗೊಳಿಸುವದು, ಪ್ರೇಮಾಲಿಂಗನ ಬದ್ಧರನ್ನಾಗಿ ಮಾಡುವದು ಮೊದಲಾದ ಗುಣಗಳನ್ನು ನಾನು ಇಂದು ಕಂಡೆನು. ನವಾಬ, ನಿಮ್ಮ ಈ ದೇವದುರ್ಲಭವಾದ ಮಹಾನುಭಾವತೆಯ ಮುಂದೆ ನನ್ನ ವೀರತ್ವದ ಗರ್ವವು ನಾಶವಾಯಿತು. ಕರ್ತವ್ಯವಿವೇಕಗಳಿಗೆ ಜಲಾಂಜಲಿಯಿತ್ತು ನಿಮ್ಮ ಗುಣಗಳ ಪೂಜೆ ಮಾಡಬೇಕೆಂದು ನನ್ನ ಇಚ್ಛೆಯಾಗಿರುವದು; ಆದರೆ ಪ್ರಾಪ್ತ ಪರಿಸ್ಥಿತಿಯಲ್ಲಿ ನೀವು ನನಗೂ, ನಾನು ನಿಮಗೂ ಪರಮ ಶತ್ರುಗಳಿರುವೆವು."

"ಅಮರಪ್ರಸಾದರೆ, ಈ ವಿಧದ ವೃತ್ತಿಯು ರಣಸ್ಥಳದಲ್ಲಿ; ಇಲ್ಲಿ ಮಾತ್ರ ಈ ಬಗೆಯ ಕಲ್ಪನೆಗೆ ಆಸ್ಪದವೀಯಲಾಗದು. ಇಲ್ಲಿ ನೀವು ನನಗೆ ಪರಮ ಮಿತ್ರರು-ಪರಮಾತ್ಮೀಯರು. ಕರ್ತವ್ಯಕರ್ಮ ಮಾಡುವಾಗ ಪ್ರಾಪ್ತವಾದ ಅವಸ್ಥೆಯನ್ನು ಸದಾ ಪ್ರಚಾರದಲ್ಲಿ ತರಬಾರದು. ಭಾರತ ವರ್ಷದಲ್ಲಿ ಮೊಗಲರ ಪ್ರತಿಷ್ಠೆಯು ಪ್ರಸ್ಥಾಪಿತವಾಗುವದಕ್ಕೆ ನೀವು ಶಸ್ತ್ರಗ್ರಹಣ ಮಾಡಿರುವಿರಿ. ನಿಮ್ಮ ಈ ಮಹತ್ಕಾರ್ಯದಲ್ಲಿ ನಿಮ್ಮ ವಿಜಯವೈಜಯಂತಿಯ ಕೀರ್ತಿಯ ಪ್ರಕಾಶವು ದಶದಿಶೆಗಳನ್ನು ಬೆಳಗಲಿ. ನಿಮ್ಮ ಚಾರಿತ್ರ್ಯವು ಜಗತ್ತಿಗೆ ಆದರ್ಶಭೂತವಾಗಲಿ!"

ನವಾಬನು ಹೀಗೆ ನುಡಿದವನೇ ರುಸ್ತುಮಖಾನನ ಡೇರೆಯಿಂದ ಹೊರಟು ಹೋದನು ರಾಜಾದೇಶದ ಮೇರೆಗೆ ಪಠಾಣ ಸೈನಿಕರು ಅಮರಪ್ರಸಾದನನ್ನು ಅವನ ಶಿಬಿರಕ್ಕೆ ಸುರಕ್ಷಿತವಾಗಿ ತಲುಪಿಸಿದರು.

---

### ೨೧ನೆಯ ಪರಿಚ್ಛೇದ.

ಇಂದು ಅಂತಿಮ ಯುದ್ಧವು. ಇಂದು ವಿಜಯ ಲಕ್ಷ್ಮಿಯು ಜಯಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡು ವಂಗಭಾಗ್ಯ ವಿಧಾತನು ಯಾರೆಂಬದರ ನಿರ್ಣಯ ಮಾಡುವವಳಿದ್ದಳು. ಆದ್ದರಿಂದ ಉಭಯ ಪಕ್ಷಗಳು ಅಂದು ಜೀವನದ ಮಮತೆಯನ್ನು ತೊರೆದು ರಣೋನ್ಮತ್ತವಾಗಿದ್ದವು. ಸೇನಾಪತಿಗಳ ಉತ್ಸಾಹಿತ ವಾಕ್ಯಗಳಿಂದ ನಾಲ್ಕೂ ದಿಕ್ಕುಗಳು ಕಂಪಾಯಮಾನವಾಗತೊಡಗಿದ್ದವು. ಯುದ್ಧ ದೃಶ್ಯವು ಭೀಕರವಾಗಿದ್ದಿತು. ಅದು ಜೀವಿತದ ಕ್ಷಣಭಂಗುರತೆಗೆ ಸಾಕ್ಷೀಭೂತವಾಗಿತ್ತು.

ರಣಕ್ಷೇತ್ರದಲ್ಲಿ ರುಸ್ತುಮಖಾನ-ಅಮರಪ್ರಸಾದರ ನಡುವೆ ಭೀಷಣವಾದ ಯುದ್ಧವು ನಡೆದಿತ್ತು. ಈರ್ವರೂ ತಮ್ಮ ಪರಾಕ್ರಮದ ಪರಾಕಾಷ್ಠೆಯನ್ನು ತೋರಿಸತೊಡಗಿದ್ದರು. ಕೆಲವು ವೇಳೆ ಯುದ್ಧ ನಡೆದ ಮೇಲೆ ಅಮರಪ್ರಸಾದನು ಖಾನನನ್ನು ಸಮೀಪಿಸಿ: —"ರುಸ್ತುಮಖಾನ!"

"ಯಾಕೆ ರಾಜಾ?" ಖಾನನು ಗಾಂಭೀರ್ಯದಿಂದ ಕೇಳಿದನು.

"ಇಂದು ನಾನು ಒಬ್ಬನೇ ಇರುವದಿಲ್ಲ; ನನ್ನ ಬಳಿಯಲ್ಲಿ ಅನುಪಮ ಯೋಧರುಂಟು."

"ಈ ಸಂಗತಿಯು ನನಗೆ ಗೊತ್ತಿದೆ."

"ಅಂದಿನಂತೆ ಇಂದು ಒಂದು ಕಟ್ಟಿಗೆಯು ನನ್ನ ಶಸ್ತ್ರವಾಗಿರದೆ, ಭೀಷಣವಾದ ಖಡ್ಗವು ನನ್ನ ಕೈಯಲ್ಲಿರುವದೆಂಬ ಸಂಗತಿಯಾದರೂ ನಿನಗೆ ತಿಳಿದಿರಬಹುದು."

"ಹೌದು, ಇದೂ ಗೊತ್ತಿದೆ."

"ನನ್ನ ಕೃಪಾಣವು ಪಠಾಣ ಶೋಣಿತದಿಂದ ಉದ್ಧತವಾಗಿರುವದೆಂಬದನ್ನಾದರೂ ನೀನು ಬಲ್ಲೆ. ಖಾನ, ವೀರತ್ವವಿಭೂಷಿತವಾದ ತೀಕ್ಷ್ಣ ಧಾರೆಯು ನನ್ನ ಈ ಖಡ್ಗವೇ ಇಂದು ನಿನ್ನ ಮೃತ್ಯುವಿನ ನಿರ್ಣಯ ಮಾಡುವದು. ಇಂದು ನಿನ್ನ ಆಯುಷ್ಯದ ಕೊನೆಯ ದಿವಸವೆಂದು ನೀನು ನಿಶ್ಚಿತವಾಗಿ ತಿಳಿದಿರುವೆಯಾಗಿದ್ದೀತು."

"ರಾಜಾ, ನಾನು ಸಾಯುವದೇನೋ ನಿಜವು. ಹುಟ್ಟಿದವನು ಸಾಯಲೇ ಬೇಕು. ನಾನೂ ಸಾಯುವೆನು; ನೀನೂ ಸಾಯುವೆ. ನಾನು ಸಾಯುವದಾದರೆ ನಿನ್ನನ್ನು ಸಾವಿಗೀಡು ಮಾಡಿಯೇ ಸಾಯುವೆನು. ಇದೇ ರಣಕ್ಷೇತ್ರದಲ್ಲಿ ನಿನ್ನ ದೀಪನಿರ್ವಾಣವಾಗುವದೆಂದು ಖಂಡಿತವಾಗಿ ತಿಳಿ."

"ಖಾನ, ರಣಮೃತ್ಯುವು ಕ್ಷತ್ರಿಯರಿಗೆ ಅತ್ಯಂತ ಪ್ರಿಯವಾದದ್ದಿರುವದು. ಅಂತಹ ಪುಣ್ಯವು ದೊರೆತರೆ ನನ್ನ ಕೀರ್ತಿ-ಗೌರವಗಳಿಗೆ ಎಣೆಯಿಲ್ಲ; ಆದರೆ ಏನು ಮಾಡಬೇಕು? ನನಗೆ ನೀನು ಪ್ರತಿದ್ವಂದ್ವಿಯಾಗಿರುವದರಿಂದ ಅಂತಹ ಸೌಭಾಗ್ಯವು ದೊರೆಯಲಾರದು. ಮತ್ತೊಬ್ಬ ಸತ್ವಶಾಲಿಯು ಇಂತಹ ಮಾತುಗಳನ್ನಾಡಿದ್ದರೆ ಶೋಭಿಸುತ್ತಿತ್ತು. ಹೇಡಿಯೂ, ಕಪಟಿಯೂ, ಪಠಾಣ ಕುಲಕಲಂಕಿಯೂ ಆದ ನೀನು ಇಂತಹ ದೊಡ್ಡಿಸ್ತಿಕೆಯ ಮಾತುಗಳನ್ನಾಡಲಿಕ್ಕೆ ಪೂರಾ ಅಪಾತ್ರನಿರುವೆ."

"ರಾಜಾ, ನಿನಗೆ ನಿಜವಾಗಿ ಅಂತಹ ಸೌಭಾಗ್ಯವು ದೊರೆಯುವದಿರುವದು. ನನ್ನ ಮಾತಿನ ಸತ್ಯತೆಯು ನಿನಗಾಗದಿದ್ದರೂ ಇಲ್ಲಿಯ ಸೇನಾಸಮೂಹಕ್ಕೆ ಆಗದಿರದು." ಖಾನನು ಹೀಗೆ ನುಡಿದು, ಅಮರಪ್ರಸಾದನಿಗೆ ಗುರಿಯಿಟ್ಟು ತನ್ನ ಖಡ್ಗವನ್ನೆಸೆದನು. ರಣಕುಶಲನಾದ ರಾಜನು ಖಡ್ಗಪ್ರಹಾರವನ್ನು ತಪ್ಪಿಸಿಕೊಂಡು ಸ್ವಲ್ಪ ಹಿಂದೆ ಸರಿದನು. ಖಾನನ ಖಡ್ಗವು ಅವನ ಕುದುರೆಯ ಶಿರಕ್ಕೆ ಬಿತ್ತು. ಕೂಡಲೆ ಆ ಕುದುರೆಯು ಗಾಯ ಹೊಂದಿ ಭೂಮಿಗೆ ಬಿತ್ತು. ಖಾನನೂ ಕುದುರೆಯಿಂದ ನೆಲಕ್ಕುರುಳಿದನು. ಅಮರಪ್ರಸಾದನು ಈ ಸಂಧಿಯನ್ನು ವ್ಯರ್ಥಹೋಗಗೊಡಲಿಲ್ಲ. ಅವನು ಅತ್ಯಂತ

ಚಪಲತೆಯಿಂದ ರುಸ್ತುಮಖಾನನ ಮೇಲೆ ಕೃಪಾಣವನ್ನೆಸೆದನು. ಕುದುರೆಯು ಮೇಲಿಂದ ನೆಲಕ್ಕೆ ಬಿದ್ದ ಖಾನನು ಸಾವರಿಸಿಕೊಂಡು ಏಳುತ್ತಿರುವಾಗಲೆ ಕೃಪಾಣದ ಪ್ರಹಾರವಾದ್ದರಿಂದ ಚಿಟ್ಟನೆ ಚೀರಿ ಮತ್ತೆ ಭೂಮಿಗೆ ಬಿದ್ದನು. ಕೂಡಲೆ ರಾಜನು ತನ್ನ ಕುದುರೆಯಿಂದಿಳಿದು ಖಾನನ ಬಳಿಗೆ ಬಂದು, ಚೈತನ್ಯಹೀನನಾಗಿ ಬಿದ್ದ ಖಾನನ ಮಸ್ತಕವನ್ನು ತನ್ನ ತೊಡೆಯಮೇಲಿರಿಸಿಕೊಂಡು ಉಪಚರಿಸತೊಡಗಿದನು. ಹಿಂಸಾ-ದ್ವೇಷಗಳನ್ನೂ ವೈರ-ವೈಮನಸ್ಸನ್ನೂ ಮರೆತು, ಕರುಣಾಮಯವೂ, ಉಜ್ವಲವೂ, ಸ್ವರ್ಗೀಯವೂ, ಲೋಮಹರ್ಷಣವೂ ಆದ ಆ ನೋಟವನ್ನು ನೋಡಿ ಸೈನಿಕರೆಲ್ಲರೂ ಆಶ್ಚರ್ಯಚಕಿತರಾದರು. ಆಗ ರಾಜನು ತನ್ನ ಒಬ್ಬ ಸೈನಿಕನನ್ನು ಕರೆದು, ನೀರು ತರುವದಕ್ಕೆ ಆಜ್ಞಾಪಿಸಿದನು.

ಸೈನಿಕನು ನೀರು ತಂದ ಮೇಲೆ ಅಮರಪ್ರಸಾದನು ರುಸ್ತುಮಖಾನನ ಗಾಯವನ್ನು ನೀರಿನಿಂದ ತೊಳೆದು ಅರಿವೆ ಕಟ್ಟಿದನು. ರಾಜನ ಶುಶ್ರೂಷೆಯಿಂದ ಸ್ವಲ್ಪ ಹೊತ್ತಿನಲ್ಲಿಯೆ ಖಾನನು ಚೇತರಿಸಿಕೊಂಡು ಮೆಲ್ಲ ಮೆಲ್ಲನೆ ಕಣ್ಣು ತೆರೆದನು. ರಾಜನು ತನ್ನ ಮಸ್ತಕವನ್ನು ತೊಡೆಯಮೇಲಿರಿಸಿಕೊಂಡು ಕುಳಿತದ್ದನ್ನೂ, ತನ್ನ ಗಾಯವು ಕಟ್ಟಲ್ಪಟ್ಟದ್ದನ್ನೂ ನೋಡಿ ಅವನಿಗೆ ಬಹಳೇ ಸೋಜಿಗವಾಯಿತು. ಆಗ ಅವನು:-'ರಾಜಾ! ರಾಜಾ!' ಎಂದನು. ಯಾವನಾಲಿಗೆಯು ಯಾವಾಗಲೂ ಕಾಫಿರ ಶಬ್ದವನ್ನುಚ್ಚರಿಸದೆ ಇರುತ್ತಿದ್ದಿಲ್ಲವೋ, ಅದೇ ನಾಲಿಗೆಯಿಂದ "ರಾಜಾ! ರಾಜಾ!" ಎಂಬ ಉದ್ಗಾರವು ಹೊರಟದ್ದನ್ನು ಕೇಳಿ ಅಮರಪ್ರಸಾದನಿಗೂ ವಿಸ್ಮಯವಾಯಿತು. ಅವನು ಖಾನನ ಮುಖವನ್ನು ನೋಡುತ್ತ ಸ್ವಸ್ಥವಾಗಿ ಕುಳಿತನು. ತನ್ನ ಸಂಬೋಧನಕ್ಕೆ ಮಾತು ಹೊರಡದ್ದರಿಂದ ಖಾನನು ಮತ್ತೆ ಅಮರಪ್ರಸಾದನನ್ನು ಕುರಿತು: —"ರಾಜಾ!"

"ಯಾಕೆ ವೀರಾ, ಬಹಳ ಯಾತನೆಯಾಗುತ್ತಿರುವದೇನು?"

"ಇಲ್ಲ ರಾಜಾ, ಯಾತನೆಯಾಗುವದಿಲ್ಲ; ಅತ್ಯಂತ ಸುಖವನ್ನು ಅನುಭವಿಸುತ್ತಿರುವೆನು."

"ನಾನು ಇದೇನು ಕೇಳುತ್ತಿರುವೆನು?"

"ನಾನು ಇದನ್ನೇನು ನೋಡುತ್ತಿರುವೆನು ರಾಜಾ?"

"ಮತ್ತೇನು ಕಂಡಿರಿ ಸೇನಾಪತಿಗಳೇ?"

"ಹೇಗೆ ಯಾವ ವಿಧದಿಂದ ತಿಳಿಸಲಿ? ನಾನು ನೋಡುತ್ತಿರುವ ದೃಶ್ಯ

ವನ್ನು ಹಿಂದೆ ಎಂದೂ ನೋಡಿಲ್ಲ; ಮುಂದೆಯಾದರೂ ನೋಡುವೆನೆಂದು ಹೇಳಲಾರೆನು. ಸ್ವರ್ಗೀಯ, ಮಧುರ, ಅತ್ಯುಜ್ವಲ, ಅಕಲ್ಪನೀಯವನ್ನೂ, ಮಹತ್ವವೂ, ಪುಣ್ಯಮಯವೂ ಆನಂದದಾಯಕವೂ ಅಚಿಂತ್ಯನೀಯವೂ ಆದ ಚಿತ್ರವನ್ನು ಇಂದು ನಾನು ಪ್ರತ್ಯಕ್ಷ ನೋಡಿದೆನು; ಆದರೆ ದುಃಖದ ವಿಷಯವೇನಂದರೆ, ಹೃದಯವು ತೃಪ್ತಿಯಾಗುವಂತೆ ಈ ದೃಶ್ಯವನ್ನು ಬಹಳ ವೇಳೆ ನೋಡಲಿಕ್ಕೆ ಅವಕಾಶವಿಲ್ಲ; ಯಾಕಂದರೆ, ಈಗಾಗಲೆ ಆಮಂತ್ರಣವು ಬಂದಿರುವದು. ನಾನು ಸ್ವಲ್ಪ ವೇಳೆಯಲ್ಲಿಯೆ ದಯಾಮಯನ ಸನ್ನಿಧಿಗೆ ಹೋಗತಕ್ಕವನಿರುವೆನು."

"ವೀರರೆ, ಹೀಗೇಕೆ ನಿರಾಶರಾಗುವಿರಿ? ಶಿಬಿರಕ್ಕೆ ನಡೆಯಿರಿ; ಚಿಕಿತ್ಸೆಯಿಂದ ಆರೋಗ್ಯಲಾಭಹೊಂದಿರಿ."

"ಈ ಮಾತು ಅಸಂಭವವು. ನಾನು ಚನ್ನಾಗಿ ತಿಳಿದಿರುವೆನು; ದಿವ್ಯ ದೃಷ್ಟಿಯಿಂದ ಒಳಿತಾಗಿ ನೋಡುತ್ತಿರುವೆನು. ಏನಂದರೆ, ಮಹಾ ಕಾಲನು ನನ್ನನ್ನು ಒಯ್ಯುವದಕ್ಕಾಗಿ ಧಾವಿಸಿ ಬರತೊಡಗಿರುವನು. ನಾನು ಕಾಲನ ಸಾನ್ನಿಧ್ಯವನ್ನು ಸೇರುವೆನೆಂದು ಭಯಭೀತನಾಗಿಲ್ಲ. ಇದು ನನ್ನ ಅತ್ಯಂತ ಶಾಂತಿಮಯ ಸುಖಮೃತ್ಯುವಿರುವದು. ಇಂದು ಹೊಸ ಸೂರ್ಯನ ನವ ಪ್ರಕಾಶ ಕಿರಣಗಳು ನನ್ನ ದೃಷ್ಟಿಗೋಚರವಾಗಿರುವವು; ಒಂದು ಸ್ವರ್ಗೀಯ ಮಾಧುರ್ಯದಿಂದ ಹೃದಯವು ತುಂಬಿ ಹೋಗಿರುವದು. ಮಲಯಸಮೀರನಿಗಿಂತ ಅತಿ ಶಾಂತವೂ ಕೋಮಲವೂ ಸ್ನಿಗ್ಧವೂ ಆದ ವಾಯುವಿನಿಂದ ನನ್ನ ಶರೀರವು ಪುಲಕಾಯಮಾನವೂ ರೋಮಾಂಚಿತವೂ ಆಗಿರುವದು. ಒಬ್ಬ ದಯಾವಂತ, ಘನವಂತ ದೇವತೆಯ ಪವಿತ್ರವಾದ ಅಂಗಸ್ಪರ್ಶದಿಂದ ನನ್ನ ಅಂತರಂಗದ ದೋಷಾಂಧಕಾರವು ನಿರಸ್ತವಾಯಿತು. ರಾಜಾ, ರಾಜಾ! ನೀವು ಮನುಷ್ಯರಲ್ಲ, ಮನುಷ್ಯರಲ್ಲ; ಖಂಡಿತವಾಗಿ ನೀವು ದೇವಾಂಶರಿರುವಿರಿ, ದೇವತೆಗಳಿರುವಿರಿ."

"ನಾನು ದೇವತೆಯಂತೂ ಅಲ್ಲವೇ ಅಲ್ಲ; ಇಷ್ಟೇ ಅಲ್ಲ, ನಾನು ಮನುಷ್ಯನಾದರೂ ಅಲ್ಲ."

"ನೀವು ಮನುಷ್ಯರಾಗದಿದ್ದರೆ ಈ ಸಂಸಾರದಲ್ಲಿ ಮನುಷ್ಯರೆಂದು ಯಾರಿಗೆ ಅನ್ನಬೇಕು? ನೀವು ಪ್ರಪಂಚಕ್ಕೆ ಶೀಕ್ಷಾದಾತರಿರುವಿರಿ; ವಸುಂಧರೆಗೆ ಗೌರವವನ್ನುಂಟು ಮಾಡುವವರಿರುವಿರಿ; ರಜಪುತರ ಕೀರ್ತಿ-ಶಿಖರರಾಗಿರು

ವಿರಿ. ರಾಜಾ, ನೀವು ಆರ್ತ ಜನರ ಭಯತ್ರಾತರೂ, ಸಂಕಟಾಪನ್ನರ
ಉದ್ಧಾರಕರ್ತರೂ, ದೀನ ದರಿದ್ರರ ಆಶ್ರಯಸ್ಥಾನರೂ, ಪತಿತರ ಉದ್ಧಾರ
ಕರೂ, ಪಾಪಿಗಳ ರಕ್ಷಕರೂ ಇರುವಿರಿ. ವಾಸ್ತವವಾಗಿ ನೀವು ಮನುಷ್ಯರಲ್ಲ;
ದೇವತೆಗಳೇ ಇರುವಿರಿ! ನಿಮಗೆ ಸಹಸ್ರ ಸಲಾಮು!”

“ನನ್ನನ್ನು ದೇವತೆಗಳ ಆಸನದಲ್ಲಿ ಕುಳ್ಳಿರಿಸುವದೆಂದರೆ, ಅವರ ಆಸನ
ವನ್ನು ಅಪವಿತ್ರ ಮಾಡಿದಂತೆಯೇಸರಿ. ನನ್ನನ್ನು ದೇವತಾ ನಾಮದಿಂದ
ಸಂಬೋಧಿಸುವದೆಂದರೆ, ಅವರ ಪವಿತ್ರ ನಾಮವನ್ನು ಕಲಂಕಿತ ಮಾಡಿದಂ
ತೆಯೇ. ರುಸ್ತುಮಖಾನ, ನಿಮ್ಮ ಬುದ್ಧಿಯು ಭ್ರಮೆಗೊಳಗಾಗಿದೆ”

“ನಾನು ಭ್ರಮಿಷ್ಠನಾಗಿಲ್ಲ; ರಾಜಾ, ಶುದ್ಧಬುದ್ಧಿಯುವನಾಗಿರುವೆನು.”

“ನೀವು ದೇವತಾಪೀಠದಲ್ಲಿ ವಿರಾಜಮಾನರಾಗುವದರಿಂದ ಆ ಆಸನವು
ಮೊದಲಿಗಿಂತ ಶೋಭೆಗೊಳ್ಳುವದು; ನಿಮ್ಮ ನಾಮವು ದೇವತೆಗಳ ನಾಮಕ್ಕಿಂ
ತಲೂ ಅತುಲ ಶ್ರೀವಿಮಂಡಿತವಾಗಿರುವದು. ರಾಜಾ, ನಾನು ಮಹಾಪಾ
ಪಿಯು; ಮಹಾ ತಾಪಿಯು. ಅದಕ್ಕಾಗಿ ನಾನು ನಿಮ್ಮ ಘನವಂತಿಕೆಯನ್ನರಿ
ಯದೆ ಈರ್ಷಾಕ್ರೋಧಗಳಿಂದ ಅಧೀರನಾಗಿ, ಪಿಶಾಚಿಯಂತೆ ನಿಮ್ಮ ಕೊಲೆ
ಮಾಡಲುದ್ಯುಕ್ತನಾಗಿದ್ದೆನು. ನೀವು ಮಹಾತ್ಮರೂ ಮಹಾಪುರುಷರೂ ಇರು
ವಿರಿ. ಕುಟಿಲನೂ, ಕಪಟಿಯೂ, ತಾಮಸಿಯೂ, ಪಾತಕಿಯೂ ಆದ ಈ ರುಸ್ತು
ಮನ ಅಪರಾಧವನ್ನು ಮರೆತು ನನಗೆ ಕ್ಷಮಾದಾನ ಮಾಡಬೇಕು ರಾಜಾ!”

ಪಶ್ಚಾತ್ತಾಪಯುಕ್ತವಾದ ಖಾನನ ವಾಣಿಯನ್ನು ಕೇಳಿ ಅಮರಪ್ರ
ಸಾದನ ಅಂತಃಕರಣವು ಕರಗಿತು. ಆಗ ಅವನು ನಿರ್ಮಲ ಹೃದಯದಿಂದ:-
“ನಾನು ಮನಃಪೂರ್ವಕವಾಗಿ ನಿಮ್ಮ ಎಲ್ಲ ಅಪರಾಧಗಳನ್ನು ಕ್ಷಮಿಸಿರುವೆನು.
ಸೇನಾಪತಿಗಳೆ! ನನ್ನ ಪರಮಬಂಧುಗಳೆ, ನೀವು ನಿಶ್ಚಿಂತಭಾವದಿಂದ ಕರ್ತವ್ಯ
ರತರಾಗಿರಿ.”

“ನಿಮ್ಮ ಅಭಯವಾಣಿಯನ್ನು ಕೇಳಿ ನಿಶ್ಚಿಂತನಾದೆನು. ಇನ್ನುಮೇಲೆ
ಇಹಲೋಕದಲ್ಲಿ ನನಗೆ ಯಾವ ಕರ್ತವ್ಯವೂ ಇಲ್ಲ. ರಾಜಾ, ನೀವು ಧನ್ಯರು!
ಪರಮ ಧನ್ಯರು! ದಯಾವಂತ ದೇವತೆಗಳೆ, ನೀವು ನನಗೆ ಕ್ಷಮಾದಾನಮಾಡಿ
ಸಂತುಷ್ಟನನ್ನು ಮಾಡಿದಿರಿ. ಅನಂತಪಥ ಯಾತ್ರಿಕನಾದ ಈ ಪಾತಕಿಗೆ ಶುಭಾ
ಶೀರ್ವಾದವಿತ್ತು ಕೃತಾರ್ಥನನ್ನು ಮಾಡಬೇಕು. ಆಶೀರ್ವಾದ ಕೊಡಿರಿ ರಾಜಾ!
ಜನ್ಮಾಂತರದಲ್ಲಾದರೂ ನೀವು ನನಗೆ ಶತ್ರುರೂಪದಿಂದಲೂ, ದೇವತಾರೂಪ

ದಿಂದಲೂ ಭೆಟ್ಟಿಯಾಗಬೇಕು; ವೀರತ್ವವನ್ನು ಪೂಜಿಸುತ್ತ, ಯುದ್ಧಕ್ಷೇತ್ರದಲ್ಲಿ ವೀರಾಗ್ರಣಿಯಾಗಿ, ಶಸ್ತ್ರಗಳನ್ನೇ ತಲೆಗಿಂಬು ಮಾಡಿ ಧಾರಾತೀರ್ಥದಲ್ಲಿ ಶಯನ ಮಾಡಬೇಕು; ಈ ಮೇರೆಗೆ ಆಶೀರ್ವಾದ ಕೊಡಿರಿ ರಾಜಾ. ಕರ್ತವ್ಯಪ್ರಭಾವದಿಂದ ಸಮಸ್ತ ವಿಶ್ವವನ್ನು ಜಾಗ್ರತ ಗೊಳಿಸುವಂತೆಯೂ, ರಜಪುತರಲ್ಲಿರುವ ದಯಾ ಆತಿಥ್ಯ ಮೊದಲಾದ ಸದ್ಗುಣಗಳನ್ನು ಪ್ರಾಪ್ತ ಮಾಡಿಕೊಂಡು ಸೂರ್ಯನಂತೆ ಪ್ರಕಾಶಮಾನನಾಗಿ ಸಂಸಾರವನ್ನು ಉಜ್ವಲಗೊಳಿಸಲಿಕ್ಕೆ ಸಮರ್ಥನಾಗುವಂತೆಯೂ ನನಗೆ ಆಶೀರ್ವಾದವನ್ನು ಕೊಡು ರಾಜಾ!"

ರುಸ್ತುಮಖಾನನ ಕಂಠವು ಸ್ತಂಭಿತವಾಯಿತು. ಅವನ ನೇತ್ರಯುಗಲವು ಮುಚ್ಚಲ್ಪಟ್ಟಿತು. ಆಗ ರಾಜನು ಗಾಬರಿಗೊಂಡು ಕೂಗಿದನು:- "ರುಸ್ತುಮಖಾನ!"

ಉತ್ತರವೇನೂ ದೊರೆಯಲಿಲ್ಲ.

ಮತ್ತೆ ರಾಜನು ಕಾತರತೆಯಿಂದ—"ಸೇನಾಪತಿ ರುಸ್ತುಮಖಾನ!"

ಮತ್ತೆಯೂ ಉತ್ತರ ದೊರೆಯಲಿಲ್ಲ. ಉತ್ತರ ಕೊಡುವವನು ಆ ಸಮಯಕ್ಕೆ ಮಹಾಶೂನ್ಯದಲ್ಲಿ ಹೋಗಿ ಬಿಟ್ಟಿದ್ದನು!

---

## ೨೨ನೆಯ ಪರಿಚ್ಛೇದ

ಕುಟಿಲ ಬುದ್ಧಿಯುವನೂ ಕುಟಿಲ ನೀತಿವಿಶಾರದನೂ ರಣಕುಶಲನೂ ಆದ ಮೊಗಲ ಸೇನಾಪತಿ ಹುಸೇನ ಕುಲೀಖಾನನ ಆಕ್ರಮಣದಿಂದ ಪ್ರತಿಯೊಂದು ಕ್ಷಣಕ್ಕೆ ಪಠಾಣ ಸೈನಿಕರ ಮೃತ್ಯು ಸಂಖ್ಯೆಯು ಹೆಚ್ಚಾಗತೊಡಗಿತು. ಮೊಗಲರ ಯುದ್ಧಾವೇಶವು ಶತಗುಣಿತವಾಯಿತು. ಅಮರಪ್ರಸಾದನಂತು ಪಠಾಣರ ಪಡೆಯಲ್ಲಿ ಅಂತಕನಂತೆ ಕೋಲಾಹಲ ನಡೆಯಿಸಿದ್ದನು. ಇನ್ನು ಜಯಲಕ್ಷ್ಮಿಯು ತನ್ನ ವಶವಾಗುವದು ಅಸಂಭವವೆಂದು ಪಠಾಣಾಧಿಪತಿ ನವಾಬ ದಾವುದಖಾನನಿಗೆ ನಿಶ್ಚಿತವಾಗಿ ತಿಳಿಯಿತು. ವಿಜಯಲಾಭವು ಹೇಗೆ ಅಸಂಭವವೋ ಹಾಗೆಯೆ ಪಠಾಣರ ಆತ್ಮರಕ್ಷಣೆಯ ಕಾರ್ಯವಾದರೂ ಅಸಂಭವವಾಗಿತ್ತು. ಯಾಕಂದರೆ ಅವರು ಪರಾಭವಕ್ಕೆ ಅಂಜುವವರು ಇದ್ದಿಲ್ಲ; ಮೃತ್ಯುವಿಗೆ ಸೊಪ್ಪು ಹಾಕುವವರಾಗಿರಲಿಲ್ಲ. ಅವರು ಮಹಾಮೇರುವಿನಂತೆ ನಿಶ್ಚಲರಾಗಿ ಮೊಗಲರೊಡನೆ ತುಮುಲವಾದ ಕಾಳಗ ನಡೆಯಿಸಿದ್ದರು.

ಅಸೀಮ ಸಾಹಸಿಗಳಾದ ಪಠಾಣರು ಎಷ್ಟೇ ರಣಕ್ಲಾಂತರಾಗಿದ್ದರೂ ಹಿಂಜರಿಯದೆ ಮೊಗಲರ ಶಸ್ತ್ರಗಳಿಗೆ ಎದೆಗೊಟ್ಟು ತಿಲಮಾತ್ರವಾದರೂ ಚಲವಿಚಲರಾಗದೆ ಯುದ್ಧ ಮಾಡಹತ್ತಿದ್ದರು.

ಪಠಾಣ ದಳದಲ್ಲಿಯ ಬಹುಸಂಖ್ಯಾಕ ಸೈನಿಕರು ಮೃತ್ಯುಪಥವನ್ನಾಶ್ರಯಿಸಿದ್ದರಿಂದಲೂ ಮುಖ್ಯ ಸೇನಾನಿಯಾದ ರುಸ್ತುಮಖಾನನು ಕೈ ಬಿಟ್ಟದ್ದರಿಂದಲೂ ವಂಗೇಶ್ವರ ದಾವುದಖಾನನ ಹೃದಯವು ಚಿಂತಾಗ್ನಿಯಿಂದ ಸುಡತೊಡಗಿತ್ತು; ಆವರೂ ಅವನು ಕರ್ತವ್ಯಪರಾಙ್ಮುಖನಾಗದೆ, ತನ್ನ ಸೈನಿಕರಿಗೆ ವೀರಶ್ರೀಯುಕ್ತವಾದ ಉಪದೇಶ ಮಾಡುತ್ತ ಉತ್ಸಾಹಗೊಳಿಸತೊಡಗಿದ್ದನು. ಇದೇ ಸಮಯದಲ್ಲಿ ರುಸ್ತುಮವಿಜಯಿೂವೀರನಾದ ರಾಜಾ ಅಮರಪ್ರಸಾದನು ತನ್ನ ಸೇನೆಯೊಡನೆ ಸಾಗಿ ಬಂದು ಒಳ್ಳೆಯ ಆವೇಶದಿಂದ ಪಠಾಣ ಸೈನ್ಯದ ಮೇಲೆ ದಾಳಿ ಮಾಡಿದನು. ಅಮರಪ್ರಸಾದನ ಆಕ್ರಮಣವಾದ ಕೂಡಲೆ, ನವಾಬನ ಹೃದಯದಲ್ಲಿ ಇದು ವರೆಗೆ ವಾಸಿಸಿದ್ದ ಕ್ಷೀಣಮ್ಲಾನ ನಿರ್ವಾಣೋನ್ಮುಖ ದೀಪದಂತಿದ್ದ ಆಶಾರಶ್ಮಿಯು ಈಗ ಸಂಪೂರ್ಣವಾಗಿ ನಂದಿ ಹೋಯಿತು. ಇನ್ನು ಮೇಲೆ ಪಠಾಣರ ರಕ್ಷಣೆಯಾಗುವದು ಅಸಂಭಾವ್ಯವೆಂದು ಅವನ ಗ್ರಹಿಕೆಯಾಯಿತು. ಆಗ ಅವನು ಪೂರಾ ನಿರಾಶನೂ ಹತಾಶನೂ ಆದನು.

ಉದಾಶೀನನಾಗಿದ್ದ ನವಾಬನಿಗೆ ಅವನ ಮನೋದೇವತೆಯು ಧೈರ್ಯವೀಯಹತ್ತಿತು:—"ನವಾಬ ಈಗ ವೃಥಾ ನಿರಾಶನಾಗಬೇಡ. ಈ ಸಾರೆ ನೀನು ಪರಾಜಿತನಾದರೂ, ಮತ್ತೊಮ್ಮೆ ಪ್ರಯತ್ನ ಮಾಡಿದರೆ ವಿಜಯ ಲಾಭ ಹೊಂದುವೆ. ಹಿಂದಿನ ಯುದ್ಧದಲ್ಲೊಮ್ಮೆ ಓಡಿ ಹೋಗಿ ಆತ್ಮರಕ್ಷಣೆ ಮಾಡಿಕೊಂಡಂತೆ ಈ ಯುದ್ಧದಲ್ಲಾದರೂ ಮಾಡು. ಯುದ್ಧದಲ್ಲಿ ಪಲಾಯನ ಮಾಡಿದರೆ, ನಿನ್ನ ಮಾನಕ್ಷಿತಿಯಾಗುವದಿಲ್ಲ. ನಿನ್ನ ಜೀವಿತವು ಸುರಕ್ಷಿತವಾಯಿತೆಂದರೆ ಇಂತಹ ಇನ್ನೂ ಎಷ್ಟೋ ಯುದ್ಧಗಳನ್ನು ಮಾಡುವೆ. ವಂಗದಂತಹ ಎಷ್ಟೋ ರಾಜ್ಯಗಳನ್ನು ಕೈವಶ ಮಾಡಿಕೊಳ್ಳುವೆ. ನೀನು ನನ್ನ ಆಜ್ಞೆಯನ್ನುಲ್ಲಂಘಿಸದೆ ಈಗಲೆ ಓಡಿ ಹೋಗಿ ಜೀವ ಉಳಿಸಿಕೋ!"

ನವಾಬನು ವಿಚಾರಸಾಗರದಲ್ಲಿ ಮುಳುಗಿದನು. ಬಹಳ ವೇಳೆ ವಿಚಾರಿಸಿದ ಮೇಲೆ ಅವನಿಗೆ ಈ ಹಂಚಿಕೆಯು ತಕ್ಕದ್ದಾಗಿ ತೋರಿತು. ಅವನು ಕೆಲವು ಶೂರ ಸೈನಿಕರೊಡನೆ ಮೆಲ್ಲ ಮೆಲ್ಲನೆ ಕಾಲ್ದೆಗೆಯತೊಡಗಿದನು.

ಯುದ್ಧವು ಮಾತ್ರ ಹಾಗೆಯೆ ಸಾಗಿತ್ತು. ನವಾಬನ ಈ ಚಾತುರ್ಯವು ಯಾರಿಗೂ ತಿಳಿಯುವಂತಿದ್ದಿಲ್ಲ. ಕೊನೆಯ ಸೈನ್ಯಶ್ರೇಣಿಯನ್ನು ದಾಟಿದೊಡನೆಯೆ ಅವನು ಆರಿಸಿದ ತನ್ನ ಸೈನಿಕರೊಡನೆ ಒಳ್ಳೆಯ ರಭಸದಿಂದ ಓಡತೊಡಗಿದನು. ಮೊಗಲ ಸೇನಾಪತಿಯು ನವಾಬನ ಪಲಾಯನದ ದೃಶ್ಯವನ್ನು ಕಂಡು ಉಚ್ಚಕಂಠದಿಂದ:-"ನವಾಬ, ನವಾಬ! ಓಡಬೇಡಾ! ಈ ಪ್ರಪಂಚದ ಯಾವ ಸ್ಥಳದಲ್ಲಿ ಓಡಿ ಹೋದರೂ ಮೊಗಲರ ಕೈಯಿಂದ ಪಾರಾಗಲಾರೆ!"

ನವಾಬನಿಗೆ ಮೊಗಲ ಸೇನಾನಿಯ ದರ್ಪವಾಣಿಯು ಕೇಳಲಿಲ್ಲ. ಅವನು ವಾಯುವೇಗದಿಂದ ತೆರಳಿದ್ದನು. ಕೂಡಲೆ ಮೊಗಲ ಸೇನಾಪತಿಯು ಅಮರಪ್ರಸಾದನನ್ನು ಕುರಿತು:—"ರಾಜಾ, ನವಾಬನು ಓಡತೊಡಗಿರುವನು. ನೀವು ನಿಮ್ಮ ರಜಪುತ ಸೈನ್ಯದೊಡನೆ ಅವನನ್ನು ಬೆನ್ನಟ್ಟಿರಿ ಒಂದು ವೇಳೆ ನವಾಬನು ಜೀವದಿಂದ ಪಾರಾಗಿ ಹೋದರೆ ಮೊಗಲರು ನಿಮ್ಮ ಹೃದಯ ಶೋಣಿತದಿಂದ ತಮ್ಮ ಕ್ರೋಧಾನಲವನ್ನು ಶಾಂತಪಡಿಸಿಕೊಳ್ಳುವರು! ಹೋಗಿರಿ; ಬೇಗನೆ ಹೋಗಿರಿ. ವಾಯುಗತಿಯಿಂದ ತೆರಳಿ ನವಾಬನನ್ನು ಸೆರೆಹಿಡಿದುಕೊಂಡು ಬರ್ರಿ. ಅವನು ಜೀವಂತವಾಗಿ ದೊರೆಯದಿದ್ದರೆ ಕೊಂದು ಬರ್ರಿ. ಈ ಎದುರಾಳಿಗಳಾದ ಪಠಾಣರನ್ನು ಕೊಂದು ನಾನಾದರೂ ಶೀಘ್ರವಾಗಿ ಬರುವೆನು. ಈಗ ನೀವು ಮುಂದಾಗಿರಿ."

ಸೇನಾಪತಿಯ ಅನಾದರವೂ ಕ್ರೂರವೂ ಆದ ಈ ಆದೇಶದಿಂದ ಅಮರಪ್ರಸಾದನ ಚಿತ್ತವು ಚಂಚಲವಾಯಿತು. ಈ ವೇಳೆಯಲ್ಲಿ ಏನಾದರೂ ಗೊಂದಲವೆಬ್ಬಿಸಿದರೆ ಸ್ವಾಮಿಕಾರ್ಯಕ್ಕೆ ವ್ಯತ್ಯಯವುಂಟಾಗುವದೆಂದು ಅವನು ಆತ್ಮಸಂಯಮನ ಮಾಡಿಕೊಂಡು, ತನ್ನ ರಜಪುತ ಸೇನೆಯೊಡನೆ ನವಾಬನನ್ನು ಹಿಂಬಾಲಿಸಿ ರಭಸದಿಂದ ಸಾಗಿ ನವಾಬನನ್ನು ಸಮೀಪಿಸಿದನು. ಇನ್ನು ಸ್ವಲ್ಪ ವೇಳೆಯಲ್ಲಿ ಅವನು ಅಮರಪ್ರಸಾದನ ಕೈಗೆ ಸಿಗತಕ್ಕವನಿದ್ದನು. ಮುಂದೆ ಒಂಳ್ಳೇ ಕಲ್ಲೋಲಯುಕ್ತವಾದ ಒಂದು ವಿಶಾಲ ನದಿಯು ಇತ್ತು. ಆ ನದಿಗೆ ಸೇತುವೆಯು ಕಟ್ಟಲ್ಪಟ್ಟಿತ್ತು. ನವಾಬನು ತನ್ನ ಸೈನ್ಯದೊಡನೆ ನದಿಯನ್ನು ದಾಟಿ, ಸೇತುವೆಯನ್ನು ಕೆಡಹಲಿಕ್ಕೆ ಆಜ್ಞಾಪಿಸಿದನು. ಸೇತುವೆಯನ್ನು ಕೆಡಹುವ ಕೆಲಸವಿನ್ನೂ ಪೂರೈಸಿದ್ದಿಲ್ಲ. ಅಷ್ಟರಲ್ಲಿ ಅಮರಪ್ರಸಾದನು ಸೇನಾಸಮೇತನಾಗಿ ಅಲ್ಲಿಗೆ ಬಂದನು. ಶೀಘ್ರವಾಗಿ ಸೇತುವೆಯನ್ನು ದಾಟುವದಕ್ಕಾಗಿ ಅವನು ತನ್ನ ಸೈನ್ಯಕ್ಕೆ ಆಜ್ಞಾಪಿಸಿದನು. ರಜಪುತ ಪಡೆಯು ಸೇತುವೆಯ

ಮೇಲೆ ಹೆಜ್ಜೆಯಿಟ್ಟಿತು ಅಮರಪ್ರಸಾದನು ಅಶ್ವಾರೋಹಿಯಾಗಿ ಮುಂದೆ ಸಾಗಿದ್ದನು. ಅಷ್ಟರಲ್ಲಿ ಒಬ್ಬ ಬಾಲಕನು ನಗ್ನಖಡ್ಗವನ್ನು ಹಿಡಿದುಕೊಂಡು ಅಶ್ವಾರೂಢನಾಗಿ ರಾಜನ ಸಮ್ಮುಖದಲ್ಲಿ ಬಂದು ಉಚ್ಚಕಂಠದಿಂದ:-"ಬಿನಾ ಮೇರೆ ವಧ ಕಿಯೇ ಕೋಯಿಭೀ ಏಕ ಕದಮ ಅಗ್ರಸರ ನ ಹೋ ಸಕೇಗಾ ರಾಜಾ!"

ಅಮರಪ್ರಸಾದನು ವಿಸ್ಮಿತನಾಗಿ ತನ್ನ ಕುದುರೆಯನ್ನು ಅಲ್ಲಿಯೆ ನಿಲ್ಲಿಸಿ ಆ ಬಾಲಕನ ತೇಜಯುಕ್ತವಾದ ಮುಖವನ್ನು ನೋಡತೊಡಗಿದನು. ಆ ಬಾಲಕನ ಮುಖವು ಅವನಿಗೆ ಚಿರ ಪರಿಚಯದ್ದಾಗಿ ಕಂಡಿತು. ಅವನು ಕೆಲವು ಕ್ಷಣಗಳ ವರೆಗೆ ಬೆರಗುಗೊಂಡು ಆ ಬಾಲಕನನ್ನು ನೋಡುತ್ತ ನಿಂತಿದ್ದನು. ಅನಂತರದಲ್ಲಿ ಅವನು ಆಶ್ಚರ್ಯಯುಕ್ತ ವಾಣಿಯಿಂದ:--"ಇದೇನು? ರಾಣೀ ಊರ್ಮಿಳಾ! ನೀನು ಈ ವೇಷದಿಂದ ಈ ಮೃತ್ಯುಮುಖರೂಪಿಯಾದ ರಣಕ್ಷೇತ್ರದಲ್ಲಿ ಯಾಕೆ ಬಂದೆ?"

"ನಿಮ್ಮ ಪ್ರಶ್ನೆಗಿಂತ ಮೊದಲು ನನ್ನ ಪ್ರಶ್ನೆಯಿರುವದು. ನೀವು ಇಲ್ಲಿಗೆ ಬಂದ ಉದ್ದೇಶವೇನು?"

"ನಾನು ಕರ್ತವ್ಯಪಾಲನೆಗಾಗಿ ಬಂದಿರುವೆನು."

"ನಾನಾದರೂ ಕರ್ತವ್ಯಪಾಲನೆಗಾಗಿಯೆ ಬಂದಿರುವೆನು."

"ನಿನ್ನ ಕರ್ತವ್ಯವೇನಿರುವದು?"

"ಸಂತಾನ ರಕ್ಷಣೆ, ಸತ್ಯ ರಕ್ಷಣೆ, ಆಶ್ರಯಾರ್ಥಿಗಳ ರಕ್ಷಣೆ ಇವೇ ನನ್ನ ಕರ್ತವ್ಯಗಳು."

"ನಿನ್ನ ಸಂತಾನವಾರು?"

"ವಂಗೇಶ್ವರ ನವಾಬ ದಾವುದಖಾನರು."

"ನಿನ್ನ ಆ ಪುತ್ರನನ್ನು ಹಿಡಿದುತರುವದಕ್ಕೆ ನನಗೆ ಆಜ್ಞೆಯಾಗಿದೆ. ನಾನು ನನ್ನ ಕರ್ತವ್ಯವನ್ನು ನೆರವೇರಿಸದಿದ್ದರೆ ಸ್ವಾಮಿ ದ್ರೋಹಿಯಾಗುವೆನು. ರಾಣೀ, ಹಿಂತಿರುಗು. ವಿಲಂಬವಾದರೆ ನವಾಬನನ್ನು ಹಿಡಿಯುವದಾಗಲಿಕ್ಕಿಲ್ಲ."

"ನಾನಾದರೂ ನವಾಬರ ರಕ್ಷಣೆಮಾಡಬೇಕೆಂದು ಸಂಕಲ್ಪಮಾಡಿಕೊಂಡಿರುವೆನು. ಆದರಂತೆ ನಾನು ಅವರಿಗೆ ಅಭಯದಾನ ಮಾಡಿರುವೆನು. ನಾನಾದರೂ ನನ್ನ ಕರ್ತವ್ಯವನ್ನು ಹೇಗೆ ಬಿಡಲಿ? ಮೊದಲು ನನ್ನನ್ನು ವಧಿಸಿ

ನಿಮ್ಮ ಸೈನ್ಯವನ್ನು ಮುಂದೆ ಸಾಗಿಸಿರಿ ರಾಜರೆ!"

"ಇದೇನು ರಾಣಿ? ಸ್ವಾಮಿಯ ಕರ್ತವ್ಯಕ್ಕೆ ವಿಘ್ನವನ್ನುಂಟು ಮಾಡುವದು ಸಹಧರ್ಮಿಣಿಗೆ ಉಚಿತವಲ್ಲ."

"ನಾನು ಕೈಕೊಂಡಿರುವ ಕಾರ್ಯವಾದರೂ ಧರ್ಮವೇ ಆಗಿದೆ."

"ನಿನ್ನ ಧರ್ಮವು ಶ್ರೇಷ್ಠವೊ? ಇದೇನು ರಾಣಿ, ಸಾಧ್ವಿಯರಿಗೆ ಸ್ವಾಮಿಗಿಂತ ಶ್ರೇಷ್ಠಧರ್ಮವು ಯಾವದು? ಆರ್ಯಲಲನೆಯರಿಗೆ ಪತಿಯು ದೇವರಂತೆ ಪೂಜ್ಯನಲ್ಲವೆ?"

"ನಿಮ್ಮ ಮಾತು ನಿಜವು; ಆದರೆ ಧರ್ಮವನ್ನು ಬಿಟ್ಟು ದೇವರುಂಟೆ? ಧರ್ಮವನ್ನು ಬಿಟ್ಟರೆ ಯಾವ ದೇವರ ದಯಾ-ಪ್ರೀತಿಗಳು ಪ್ರಾಪ್ತವಾಗುವವು ಸ್ವಾಮಿ? ಧರ್ಮಹೀನರನ್ನು ತ್ರಿಭುವನವು ತಿರಸ್ಕಾರ ದೃಷ್ಟಿಯಿಂದ ನೋಡುವದು. ಅಧರ್ಮಿಗಳಾದ ಮನುಷ್ಯರು ಕೇವಲ ದೇವನಾಮಸಂಕೀರ್ತನೆಯಿಂದ ಮುಕ್ತಿಪಥವನ್ನು ತಲುಪುವದಿಲ್ಲ."

"ಆದರೆ ಭಕ್ತಿಪೂರ್ವಕವಾಗಿ ದೇವರನ್ನು ಸ್ತುತಿಸಿದರೆ?"

"ಹಾಗಾದರೂ ಅವರಿಗೆ ಮುಕ್ತಿದೊರಕದು. ಪಾತಕಿಗಳು ಕೃತಕರ್ಮಫಲವನ್ನು ಅನುಭವಿಸಲೇ ಬೇಕು. ನರಕ ಯಾತನೆಯಲ್ಲದೆ ಅವರು ಎಂದೂ ಉದ್ಧಾರವಾಗಲಾರರು ಪತಿತನನ್ನು ಮುಕ್ತಿಮಾರ್ಗಕ್ಕೆ ಹಚ್ಚುವ ಸಾಮರ್ಥ್ಯವು ಯಾವ ದೇವತೆಯಲ್ಲಿಯೂ ಇಲ್ಲ. ಅವರು ಪಾಪವನ್ನು ಪುಣ್ಯದಿಂದಲೇ ತೊಳೆಯಬೇಕು. ಧರ್ಮಸ್ವರೂಪಿಯಾದ ರಾಜಾ ಯುಧಿಷ್ಠಿರನಿಗೆ ಅರ್ಧೋಚ್ಚಾರಿತ ಸಾಮಾನ್ಯ ಮಿಥ್ಯಾವಾಕ್ಯಕ್ಕಾಗಿ ನರಕದ ಘೋರಯಾತನೆಯನ್ನು ಕಣ್ಣಿನಿಂದ ನೋಡಬೇಕಾಯಿತು. ದೇವಿಗಾಗಿ ಸುರಥ ರಾಜನು ಲಕ್ಷಾವಧಿ ಪಶುಗಳ ಬಲಿದಾನಮಾಡಿದ್ದನು. ಲಕ್ಷ ಪಶುಗಳು ಲಕ್ಷಸಾರೆ ಅವನ ಸಂಹಾರ ಮಾಡಿದವಲ್ಲದೆ, ದೇವಿಯು ಆ ಕಾಲದಲ್ಲಿ ಅವನನ್ನು ರಕ್ಷಿಸಲಿಲ್ಲ; ಆದರೆ ಧರ್ಮಸಂಪಾದನೆಯಿಂದ ಮಾತ್ರ ದೇವನು ಸಂತುಷ್ಟನಾಗುವನು. ಸ್ವಾಮಿಾ, ಈ ಶಿಕ್ಷಣವನ್ನು ನನಗೆ ನೀವೇ ಕೊಟ್ಟಿದ್ದು ಇಂದು ಹೀಗೇಕೆ ಮಾತಾಡುವಿರಿ? ಆಶ್ರಿತರ ರಕ್ಷಣೆ ಮಾಡುವದು ಪರಮ ಧರ್ಮವಾಗಿರುವದು. ಅದಕ್ಕಾಗಿಯೇ ನಾನು ನಿಮಗೆ ಎದುರಾಳಿಯಾಗಿರುವೆನು. ಬನ್ನಿರಿ; ಸ್ವಾಮಿಾ, ಆಕ್ರಮಣ ಮಾಡ ಬನ್ನಿರಿ!"

ರಾಣೀ ಊರ್ವಿುಳಾದೇವಿಯ ಅಖಂಡನೀಯ ಯುಕ್ತಿಯ ಮುಂದೆ

ರಾಜನು ಸ್ತಂಭಿತನಾದನು. ಅವನು ಚಿಂತಾನಿಮಗ್ನನಾಗಿ ಕರ್ತವ್ಯ ನಿರ್ಧಾರಣ ಮಾಡುವದರಲ್ಲಿ ಅಸಮರ್ಥನಾಗಿ ಹೋದನು. ಒಂದು ಕಡೆಗೆ ಕರ್ತವ್ಯದ ಕಠೋರ ಆಹ್ವಾನವು; ಮತ್ತೊಂದು ಕಡೆಗೆ ಧರ್ಮಪರಾಯಣ ರಮಣಿಯ ಹತ್ಯೆಯು-ಅರ್ಧಾಂಗಿನಿಯ ಪ್ರಾಣನಾಶವು! ಒಂದುಕಡೆಗೆ ಕರ್ತವ್ಯದ ಅವಹೇಲನೆಯಿಂದ ಮಹಾ ನರಕವು; ಮತ್ತೊಂದು ಕಡೆಗೆ ನಾರೀ ಹತ್ಯೆಯ ಅನಂತ ಪಾಪ ಸಂಚಯವು! ಏನು ಮಾಡಲಿ, ಯಾವ ದಾರಿಯಿಂದ ಹೋಗಲಿ? ಇವೆರಡರಲ್ಲಿ ಯಾವದು ವರಿಷ್ಠವು, ಯಾವದು ಕನಿಷ್ಠವು? ಅರ್ಧಾಂಗಿನಿಯು ಶ್ರೇಷ್ಠಳೋ ಕರ್ತವ್ಯವು ಶ್ರೇಷ್ಠವೋ? ಎಂದು ಅಮರಪ್ರಸಾದನು ವಿಚಾರತಂದ್ರಿಯಲ್ಲಿ ಮುಳುಗಿರುವಾಗ ಯಾರೋ ಅವನ ಹೃದಯವನ್ನು ಅಲ್ಲಾಡಿಸಿ 'ಕರ್ತವ್ಯ ಕರ್ತವ್ಯ! ನೂರಾರು ರಾಜ್ಯಗಳಿಗಿಂತ ಸಹಸ್ರ ಪತ್ನಿಯರಿಗಿಂತ ಕರ್ತವ್ಯವು ದೊಡ್ಡದಿರುವದು' ಎಂದು ಹೇಳಿದಂತಾಯಿತು.

'ಯಾವ ಕುಸುಮಸಮ ಕೋಮಲ ತನುವಿಗೆ ಕುಸುಮಾಘಾತದಿಂದಲಾದರೂ ಪೆಟ್ಟು ಹತ್ತಿ ಅದು ಆರಕ್ತತೆಯನ್ನು ಹೊಂದುವದೋ, ಅಂತಹ ತನುವಿನ ಮೇಲೆ ಇಂದು ಖಡ್ಗ ಪ್ರಹಾರ ಮಾಡುವ ಪ್ರಸಂಗ ಬಂದಿತಲ್ಲವೆ! ಯಾವ ಕೋಮಲ ಹೃದಯದಲ್ಲಿ ಪ್ರೀತಿಯ ಸೆಲೆಯೂ, ಪ್ರೇಮದ ಪ್ರವಾಹವೂ, ಕರುಣೆಯ ಧಾರೆಯೂ ಇರುವವೋ ಅಂತಹ ಹೃದಯವನ್ನು ಸ್ವಹಸ್ತದಿಂದ ವಿದಾರಿಸುವ ಪ್ರಸಂಗ ಬಂತಲ್ಲವೆ! ಯಾವ ಕನಕ ಪ್ರತಿಮೆಯನ್ನು ಹೃದಯದಲ್ಲಿರಿಸಿಕೊಂಡು ಆರಾಧ್ಯ ದೇವತೆಯೆಂದು ಪೂಜಿಸುತ್ತ ಬಂದೆನೋ, ಅದನ್ನು ಇಂದು ಚೂರ್ಣ-ವಿಚೂರ್ಣ ಮಾಡುವ ಪ್ರಸಂಗವೊದಗಿತಲ್ಲವೆ! ಯಾವ ಬಾಹುಗಳು ಕೇವಲ ಪ್ರೇಮಾಲಿಂಗನಕ್ಕಾಗಿ ಪ್ರಸಾರಿತವಾಗುತ್ತಿದ್ದವೋ, ಅವು ಇಂದು ನನ್ನ ಪ್ರೇಮಮೂರ್ತಿಯ ವಧೆಗಾಗಿ ಭೀಷಣ ಖಡ್ಗವನ್ನು ಹಿಡಿಯಬೇಕಾಯಿತೆ! ಇಂತಹ ಅಸ್ವಾಭಾವಿಕ ನಿರ್ದಯ ಕಾರ್ಯವು ಸಂಸಾರದ ಇತಿಹಾಸದಲ್ಲಿ ಹಿಂದೆ ಎಂದಾದರೂ ನಡೆದಿದ್ದೀತೆ? ಮುಂದೆ ನಡೆಯಬಹುದೆ? ಛೀ! ಎಂದೂ ನಡೆಯಲಾರದು' ಎಂದು ಅಮರಪ್ರಸಾದನು ಮನದಲ್ಲಿಯೇ ಕೆಲವು ವೇಳೆಯ ವರೆಗೆ ಯೋಚಿಸಹತ್ತಿದ್ದನು. ಅನಂತರದಲ್ಲಿ ಅವನು ಉದ್ಭ್ರಾಂತ ಭಾವದಿಂದ:—"ಇಲ್ಲ, ಇಲ್ಲ; ನಾನು ಹೀಗೆ ಎಂದೂ ಮಾಡುವದಿಲ್ಲ. ಕರ್ತವ್ಯವು ಗಂಭೀರ ಸಮುದ್ರ ಗರ್ಭದಲ್ಲಿ ಮುಳುಗಿ ಹೋಗಲಿ, ಧರ್ಮ ಕರ್ಮಗಳು ಮಹಾಸಾಗರ ಮಧ್ಯದಲ್ಲಿ ಮಾಯವಾಗಲಿ, ಮನು

ಸ್ವತ್ವ ವಿವೇಕಗಳೆಲ್ಲವೂ ರಸಾತಳಕ್ಕೆ ಹೋಗಲಿ; ಏನು ಬೇಕಾದದ್ದು ಆದರೂ ನನ್ನಿಂದ ನಾರೀ ಘಾತಕ ಕೃತಿಯು ಜರುಗಲಾರದು!"

"ಛೀ, ರಾಜಾ! ಇಂತಹ ದೌರ್ಬಲ್ಯವು ನಿಮಗೆ ಶೋಭಿಸುವದಿಲ್ಲ." ಎಂದು ಅಮರಪ್ರಸಾದನ ಹಿಂದೆ ಯಾರೋ ನುಡಿದಂತಾಯಿತು. ಕೂಡಲೆ ಅವನು ವಿಸ್ಮಯದಿಂದ ತಿರುಗಿ ನೋಡಿದನು; ಕೈಯಲ್ಲಿ ನಗ್ನಖಡ್ಗವನ್ನು ಹಿಡಿದ ಅಶ್ವಾರೋಹಿಯಾದ ತೇಜೋಮಯಿ ರಮಣಿಯು ಅಮರಪ್ರಸಾದನ ಕಡೆಗೆ ನೋಡುತ್ತ ನಿಂತಿದ್ದಳು. ಆ ತರುಣಿಯನ್ನು ನೋಡಿದೊಡನೆಯೆ ಅವನು ವಿಸ್ಮಿತನಾದನು. ಈ ಆಗಂತುಕ ತರುಣಿಯು ಯಾರಿರಬಹುದು? ಇವಳು ತನ್ನನ್ನು ಉದ್ದೇಶಿಸಿ ಹೀಗೆ ಮಾತನಾಡುವ ಕಾರಣವೇನಿರಬಹುದು? ಇವಳು ಅಕಸ್ಮಾತ್ತಾಗಿ ಈ ರಣಭೂಮಿಗೆ ಏಕೆ ಬಂದಿರಬಹುದು? ಮೊದಲಾದ ಆಲೋಚನೆಗಳಿಂದ ಅಮರಪ್ರಸಾದನು ದಿಙ್ಮೂಢನಾದನು. ಅವನು ಮುಂದುಗಾಣದವನಂತೆ ಸುಮ್ಮನೆ ನಿಂತನು. ಆಗ ಆ ಯುವತಿಯು ಅವನನ್ನು ಕುರಿತು:—"ರಾಜಾ, ಹೀಗೇಕೆ ಪ್ರವಾಹಪತಿತರಂತೆ ಅವಸ್ಥೆಹೊಂದಿರುವಿರಿ? ಈ ಬಗೆಯ ದೌರ್ಬಲ್ಯವು ನಿಮ್ಮಂತಹ ನಾಮಾಂಕಿತ ಕಲಿಗಳಿಗೆ ಶೋಭಿಸಲಾರದು."

ವಿಚಾರ ತಂದ್ರಿಯಲ್ಲಿ ಮುಳುಗಿದ ಅಮರಪ್ರಸಾದನು ಆ ರಮಣಿಯ ಮಾತುಗಳಿಂದ ಎಚ್ಚೆತ್ತು ಬಿದ್ದನು!

---

## ೨೩ನೆಯ ಪರಿಚ್ಛೇದ.

ಅಮರಪ್ರಸಾದನು ಮಾತಾಡದೆ ಸುಮ್ಮನೆ ನಿಂತದ್ದನ್ನು ನೋಡಿ ಆ ತರುಣಿಯು ಮತ್ತೆ ಅವನನ್ನು ಕುರಿತು:-"ರಾಜಾ, ನಿಮಗೆ ಈಗ ಈ ನಿಮ್ಮ ಸಹಧರ್ಮಚಾರಿಣಿಯಿಂದ ಕರ್ತವ್ಯಕ್ಕೆ ಆತಂಕವುಂಟಾಗಿರುವದಲ್ಲವೆ? ನಿಮ್ಮ ಶ್ರೇಯೋಭ್ಯುದಯವಾಗಬೇಕೆಂದು ನನ್ನ ಉತ್ಕಟೇಚ್ಛೆಯಿದ್ದುದರಿಂದ ನಿಮ್ಮ ಕಾರ್ಯಕ್ಕೆ ನಿಮ್ಮ ಪತ್ನಿಯಿಂದುಂಟಾದ ಅಡ್ಡಿಯನ್ನು ಹೋಗಲಾಡಿಸುತ್ತೇನೆ. ಹೇಗಾದರೂ ನಿಮ್ಮ ವೀರತ್ವ-ಕೀರ್ತಿಗಳು ಹೆಚ್ಚಾಗಿ ಹೊಂದಲೆಂದು ನನ್ನ ಕಾಮನೆಯುಂಟು."

ಆ ತರುಣಿಯು ಅಮರಪ್ರಸಾದನಿಗೆ ಹೀಗೆ ಹೇಳಿ, ರಾಣೀ ಊರ್ಮಿಳಾದೇವಿಯ ಬಳಿಗೆ ಬಂದು:—"ಭಗಿನಿ!"

"ಯಾರು, ಶೋಭನೆಯೇನು? ಧನಕುಬೇರ ರುದ್ರಪತಿಗಳ ಪ್ರೇಮ ಪುತ್ರಿಯಾದ ಶೋಭನೆಯೇನು? ಭಗಿನಿ, ರಣರಂಗಿನಿ ಮೂರ್ತಿ, ಈ ರಣರಂಗಿನಿಯ ವೇಷವು ಯಾತಕ್ಕಾಗಿ ಇರುವದು ತಂಗಿ?"

"ಅಕ್ಕಾ, ಇಂದು ಈ ವೇಷದ ಆವಶ್ಯಕತೆಯಾಯಿತು. ಯಾತಕ್ಕಾಗಿ ನೀವು ಸ್ವಾಮಿವಿರುದ್ಧವಾಗಿ ಶಸ್ತ್ರಧಾರಣ ಮಾಡಿರುವಿರೋ, ಅದೇ ಧರ್ಮಕ್ಕಾಗಿ—ನನ್ನ ಸ್ವಾಮಿಯ ಕರ್ತವ್ಯಪಥದಲ್ಲಿ ಉಂಟಾದ ತೊಂದರೆಯನ್ನು ನಿವಾರಣೆ ಮಾಡುವದಕ್ಕಾಗಿ—ನಾನು ಶಸ್ತ್ರಗ್ರಹಣ ಮಾಡಿರುವೆನು; ಈ ರಣರಂಗಿನಿ ವೇಷ ಧರಿಸಿರುವೆನು. ನನ್ನ ಪುಣ್ಯಮಯಿ ಭಗಿನಿ, ಆಕ್ರಮಣ ಮಾಡಿರಿ. ಇಂದು ಶಕ್ತಿಯೊಡನೆ ಶಕ್ತಿಯ ಸಂಘಾತ ನಡೆದು, ಸಂಸಾರದಲ್ಲಿ ಮಹಾಂದೋಲನದ ಪ್ರಭಂಜನವು ಪ್ರವಹಿಸಲ್ಪಡಲಿ!"

"ಹಾಗೇ ಆಗಲಿ ಭಗಿನಿ! ಈ ಸಂಘಾತವು ಸಂಸಾರದಲ್ಲಿ ಚಿರಕಾಲ ಸಂಸ್ಮರಣೀಯವಾಗಿರಲಿ. ಬಾ; ತಂಗೀ, ಬಾ. ಪಾತಿವ್ರತ್ಯದ ಆದರ್ಶಮಯಿ ದೇವೀ, ನಿನ್ನ ಪವಿತ್ರವಾದ ಆಲಿಂಗನದಿಂದ ನನ್ನನ್ನು ಪವಿತ್ರಗೊಳಿಸು ಬಾ."

ಇಬ್ಬರೂ ಕುದುರೆಯಿಂದಿಳಿದು ಪರಸ್ಪರರು ಆಲಿಂಗನ ಪಾಶದಲ್ಲಿ ಆಬದ್ಧರಾದರು.

ರಾಜಾ ಅಮರಪ್ರಸಾದನು ಒಳ್ಳೆಯ ವಿಸ್ಮಯದಿಂದಲೂ ಕೌತೂಹಲ ಪೂರ್ಣದೃಷ್ಟಿಯಿಂದಲೂ, ಅಪಾರ್ಥಿವವೂ ಅಲೌಕಿಕವೂ ಮಹಿಮಾಮಯವೂ ಆದ ದೃಶ್ಯವನ್ನು ನೋಡಹತ್ತಿದ್ದನು. ವಾಸ್ತವವಾಗಿ ಆ ದೃಶ್ಯವು ಅತ್ಯಂತ ಮಹಿಮಾಪೂರ್ಣವಿತ್ತು; ಅದ್ವಿತೀಯವಿತ್ತು. ಎರಡು ಸ್ವರ್ಗೀಯ ಹೃದಯಗಳ ಮಿಲನವು, ಎರಡು ಪತಿಭಕ್ತಿಯ ಆದರ್ಶಗಳ ಸಂಗಮವು, ಪತಿಪ್ರೇಮಜನ್ಮದಾಯಿನಿಗಳಾದ ಮಹಾಸತಿಯರ ಪ್ರೇಮಸಂಯೋಗವು, ಸಜೀವ ದೇವೀ ಪ್ರತಿಮೆಗಳ ಅಲೌಕ ದೇವೀ ಕ್ರೀಡೆಯು ನಿಜವಾಗಿಯೂ ಅವರ್ಣನೀಯವಿತ್ತು. ಕೆಲವು ವೇಳೆಯ ವರೆಗೆ ಆ ಪ್ರೇಮ ಪ್ರತಿಮೆಗಳು ಆಲಿಂಗನಪಾಶದಲ್ಲಿ ಬದ್ಧವಾಗಿದ್ದವು. ಅನಂತರದಲ್ಲಿ ಪರಸ್ಪರರು ಬೇರೆಯಾಗಿ ತಮ್ಮ ತಮ್ಮ ಕುದುರೆಗಳನ್ನೇರಿದರು. ಅನಂತರದಲ್ಲಿ ಶೋಭನೆಯು:—

"ಅಕ್ಕಾ, ಇನ್ನೇಕೆ ಅವಕಾಶವು? ಸಾಗಿಬನ್ನಿರಿ ಪತಿಯ ಕರ್ತವ್ಯ ಮಾರ್ಗದ ಆತಂಕವನ್ನು ದೂರಮಾಡುವ ಉತ್ಕಟೇಚ್ಛೆಯಿಂದ ಬಂದವಳಾದ ಈ ನಿಮ್ಮ ಪ್ರೇಮಲ ಭಗಿನಿಯ ಮೇಲೆ ಆಕ್ರಮಣ ಮಾಡಬನ್ನಿರಿ."

"ಭಗಿನಿ!" ರಾಣಿಯು ಪ್ರೇಮಪೂರಿತ ವಾಣಿಯಿಂದ ಶೋಭನೆಯನ್ನು ಕುರಿತು:—"ನಿನ್ನ ಪತಿಪ್ರೇಮದ ಹೆಚ್ಚಳವನ್ನು ನೋಡಿ ಆನಂದವಾಯಿತು. ನೀನು ನಿನ್ನ ಧರ್ಮವನ್ನು ಪಾಲಿಸಲಿಕ್ಕೆ ಮುಂದುವರಿದದ್ದು ನಿಜವಾಗಿಯೂ ಪ್ರಶಂಸನೀಯವಿರುವದು. ನೀನು ನಿನ್ನ ಧರ್ಮವನ್ನು ಪಾಲಿಸಲಿಕ್ಕೆ ಖಡ್ಗ ಪಾಣಿಯಾಗಿರುವದರಿಂದ, ನಾನಾದರೂ ನನ್ನ ಧರ್ಮವನ್ನು ಪಾಲಿಸಲಿಕ್ಕೆ ಕಾದಲೇ ಬೇಕಾಗಿದೆ."

ಈರ್ವರೂ ಯುದ್ಧ ಮಾಡತೊಡಗಿದರು. ರಾಣೀ ಊರ್ಮಿಳಾಬಾಲೆಯು ರಾಜಾ ಹರಿನಾರಾಯಣನ ಏಕಮಾತ್ರ ಕನ್ಯೆಯು. ಅವಳು ತನ್ನ ತಂದೆಯಲ್ಲಿ ಶಸ್ತ್ರಾಸ್ತ್ರ ವಿದ್ಯಾಭ್ಯಾಸವನ್ನು ಉತ್ಕೃಷ್ಟವಾದ ರೀತಿಯಿಂದ ಮಾಡಿದವಳಾಗಿದ್ದಳು; ಆದರೆ ಶೋಭನೆಯು ಯುದ್ಧವಿದ್ಯೆಯಲ್ಲಿ ಅಷ್ಟೊಂದು ನುರಿತವಳಿರಲಿಲ್ಲ. ಅವಳು ಎಷ್ಟೇ ಆವೇಶದಿಂದ ಕಾದತೊಡಗಿದ್ದರೂ ಊರ್ಮಿಳಾದೇವಿಯ ಶಸ್ತ್ರಚಾಪಲ್ಯದ ಮುಂದೆ ಗೊತ್ತಿಗೆ ಮುಟ್ಟದಾದಳು ಎರಡು ಪ್ರಾಣಗಳಲ್ಲಿ ಒಂದು ಹೋಗುವವರೆಗೆ ಯುದ್ಧವ್ಯಾಪಾರವು ಕಟ್ಟಾಗುವಂತಿದ್ದಿಲ್ಲ.

ಅಮರಪ್ರಸಾದನು ಈ ಅಭೂತಪೂರ್ವವಾದ ಯುದ್ಧದೃಶ್ಯವನ್ನು ನೋಡುತ್ತ ಭ್ರಮಿಷ್ಠನಂತೆ ನಿಂತಿದ್ದನು.

ಶೋಭನೆಯು ರಾಣಿಯ ಮೇಲೆ ಒಳ್ಳೆಯ ಆವೇಶದಿಂದ ಕೊನೆಯ ಆಕ್ರಮಣ ಮಾಡಿದಳು. ರಾಣಿಯು ಅವಳ ಆಕ್ರಮಣವನ್ನು ವ್ಯರ್ಥಗೊಳಿಸಿ, ತನ್ನ ಖಡ್ಗವನ್ನು ಅವಳ ವಕ್ಷಪ್ರದೇಶಕ್ಕೆ ಬಲವಾಗಿ ಚುಚ್ಚಿದಳು. ಶಸ್ತ್ರ ವಿದ್ಯೆಯಲ್ಲಿ ಅನಭ್ಯಸ್ತಳೂ ಯುದ್ಧ ವಿದ್ಯೆಯಲ್ಲಿ ಅಶಿಕ್ಷಿತಳೂ ಆದ ಶೋಭನೆಯು ರಾಣಿಯ ಖಡ್ಗಾಘಾತವನ್ನು ತಪ್ಪಿಸಿಕೊಳ್ಳಲಿಕ್ಕೆ ಸಮರ್ಥಳಾಗಲಿಲ್ಲ. ರಾಣಿಯ ಖಡ್ಗವು ಅವಳ ಹೃದಯವನ್ನು ಭೇದಿಸಿತು. ಕೂಡಲೆ ಅವಳು ಚಂಡ ಮಾರುತನಿಂದುರುಳುವ ಕದಳೀ ವೃಕ್ಷದಂತೆ ಇಳೆಗುರುಳಿದಳು. ಆಗ ರಾಣಿಯು ವ್ಯಥಿತ ಕಂಠದಿಂದ:—"ಭಗಿನಿ! ನಾನು ಮಹಾ ಪಾಪಿಣಿಯು, ಚಾಂಡಾಲಳು! ನಾನೇ ನಿನ್ನ ಮೃತ್ಯುವಿಗೆ ಕಾರಣಳಾದೆನು." ಎಂದು ನುಡಿದವಳೆ ಕುದುರೆಯಿಂದಿಳಿದು, ಶೋಭನೆಯ ಮಸ್ತಕವನ್ನು ತೊಡೆಯ ಮೇಲಿರಿಸಿಕೊಂಡು ಕಣ್ಣೀರು ಸುರಿಸಹತ್ತಿದಳು.

"ಭಗಿನಿ!" ಯಾತನಾದಗ್ಧ ಕಂಠದಿಂದ ಶೋಭನೆಯು ಊರ್ಮಿಳಾದೇವಿಯನ್ನು ಕುರಿತು:—"ನೀವು ದುಃಖಿಸಬೇಡಿರಿ. ನೀವು ಪಾತಕಿಗಳಲ್ಲ;

ಚಾಂಡಾಲ ಹೃದಯುದವರಲ್ಲ. ನಿಮ್ಮಂತಹ ಪರಮ ಧಾರ್ಮಿಕರನ್ನು ಕಾಣು ವದು ಅಪರೂಪ. ನನಗೆ ಇಂದು ನೀವು ನನ್ನ ಮನೋವಾಂಛಿತವಾದ ಮೃತ್ಯುವನ್ನು ಕೊಟ್ಟಿರುವಿರಿ. ನನ್ನ ನಿಮ್ಮ ಭೆಟ್ಟಿಯ ವೇಳೆಯಲ್ಲಿ ಒಂದು ಆಶೀರ್ವಾದ ಭಿಕ್ಷೆ ಬೇಡಿದ್ದು ಲಕ್ಷ್ಯದಲ್ಲಿರಬಹುದು. ಈ ದೇಹವು ಸ್ವಾಮಿ ಕಾರ್ಯದಲ್ಲಿಯೇ ವಿಸರ್ಜನವಾಗಬೇಕೆಂದು ನನ್ನ ಆಕಾಂಕ್ಷೆಯಿತ್ತು. ಸ್ನೇಹ ಶೀಲೆಯರಾದ ದೇವಿಯವರೆ, ನೀವು ನನ್ನ ವಾಸನೆಯನ್ನೂ ಪ್ರಾರ್ಥನೆಯನ್ನೂ ಪೂರ್ಣ ಮಾಡಿರುವಿರಿ. ನಿಮಗೆ ಅನಂತ ಪ್ರಣಾಮಗಳಿರಲಿ!"

ರಾಜಾ ಅಮರಪ್ರಸಾದನು ಶೋಭನೆಯ ಮೃತ್ಯುಪೂರ್ವದ ವಾಣಿ ಯನ್ನು ಕೇಳಿದನು. ಆಗ ಅವನು ಅವಳ ಸಮೀಪದಲ್ಲಿ ಬಂದು:—"ದೇವಿ! ನಿಮ್ಮ ಸ್ವಾಮಿಯು ಯಾರು?"

ಶೋಭನೆಯು ಅಮರಪ್ರಸಾದನನ್ನು ಕಣ್ಣುತುಂಬ ನೋಡಿ, ಕ್ಷೀಣ ಕಂಠದಿಂದ:-"ನನ್ನ ಸ್ವಾಮಿಯೆ? ನನ್ನ ಸ್ವಾಮಿಗಳು ನನ್ನ ಹೃದಯ ದೇವತೆ ಗಳು ರಾಜಾ ಅಮರಪ್ರಸಾದರು!"

ಅಮರಪ್ರಸಾದನು ದಿಙ್ಮೂಢನಾದನು. ಅವನಿಗೆ ಶೋಭನೆಯ ಮಾತು ಗಳ ಅರ್ಥವಾಗಲಿಲ್ಲ. ಆಗ ಅವನು ಆಶ್ಚರ್ಯಾನ್ವಿತ ವಾಣಿಯಿಂದ:-"ರಾಣಿ, ಇದೇನು ರಹಸ್ಯವು?"

"ಸ್ವಾಮಿ," ಊರ್ಮಿಳಾದೇವಿಯು ಪತಿಯನ್ನು ಕುರಿತು:—"ಈ ಸಂಗತಿಯು ರಹಸ್ಯಮಯುವಿದ್ದರೂ ಸತ್ಯವಿರುವದು. ನೀವು ಈ ಬಾಲಿಕೆ ಯನ್ನು ಗುರುತಿಸುವದಿಲ್ಲವೇನು? ಇವಳನ್ನು ನೀವು ಪೂರಾ ಮರೆತಿರುವಿರಾ? ಒಂದು ದಿನ ಒಬ್ಬ ಅಬಲೆಯನ್ನು ಸುಲಿಗೆಗಾರರ ಕೈಯೊಳಗಿಂದ ನೀವು ಉದ್ಧಾರ ಮಾಡಿದ್ದು ಸ್ಮರಣೆಯಲ್ಲಿರುವದೇನು?"

ಅಮರಪ್ರಸಾದನು ಸ್ವಲ್ಪಹೊತ್ತು ಯೋಚಿಸಿ:—"ಹೌದು; ರಾಣಿ, ನೆನಪಾಯಿತು. ಒಂದು ದಿನ ಒಬ್ಬ ತರುಣಿಯನ್ನು ಸುಲಿಗೆಗಾರರ ಕೈಯೊಳ ಗಿಂದ ಪಾರು ಮಾಡಿರುವದು ನಿಜವು. ಆ ಕನ್ಯೆಯು ಇವಳೇ ಏನು?"

"ಹೌದು. ಇದೇ ಕನ್ಯೆಯೇ ಅವಳು. ಧನಕುಬೇರ ರುದ್ರಪತಿಯ ಒಬ್ಬಳೇ ಮಗಳಾದ ಇವಳ ಹೆಸರು ಶೋಭನೆಯೆಂದಿರುವದು."

"ಇವಳಿಗೆ ನಾನು ಹೇಗೆ ಸ್ವಾಮಿಯಾದೆನು?"

"ಯಾವ ದಿವಸ ನೀವು ಇವಳನ್ನು ಸುಲಿಗೆಗಾರರ ಕೈಯೊಳಗಿಂದ ಪಾರು

ಮಾಡಿದಿರೋ, ಅಂದಿನಿಂದಲೇ ಇವಳು ನಿಮ್ಮನ್ನು ಹೃದಯ ದೇವತೆಗಳೆಂದು ಭಾವಿಸಿ, ಹೃದಯಕುಸುಮಾಸನದಲ್ಲಿ ದೇವರಂತೆ ನಿಮ್ಮನ್ನು ಪೂಜಿಸುತ್ತ ಬಂದಿರುವಳು; ಮತ್ತು ನಿಮಗೆ ತನ್ನ ಸರ್ವಸ್ವವನ್ನರ್ಪಿಸಿ ಪ್ರೇಮ ಭಕ್ತಿಗಳಿಂದ ವ್ರತಸ್ಥಳಾಗಿರುವಳು. ಇಂದು ನಿಮ್ಮ ಸಲುವಾಗಿಯೇ ಇವಳು ಆತ್ಮಬಲಿದಾನ ಮಾಡಿರುವಳು. ನೋಡಿರಿ, ನಿಮ್ಮ ಆದರ್ಶ ಪತ್ನಿಯನ್ನು ಕಣ್ಣುತುಂಬ ನೋಡಿರಿ. ಇಂತಹ ಮಹಿಮಾಶಾಲಿಗಳಾದ ಲಲನೆಯರು ಈ ಸಂಸಾರದಲ್ಲಿ ಮತ್ತೆಲ್ಲಾದರೂ ದೊರಕಬಹುದೆ?''

ಊರ್ಮಿಳಾದೇವಿಯು ಮಾತಾಡುವಾಗ ಶೋಭನೆಯು ಪ್ರೇಮ ಭಕ್ತಿಗಳಿಂದ ಪತಿಯ ಮುಖ ನಿರೀಕ್ಷಣೆ ಮಾಡತೊಡಗಿದ್ದಳು. ಹೃದಯದಲ್ಲಿ ಶಸ್ತ್ರಘಾತದಿಂದ ಬಲವಾದ ಗಾಯವಾಗಿದ್ದರೂ ಅವಳ ಮುಖವು ಸಂತುಷ್ಟತೆಯ ಚರ್ಯೆಯನ್ನು ಹೊಂದಿತ್ತು.

ರಾಣಿಯ ಮಾತುಗಳು ಮುಗಿದ ಮೇಲೆ ಅಮರಪ್ರಸಾದನು ಶೋಭನೆಯನ್ನು ದಿಟ್ಟಿಸಿ ನೋಡಿ:—''ಓಹೋ! ಅವನೇ ಇವಳು!''

''ಯಾರು ಸ್ವಾಮಿ?''

''ಒಂದು ದಿನ ಸಂಧ್ಯಾಕಾಲದ ಯುದ್ಧದಲ್ಲಿ ಶತ್ರುಗಳೊಡನೆ ಕಾದುವಾಗ ನಾನು ನಿಶ್ಶಸ್ತ್ರನಾದೆನು ನಾನು ನಿರುಪಾಯನಾಗಿ ಮೇಲಿಂದ ಮೇಲೆ ಶಸ್ತ್ರಭಿಕ್ಷೆ ಬೇಡತೊಡಗಿದ್ದೆನು. ಆ ಸಮಯದಲ್ಲಿ ಒಬ್ಬ ಬಾಲಕನು ವಿದ್ಯುದ್ಗತಿಯಿಂದ ಬಂದು ನನಗೆ ಶಸ್ತ್ರ ಕೊಟ್ಟು ಮತ್ತೆ ಅದೇ ಗತಿಯಿಂದ ಮಾಯವಾದನು. ರಾಣೀ, ನಿಜವಾಗಿ ಆ ಬಾಲಕನೇ ಇವಳು. ಹೇಳು; ಶೋಭನೆ, ಹೇಳು; ಆ ಬಾಲಕನು ನೀನೇ ಅಲ್ಲವೆ?''

ಕ್ಷೀಣಕಂಠದಿಂದ ಶೋಭನೆಯು:—''ಹೌದು ಸ್ವಾಮಿ!''

ರಾಜನ ಹೃದಯವು ಪ್ರೇಮ ಕೃತಜ್ಞತೆಗಳಿಂದ ತುಂಬಿತು. ಆಗ ಅವನು ಆನಂದಪೂರಿತ ಕಂಠದಿಂದ:—''ಪ್ರಾಣದಾತ್ರೀ! ಕೃತಜ್ಞ ಹೃದಯದಿಂದ ನನ್ನ ಅಸಂಖ್ಯ ಧನ್ಯವಾದಗಳನ್ನು ಸ್ವೀಕರಿಸು!''

''ಕೇವಲ ಇಷ್ಟೇ ಅಲ್ಲವೆ? ಪ್ರೇಮವಲ್ಲ—ಬರೇ ಕೃತಜ್ಞತೆಯು! ಪ್ರಾಣೇಶ್ವರಿಯಲ್ಲ—ಕೇವಲ ಪ್ರಾಣದಾತ್ರಿಯು! ಇದೇ ಏನು ಪ್ರತಿಫಲವು?'' ಶೋಭನೆಯು ಪ್ರಫುಲ್ಲಿತ ನೇತ್ರಗಳಿಂದ ಹೃದಯ ಸ್ವಾಮಿಯನ್ನು ಅಭಿಮಾನ ಪೂರ್ವಕವಾಗಿ ನಿರೀಕ್ಷಿಸುತ್ತ ನುಡಿದಳು.

"ಆಹಹಾ! ಇದೆಂತಹ ಅಭಿಮಾನವು! ಧರ್ಮಾಭಿಮಾನಗಳ ಮೂರ್ತಿಮಂತ ದೇವತೆಯೆ, ನನ್ನ ಪ್ರಾಣದಾತ್ರಿಯಾದ ಪ್ರಾಣೇಶ್ವರಿಯೆ, ನನ್ನ ಪ್ರೇಮದ ಸಾಗರವೆ, ಪ್ರಣಯ ದೇವತೆಯೆ, ನನ್ನ ಅನಂತ ಧನ್ಯವಾದವನ್ನು ಸ್ವೀಕರಿಸು. ಇನ್ನಾದರೂ ಮನಸ್ಸು ಸಮಾಧಾನಗೊಂಡಿತೆ?"

"ನಾಥರೆ!"

"ಮತ್ತೇನು ಪ್ರಿಯಕರೆ?"

"ನಾನು ಇಂದು ಕೃತಾರ್ಥಳಾದೆನು. ನನ್ನ ತಪಶ್ಚರ್ಯಕ್ಕೆ ಇಂದು ವರಪ್ರದಾನವಾಯಿತು-ವರಪ್ರದಾನವಾಯಿತು; ಆದರೆ ಅದು ಕೊನೆಯಲ್ಲಿ--ಆಯುಷ್ಯದ ಕೊನೆಯ ಭಾಗದಲ್ಲಿ, ಕೊನೆಯ ನಿಮಿಷದಲ್ಲಿ ಆಯಿತು. ಹೇಗಾದರೂ ನನ್ನ ಮನಸ್ಸು ಸ್ವಾನಂದಸಾಮ್ರಾಜ್ಯದಲ್ಲಿ ಮುಳುಗಿತು. ಇನ್ನು ನನಗೆ ಇಹಲೋಕದಲ್ಲಿ ಯಾವ ಆಕಾಂಕ್ಷೆಗಳೂ ಉಳಿಯಲಿಲ್ಲ. ನಾಥ, ಬರುತ್ತೇನೆ! ದೇವೀ ಊರ್ಮಿಳಾರಾಣಿ, ಬರುತ್ತೇನೆ! ನಾಥ! ನಾಥ!!"

ರಾಣಿಯು ಗಾಬರಿಯಿಂದ—"ಭಗಿನಿ!"

ಅಮರಪ್ರಸಾದನು ಆತುರತೆಯಿಂದ:—"ಪ್ರಿಯೆ! ಶೋಭನೆ!"

ಉತ್ತರವೇನೂ ದೊರೆಯಲಿಲ್ಲ. ಆಗ ರಾಜನು ಅವಳ ಮೈಮೇಲೆ ವಾತ್ಸಲ್ಯದಿಂದ ಕೈಯಾಡಿಸುತ್ತ:—"ಶೋಭನಾರಾಣಿ! ನನ್ನ ಪ್ರಿಯಕರೆ!"

ಮತ್ತೆಯೂ ಉತ್ತರ ಬರಲಿಲ್ಲ. ಆಗ ಉತ್ತರ ಕೊಡುವವಳು ಅಲ್ಲಿ ಇದ್ದಿಲ್ಲ. ಅವಳ ಪಂಚಪ್ರಾಣಗಳು ಪಂಚಮಹಾಭೂತಗಳಲ್ಲಿ ಬೆರೆತು ಹೋಗಿದ್ದವು. ಶೋಭನೆಯ ಪ್ರಾಣಜ್ಯೋತಿ ನಿರ್ವಾಣವಾಗಿರುವದೆಂದು ರಾಣಿಯ ಮನವರಿಕೆಯಾಯಿತು. ಆಗ ಅವಳು ಕಣ್ಣೀರು ಸುರಿಸುತ್ತ:—"ವೃಥಾ, ಏಕೆ ಕೂಗುತ್ತಿರುವಿರಿ? ದೀಪವು ಆರಿಹೋಗಿದೆ. ಸ್ವರ್ಗದ ಮಂದಾಕಿನಿಯು ಸ್ವರ್ಗಕ್ಕೆ ಹೊರಟು ಹೋಗಿರುವಳು. ಶಕ್ತಿಕಣವು ಶಕ್ತಿಯಲ್ಲಿ ವಿಲೀನವಾಗಿ ಹೋಗಿದೆ. ಇವಳಿಗೆ ದುಃಖವಿಲ್ಲ; ಕ್ಷೋಭವಿಲ್ಲ. ಇದು ಧರ್ಮದ ಸಮಾರೋಹವು, ಇದು ಪತಿವ್ರತೆಯ ಪತಿಭಕ್ತಿಯ ಅಸೀಮ ಶಿಕ್ಷೆಯು. ಈ ಗುಣಗರಿಮಾಮಯ ನಾರಿಯ ವರ್ತನವು ಅಪೂರ್ವ ಯೋಗಿನಿಗೆ ಸಮವಾದದ್ದು. ಜಗತ್ತಿಗೆ ಆದರ್ಶಭೂತವಾದ ನಭೂತಪೂರ್ವವಾದ ದೃಶ್ಯವಿದು!"

"ಸತ್ಯವನ್ನು ಹೇಳುತ್ತಿರುವೆ ರಾಣೀ. ಈ ರಮಣಿಯು ಅಪೂರ್ವಳಾದವು. ಇವಳ ಕಾರ್ಯವಾದರೂ ಅಪೂರ್ವವಾದದ್ದು. ಈ ಆದರ್ಶವು

ಸಂಸಾರದಲ್ಲಿ ಇದೇ ಮೊದಲನೆಯದು; ಇದೇ ಕೊನೆಯದು. ಆಹಹಾ! ಎಂತಹ ಉಚ್ಚಭಾವನೆಯು! ಎಂತಹ ದೃಢಭಕ್ತಿಯು! ಎಂತಹ ಅಸೀಮ ಪ್ರೇಮವು! ಎಂತಹ ನಿಶ್ಚಲ ವ್ರತವು!"

ಅಮರಪ್ರಸಾದನು ಶೋಭನೆಯ ವಿಷಯವಾಗಿ ಅನಂತ ಧನ್ಯೋದ್ಗಾರಗಳನ್ನು ತೆಗೆದನು. ರಾಣಿಯಾದರೂ ಅವಳನ್ನು ಮನಃಪೂರ್ವಕವಾಗಿ ಹೊಗಳಿದಳು. ಎಷ್ಟೋ ವೇಳೆಯ ವರೆಗೆ ಶೋಭನೆಯ ಗುಣಗಾನದಲ್ಲಿ ಅವರು ವೇಳೆಗಳೆದರು. ಅಮರಪ್ರಸಾದನು ತನ್ನ ಕರ್ತವ್ಯವನ್ನೇ ಮರೆತು ಬಿಟ್ಟಿದ್ದನು. ಆಗ ಅವನಿಗೆ "ಧಡ ಧಡ" ಸಪ್ಪಳವು ಕೇಳಹತ್ತಿತು. ಮುಖವನ್ನು ಮೇಲಕ್ಕೆತ್ತಿ ನೋಡುತ್ತಾನೆ; ಪಠಾಣಸೈನಿಕರು ಸೇತುವೆ ಕೆಡಹುವ ಕೆಲಸವನ್ನು ರಭಸದಿಂದ ನಡೆಯಿಸಿದ್ದಾರೆ. ಇನ್ನು ಸ್ವಲ್ಪ ವೇಳೆಯಲ್ಲಿ ಅವರ ಕೆಲಸವು ಪೂರ್ಣವಾಗಿ, ಕೈಗೆ ಸಿಕ್ಕ ದಾವುದಖಾನನು ಪಾರಾಗಿ ಹೋಗುವನೆಂದು ಅಮರಪ್ರಸಾದನು ಖಂಡಿತವಾಗಿ ತಿಳಿದನು. ಅವನು ನಿದ್ರೆ ತಿಳಿದವರಂತೆ ಜಾಗ್ರತೆಗೊಂಡು:—"ಓಹೋ! ಕರ್ತವ್ಯದ ವಿಸ್ಮರಣೆಯಾಗಿತ್ತು. ಶೋಭನಾದೇವಿಯ ಪ್ರಕರಣವು ನನ್ನನ್ನು ಕರ್ತವ್ಯಚ್ಯುತನನ್ನು ಮಾಡತೊಡಗಿತ್ತು.

"ಶೋಭನಾದೇವಿಯ ಪ್ರಕರಣವು ಜನರನ್ನು ಕರ್ತವ್ಯಚ್ಯುತರನ್ನು ಮಾಡುವಂತಹದಲ್ಲ; ಕರ್ತವ್ಯರತರನ್ನಾಗ ಮಾಡುವಂತಹದು. ನೀವು ನಿಮ್ಮ ಅಧೀರ ಸ್ವಭಾವಕ್ಕನುಗುಣವಾಗಿ ಕರ್ತವ್ಯವನ್ನು ಮರೆತರೆ, ಈ ಆದರ್ಶ ಸತಿ ಶಿರೋಮಣಿಯು ಏನು ಮಾಡಿಯಾಳು?"

ರಾಣಿಯ ಮಾತುಗಳನ್ನು ಕೇಳಿ ಅಮರಪ್ರಸಾದನು ಕುಳಿತ ಸ್ಥಳದಿಂದ ಚಟ್ಟನೆ ಎದ್ದು ನಿಂತು:—"ಹೂಂ! ಸಾಗಿರಿ; ಬೇಗನೆ ಸೇತುವೆಯನ್ನು ದಾಟಿರಿ!" ಎಂದು ಉಚ್ಚಕಂಠದಿಂದ ಸೈನಿಕರಿಗೆ ಹೇಳಿದನು.

ರಾಣಿಯು ಅಷ್ಟೇ ಗಂಭೀರವಾಣಿಯಿಂದ—"ಹಾ! ಯಾರೂ ಮುಂದೆ ಹೆಜ್ಜೆಯಿಡಲಾಗದು! ನಿಮ್ಮ ಆಕ್ರಮಣಕ್ಕೆ ನನ್ನ ಬಲವಾದ ಪ್ರತಿಬಂಧವುಂಟು. ನಾನು ಜೀವಿಸಿರುವವರೆಗೆ ಯಾರಿಗೂ ನದೀಪಾರಾಗಲಿಕ್ಕೆ ಅನುವು ದೊರೆಯಲಾರದು.

ಅಮರಪ್ರಸಾದನು ಬೆರಗಾಗಿ ರಾಣಿಯ ಮುಖವನ್ನು ನೋಡುತ್ತ ಸ್ವಸ್ಥವಾಗಿ ನಿಂತನು.

———

೨೪ನೆಯ ಪರಿಚ್ಛೇದ.

"ಊರ್ಮಿಳೆ! ಈ ದೇವತಾ ಸ್ವರೂಪಿಣಿಯಾದ ಶೋಭನಾದೇವಿಯ ವರ್ತನದಿಂದ ನೀನು ಏನು ಕಲಿತೆ? ಇವಳು ಜಗತ್ತಿಗೇ ಆದರ್ಶಭೂತವಾಗುವಂತಹ ಪಾಠ ಹಾಕಿಕೊಟ್ಟಿರುವಳು. ಕೇವಲ ಮನಸ್ಸಿನಿಂದ ವರಿಸಿದ ಪತಿಯ ಕರ್ತವ್ಯಕ್ಕಾಗಿ ತನ್ನ ಆತ್ಮಬಲಿದಾನ ಮಾಡಿದ ಶೋಭನೆಯ ಅನುಕರಣವನ್ನು ನೀನು ಮಾಡಲಾರೆಯಾ? ಈ ನಾರೀ ವಧೆಯಿಂದಲಾದರೂ ನಿನ್ನ ಈರ್ಷೆಯು ನಷ್ಟವಾಗಲಿಲ್ಲವೆ?"

ಅಮರಪ್ರಸಾದನ ಈ ಮಾತುಗಳನ್ನು ಕೇಳಿ ಊರ್ಮಿಳಾದೇವಿಯು ಸಿಟ್ಟಿಗೆದ್ದಳು. ಆಗ ಅವಳು ನಿಶ್ಚಯ ವಾಣಿಯಿಂದ:-"ಸ್ವಾಮಿ, ನಾನು ಈರ್ಷೆಗೊಂಡಿಲ್ಲ; ಕರ್ತವ್ಯಕ್ಕಾಗಿ ಬಾಳಿಕೊಂಡಿರುವೆನು. ಶೋಭನೆಯಂತಹ ದೇವಿಯ ಅನುಕರಣ ಮಾಡದಂತಹ ಪತಿದ್ರೋಹಿಯು ನಾನಲ್ಲ. ಕರ್ತವ್ಯ ಧರ್ಮವನ್ನು ಪಾಲಿಸುವದು ನನ್ನ ಶೀಲವಾಗಿದೆ. ಶೋಭನೆಯಂತಹ ಸಹಸ್ರಾರು ನಾರೀವಧೆಯಿಂದಲಾದರೂ ನಾನು ಕರ್ತವ್ಯ ಪರಾಙ್ಮುಖಳಾಗಲಾರೆನು. ಶರಣಾಗತ ರಕ್ಷಣೆ ಮಾಡುವ ಬಗ್ಗೆ ನಾನು ವಚನಬದ್ಧಳಾಗಿರುವೆನು; ಶರಣಾಗತನಿಗೆ ಅಭಯದಾನ ಮಾಡಿರುವೆನು. ಇಂತಹ ಪರಿಸ್ಥಿತಿಯಲ್ಲಿ ನಾನು ಸುಮ್ಮನೆ ಹಿಂತಿರುಗಲಾ? ಕೇವಲ ಜೀವದ ವ್ಯಾಮೋಹದಿಂದ ಕರ್ತ್ತವ್ಯ ಭ್ರಷ್ಟಳೂ ಶೀಲಭ್ರಷ್ಟಳೂ ಆಗಲಾ?"

"ನಿನ್ನೊಬ್ಬಳಿಂದ ನವಾಬನ ರಕ್ಷಣೆಯಾಗುವದೆಂದು ಹೇಗೆ ನಂಬಿದೆ? ಮೊಗಲಸೇನಾಸಾಗರದ ಶಕ್ತಿಯು ಸಾಮಾನ್ಯವಾದದ್ದಿರುವದಿಲ್ಲ. ಅದು ನಿನ್ನಂತಹ ಶತ-ಸಹಸ್ರ ರಮಣಿಯರಿಗೆ ಅಸಾಧ್ಯವಿರುವದು. ಸಾಧ್ಯಾಸಾಧ್ಯಗಳನ್ನು ತಿಳಿದು ನೋಡಿ ಕಾರ್ಯ ಮಾಡು."

"ಕರ್ತವ್ಯವೆಂದ ಮೇಲೆ ಅದು ಸಾಧ್ಯವಿರಲಿ ಇಲ್ಲವೆ ಅಸಾಧ್ಯವಿರಲಿ ಅದು ಕರ್ತವ್ಯವೇ. ಅಸಾಧ್ಯವಿರುವದೆಂದು ಅಧರ್ಮಕ್ಕೆ ಬೀಳಬೇಕೇನು? ದಿಲ್ಲೀಶ್ವರನಾದ ಅಲ್ಲಾವುದ್ದೀನನೊಡನೆ ಕಾದಿ ಜಯಸಂಪಾದನೆ ಮಾಡಿಕೊಳ್ಳುವೆನೆಂದು ರಾಣಾ ಭೀಮಸಿಂಗನು ತಿಳಿದಿದ್ದನೇನು? ಹೀಗಿದ್ದರೂ ಅವನು ಕೊನೆಯ ವರೆಗೆ ಸಂಗ್ರಾಮ ಕರ್ತವ್ಯವನ್ನು ಬಿಟ್ಟನೆ? ಶರಣಾಗತನಾದ ದಾವುದಖಾನನು ನಾನು ಜೀವಿಸಿರುವ ವರೆಗೆ ಸುರಕ್ಷಿತವಾಗಿರಬೇಕೆಂದೇ ನನ್ನ ಸತ್ಯ ಸಂಕಲ್ಪ. ದೇಹದಲ್ಲಿ ಪ್ರಾಣಜ್ಯೋತಿಯು ಬೆಳಗುತ್ತಿರುವ ವರೆಗೆ

ನನ್ನ ಸಂಕಲ್ಪವು ಬೇರೆಯಾಗಲಾರದು. ನಾಥರೆ, ನೀವು ನಿಮ್ಮ ಕರ್ತವ್ಯವನ್ನು ನೆರವೇರಿಸುವದೇ ಆಗಿದ್ದರೆ ನಿಮ್ಮ ಕಾರ್ಯಕ್ಕುಂಟಾದ ಆತಂಕವನ್ನು ಅವಶ್ಯವಾಗಿ ನಿವಾರಿಸಿಕೊಳ್ಳಬಹುದು. ನಿಮ್ಮ ರಾಜನಿಷ್ಠೆಯ ಪ್ರಕಾಶವನ್ನು ದಿಗಂತರದಲ್ಲಿ ಕೆಡಹಬಹುದು."

ರಾಣಿಯ ದೃಢತರವಾದ ಮಾತುಗಳನ್ನು ಕೇಳಿ ಅಮರಪ್ರಸಾದನು ಬಹಳೇ ತೊಂದರೆಯಲ್ಲಿ ಬಿದ್ದನು. ಮುಂದೆ ಏನು ಮಾಡಬೇಕೆಂಬದೇ ಅವನಿಗೆ ತಿಳಿಯದಾಯಿತು. ಅತ್ತ ನವಾಬನ ಸೈನಿಕರು ಸೇತುವೆ ಕೆಡಹುವ ಕೆಲಸವನ್ನು ಒಳ್ಳೆಯ ರಭಸದಿಂದ ನಡೆಯಿಸಿದ್ದರು. ಸೇತುವೆ ಕೆಡಹುವದು ಮುಗಿದರೆ ನವಾಬನು ಕೈವಶವಾಗುವದು ಅಸಾಧ್ಯವೆಂದು ಅಮರಪ್ರಸಾದನು ಒಂದೇಸವನೆ ಚಡಪಡಿಸ ತೊಡಗಿದ್ದನು; ಆದರೆ ಕ್ಷುದ್ರವೆಂದರೆ ಕ್ಷುದ್ರವು, ಪ್ರಬಲವೆಂದರೆ ಪ್ರಬಲವು ಆದ ಈ ಆತಂಕವನ್ನು ಹೇಗೆ ನಿವಾರಿಸಿಕೊಳ್ಳಬೇಕೆಂಬದೇ ಅವನಿಗೆ ತೋಚದಾಯಿತು. ಆಗ ಅವನು ರಾಣಿಯನ್ನು ಕುರಿತು ನಮ್ರತೆಯಿಂದ: —"ದೇವಿ!"

"ಯಾಕೆ ರಾಜರೆ?" ರಾಣಿಯು ಪತಿಯನ್ನು ಕೇಳಿದಳು.

"ನವಾಬನು ಯುದ್ಧ ಭೂಮಿಯಲ್ಲಿ ಮಡಿದಿದ್ದರೆ ಹೇಗೆ ಮಾಡುತ್ತಿದ್ದೆ?"

"ಕರ್ತವ್ಯದಲ್ಲಿ ತೊಡಗಿದ್ದಾಗ ಏನಾದರೇನು? ಈಗ ವಂಗೇಶ್ವರನು ಜೀವರಕ್ಷಣೆಗಾಗಿ ಪಲಾಯನ ಮಾಡತೊಡಗಿದ್ದಾನೆ. ಬೆನ್ನು ತೋರಿಸಿದ ವೈರಿಯ ಮೇಲೆ ಶಸ್ತ್ರವೆತ್ತಬೇಕೆನ್ನುವದು ಎಲ್ಲಿಯ ನ್ಯಾಯವು? ಎಲ್ಲಿಯ ಧರ್ಮವು? ಈ ನಿಮ್ಮ ಕೃತಿಯು ಕ್ಷತ್ರಿಯವೃತ್ತಿಗೆ ಶೋಭಿಸಲಾರದು. ರಾಜನಿಷ್ಠೆಯ ಆಡಂಬರದಿಂದ ಅಲ್ಲದ ಕಾರ್ಯಮಾಡಲು ಪ್ರವೃತ್ತರಾಗುವದು ನಿಮ್ಮ ಶೀಲವಲ್ಲ. ನೀವೇ ತಿಳಿದು ನೋಡಿರಿ. ನವಾಬನು ಮತ್ತೆ ನಿಮ್ಮೊಡನೆ ಎಂದಾದರೂ ಯುದ್ಧಕ್ಕೆ ಅಣಿಯಾಗುವನು. ಆಗ ನೀವು ನಿಮ್ಮ ಪೌರುಷವನ್ನೂ ನಿಮ್ಮ ಮೊಗಲ ಸಾಮ್ರಾಜ್ಯ ಶಕ್ತಿಯನ್ನೂ ಚನ್ನಾಗಿ ತೋರಿಸಿರಿ. ನಾನಿರುವ ವರೆಗೆ ನೀವು ಇಲ್ಲವೆ ಮತ್ತಾರಾದರೂ ಅವನ ಮೇಲೆ ಅನ್ಯಾಯ ಮಾಡ ಹೋದರೆ, ಆ ಕಾರ್ಯಕ್ಕೆ ನಾನು ಪ್ರಬಲವಾದ ಅಡ್ಡಿಯನ್ನು ತರತಕ್ಕವಳೇ; ಯಾಕಂದರೆ ವಂಗೇಶ್ವರನು ನನ್ನ ಮಾನಸಪುತ್ರನಿರುವನು; ಶರಣಾಗತನಿರುವನು."

"ಊರ್ಮಿಳೆ, ನಾನು ವಂಗೇಶ್ವರನನ್ನು ಕೊಲ್ಲುವದಿಲ್ಲ; ಕೊಲೆ ಮಾಡಿ

ಸುವದಿಲ್ಲ. ನೀನು ಹೇಗೆ ಅವನನ್ನು ರಕ್ಷಿಸುವ ಬಗ್ಗೆ ವಚನ ಬದ್ಧಳಾಗಿರುವೆಯೋ, ಅದರಂತೆ ನಾನು ಅವನ ಪ್ರಾಣಕ್ಕೆ ಹೊಣೆಗಾರನಾಗುವೆನು. ಇದು ಸತ್ಯವಾಣಿಯು. ನಾನು ಅವನನ್ನು ಸೆರೆ ಹಿಡಿದು ಮೊಗಲರ ವಶಕ್ಕೆ ಕೊಟ್ಟು ಅವನ ಜೀವಕ್ಕೆ ಅಪಾಯವಾಗದಂತೆ ಕಾಯುವೆನು. ಈಗ ಅವನನ್ನು ಹೋಗಗೊಟ್ಟರೆ ಮುಂದೆ ಪ್ರಬಲನಾಗಿ ಸಾಮ್ರಾಜ್ಯದ ವಿರುದ್ಧವಾಗಿ ಮತ್ತೆ ಶಸ್ತ್ರ ವೆತ್ತುವನು."

"ಇದೇನು ವಿಚಿತ್ರ ಮಾತುಗಳನ್ನಾಡುವಿರಿ ನಾಥರೆ? ಸಾಮ್ರಾಜ್ಯದಲ್ಲಿ ಶಕ್ತಿಯಿಲ್ಲವೇನು? ಅದು ತನ್ನ ವೈರಿಯನ್ನು ದಂಡಿಸಲಿಕ್ಕೆ ಸಮರ್ಥವಾಗದಿದ್ದರೆ ನಾಶವಾದೀತು. ಅದಕ್ಕಾಗಿ ನೀವು ಈಗಲೆ ಇಷ್ಟೇಕೆ ಕೊರಗುವಿರಿ? ಮೊಗಲ ಸಾಮ್ರಾಜ್ಯವೇ ಆಚಂದ್ರಾರ್ಕವಾಗಿ ಬಾಳಬೇಕೆಂದು ಉತ್ಕಟೇಚ್ಛೆ ಹೊಂದುವದರಲ್ಲಿ ಅರ್ಥವಿಲ್ಲ. ಹಿಂದೆ ಆಗಿ ಹೋದ ಸಾಮ್ರಾಜ್ಯಗಳಲ್ಲಿ ಇದೊಂದು. ಅವು ನಾಶವಾದಂತೆ ಇದೂ ನಾಶವಾಗತಕ್ಕದ್ದೇ. ಯಾವ ಸಾರ್ವಭೌಮನೂ ತನ್ನ ಸಾಮ್ರಾಜ್ಯವು ಆಚಂದ್ರಾರ್ಕ ಬಾಳಬೇಕೆಂದು ದೇವರಿಂದ ವರ ಪಡೆದು ಬಂದಿಲ್ಲ. ನಿಮ್ಮ ಮನಸ್ಸಿನಲ್ಲಿ ನವಾಬನನ್ನು ಸೆರೆ ಹಿಡಿಯುವದೇ ಇದ್ದರೆ ಅದಕ್ಕೆ ನಾನು ಬೇಡವೆನ್ನುವದಿಲ್ಲ; ಆದರೆ ನನ್ನ ಆತಂಕವನ್ನು ನಿವಾರಿಸಿಕೊಂಡೇ ಮುಂದೆ ಹೆಜ್ಜೆಯಿಡತಕ್ಕದ್ದು."

ಅಮರಪ್ರಸಾದನು ಮುಂಗಾಣದೆ ಸುಮ್ಮನೆ ಕುಳಿತನು. ಅಷ್ಟರಲ್ಲಿ ಮೊಗಲ ಸೇನಾಪತಿಯಾದ ಹುಸೇನ ಕುಲೀಖಾನನು ತನ್ನ ಸೈನ್ಯದೊಡನೆ ಅಲ್ಲಿಗೆ ಬಂದನು. ಮುಖ್ಯ ಸೇನಾಪತಿಯು ಬಂದ ಕೂಡಲೆ ನವಾಬನು ಸೇತುವೆಯನ್ನು ಕೆಡಹುವ ಕೆಲಸಕ್ಕೆ ತನ್ನ ಸೈನಿಕರೊಳಗಿನ ಕೆಲವು ಜನರನ್ನು ಬಿಟ್ಟು ಉಳಿದ ಸೈನಿಕರೊಡನೆ ಪಲಾಯನ ಮಾಡತೊಡಗಿದನು. ನವಾಬನು ಪಲಾಯನ ಮಾಡತೊಡಗಿದ್ದನ್ನೂ, ಅವನ ಸೈನಿಕರು ಸೇತುವೆ ಕಡಹುವ ಕೆಲಸವನ್ನು ಒತ್ತರದಿಂದ ನಡೆಯಿಸಿದ್ದನ್ನೂ, ಒಂದು ಕ್ಷುದ್ರವಾದ ಆತಂಕವನ್ನು ನಿವಾರಿಸಿಕೊಳ್ಳಲಾರದೆ ಅಮರಪ್ರಸಾದನು ಸ್ವಸ್ಥವಾಗಿ ಕುಳಿತದ್ದನ್ನೂ ನೋಡಿ ಕುಲೀಖಾನನು ತ್ವೇಷಗೊಂಡನು. ಕೂಡಲೆ ಅವನು ಅಮರಪ್ರಸಾದನ ಬಳಿಗೆ ಬಂದು ಸಂತಾಪ ವಾಣಿಯಿಂದ:—"ಇದೇನು ಸೇನಾಪತಿಗಳೆ? ಒಬ್ಬ ಬಾಲಕನನ್ನು ಕೊಂದು ಮುಂದೆ ಸಾಗುವಷ್ಟು ದಾರ್ಢ್ಯವು ನಿಮ್ಮಲ್ಲಿಲ್ಲವಲ್ಲ? ನವಾಬನು ಈಗ ಓಡಿ ಹೋದನು. ಸೇತುವೆಯು ಇನ್ನು ಸ್ವಲ್ಪ ವೇಳೆಯಲ್ಲೇ

ಪೂರಾ ಕೆಡಹಲ್ಪಡುವದು. ಆ ಮೇಲೆ ನೀವು ಮಾಡುವದೇನು? ಈ ವೇಳೆಯಲ್ಲಿ ನಿಮ್ಮ ಹೃದಯವು ಇಷ್ಟೇಕೆ ದುರ್ಬಲವಾಯಿತು? ರಾಜಾ, ಇದು ಅಂತಃಪುರವಲ್ಲ; ನಿರ್ದಯ—ಹೃದಯವಿದಾಯಕ—ರಣಸ್ಥಳವು. ಇಲ್ಲಿ ದಯಾ-ಮಾಯೆ-ಕೋಮಲತೆಗಳಿಗೆ ಆಸ್ಪದವಿಲ್ಲ. ದಯಾ-ಮೋಹಗಳ ಸ್ಥಳವು. ರಾಣಿವಾಸವು. ರಣಸ್ಥಳದಲ್ಲಿ ವಜ್ರಸಮ ಕಠೋರತೆಯನ್ನು ತಾಳಲಿಕ್ಕೆ ಬೇಕು. ಕಾಲನ ತಾಂಡವ ನೃತ್ಯವೂ, ಮೃತ್ಯುವಿನ ಭೀಷಣ ಗರ್ಜನೆಯೂ ನಡೆಯುವ ರಣಭೂಮಿಯಲ್ಲಿ ಒಬ್ಬ ಬಾಲಕನನ್ನು ಹೊಡೆಯಲಿಕ್ಕೆ ಹಿಂದೆ ಮುಂದೆ ನೋಡಬೇಕೆ? ನಿಮ್ಮ ಕಡೆಯಿಂದಾಗದಿದ್ದರೆ ಬಿಡಿರಿ." ಎಂದು ಖಾನನು ನುಡಿದು, ತನ್ನ ಸೈನಿಕರನ್ನು ಕುರಿತು:—"ಸೈನಿಕರೆ, ಸೇತುಪಥಕ್ಕೆ ಅಡ್ಡಿ ಮಾಡಿರುವ ಆ ಬಾಲಕನನ್ನು ವಧಿಸಿ ಬೇಗನೆ ನದೀ ದಾಟಿರಿ; ಓಡಿ ಹೋದ ನವಾಬನನ್ನು ಬೆನ್ನಟ್ಟಿ ಸಾಗಿರಿ!"

ಸೇನಾಪತಿಯ ಆದೇಶಾನುಸಾರವಾಗಿ ನೂರಾರು ಭಾಲೆಗಳು ಬಾಲಕ ವೇಷಧಾರಿಯಾದ ರಾಣೀ ಊರ್ಮಿಳಾದೇವಿಯ ಮೈ ಮೇಲೆ ಎಸೆಯಲ್ಪಟ್ಟವು!

ಸಾಕ್ಷಾತ್ ಕಾಲರೂಪಿಗಳಾದ ಭಾಲೆಗಳು ರಾಣಿಯನ್ನೂ ಅವಳ ಕುದುರೆಯನ್ನು ಉಚ್ಛೇದಗೊಳಿಸಿದವು. ಮಾರ್ಮಿಕ ಯಾತನೆಯಿಂದ ರಾಣಿಯು ವಿಕಟ ಚೀತ್ಕಾರ ಮಾಡಿ ಕುದುರೆ ಸಹಿತವಾಗಿ ಸೇತುವೆಯಮೇಲಿಂದ ಮಹಾ ನದಿಯಲ್ಲಿ ಬಿದ್ದಳು!

ಈ ಭೀಷಣವಾದ ದೃಶ್ಯವು ರಾಜಾ ಅಮರಪ್ರಸಾದನ ಕಣ್ಣಿಗೆ ಬಿದ್ದ ಕೂಡಲೆ ಅವನ ಮುಖದಿಂದ "ಹಾಯ! ಹಾಯ!!" ಎಂಬ ದುಃಖೋದ್ಗಾರವು ಹೊರಟಿತು. ಅವನಿಗೆ ಒಮ್ಮೆಲೆ ಮಧ್ಯಾಹ್ನ ಮಾರ್ತಂಡನು ಅಂಧಕಾರ ಸಾಗರದಲ್ಲಿ ಮುಳುಗಿದಂತೆ ಆಯಿತು. ಹೊರಗೆ ಅಂಧಕಾರ, ಹೃದಯದಲ್ಲಿ ಅಂಧಕಾರ! ಇಡೀ ಜಗತ್ತೇ ಅವನಿಗೆ ಅಂಧಕಾರಮಯವಾಗಿಹೋಯಿತು! ಜ್ವಾಲಾ ಜರ್ಜರಿತ ಹೃದಯದವನಾದ ಅವನು ಅತ್ಯಂತ ಕರುಣ ಕಾತರ ಕಂಠದಿಂದ ಕೂಗಿದನು:—"ನನ್ನನ್ನು ಈ ಗಂಭೀರ ಅಂಧಕಾರ ಸಾಮ್ರಾಜ್ಯದಲ್ಲಿ ಒಗೆದು ನೀನು ಒಬ್ಬಳೇ ಹೇಗೆ ಹೋಗುವೆ ರಾಣಿ? ಇಲ್ಲ; ನಾನು ಹೀಗೆ ನಿನ್ನೊಬ್ಬಳನ್ನೇ ಹೋಗಗೊಡುವದಿಲ್ಲ. ನೀನು ನನ್ನ ಸಹಧರ್ಮಚಾರಿಣಿಯೂ, ಜೀವಿತೇಶ್ವರಿಯೂ ಇರುವದರಿಂದ ನನ್ನನ್ನು ಅಗಲಿ ಹೋಗುವದು ನಿನ್ನ ಶೀಲವಲ್ಲ. ಹೀಗಿದ್ದರೂ ನೀನು ನನ್ನನ್ನು ಬಿಟ್ಟು ಹೋಗ ತೊಡಗಿದೆ. ನಾನು ನಿನ್ನೊಬ್ಬ

ಳನ್ನೇ ಕಳುಹಿಸಲಾರೆನು. ಏನು? ರಾಣೀ, ನೀನು ನನ್ನನ್ನು ಕರೆಯುತ್ತಿರುವೆಯಾ? ಹೌದು, ಹೌದು; ಇದು ನನ್ನ ಹೃದಯೇಶ್ವರಿಯ ವಾಣಿಯೇ ನಿಜ. ರಾಣಿ! ಕಲ್ಯಾಣಿ! ನನ್ನ ಮರಣಸಂಗಿನಿ! ಇಗೋ ನೋಡು, ಬಂದೆ, ಬಂದೆ!"

ರಾಜಾ ಅಮರಪ್ರಸಾದನು ಹೀಗೆ ನುಡಿದವನೇ ತನ್ನ ಕುದುರೆಯನ್ನು ಶೀಘ್ರತೆಯಿಂದ ಸೇತುವೆಯ ಮೇಲೆ ಓಡಿಸಿ, ಕಣ್ಣುಮುಚ್ಚಿ ಕಣ್ಣು ತೆಗೆಯುವಷ್ಟರಲ್ಲಿ ಕುದುರೆ ಸಹಿತವಾಗಿ ಸೇತುವೆಯ ಮೇಲಿಂದ ನದಿಯಲ್ಲಿ ಬಿದ್ದನು! ಪ್ರಬಲ ಧಾರಾ ಮಹಾನದಿಯು ಈ ಆಘಾತದಿಂದ ಸ್ವಲ್ಪ ಮೇಲೆ ಪುಟಿದು ಮತ್ತೆ ಸ್ವಲ್ಪ ವೇಳೆಯಲ್ಲಿ ಪೂರ್ವರೂಪವನ್ನು ಧಾರಣ ಮಾಡಿತು!

ಸಂಪೂರ್ಣಂ.

☞ ಇದನ್ನು ಭಿ. ಪ. ಕಾಳೆ ಇವರು ತಮ್ಮ ಶ್ರೀ ಶೇಷಾಚಲ ಪ್ರೆಸ್ಸಿನಲ್ಲಿ ಮುದ್ರಿಸಿದರು.